# ಕರ್ನಾಟಕ ವಿಧಾನ ಪರಿಷತ್ತು
## ನೂರ ನಲವತ್ತೈದನೆಯ ಅಧಿವೇಶನ

## ವಿಷಯಾನುಕ್ರಮಣಿಕೆ (Index)

ದಿನಾಂಕ: 20ನೇ ಡಿಸೆಂಬರ್ 2021
ಸೋಮವಾರ

**1. ಸಂತಾಪ ಸೂಚನೆ**

**"ಕೇಂದ್ರ ಹಾಗೂ ರಾಜ್ಯದ ಮಾಜಿ ಸಚಿವರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ರಾಜಾನುಕುಂಟೆ ಲಕ್ಷ್ಮೀನಾರಾಯಣಪ್ಪ ಜಾಲಪ್ಪ ಅವರ ನಿಧನದ ಬಗ್ಗೆ."**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**2. "ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಚರ್ಚೆಗೆ ಸದನ ಸ್ಪಂದಿಸಬೇಕೆನ್ನುವ ಕುರಿತು "**

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಸಿ.ಎಂ.ಇಬ್ರಾಹಿಂ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಗೋವಿಂದ ಎಂ.ಕಾರಜೋಳ(ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು)
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಆಯನೂರು ಮಂಜುನಾಥ್
-ಶ್ರೀ ಬಿ.ಕೆ.ಹರಿಪ್ರಸಾದ್
-ಡಾ: ವೈ.ಎ.ನಾರಾಯಣ ಸ್ವಾಮಿ
-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
-ಶ್ರೀ ಎನ್.ರವಿಕುಮಾರ್
-ಡಾ: ತೇಜಸ್ವಿನಿ ಗೌಡ
-ಶ್ರೀ ವಿ.ಸುನೀಲ್ ಕುಮಾರ್

**3. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**864-ಬುಡಕಟ್ಟು ಜನರ ಹಾಡಿಗಳಲ್ಲಿ ಮನೆ ನಿರ್ಮಿಸಲು ಅರಣ್ಯ ಇಲಾಖೆಯಿಂದ ಅನುಮತಿ ಸಿಗುತ್ತಿಲ್ಲದಿರುವ ಕುರಿತು**

-ಶ್ರೀ ಶಾಂತಾರಾಮ್ ಬುಡ್ನಸಿದ್ದಿ
-ಶ್ರೀ ಉಮೇಶ್ ವಿ.ಕತ್ತಿ(ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**778+842-ಅರಣ್ಯ ಇಲಾಖೆಯ ವಿವಿಧ ವೃಂದ(ಹುದ್ದೆ)ಗಳಿಗೆ ಸಂಬಂಧಿಸಿದ ಲೋಪದೋಷಗಳ ಬಗ್ಗೆ**

-ಶ್ರೀ ಬಿ.ಕೆ.ಹರಿಪ್ರಸಾದ್
-ಶ್ರೀ ಆಯನೂರು ಮಂಜುನಾಥ್
-ಶ್ರೀ ಉಮೇಶ್ ವಿ.ಕತ್ತಿ(ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

**865-ಅರಣ್ಯ ಸಂರಕ್ಷಣೆ ಕುರಿತು**

-ಡಾ: ತೇಜಸ್ವಿನಿ ಗೌಡ
-ಶ್ರೀ ಉಮಶ್ ವಿ.ಕತ್ತಿ(ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

**785-ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಕುರಿತು**

-ಡಾ: ತಳವಾರ್ ಸಾಬಣ್ಣ
-ಡಾ:ಸಿ.ಎನ್.ಅಶ್ವಥ್ ನಾರಾಯಣ(ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರ ಪರವಾಗಿ)

**817-ಕನ್ನಡ ಸಾಹಿತ್ಯ ಪರಿಷತ್ತಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಬಗ್ಗೆ**

-ಶ್ರೀ ಗೋವಿಂದರಾಜು
-ಶ್ರೀ ವಿ.ಸುನೀಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**824-ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳಿಗೆ ಅನುದಾನ ನೀಡುವ ಬಗ್ಗೆ**

-ಶ್ರೀ ಅ.ದೇವೇಗೌಡ
-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**848-ರಾಜ್ಯದಲ್ಲಿ ಸೌರ ವಿದ್ಯುತ್ ಉತ್ಪಾದನೆ ಕುರಿತು**

-ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರ ಪರವಾಗಿ)
-ಶ್ರೀ ವಿ.ಸುನೀಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**761-ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ**

-ಡಾ: ವೈ.ಎ.ನಾರಾಯಣಸ್ವಾಮಿ
-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಡೆಹಿಡಿಯಲಾದ

ಪ್ರಶ್ನೆ **321-ಕೋವಿಡ್‌ನಿಂದಾಗಿ ಶಾಲಾ ಕಾಲೇಜುಗಳು ಸ್ಥಗಿತವಾಗಿದ್ದರಿಂದ ಮಕ್ಕಳು** ಮೊಬೈಲ್ **ಅಡಿಕ್ಷನ್ ಆಗಿ ಖಿನ್ನತೆಗೆ ಒಳಗಾಗಿರುವುದರ ಬಗ್ಗೆ.**

-ಡಾ: ತೇಜಸ್ವಿನಿ ಗೌಡ
-ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ ಹಾಗೂ ಇನ್ನಿತರೆ ಕಾರಣಗಳಿಂದ ಖಾಲಿಯಾಗಿರುವ ಬೋಧಕರ ಹುದ್ದೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮತ್ತು ಜಾಹೀರಾತು ನೀಡುವ ಸಂಬಂಧ ಗೊಂದಲ ಸೃಷ್ಟಿಯಾಗಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಕುಟುಂಬಗಳು ಸಂಕಷ್ಟದಲ್ಲಿರುವುದರಿಂದ ನೇಮಕಾತಿಯಲ್ಲಿ ಆಗಿರುವ ತೊಂದರೆ ಬಗ್ಗೆ.**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಪರವಾಗಿ)

**ಆ) ಕೋಲಾರ ನಗರದ ದರ್ಗಾ ಮೊಹಲ್ಲಾದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೂಲ ಸೌಕರ್ಯಗಳ ಕೊರತೆ ಬಗ್ಗೆ.**

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**5. ಎಂ.ಇ.ಎಸ್. ಪುಂಡರ ಹಾವಳಿ ಬಗ್ಗೆ ಸದನದಲ್ಲಿ ಚರ್ಚಿಸಲು ಅವಕಾಶ ನೀಡಬೇಕೆನ್ನುವ ಬಗ್ಗೆ.**

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**6. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**"ಕಳೆದ 3 ದಿನಗಳಿಂದ ಅಖಂಡ ಕರ್ನಾಟಕದಲ್ಲಿ ಯಾರೂ ಸಹ ನಿರೀಕ್ಷೆ ಮಾಡದೆ ಇರತಕ್ಕಂತಹ ಅತ್ಯಂತ ಅಹಿತಕರ ಘಟನೆ ನಡೆದು ನಾಡಿನ ಕನ್ನಡಿಗರನ್ನು ಕೆರಳಿಸಿರುವ ಬಗ್ಗೆ"**

-ಶ್ರೀ ಕೆ.ಟಿ.ಶ್ರೀಕಂಠೇಗೌಡ

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 7. ನಿಯಮ 68ರ ಮೇರೆಗೆ ಚರ್ಚೆ

**"ಕಳೆದ 3 ದಿನಗಳಿಂದ ಅಖಂಡ ಕರ್ನಾಟಕದಲ್ಲಿ ಯಾರೂ ಸಹ ನಿರೀಕ್ಷೆ ಮಾಡದೆ ಇರತಕ್ಕಂತಹ ಅತ್ಯಂತ ಅಹಿತಕರ ಘಟನೆ ನಡೆದು ನಾಡಿನ ಕನ್ನಡಿಗರನ್ನು ಕೆರಳಿಸಿರುವ ಬಗ್ಗೆ"**

-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಪುಟ್ಟಣ್ಣ
-ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಬಿ.ಕೆ.ಹರಿಪ್ರಸಾದ್
-ಡಾ ತೇಜಸ್ವಿನಿ ಗೌಡ
-ಶ್ರೀ ಮರಿತಿಬ್ಬೇಗೌಡ
-ಶ್ರೀ ಎನ್.ರವಿಕುಮಾರ್
-ಶ್ರೀ ಹೆಚ್.ಎಂ.ರಮೇಶಗೌಡ
-ಶ್ರೀ ಆರ್.ಬಿ.ತಿಪ್ಪಾಪೂರ
-ಡಾ:ತಳವಾರ್ ಸಾಬಣ್ಣ
-ಶ್ರೀ ನಸೀರ್ ಅಹ್ಮದ್
-ಶ್ರೀ ಕೆ.ಪ್ರತಾಪಸಿಂಹ ನಾಯಕ್
-ಶ್ರೀ ಪ್ರಕಾಶ್ ಕೆ.ರಾಥೋಡ್
-ಶ್ರೀಮತಿ ಭಾರತಿಶೆಟ್ಟಿ
-ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)
-ಶ್ರೀ ಅ.ದೇವೇಗೌಡ
-ಶ್ರೀ ಎಸ್.ರುದ್ರೇಗೌಡ
-ಶ್ರೀ ಎಸ್.ರವಿ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

## 8. ಸರ್ಕಾರಿ ನಿರ್ಣಯ

**"ಗಡಿವಿವಾದದಲ್ಲಿ ಮಹಾಜನ್ ಆಯೋಗದ ವರದಿ ಅಂತಿಮ ಎಂಬುದು ರಾಜ್ಯದ ಅಂದಿನಿಂದ ಇಲ್ಲಿಯವರೆಗೆ ಸ್ಪಷ್ಟ ನಿಲುವಾಗಿದೆ. ಆದಾಗ್ಯೂ ಕೆಲವು ವ್ಯಕ್ತಿಗಳು ಮತ್ತು ಸಂಘಟನೆಗಳು ಆಗಿಂದಾಗ್ಗೆ ಶಾಂತಿಭಂಗವನ್ನು ಉಂಟು ಮಾಡುತ್ತಿರುವುದು ವಿಷಾದನೀಯ. ಇತ್ತೀಚೆಗೆ ಶ್ರೀ ಸಂಗೊಳ್ಳಿ ರಾಯಣ್ಣನವರ ಪ್ರತಿಮೆಗೆ ಮಾಡಿರುವ ಅವಮಾನ ಕನ್ನಡ ಧ್ವಜ ಸುಟ್ಟಿರುವ ವಿವಾದ ಶ್ರೀ ಜಗಜ್ಯೋತಿ ಬಸವೇಶ್ವರರ ಪ್ರತಿಮೆಗೆ ಮಾಡಿರುವ ಅವಮಾನವನ್ನು ಹಾಗೂ ಅದೇರೀತಿ ಛತ್ರಪತಿ ಶಿವಾಜಿಯವರ ಪ್ರತಿಮೆಗೆ ಮಸಿ ಬಳಿದಿರುವ ಪ್ರಕರಣವನ್ನು ಈ ಸಭೆ ಖಡಾಖಂಡಿತವಾಗಿ ಖಂಡಿಸುತ್ತದೆ. ಅಲ್ಲದೇ, ಇಂತಹ ಕೃತ್ಯಗಳನ್ನು ಮಾಡುವ ದುಷ್ಕರ್ಮಿಗಳ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿರುದ್ಧ ದೇಶದ್ರೋಹದ ಪ್ರಕರಣವೆಂದು ನಿರ್ಣಯಿಸಿ ಕಾನೂನು ಅನ್ವಯ ಕಠಿಣ ಕ್ರಮ ಜರುಗಿಸಲಾಗುವುದು"**

-ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು)
-ಶ್ರೀಮತಿ ಭಾರತಿ ಶೆಟ್ಟಿ
-ಶ್ರೀ ಪುಟ್ಟಣ್ಣ

**9. ಗಮನ ಸೆಳೆಯುವ ಸೂಚನೆಗಳು**

**ಅ) ಆಹಾರ ಸುರಕ್ಷತೆ ಮತ್ತು ಮಾನದಂಡ ಕಾಯ್ದೆ 2006ನ್ನು ಜಾರಿಗೊಳಿಸಿ ರಾಜ್ಯದಲ್ಲಿ ನಡೆಯುವ ಆಹಾರ ಕಲಬೆರಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ವಿಫಲವಾಗಿರುವ ಕುರಿತು ಹಾಗೂ ರಾಜ್ಯದಲ್ಲಿ ತಯಾರಾಗುವ ಬೆಲ್ಲವು ರಾಸಾಯನಿಕ ವಸ್ತು ಮತ್ತು ಸಕ್ಕರೆ ಮಿಶ್ರಣದಿಂದ ಕೂಡಿರುವ ಕಾರಣದಿಂದ ಕಲಬೆರಕೆ ಬೆಲ್ಲವನ್ನು ಕೊಂಡುಕೊಳ್ಳಲು ಇತರೆ ರಾಜ್ಯಗಳು ತಿರಸ್ಕರಿಸುತ್ತಿರುವ ವಿಷಯದ ಕುರಿತು.**

-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**ಆ) ಕಂದಾಯ ಇಲಾಖೆಯ ನ್ಯಾಯಾಲಯಗಳ ಡಿಕ್ರಿ ಆದೇಶದಂತೆ ಮ್ಯುಟೇಷನ್ ಮಾಡಿ ಪಹಣಿಯಲ್ಲಿ ಬದಲಾವಣೆ ಮಾಡಲು 11"ಇ" ನಕ್ಷೆ ಹಾಗೂ ಇತ್ಯಾದಿ ದಾಖಲೆಗಳ ಅವಶ್ಯಕತೆ ಇರುವುದಾಗಿ ತಿಳಿಸುತ್ತಿರುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತಿರುವ ಕಾರಣದಿಂದ ಮ್ಯುಟೇಷನ್ ಮಾಡಿ ಪಹಣಿಯಲ್ಲಿ ಸೂಕ್ತ ಬದಲಾವಣೆ ಮಾಡಲು ಸರಳೀಕೃತ ವ್ಯವಸ್ಥೆ ಜಾರಿಗೆ ತರುವ ಕುರಿತು.**

-ಶ್ರೀ ಹರೀಶ್ ಕುಮಾರ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಕಂದಾಯ ಸಚಿವರ ಪರವಾಗಿ)

**ಇ) ಪ್ರಾಕೃತಿಕ ವಿಕೋಪದಿಂದ ಕಾಫಿ ಬೆಳೆಗೆ ಆಗುತ್ತಿರುವ ನಷ್ಟಕ್ಕೆ ನ್ಯಾಯಸಮ್ಮತ ಪರಿಹಾರ ದೊರೆಯದೇ ಇರುವ ಕಾರಣ ಕಾಫಿ ಬೆಳೆಗಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ವಿಷಯದ ಬಗ್ಗೆ.**

-ಶ್ರೀಮತಿ ಎಸ್.ವೀಣಾ ಅಚ್ಚಯ್ಯ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಕಂದಾಯ ಸಚಿವರ ಪರವಾಗಿ)

**ಈ) ಬೆಂಗಳೂರು ನಗರದ ಚಾಲುಕ್ಯ ವೃತ್ತದಿಂದ ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಉದ್ದೇಶಿತ ಯೋಜನೆಯ ಕುರಿತು.**

-ಶ್ರೀ ಯು.ಬಿ.ವೆಂಕಟೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**10. ನಿಯಮ 330ರ ಮೇರೆಗೆ ಚರ್ಚೆ**

**ಅ) ಲೋಕಸೇವಾ ಆಯೋಗವು ಸಲ್ಲಿಸಿದ್ದ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಗಳ ಆಯ್ಕೆ ಪಟ್ಟಿ/ಸಲಹೆಗೆ ಸಂಬಂಧಿಸಿದಂತೆ ದಿನಾಂಕ: 09.03.2018ರ ರಿಟ್ ಸಂಖ್ಯೆ: 13617-13627/2017 ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಪಾಲಿಸುವುದರ ಕುರಿತು.**

-ಶ್ರೀ ಪಿ.ಆರ್.ರಮೇಶ್
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**(ಚರ್ಚೆಗೆ ತೆಗೆದುಕೊಳ್ಳಲಿಲ್ಲ)**

**ಆ) 1995ರ ನಂತರ ಆರಂಭವಾದ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಕುರಿತು.**

-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

(ಚರ್ಚೆಗೆ ತೆಗೆದುಕೊಳ್ಳಲಿಲ್ಲ)

**ಇ) ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಬುಡಕಟ್ಟು ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಲ್ಲದಿರುವ ಬಗ್ಗೆ.**

-ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
-ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

-ಶ್ರೀ ಮರಿತಿಬ್ಬೇಗೌಡ

**11.ಪ್ರಕಟಣೆ**

~~~~~~~~~~

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~~~~

(1157) 20.12.2021 11.20 ಪಿಕೆ:ವಿಕೆ

**ಕರ್ನಾಟಕ ವಿಧಾನ ಪರಿಷತ್ತು**
**ಸೋಮವಾರ, 20ನೇ ಡಿಸೆಂಬರ್ 2021**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಿದ್ದರು.**

**(ಸದನ ಪ್ರಾರಂಭವಾಗುತ್ತಿದ್ದಂತೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಇತರ ಸದಸ್ಯರು ಬಾವಿಗಿಳಿದು ಧರಣಿ ನಿರತರಾದರು)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಬಾವಿಯಲ್ಲಿ ಧರಣಿ ನಿರತ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಧರಣಿನಿರತ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿದರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**01.**<u>**ಸಂತಾಪ ಸೂಚನೆ**</u>

ವಿಷಯ:- **ಕೇಂದ್ರ ಹಾಗೂ ರಾಜ್ಯದ ಮಾಜಿ ಸಚಿವರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ರಾಜಾನುಕುಂಟೆ ಲಕ್ಷ್ಮೀನಾರಾಯಣಪ್ಪ ಜಾಲಪ್ಪ ಅವರ ನಿಧನದ ಬಗ್ಗೆ.**

- - - - -

**ಸಭಾಪತಿಯವರು:-** ಕೇಂದ್ರ ಹಾಗೂ ರಾಜ್ಯದ ಮಾಜಿ ಸಚಿವರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ರಾಜಾನುಕುಂಟೆ ಲಕ್ಷ್ಮೀನಾರಾಯಣಪ್ಪ ಜಾಲಪ್ಪ ಅವರು ದಿನಾಂಕ: 17.12.2021ರಂದು ನಿಧನ ಹೊಂದಿರುತ್ತಾರೆ.

1925ರ ಅಕ್ಟೋಬರ್ 19ರಂದು ದೊಡ್ಡಬಳ್ಳಾಪುರದ ತೂಬುಗೆರೆಯಲ್ಲಿ ಜನಿಸಿದ್ದ ಶ್ರೀಯುತರು ಮೈಸೂರು ಮಹಾರಾಜ ಕಾಲೇಜಿನಿಂದ ಬಿ.ಎ., ಪದವೀಧರರಾಗಿದ್ದರು. ವಿದ್ಯಾರ್ಥಿ ದೆಶೆಯಲ್ಲಿಯೇ ಸಂಘಟನೆಯಲ್ಲಿ ತೊಡಗಿಕೊಂಡಿದ್ದ ಇವರು ದೊಡ್ಡಬಳ್ಳಾಪುರ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಬೆಂಗಳೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾಗಿ, ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್ ಹಾಗೂ ಜಿಲ್ಲಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾಗಿ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾಗಿ, ರಾಜ್ಯ ಕೋ-ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. 1980ರಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದ್ದ ಶ್ರೀಯುತರು ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರದಿಂದ 1983, 1985, 1989 ಹಾಗೂ 1994ರಲ್ಲಿ ಸತತವಾಗಿ ನಾಲ್ಕು ಬಾರಿ ಶಾಸಕರಾಗಿ ಚುನಾಯಿತರಾಗಿದ್ದು, ಸಹಕಾರ, ಗೃಹ, ಕಂದಾಯ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. ಶಾಸಕರಾಗಿ ಆಯ್ಕೆಗೊಂಡ ಮೊದಲ ಬಾರಿಗೆ ಸಹಕಾರ ಸಚಿವರಾದ ಇವರು ಸಹಕಾರಿ ಬ್ಯಾಂಕುಗಳಿಂದ ಸಾಲ ಪಡೆದು ಕೊಳವೆ ಬಾವಿಗಳನ್ನು ಕೊರೆಸಿದ್ದ ರೈತರಿಗೆ ಸಾಲಮನ್ನಾ ಯೋಜನೆಯನ್ನು ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಜಾರಿಗೆ ತಂದ ಕೀರ್ತಿಗೆ ಭಾಜನರಾಗಿದ್ದರು. ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದ ಶ್ರೀಯುತರು 1996, 1998, 1999 ಹಾಗೂ 2003ರಲ್ಲಿ ನಾಲ್ಕು ಬಾರಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದು ಲೋಕಸಭಾ ಸದಸ್ಯರಾಗಿ ಆಯ್ಕೆಯಾದ ಮೊದಲ ಬಾರಿಗೆ ಶ್ರೀ ಹೆಚ್.ಡಿ.ದೇವೇಗೌಡ ಅವರ ಕೇಂದ್ರ ಸಂಪುಟದಲ್ಲಿ ಜವಳಿ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ತಮ್ಮ ಕಣ್ಣುಗಳನ್ನು ದಾನ ಮಾಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಆರ್.ಎನ್.ಜಾಲಪ್ಪನವರ ನಿಧನದ ಬಗ್ಗೆ ತಾವು ಮಂಡಿಸಿರುವ ಸಂತಾಪ ಸೂಚನೆಗೆ ಸರ್ಕಾರದ ಪರವಾಗಿ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಜಾಲಪ್ಪನವರು ನಮ್ಮ ವಿಶಿಷ್ಟ ರಾಜಕಾರಣದ ಚೌಕಟ್ಟಿನಲ್ಲಿ ಬೆಳೆದವರು. ಸಹಕಾರಿ ಕ್ಷೇತ್ರದ ಪಿತಾಮಹ ಎನ್ನುವಷ್ಟರ ಮಟ್ಟಿಗೆ ಸಹಕಾರಿ ಕ್ಷೇತ್ರದ ಆಳವನ್ನು ಅಧ್ಯಯನ ಮಾಡಿದವರು, ಅನುಭವ ಪಡೆದವರು ಮತ್ತು ತಮ್ಮ ಅನುಭವವನ್ನು ಅನುಷ್ಠಾನ ಮಾಡಿದ ಗೌರವಕ್ಕೆ ದಿವಂಗತರು ಪಾತ್ರರಾಗಿದ್ದಾರೆ. ಅವರಲ್ಲಿದ್ದ ವಿಶಿಷ್ಟವಾದ ಶಕ್ತಿಯನ್ನು ವ್ಯಕ್ತಿತ್ವವನ್ನಾಗಿ ಮಾಡಿಕೊಂಡಿದ್ದರು. ಹಿಂದುಳಿದ ವರ್ಗದವರ ಬಗ್ಗೆ ಅವರಿಗೆ ಅಪಾರವಾದ ಕಾಳಜಿ ಇತ್ತು. ಅನೇಕ ಸಲ ರಾಜಕಾರಣದ ಸಂಪರ್ಕ ಇಲ್ಲದೇ ಇದ್ದಾಗಲೂ ಕೂಡ, ನನ್ನ ಜೊತೆ ದೂರವಾಣಿ ಮೂಲಕ ಮಾತನಾಡಿ ನನಗೆ ಮಾರ್ಗದರ್ಶನ ಮಾಡುತ್ತಿದ್ದರು. ಸಮಾಜದ ಕಡುಬಡವರ ಬದುಕನ್ನು ಬದಲಾಯಿಸಬೇಕೆಂಬ ಆಶಯವನ್ನು ಹೊಂದಿದ್ದರು. ಒಬ್ಬ ರಾಜಕಾರಣಿಯಾಗಿ, ಮಂತ್ರಿಯಾಗಿ, ಶಾಸಕನಾಗಿ, ಸಂಸದರಾಗಿ ಒಂದು ರೀತಿಯಲ್ಲಿ, ವಿಷಯಗಳ ಮೇಲೆ ಆಳವಾದಂತಹ ಅಧ್ಯಯನ ಮಾಡಿದಂಥವರು ಎನ್ನುವ ಗೌರವಕ್ಕೆ ಪಾತ್ರರಾಗಿದ್ದರು. ಅವರು ಆಡುವಂತಹ ಮಾತುಗಳು ಮತ್ತು ವಿಷಯ ಮಂಡನೆಗಳು ಅತ್ಯಂತ ನಿಖರವಾಗಿರುತ್ತಿತ್ತು. ಯಾವುದೇ ಕಾರಣಕ್ಕೂ ಚರ್ಚೆಗೆ ಆಸ್ಪದವಾಗದಂತೆ ಸ್ಪಷ್ಟವಾದ ಮಾತುಗಳನ್ನು, ತಮ್ಮ ಅನುಭವಗಳನ್ನು ಹೇಳುತ್ತಿದ್ದರು. ತಮ್ಮ ಅಧಿಕಾರದ ಸಂದರ್ಭದಲ್ಲಿ ಅನೇಕ ಜನಪರವಾದ ಕೆಲಸಗಳನ್ನು ಮಾಡಿದ್ದಾರೆ ಎನ್ನುವ ಇತಿಹಾಸಕ್ಕೆ ಅವರು ಸೇರಿದ್ದಾರೆ. ಮಾನ್ಯ ಆರ್.ಎಲ್.ಜಾಲಪ್ಪನವರ ಬಗ್ಗೆ ತಾವು ಉಲ್ಲೇಖ ಮಾಡುತ್ತಾ, ಅವರು ಪದವೀಧರರಾಗಿದ್ದು, ವಿದ್ಯಾರ್ಥಿ ದಿಸೆಯಲ್ಲಿ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದು, ದೊಡ್ಡಬಳ್ಳಾಪುರದ ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿದ್ದು, ಜಿಲ್ಲಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ, ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ಜಿಲ್ಲಾ ಸಹಕಾರಿ ಬ್ಯಾಂಕಿನಲ್ಲಿ ಅವರು ಮಾಡಿದ ಕೆಲಸಗಳು ಮತ್ತು ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕರಾಗಿದ್ದಾಗ ಅವರು ಮಾಡಿದಂತಹ ಯೋಜನೆ ಮತ್ತು ಯೋಚನೆಗಳು ಇವುಗಳ ಬಗ್ಗೆ ಹೇಳಿದ್ದೀರಿ. ಒಂದು ಸಂತೋಷದ ಸಂಗತಿ ಎಂದರೆ, 1980ರಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು. ಸುದೀರ್ಘವಾದ ರಾಜಕೀಯ ಅನುಭವಗಳನ್ನು ಹೊಂದಿದ್ದ ಅವರು ಇಲ್ಲೂ ಕೂಡ ಸೇವೆ ಸಲ್ಲಿಸಿದ್ದಾರೆ. ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇದಿಂದ 4 ಬಾರಿ ಶಾಸಕರಾಗಿ ಚುನಾಯಿತರಾಗಿದ್ದರು. ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ 4 ಬಾರಿ ಸಂಸದರಾಗಿದ್ದರು. ಈ ರೀತಿ ಆಯ್ಕೆಯಾಗಿ ಮೂರು ಮನೆಗಳಲ್ಲಿ ಸೇವೆ ಸಲ್ಲಿಸಿರುವವರು ಬಹಳ ಕಡಿಮೆ ಜನ ಇರುತ್ತಾರೆ. ಅವರು ಸೇವೆಯನ್ನು ಈ ರಾಜ್ಯದ ಜನತೆ ಯಾವಾಗಲೂ ನೆನಪಿಸಿಕೊಳ್ಳಬೇಕಾಗುತ್ತದೆ ಎಂದು ನನಗನಿಸುತ್ತದೆ. ಕೆಳಮಟ್ಟದ ಜನರ ಬದುಕನ್ನು ಬದಲಾವಣೆ ಮಾಡಬೇಕು ಎನ್ನುವ ದೃಷ್ಟಿ ಹೊಂದಿದ್ದ ಇಂತಹ ಹಿರಿಯರೊಬ್ಬರ ನಿರ್ಗಮನ ಇಡೀ ರಾಜ್ಯಕ್ಕೆ, ಅನುಭವದ ದೃಷ್ಟಿಯಿಂದ, ಆಡಳಿತ ದೃಷ್ಟಿಯಿಂದ ಭರಿಸಲಾಗದ ನಷ್ಟ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಎಂದು ಹೇಳಬೇಕಾಗುತ್ತದೆ. ಮಾನ್ಯ ಹೆಚ್.ಡಿ.ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ ಅವರ ಸಚಿವ ಸಂಪುಟದಲ್ಲಿ ಜವಳಿ ಸಚಿವರಾಗಿದ್ದರು ಎಂದು ತಾವು ಉಲ್ಲೇಖ ಮಾಡಿದ್ದೀರಿ. ಇಂತಹ ಹಿರಿಯ ವಯಸ್ಸಿನಲ್ಲೂ ಕೂಡ ತಮ್ಮ ಕಣ್ಣುಗಳನ್ನು ದಾನ ಮಾಡಿರುವಂಥದ್ದನ್ನು ನಾವು ಅತ್ಯಂತ ಗೌರವದಿಂದ ನೆನಪಿಸಿಕೊಳ್ಳಬೇಕಾಗಿದೆ. ನಮ್ಮ ರಾಜ್ಯದ ಮಟ್ಟಿಗೆ, ಒಬ್ಬ ಹಿರಿಯ ಮುತ್ಸದ್ದಿ, ಹಿಂದುಳಿದ ವರ್ಗಗಳ ನೇತಾರರನ್ನು ಕಳೆದುಕೊಂಡಿರುವಂತಹ ಅನುಭವ ಆಗುತ್ತಿದೆ. ಪರಮಾತ್ಮ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ. ಅವರ ಕುಟುಂಬಕ್ಕೆ ಅವರ ಅಗಲುವಿಕೆಯಿಂದ ಆಗಿರುವ ನೋವಿನ ಶಕ್ತಿ ಭರಿಸುವಂತಾಗಲಿ ಎಂದು ಆ ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಸಂತಾಪ ಸೂಚನೆಗೆ ಸರ್ಕಾರದ ಪರವಾಗಿ ಸಹಮತ ವ್ಯಕ್ತಪಡಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಗಳೆ, ತಾವು ಮಂಡಿಸಿರುವ ಸಂತಾಪ ಸೂಚನೆ ಗೊತ್ತುವಳಿ ಸೂಚನೆಯನ್ನು ಬೆಂಬಲಿಸುತ್ತಾ, ಮಾನ್ಯ ಆರ್.ಎಲ್. ಜಾಲಪ್ಪನವರ ಕುರಿತು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜಾನುಕುಂಟ ಲಕ್ಷ್ಮೀನಾರಾಯಣಪ್ಪ ಜಾಲಪ್ಪನವರು ವಯೋವೃದ್ಧರು, ಜ್ಞಾನ ವೃದ್ಧರು ಮತ್ತು ರಾಜ್ಯ ಹಾಗೂ ಕೇಂದ್ರದಲ್ಲಿ ಮಂತ್ರಿಯಾದಂಥವರು. ಅವರ ನಿಧನ ನಿಜವಾಗಲೂ ಕರ್ನಾಟಕ ರಾಜ್ಯದ ಸಾರ್ಜನಿಕ ಬದುಕಿಗೆ ತುಂಬಲಾರದಂತಹ ಹಾನಿಯಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಜಾಲಪ್ಪನವರು, ಈ ನಾಡಿನ ಶ್ರೇಷ್ಠ ಸಹಕಾರಿಗಳು ಎಂದು ಹೇಳಬಹುದು. ಅವರು ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ, ಅಷ್ಟೇ ಅಲ್ಲ, ರಾಜ್ಯದ ಅತ್ಯುನ್ನತ ಸಹಕಾರಿ ಸಂಸ್ಥೆ ಎನಿಸಿಕೊಳ್ಳುವಂತಹ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಕೋ-ಆಪರೇಟಿವ್ ಮಾರ್ಕೆಟಿಂಗ್ ನಿರ್ದೇಶಕರಾಗಿ ಕೂಡ ಸಹಕಾರಿ ಕ್ಷೇತ್ರದಲ್ಲಿ ತಮ್ಮನ್ನೇ ತಾವು ತೊಡಿಗಿಸಿಕೊಂಡು ಅತ್ಯುತ್ತಮ ಶ್ರೇಷ್ಠ ಸಹಕಾರಿಗಳಾಗಿ ಕೆಲಸ ಮಾಡಿದ್ದರು. ಮಾನ್ಯ ಜಾಲಪ್ಪನವರ ವಿಚಾರವಾಗಿ ಹೇಳುವುದಾದರೆ ಅವರು ಪ್ರಾಮಾಣಿಕ ರಾಜಕಾರಣಿ. ಅಷ್ಟೇ ಅತ್ಯುತ್ತಮ ಆಡಳಿತಗಾರರು. ಬಹಳಷ್ಟು ಜನ ಸ್ನೇಹಿತರು, ಅವರು ಗುಡ್ ಹೋಸ್ಟ್ ಆಗಿದ್ದರು ಎಂದು ಹೇಳುವ ಮಾತುಗಳನ್ನು ನಾನು ಕೇಳಿದ್ದೇನೆ. ಇದರ ಜೊತೆ, ನಾಲ್ಕು ಬಾರಿ ಕೆಳಮನೆಯ ಸದಸ್ಯರಾಗಿ, ನಮ್ಮ ಹಾಗೆ ಸ್ಥಳೀಯ ಸಂಸ್ಥೆಗಳಿಂದ ಮೇಲ್ಮನೆಯ ಸದಸ್ಯರಾಗಿ ಕೆಲಸ ಮಾಡಿ, ನಾಲ್ಕು ಬಾರಿ ಲೋಕಸಭೆಗೆ ಆಯ್ಕೆಯಾಗಿ ಬಹಳ ಸುದೀರ್ಘ ಕಾಲದವರೆಗೆ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡು ಅತ್ಯುತ್ತಮವಾದ ಕೊಡುಗೆ ನೀಡಿದ್ದಾರೆ. ಇವೆಲ್ಲಕ್ಕಿಂತ ಮಿಗಿಲಾಗಿ ಮಾನ್ಯ ಜಾಲಪ್ಪನವರು ಶಿಕ್ಷಣ ಪ್ರೇಮಿಗಳಾಗಿದ್ದರು ಎಂದು ಹೇಳಬಹುದು. ಎಲ್‌ಎಲ್‌ಬಿ, ಡಿಪ್ಲೋಮಾ, ಸಿಬಿಎಸ್‌ಸಿ, ಐಸಿಎಸ್‌ಇ ಹೀಗೆ ನರ್ಸಿಂಗ್‌ನಿಂದ ಹಿಡಿದು ಮೆಡಿಕಲ್‌ವರೆಗೆ ಅನೇಕ ವಿದ್ಯಾ ಸಂಸ್ಥೆಗಳನ್ನು ಪ್ರಾರಂಭಿಸಿದ್ದರು. ಬೇರೆ ಬೇರೆ ರಾಜ್ಯಗಳ ಲಕ್ಷಾಂತರ ಮಕ್ಕಳ ಜ್ಞಾನದ ದೀವಿಗೆಯನ್ನು ಹಚ್ಚಿ, ಬಹಳ ಅದ್ಭುತವಾದ ಕೆಲಸ ಮಾಡಿದ್ದರು. ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ವ್ಯವಸ್ಥಿತ ರೀತಿಯಲ್ಲಿ, ಅತ್ಯುತ್ತಮ ರೀತಿಯಿಂದ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಬಹಳಷ್ಟು ಜನರಿಗೆ ಸಹಾಯ-ಸಹಕಾರ ಮಾಡಿದ್ದಾರೆ. ಬಡವರಿಗೆ ಅಲ್ಲಿ ಅವಕಾಶ ಕಲ್ಪಿಸಿ ಸುಶಿಕ್ಷಿತರಾಗುವ ದಿಸೆಯಲ್ಲಿ ಕೆಲಸ ಮಾಡಿದ್ದಾರೆ. "ಆಡು ಮುಟ್ಟದ ಸೊಪ್ಪಿಲ್ಲ" ಎಂದು ಹೇಳುವ ಹಾಗೆ ಮಾನ್ಯ ಆರ್.ಎಲ್.ಜಾಲಪ್ಪನವರು ಕೃಷಿ ಮಾಡದ ಕ್ಷೇತ್ರವಿಲ್ಲ ಎಂದು ಹೇಳಬಹುದು. ಬಹಳಷ್ಟು ಕೆಲಸ ಮಾಡಿ, ಈ ನಾಡಿನಲ್ಲಿ ತಮ್ಮದೇ ಆದಂತಹ ಹೆಸರು ಪಡೆದಂಥವರಾಗಿದ್ದಾರೆ. ರಾಜ್ಯದಲ್ಲಿ ಮಂತ್ರಿಯಾಗಿ ಮತ್ತು ಕೇಂದ್ರದಲ್ಲಿ ಮಾನ್ಯ ದೇವೇಗೌಡರವರ ಸಂಪುಟದಲ್ಲೂ ಸಚಿವರಾಗಿ ಕೆಲಸ ಮಾಡಿದ್ದರು. ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ಕೊಟ್ಟು ಇನ್ನಷ್ಟು ಕಾಲ ಬದುಕಬೇಕಾಗಿತ್ತು ಎಂದು ನಾಡಿನ ಜನ ಅಪೇಕ್ಷಿಸಿದ್ದರು.

(ಮುಂದು)

(1158) 20-12-2021 11.30 DS-VK

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಅವರ ಹಠಾತ್ ನಿಧನದಿಂದ ಬಹುತೇಕವಾಗಿ ಕರ್ನಾಟಕ ರಾಜ್ಯದ ಒಬ್ಬ ಶ್ರೇಷ್ಠ ಮುತ್ಸದ್ದಿ, ಒಬ್ಬ ಸಮರ್ಥ ಒಳ್ಳೆಯ ಆಡಳಿತಗಾರ ಮತ್ತು ಪ್ರಾಮಾಣಿಕ ರಾಜಕಾರಣಿಯನ್ನು ಕಳೆದುಕೊಂಡು ಇವತ್ತು ಕರ್ನಾಟಕ ರಾಜ್ಯ ಬಡವಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಅಗಲಿದಂತಹ ದಿವ್ಯ ಚೇತನಕ್ಕೆ ಆ ಭಗವಂತ ಸದ್ಗತಿಯನ್ನು ದಯಪಾಲಿಸಲಿ. ಅದರ ಜೊತೆಗೆ ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿ ಅವರ ಕುಟುಂಬ ವರ್ಗದವರಿಗೆ ಮತ್ತು ನಾಡಿನ ಸಮಸ್ತ ಜನತೆಗೆ ನೀಡಲೆಂದು ನಾನು ಭಗವಂತನಲ್ಲಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

**ಸಭಾಪತಿಯವರು:-** ಅವರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಲಾಯಿತು)

**ಸಭಾಪತಿಯವರು:-** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿ ಧರಣಿ ಕುಳಿತರು)**

2. **ವಿಷಯ: ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಚರ್ಚೆಗೆ ಸದನ ಸ್ಪಂದಿಸಬೇಕೆನ್ನುವ ಕುರಿತು.**

---------

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಹತ್ವದ ವಿಚಾರವೇನೆಂದರೆ, ಬೆಳಗಾವಿಯ ಸುವರ್ಣಸೌಧದಲ್ಲಿ ಮೂರು ವರ್ಷಗಳ ನಂತರ ಅಧಿವೇಶನ ನಡೆಯುತ್ತಿದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದು ಮಹತ್ವದ ವಿಚಾರ ಎಂದು ತಾವು ಹೇಳುತ್ತಿದ್ದೀರಿ. ಆದ್ದರಿಂದ ಸದಸ್ಯರುಗಳಿಗೆ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳುವುದಕ್ಕೆ ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗೇನು ಆಗಿದೆ ಎಂದರೆ, ಈ ಉತ್ತರ ಕರ್ನಾಟಕ ಭಾಗದ ಜನ ಬಹಳಷ್ಟು ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ. ಮಾಧ್ಯಮದ ಮುಖಾಂತರ, ಪತ್ರಿಕೆಯ ಮುಖಾಂತರ ಮತ್ತು ದೃಶ್ಯ ಮಾಧ್ಯಮದಲ್ಲಿ ನಾವು ನಿತ್ಯ ನೋಡುತ್ತಿದ್ದೇವೆ. ಮೂರು ವರ್ಷಗಳ ನಂತರ ಅಧಿವೇಶನ ನಡೆಯುತ್ತಿರುವಂತಹ ಸಂದರ್ಭದಲ್ಲಿ ಈ ಭಾಗದ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವಂತಹ ವಿಚಾರಗಳು ಮೇಲ್ಮನೆಯಲ್ಲಿ ಮತ್ತು ಕೆಳಮನೆಯಲ್ಲಿ ಚರ್ಚೆಯಾಗಬೇಕಾಗಿತ್ತು ಎಂದು ನಾವು ಮಾಧ್ಯಮಗಳ ಮುಖಾಂತರ ನೋಡುವುದಷ್ಟೇ ಅಲ್ಲ, ನಮಗೂ ಕೂಡ ಒಂದು ರೀತಿಯಲ್ಲಿ ಅಪರಾಧಿ ಮನೋಭಾವವಾಗಿದೆ. ಏಕೆಂದರೆ, ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಅನೇಕ ನೆನಗುದಿಗೆ ಬಿದ್ದಂತಹ ಯೋಜನೆಗಳಿವೆ. ಸದನದಲ್ಲಿ ಜಲಸಂಪನ್ಮೂಲ ಮಂತ್ರಿಗಳಿದ್ದಾರೆ. ಇವತ್ತು ಕೃಷ್ಣ ಮೇಲ್ದಂಡೆ ಯೋಜನೆ-೩ನೇ ಹಂತದ Tribunal decision ಆಗಿ ಹತ್ತು ವರ್ಷವಾಗಿದೆ. ೧೩೦ ಟಿಎಂಸಿ ನೀರಿನ ಬಳಕೆಯಾಗಬೇಕು. ಆಲಮಟ್ಟಿ ಜಲಾಶಯವನ್ನು ಎತ್ತರ ಮಾಡಬೇಕು. ಕಲಬುರ್ಗಿ, ಯಾದಗಿರಿ, ಬಿಜಾಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಗದಗ, ಈ ೭ ಜಿಲ್ಲೆಗಳಿಗೆ ೧೫ ಲಕ್ಷ ಎಕರೆಗೆ ನೀರಾವರಿ ಆಗುವಂತಹ ಯೋಜನೆ ಬಗ್ಗೆ ನ್ಯಾಯಾಧೀಕರಣದ ನಿರ್ಣಯವಾಗಿದೆ. ೧೩೦ ಟಿಎಂ.ಸಿ ನೀರು ಹಂಚಿಕೆಯಾದರೂ ಕೂಡ ಕಾಮಗಾರಿ ಪ್ರಾರಂಭವಾಗಿಲ್ಲ ಮತ್ತು ನೋಟಿಫಿಕೇಶನ್ ಕೂಡ ಆಗಿಲ್ಲ. ಬಹಳಷ್ಟು ಉತ್ತರ ಕರ್ನಾಟಕದ ಜನ ನಮ್ಮ ಮೇಲೆ ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ. ಅದರ ಜೊತೆಗೆ ಮಹದಾಯಿ ಯೋಜನೆಗೆ ಬಗ್ಗೆ ನೋಟಿಫಿಕೇಶನ್ ಆಗಿದೆ, ಆದರೆ ಇನ್ನು ಕೆಲಸ ಪ್ರಾರಂಭವಾಗಿಲ್ಲ. ಅದೇ ರೀತಿ ತುಂಗಭದ್ರಾಗೆ ಸಂಬಂಧಿಸಿದಂತೆ ನವಲೆಯಲ್ಲಿ Balancing Reservoir ಬಗ್ಗೆಯು ಸಹ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚರ್ಚೆಯಾಗಬೇಕು. ಏಕೆಂದರೆ ತುಂಗಭದ್ರಾ ಜಲಾಶಯದಲ್ಲಿ ೩೩ ಟಿಎಂಸಿಯಷ್ಟು ಹೂಳು ತುಂಬಿದೆ. ಅದಕ್ಕೆ Balancing Reservoir ಮಾಡಬೇಕೆಂದು DPR (Detailed Project Report) ಆಗಿ ಅದೂ ಕೂಡ ನೆನಗುದಿಗೆ ಬಿದ್ದಿದೆ. ಅನುಚ್ಛೇದ ೩೭೧(ಜೆ) ಗೆ ಸಂವಿಧಾನಾತ್ಮಕವಾದ ತಿದ್ದುಪಡಿಯಾಗಿ ಇವತ್ತು ಕಲ್ಯಾಣ ಕರ್ನಾಟಕದ ಭಾಗದಲ್ಲಿ ನಿರೀಕ್ಷಿತವಾದಂಥ ಕೆಲಸವಾಗುತ್ತಿಲ್ಲ. ಈ ರೀತಿಯಾಗಿ ಹೇಳುತ್ತಾ ಹೋದರೆ ಬಹಳಷ್ಟು ವಿಷಯಗಳಿವೆ. ಅನೇಕ ನೆನೆಗುದಿಗೆ ಬಿದ್ದಂಥ ಯೋಜನೆಗಳಿವೆ. ಇವುಗಳ ಬಗ್ಗೆ ಚರ್ಚೆ ಮಾಡುವುದು ಮಹತ್ವದ ಕೆಲಸವಾಗಿದೆ. ಒಂದು ವೇಳೆ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ, ಉತ್ತರ ಕರ್ನಾಟಕದ ಅನೇಕ ವಿಚಾರಗಳ ಬಗ್ಗೆ, ನಾವು ಈ ಅಧಿವೇಶನದಲ್ಲಿ ಚರ್ಚೆ ಮಾಡಲಿಲ್ಲವೆಂದರೆ ನಮ್ಮಂಥ ತಪ್ಪುಗಾರರು ಹೊರಗಡೆ ಹೋದರೆ ಜನತೆಗೆ ಮುಖ ತೋರಿಸುವುದಕ್ಕಾಗುವುದಿಲ್ಲ. ನೇರವಾಗಿ, ಖಡಾಖಂಡಿತವಾಗಿ ಮುಂಗೈ ಹಿಡಿದು ಕೇಳುವಂಥ ಪರಿಸ್ಥಿತಿ ಇವತ್ತು ಉದ್ಭವಿಸಿದೆ. ಪ್ರವಾಹ ಹಾಗೂ ಕೋವಿಡ್-೧೯ ಕಾರಣದಿಂದಾಗಿ ಬೆಳಗಾವಿಯಲ್ಲಿ ಮೂರು ವರ್ಷಗಳಿಂದ ಅಧಿವೇಶನ ನಡೆದಿರಲಿಲ್ಲ. ಈಗ ನಾವು ಅಧಿವೇಶನ ನಡೆಸುತ್ತಿದ್ದೇವೆ. ಉತ್ತರ ಕರ್ನಾಟಕದ ಜನರಿಗೆ ಇದೊಂದು ಸುವರ್ಣಾವಕಾಶವಾಗಿದೆ. ಉತ್ತರ ಕರ್ನಾಟಕದ ಜನರ ಅಭಿವೃದ್ಧಿಗೆ ಇಲ್ಲಿ ಏನು ಚರ್ಚೆ ಮಾಡುತ್ತಾರೆ, ಈ ಸರ್ಕಾರದಿಂದ ನಮಗೇನು ಪರಿಹಾರ ದೊರೆಯುತ್ತದೆ ನಮ್ಮನ್ನು ಜನರು ಬಹಳಷ್ಟು ಆಸೆಗಣ್ಣಿನಿಂದ ನೋಡುತ್ತಿದ್ದಾರೆ. ಜನಪ್ರತಿನಿಧಿಗಳು ಈ ವಿಚಾರವಾಗಿ ಯಾವ ರೀತಿಯ ಕ್ರಮವನ್ನು ಕೈಗೊಳ್ಳುತ್ತಾರೆ, ಯಾವ ರೀತಿ ಚರ್ಚೆ ಮಾಡುತ್ತಾರೆಂದು ಬಹಳ ಕಾತುರತೆಯಿಂದ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಈ ಬಗ್ಗೆ ಒಂದು ದಿವಸವೂ ಸಹ ಚರ್ಚೆ ಇಲ್ಲ. ಮಾಧ್ಯಮದಲ್ಲಿ ಹಿಗ್ಗಾ-ಮುಗ್ಗಾ ಬಯ್ಯಿಸಿಕೊಳ್ಳುವಂಥ ದುಸ್ಥಿತಿಗೆ ನಾವು ಬಂದಿದ್ದೇವೆ. ಆದ್ದರಿಂದ ನಾವು ಅದರ ಬಗ್ಗೆ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ದಯಮಾಡಿ ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವಾಗಿ, ಉತ್ತರ ಕರ್ನಾಟಕದ ಅತ್ಯಂತ ಮಹತ್ವದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ತಾವು ದಯಮಾಡಿ ಅವಕಾಶವನ್ನು ಕಲ್ಪಿಸಬೇಕೆಂದು ನಾನು ಎರಡೂ ಕೈ ಜೋಡಿಸಿ ಪ್ರಾರ್ಥನೆಯನ್ನು ಮಾಡುತ್ತೇನೆ. ತಾವು ಸಹ ಈ ಉತ್ತರ ಕರ್ನಾಟಕದ ಭಾಗದಿಂದ ಬಂದವರು. ತಮಗೂ ಸಹ ಈ ಬಗ್ಗೆ ಆಸಕ್ತಿ ಇದೆ. ಹಾಗಾಗಿ ತಾವು ಈ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಕೊಡಬೇಕು. ಇದರ ಜೊತೆಗೆ ನಾನು ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ಇವತ್ತು ಎಂ.ಇ.ಎಸ್. ಪುಂಡರ ಹಾವಳಿಯನ್ನು ನೋಡಿ, ಬ್ರಿಟಿಷರಿಗೆ ಸಿಂಹಸ್ವಪ್ನವಾದ, ಬ್ರಿಟಿಷರಿಗೆ ಚಳ್ಳೆಹಣ್ಣು ತಿನ್ನಿಸಿದಂಥ, ಸ್ವಾತಂತ್ರ್ಯ ಹೋರಾಟಗಾರ, ವೀರ ಯೋಧ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಇವತ್ತು ಭಗ್ನವಾಗಿದೆ. ಅದರ ಜೊತೆಗೆ ಶಿವಾಜಿ ಮಹಾರಾಜರ ಪುತ್ಥಳಿಗೆ ಕೂಡ ಮಸಿ ಬಳಿಯುವಂಥ ಕೆಲಸವಾಗಿದೆ. ಏಕೆ ಇಂತಹ ಘಟನೆಗಳು ನಡೆಯುತ್ತವೆ? ಇದರಿಂದ ದ್ವೇಷಮಯವಾದಂತಹ ವಾತಾವರಣ ಉಂಟಾಗುತ್ತದೆ. ಆದ್ದರಿಂದ ಸರ್ಕಾರ ಈ ರೀತಿ ಆಗದ ಹಾಗೆ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಬೇಕಾಗಿತ್ತಲ್ಲವೇ? ಇದು ಸರ್ಕಾರದ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈಫಲ್ಯವಲ್ಲವೇ? ಈ ರೀತಿ ಆಗದ ಹಾಗೆ ಏಕೆ ಕ್ರಮ ಕೈಗೊಂಡಿಲ್ಲ? ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟರೆ ಒಳ್ಳೆಯದು ಎಂದು ನಾನು ಭಿನ್ನವಿಸಿಕೊಳ್ಳುತ್ತೇನೆ. ಅತ್ಯಂತ ಮಹತ್ವದ ಉತ್ತರ ಕರ್ನಾಟಕದ ಅಭಿವೃದ್ಧಿಯ ವಿಚಾರವಾಗಿ ಮೇಲ್ಮನೆಯಲ್ಲಿ ಸುದೀರ್ಘವಾಗಿ ಚರ್ಚೆ ಮಾಡಲಿಕ್ಕೆ ತಾವು ಸಾಕಷ್ಟು ಸಮಯವನ್ನು ತಾವು ಒದಗಿಸುತ್ತೀರಿ ಎಂದು ನನಗೆ ನೂರಕ್ಕೆ ನೂರರಷ್ಟು ವಿಶ್ವಾಸವಿದೆ. ಇಂತಹ ಪುಂಡಾಟಿಕೆಯ ಕೆಲಸ ನಮ್ಮ ಕನ್ನಡ ನಾಡಿನ ನೆಲದ ಮೇಲೆ ನಡೆಯಬಾರದು. ಯಾವುದೇ ಪುತ್ಥಳಿಯನ್ನು ಭಗ್ನ ಮಾಡುವುದು, ಮಸಿ ಬಳಿಯುವುದು ಸುತಾರಾಂ ಒಳ್ಳೆಯದಲ್ಲ. ಎಂಇಎಸ್ ಪುಂಡಾಟಿಕೆಯ ಬಗ್ಗೆ ಸರ್ಕಾರ ಕ್ರಮ ಕೈಗೊಂಡು ಅವರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ಕೈಗೊಳ್ಳಬೇಕು. ಯಾರ ಮರ್ಜಿ, ಮುಲಾಜು, ಬಿಡೆ (ಭಯ) ಗೆ ಜಗ್ಗದೇ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಂಥ ಕೆಲಸವನ್ನು ಮಾಡಬೇಕು. ಈ ವಿಚಾರದಲ್ಲಿ ಸರ್ಕಾರ ವಿಫಲವಾಗಿದೆ ಎಂದು ನನಗನ್ನಿಸುತ್ತದೆ. ಈ ವೈಫಲ್ಯಗಳು ಪುನರಾವರ್ತನೆ ಆಗದ ಹಾಗೆ ಸರ್ಕಾರ ಸೂಕ್ತವಾದ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನಸಭೆಯಿಂದ ಆಯ್ಕೆಯಾದವರು):-** ಸನ್ಮಾನ್ಯ ಸಭಾಪತಿಯವರೆ, ಸರ್ಕಾರ ಆಸಕ್ತಿಯನ್ನು ವಹಿಸಿ ತಮ್ಮೆಲ್ಲರ ಶ್ರಮದ ಫಲದಿಂದ ಮೂರು ವರ್ಷಗಳ ನಂತರ ಬೆಳಗಾವಿಯಲ್ಲಿ ಅಧಿವೇಶನ ಪ್ರಾರಂಭವಾಗಿದೆ. ಅಧಿವೇಶನ ಪ್ರಾರಂಭವಾಗಿ ಒಂದು ವಾರವಾಗಿದೆ. ಈ ಒಂದು ವಾರದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ, ಕಳಕಳಿ ಬಗ್ಗೆ, ಇಲ್ಲಿನ ಆಗು-ಹೋಗುಗಳ ಬಗ್ಗೆ ಒಂದು ಶಬ್ದವೂ ಸಹ ಚರ್ಚೆಗೆ ಬರಲಿಲ್ಲ. ಈ ಭಾಗದ ಉತ್ತರ ಕರ್ನಾಟಕದ ಜನ ಏನು ಮಾತನಾಡಲು ಪ್ರಾರಂಭ ಮಾಡಿದ್ದಾರೆಂದರೆ, ಮಂತ್ರಿಗಳು, ಶಾಸಕರು, ಅಧಿಕಾರಿಗಳು ಬೆಂಗಳೂರಿನಿಂದ ಬೆಳಗಾವಿಗೆ ಬಂದಿರತಕ್ಕಂಥಾದ್ದು ಪಿಕ್‌ನಿಕ್ ಮಾಡಲಿಕ್ಕೆ, ಉಂಡು-ಕೊಂಡು ಹೋಗಲಿಕ್ಕೆ, ಮಜಾ ಮಾಡಲಿಕ್ಕೆ, ಶನಿವಾರ-ಭಾನುವಾರ ಗೋವಾಕ್ಕೆ ಹೋಗಿ ಮಜಾ ಮಾಡಲಿಕ್ಕೆ ಇವರುಗಳು ಬಂದಿರುವುದು ಎಂದು ಸಾರ್ವಜನಿಕರಲ್ಲಿ ಇವತ್ತಿನ ದಿವಸ ಚರ್ಚೆಯಾಗುತ್ತಿದೆ. ನಮಗೆಲ್ಲಾ ಬಹಳ ಮುಜುಗರವಾಗುತ್ತಿದೆ. ಮೂರು ವರ್ಷಗಳ ನಂತರ ಉತ್ತರ ಕರ್ನಾಟಕದಲ್ಲಿ ಒಂದು ಅಧಿವೇಶನ ನಡೆಯತಕ್ಕಂಥ ಸಂದರ್ಭದಲ್ಲಿ ಉತ್ತರ ಕರ್ನಾಟಕದಲ್ಲಿ ಯಾವುದೇ ಚರ್ಚೆ ನಡೆಯದೇ ಇರತಕ್ಕಂಥಾದ್ದು ಒಂದು ದುರ್ವೈವದ ಸಂಗತಿ. ಉತ್ತರ ಕರ್ನಾಟಕದಲ್ಲಿ ಹುಟ್ಟಿರತಕ್ಕಂಥ ನಮಗೆ ಇದೊಂದು ಅಗೌರವವಾಗತಕ್ಕಂಥಾದ್ದು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೈ ಜೋಡಿಸಿ ಕೇಳಿಕೊಂಡರು. ನಾವೆಲ್ಲರೂ ನಿಮಗೆ ಕೈಜೋಡಿಸಿ ಪ್ರಾರ್ಥನೆಯನ್ನು ಮಾಡುತ್ತೇವೆ. ಒಂದೂ, ಇವತ್ತಿನಿಂದ ನೀವು ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಿ. ಇಲ್ಲದೇ ಹೋದರೆ ಅನಿರ್ದಿಷ್ಟ ಕಾಲದವರೆವಿಗೂ ಈ ಅಧಿವೇಶನವನ್ನು ಮುಂದಕ್ಕೆ ಹಾಕಿ ಬೆಂಗಳೂರಿಗೆ ವಾಪಸ್ ಹೋಗುವಂಥ ಪುಣ್ಯದ ಕೆಲಸವನ್ನು

---

ಮಾಡಬೇಕೆಂದು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ಏಕೆಂದರೆ ಅನೇಕ ಪತ್ರಿಕೆಗಳಲ್ಲಿ ಯಾವುದಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚಾಗುತ್ತಿದೆ, ಸುಮಾರು ೪೦೦ ಕೋಟಿ ರೂ.ಗಳನ್ನು ಖರ್ಚು ಮಾಡಿ ಬೆಳಗಾವಿಯಲ್ಲಿ ಸುವರ್ಣ ವಿಧಾನ ಸೌಧವನ್ನು ನಿರ್ಮಾಣ ಮಾಡಿರುವ ಉದ್ದೇಶವೇನು? ಈ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎನ್ನುವ ತಾರತಮ್ಯವನ್ನು ತೆಗೆದು ಹಾಕಬೇಕು. ಈ ಭಾಗದಲ್ಲಿರುವಂತಹ ಜನರಿಗೆ ಸಮಾನತೆಯ ಭಾವನೆಯನ್ನು ಮೂಡಿಸಬೇಕೆನ್ನುವ ವಿಚಾರ ಇಟ್ಟುಕೊಂಡು ಅವತ್ತು ನಮ್ಮ ಹಿರಿಯರು ಸುವರ್ಣ ವಿಧಾನಸೌಧವನ್ನು ಕಟ್ಟಿದರು. ಸ್ವಾತಂತ್ರ್ಯ ಸಿಕ್ಕಿ ೫೦ ವರ್ಷವಾದ ಮೇಲೆ ಇದೊಂದು ಗುರುತರವಾಗಿರಲಿ ಎಂದು ಸುವರ್ಣ ವಿಧಾನಸೌಧ ಎಂದು ನಾಮಕರಣ ಮಾಡಿದರು.

(ಮುಂದು)

**(1159)/20.12.2021/12.40/ಬಿಕೆಪಿ:ಬಿಎನ್‌ಎಸ್**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದು):**

ಆದರೆ ಈ ಸುವರ್ಣ ಸೌಧದಲ್ಲಿ ನಡೆಯುತ್ತಿರುವುದು ಏನು? ಯಾವುದೋ ಒಂದು ವ್ಯಕ್ತಿಯ ವಿಚಾರವನ್ನಿಟ್ಟುಕೊಂಡು....... ನಾನು ವಿರೋಧ ಪಕ್ಷದವರಿಗೆ ಬೇಡವೆಂದು ಹೇಳುವುದಿಲ್ಲ. ಕೇಳುವ ಹಕ್ಕು ಹಾಗೂ ಕರ್ತವ್ಯ ಅವರಿಗಿದೆ. ವಿರೋಧ ಪಕ್ಷದಲ್ಲಿರುವ ಅನೇಕ ಸದಸ್ಯರು ಉತ್ತರ ಕರ್ನಾಟಕದವರಿದ್ದಾರೆ. ಅವರಿಗೆ ಕೂಡ ಮುಜುಗರವಾಗುತ್ತಿದೆ. ಜೆಡಿಎಸ್ ಹಾಗೂ ಬಿಜೆಪಿಯವರಿಗೂ ಮುಜುಗರವಾಗುತ್ತದೆ. ಬೆಳಗಾವಿಯಲ್ಲಿ ಉತ್ತರ ಕರ್ನಾಟಕದ ಬಗ್ಗೆ ಯಾವುದೇ ಚರ್ಚೆಯಿಲ್ಲದಿರುವುದು ಸಮಾಜದ ಮುಂದೆ ನಾವೆಲ್ಲರೂ ತಲೆತಗ್ಗಿಸುವ ಸಂದರ್ಭ ಬಂದಿದೆ. ನಿಮ್ಮ ವಿಚಾರ ಹಾಗೂ ನಿಮ್ಮ ಬೇಡಿಕೆ ಬಗ್ಗೆ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಅದ್ಯಾವ ಭೂಕಬಳಿಕೆ, ಮಣ್ಣು ಕಬಳಿಕೆ, ನೀರು ಕಬಳಿಕೆ, ಅದ್ಯಾವುದೇ ಇರಲಿ, ಆ ವಿಚಾರವಾಗಿ ಬೆಂಗಳೂರಿನಲ್ಲಿ ವಿಶೇಷ ಅಧಿವೇಶನ ಕರೆಯಿಸಿ. ಅದಕ್ಕಾಗಿಯೇ ಹೋರಾಟ ಮಾಡಿ. ನಾನು ನಿಮಗೆ ಬೇಡವೆನ್ನುವುದಿಲ್ಲ. ಆದರೆ, ದಯಮಾಡಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ನಾವೆಲ್ಲರೂ ಪಾಪಿಗಳು. ನಾವು ನಿಮ್ಮ ಜೊತೆಗೆ ಧ್ವನಿಗೂಡಿಸುತ್ತಿದ್ದೇನೆ. ಆದರೆ, ನೀವು ನಮ್ಮೊಂದಿಗೆ ಧ್ವನಿಗೂಡಿಸುತ್ತಿಲ್ಲ. ಅದಕ್ಕಾಗಿ ನಾನು ನಿಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ಈ ಧರಣಿಯನ್ನು ಇವತ್ತಿಗೆ ಮುಕ್ತಾಯಗೊಳಿಸಿ. ಇವತ್ತಿನಿಂದ ಉತ್ತರ ಕರ್ನಾಟಕ ಭಾಗಕ್ಕೆ ಸಂಬಂಧಪಟ್ಟಂತೆ ನೀರಾವರಿ, ರಸ್ತೆ, ಬೆಳೆ ಹಾನಿ ಮತ್ತು ಅತಿವೃಷ್ಟಿಯಿಂದಾದ ನಷ್ಟದ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಲಕ್ಷಾಂತರ ಎಕರೆಯಲ್ಲಿ ಬೆಳೆದಂತಹ ದ್ರಾಕ್ಷಿ ಬೆಳೆ ಹಾಳಾಗಿ ಹೋಗಿದೆ. ಮೊನ್ನೆ ಅನಿರೀಕ್ಷಿತವಾಗಿ ಮಳೆ ಬಿದ್ದಾಗ ಅನೇಕ ಜನರು ನೇಣು ಹಾಕಿಕೊಳ್ಳುವಂತಹ ಪ್ರಸಂಗ ಬಂತು. ಈ ಅಧಿವೇಶನದಲ್ಲಿ ಅವುಗಳ ಬಗ್ಗೆ ಚರ್ಚೆಯಾಗುತ್ತಿಲ್ಲ.

---

ಮಾನ್ಯ ಸಭಾಪತಿಯವರೆ, ನಿಮಗೆ ನಾನು ಸಾಷ್ಟಾಂಗ ಮತ್ತು ದೀರ್ಘದಂಡ ನಮಸ್ಕಾರ ಮಾಡಿ ಕೇಳುತ್ತೇನೆ. ಈಗ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಬಾವಿಯಿಂದ ಹೊರಗೆ ಬಂದು ಉತ್ತರ ಕರ್ನಾಟಕ ಭಾಗದ ಕುಂದು ಕೊರತೆಗಳ ಬಗ್ಗೆ ಚರ್ಚೆ ನಡೆಯಲಿ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮುಗಿದ ಮೇಲೆ ಬೇಕಾದರೆ ಅವರು ಧರಣಿಯನ್ನು ಮುಂದುವರಿಸಲಿ, ಉತ್ತರ ಕರ್ನಾಟಕ ಭಾಗದ ಎಲ್ಲ ಪಕ್ಷಾತೀತ ಶಾಸಕರ ಪರವಾಗಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತಿಗೆ ಈ ಧರಣಿಯನ್ನು ಮುಕ್ತಾಯಗೊಳಿಸಿ ಉತ್ತರ ಕರ್ನಾಟಕದ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೈಮುಗಿದು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿರುವ ವಿಚಾರವನ್ನು ನಾನು ಒಪ್ಪುತ್ತಿದ್ದೇನೆ. ಉತ್ತರ ಕರ್ನಾಟಕ ಭಾಗ ಅಂದರೆ, ಕಲ್ಯಾಣ ಕರ್ನಾಟಕ ಭಾಗವಿರಲಿ ಅಥವಾ ಕಿತ್ತೂರು ಕರ್ನಾಟಕದ ಭಾಗವಿರಲಿ ಜನರ ಮನಸ್ಸಿನಲ್ಲಿ ಬೆಳಗಾವಿಯಲ್ಲಿ ನಡೆಯುತ್ತಿರುವ ಈ ಅಧಿವೇಶನದಲ್ಲಿ ನಮ್ಮ ಗಂಭೀರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು ಎನ್ನುವಂತಹ ಕುತೂಹಲವಿದೆ. ಆ ಕುತೂಹಲಕ್ಕೆ ನಾವು ಕಳೆದ ಐದಾರು ದಿನಗಳಿಂದ ಸಮಾಧಾನವನ್ನು ಕೊಟ್ಟಿಲ್ಲ. ನಾನು ನಿಯಮ 59ರಡಿಯಲ್ಲಿ ಒಂದು ನೋಟೀಸ್ ಅನ್ನು ಕೊಟ್ಟು ಕೃಷ್ಣಾ ಮೇಲ್ದಂಡೆಯ 'ಬಿ' ಸ್ಕೀಮ್ ಯೋಜನೆ ಬಗ್ಗೆ, ಮಹದಾಯಿ ಯೋಜನೆ ಬಗ್ಗೆ, ಮೇಕೆದಾಟು ಮತ್ತು ಎತ್ತಿನಹೊಳೆ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದೇನೆ. ಆದರೆ, ತಾವು ಇನ್ನೂ ಅವಕಾಶವನ್ನು ಮಾಡಿಕೊಟ್ಟಿಲ್ಲ. ಅಧಿಕೃತವಾಗಿ ಅವಕಾಶವನ್ನು ಕೇಳಿ, ಪ್ರಸ್ತಾವಿಕ ಚರ್ಚೆಯನ್ನು ಸಹ ಮಾಡಿದ್ದೆ. ಆದ್ದರಿಂದ ಕೂಡಲೇ ನಾಳೆಯೇ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳಾಗಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಬಿ ಸ್ಕೀಮ್‌ನ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ಸುಮಾರು 60ರ ದಶಕದಲ್ಲಿ ಈ ಯೋಜನೆ ಪ್ರಾರಂಭವಾಗಿದೆ. ನಾನು ನಿನ್ನೆಯ ದಿನ ಸೈನಿಕ ಶಾಲೆಗೆ ಭೇಟಿ ನೀಡಿದ್ದೆ, ಮಾನ್ಯ ಎಸ್.ಆರ್. ಕಟ್ಟಿಯವರು ಕಟ್ಟಿರುವಂತಹ ಶಾಲೆಗಳಿವೆ, ಮೂರನೆಯ ಅಧಿವೇಶನದಲ್ಲಿ ಎರಡು ನಿರ್ಣಯಗಳಾಗಿವೆ. ಒಂದು ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಮತ್ತೊಂದು ಕಾವೇರಿ ನದಿಯ ಯೋಜನೆಗಳ ಬಗ್ಗೆ ಹೀಗೆ ಅಧಿವೇಶನದಲ್ಲಿ ಎರಡು ನಿರ್ಣಯಗಳನ್ನು ಮಾಡಲಾಗಿದೆ. ಆದರೆ, ಇಲ್ಲಿಯವರೆಗೆ ಆ ಯೋಜನೆಗಳನ್ನು ಪೂರ್ಣಗೊಳಿಸಿಲ್ಲ. ನಾವು ಅವುಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಈ ದಿನ ಒಂದು ನೋಟೀಸ್ ಅನ್ನು ತಮಗೆ ಕಳುಹಿಸಿಕೊಟ್ಟಿದೇನೆ. ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದೆ ಎನ್ನುವ ಕಾರಣಕ್ಕಾಗಿ ಕೆಲವು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪುಂಡರು ಇದರ ವಿರುದ್ಧ ಒಂದು ತಗಾದೆಯನ್ನು ತೆಗೆದಿದ್ದಾರೆ. ಆ ರೀತಿ ತಗಾದೆ ತೆಗೆದಿರುವುದರ ಬಗ್ಗೆ ಪ್ರಶ್ನೆ ಮಾಡಿದ ಕನ್ನಡಿಗರ ಮೇಲೆ ಕೊಲೆ ಪ್ರಕರಣವನ್ನು ದಾಖಲು ಮಾಡಲಾಗಿದೆ. ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ವಿರೂಪ ಮಾಡಿದವರ ಮೇಲೆ ಸಾಮಾನ್ಯ ಕೇಸ್ ದಾಖಲು ಮಾಡಲಾಗಿದೆ. ಈ ಅಧಿವೇಶನಕ್ಕೆ ಬಂದಿರುವ ಸರ್ಕಾರಿ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ. ಪೊಲೀಸ್ ವಾಹನಕ್ಕೆ ಬೆಂಕಿ ಹಚ್ಚುವಂತಹ ಪ್ರಯತ್ನವಾಗಿದೆ. ಸನ್ಮಾನ್ಯ ಸಭಾಪತಿಯವರೇ, ಕನ್ನಡ ಬಾವುಟಕ್ಕೆ ಅವಮಾನವಾಗಿದೆ. ಕನ್ನಡದ ಬಾವುಟವನ್ನು ಸಹ ಸುಟ್ಟು ಹಾಕಿದ್ದಾರೆ. ಎರಡನೆಯ ಬಾರಿ ಕನ್ನಡದ ಬಾವುಟದ ಮೇಲೆ ಚಪ್ಪಲಿಯಿಂದ ಹೊಡೆಯುತ್ತಾರೆ. ನಾಯಿಯನ್ನು ಅದರ ಮೇಲೆ ಕೂರಿಸುತ್ತಾರೆ. ಇಡೀ ರಾಜ್ಯ ಇವತ್ತು ಆತಂಕದಲ್ಲಿದೆ. ಆ ಪುಂಡರ ಮೇಲೆ ಕ್ರಮ ಕೈಗೊಳ್ಳಬೇಕಾಗಿದೆ. ಅದರ ಜೊತೆಗೆ ಆ ಪುಂಡರನ್ನು ಗಡಿ ಪಾರು ಮಾಡಬೇಕಾಗಿದೆ. ಜನತೆಗೆ ಒಂದು ಸ್ಪಷ್ಟವಾಗಿರುವ ಸಂದೇಶವನ್ನು ನೀಡಬೇಕಾಗಿದೆ. ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಅದಕ್ಕೆ ಪರ್ಯಾಯವಾಗಿ ಮಹಾ ಅಧಿವೇಶನವನ್ನು ಮಾಡುವುದಕ್ಕೆ ಹೊರಟಾಗ, ಗೃಹ ಇಲಾಖೆ ಏನು ಮಾಡುತ್ತಿತ್ತು? ಏತಕ್ಕೋಸ್ಕರ ಅದನ್ನು ತಡೆಯಲಿಲ್ಲ? ಬಹುಶಃ ಅದನ್ನು ತಡೆದಿದ್ದರೆ, ಇಷ್ಟೆಲ್ಲ ಬೆಳವಣಿಗೆಗಳು ಆಗುತ್ತಿರಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, ದಯಮಾಡಿ ತಾವು ಉತ್ತರ ಕರ್ನಾಟಕ ಭಾಗದ ಬಗ್ಗೆ ಚರ್ಚೆ ಮಾಡುವುದಕ್ಕೆ ಮತ್ತು ಕಳೆದ 3-4 ದಿನಗಳಿಂದ ಈ ಭಾಗದಲ್ಲಿ ಅಂದರೆ, ನಮ್ಮ ಗಡಿಭಾಗವಾಗಿರುವ ಬೆಳಗಾವಿಯ ಸರಹದ್ದಿನಲ್ಲಿ ಮತ್ತು ಕೊಲ್ಹಾಪುರದಲ್ಲಿ ನಡೆದಂತಹ ಘಟನೆಗಳ ಬಗ್ಗೆಯೂ ಗಂಭೀರವಾಗಿರುವ ಚರ್ಚೆಗಳು ನಡೆಯಬೇಕಾಗಿದೆ. ತಾವು ದಯಮಾಡಿ ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ. ಇಬ್ರಾಹಿಂ ರವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಮತ್ತು ಶ್ರೀಯುತ ಲಕ್ಷ್ಮಣ್ ಸವದಿಯವರು ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಚರ್ಚೆಗೆ ಅವಕಾಶವನ್ನು ನೀಡುತ್ತೇನೆಂದು ಒಂದು ಸಮಯವನ್ನು ನಿಗದಿ ಮಾಡಿದರೆ, ನಾವೆಲ್ಲರು ಒಪ್ಪಿಕೊಳ್ಳುತ್ತೇವೆ. ಮೊದಲನೆಯದಾಗಿ ಬೆಳಗಾವಿಯಲ್ಲಿ ನಡೆದಿರುವ ಪುಂಡಾಟಿಕೆಯ ವಿಚಾರವಾಗಿ ಎರಡನೆಯದಾಗಿ ನಮ್ಮ ಪಕ್ಷದ ಬೇಡಿಕೆಯಾಗಿರುವ 40 ಪರ್ಸೆಂಟ್ ಸರ್ಕಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈಗ ಪರ್ಸೆಂಟೇಜ್ ಹೆಚ್ಚಾಗುತ್ತಿದೆ. ಆದ್ದರಿಂದ ಆದಷ್ಟು ಬೇಗ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಇದರ ಮೇಲಿನ ಚರ್ಚೆಗೆ ತಾವು ಅವಕಾಶವನ್ನು ನೀಡಬೇಕು ಮತ್ತು ಅದಕ್ಕೆ ಸರ್ಕಾರ ಉತ್ತರ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಲಕ್ಷ್ಮಣ್ ಸವದಿಯವರು ಮತ್ತು ಶ್ರೀಯುತ ಕೆ.ಟಿ.ಶ್ರೀಕಂಠೇಗೌಡರು ಹಾಗೂ ಮಾನ್ಯ ಸಿ.ಎಂ.ಇಬ್ರಾಹಿಂ ಇವರುಗಳು ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಅಂದರೆ, ನೀರಾವರಿ ಯೋಜನೆಗಳ ಬಗ್ಗೆ, ರೈತರ ಸಮಸ್ಯೆಗಳ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಹಾಗೂ ಅತಿವೃಷ್ಟಿ ಮತ್ತು ಅನಾವೃಷ್ಟಿಗಳ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ನಮ್ಮೆಲ್ಲರಿಗೂ ತಿಳಿದಿರುವಂತೆ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಚರ್ಚೆಯಾಗಬೇಕೆನ್ನುವ ಉದ್ದೇಶದಿಂದ ಕಳೆದ ಮೂರು ವರ್ಷಗಳ ನಂತರ ಬೆಳಗಾವಿಯಲ್ಲಿ ಅಧಿವೇಶನವನ್ನು ಕರೆಯಲಾಗಿದೆ. ನೀರಾವರಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ನೀರಾವರಿ ಸಚಿವರು ಬಂದಿದ್ದಾರೆ. ಇಂಧನದ ಬಗ್ಗೆ ಚರ್ಚೆ ಮಾಡುವುದಕ್ಕೆ ಇಂಧನ ಸಚಿವರು ಸದನಕ್ಕೆ ಬಂದಿದ್ದಾರೆ. ಉನ್ನತ ಶಿಕ್ಷಣ ಸಚಿವರು, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಎಲ್ಲ ಮಂತ್ರಿಗಳು ಒಟ್ಟಾಗಿ ಕುಳಿತುಕೊಂಡು ವಿರೋಧ ಪಕ್ಷದವರಿಂದ ಬರಬಹುದಾಗಿರುವ ಟೀಕೆ-ಟಿಪ್ಪಣಿ, ಸವಾಲು, ಚರ್ಚೆಗಳು ಮತ್ತು ಸಲಹೆಗಳನ್ನು ಗೌರವದಿಂದ ಸ್ವೀಕಾರ ಮಾಡಿ ಚರ್ಚೆ ಮಾಡುವುದೇ ನಮ್ಮ ಉದ್ದೇಶವಾಗಿದೆ. ಈ ವಿಚಾರವಾಗಿ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಮತ್ತು ಕಾತರಗೊಂಡಿದೆ ಎನ್ನುವ ವಿಚಾರವನ್ನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತಿದ್ದೇನೆ. ತಾವು ಯಾವಾಗ ಸಮಯವನ್ನು ನಿಗದಿ ಮಾಡಿದರೆ, ಸರ್ಕಾರ ಚರ್ಚೆ ಮಾಡುವುದಕ್ಕೆ ಸಿದ್ಧವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಎಂ.ಇ.ಎಸ್. ಪುಂಡರು ಮಾಡಿರುವಂತಹ ದಬ್ಬಾಳಿಕೆ ಮತ್ತು ಗೊಂದಲಗಳ ವಿಚಾರಕ್ಕೆ ಬಂದಾಗ, ರಾಜ್ಯದ ಮತ್ತು ರಾಷ್ಟ್ರದ ನಾಯಕತ್ವಕ್ಕೆ ಅಗೌರವವನ್ನು ತರುವಂತಹ ರೀತಿಯಲ್ಲಿ ಎಂ.ಇ.ಎಸ್. ನವರು ಪುಂಡಾಟಿಕೆಯನ್ನು ಮಾಡುತ್ತಿರುವುದನ್ನು ನಾವು ನೋಡಿದ್ದೇವೆ. ಸರ್ಕಾರ ಯಾವ ಕಾರಣಕ್ಕೂ ಈ ಪುಂಡಾಟಿಕೆಯನ್ನು ಸಹಿಸುವುದಿಲ್ಲ. ಮಾನ್ಯ ಶ್ರೀಕಂಠೇಗೌಡರು ಹೇಳಿದಂತೆ, ಸರ್ಕಾರಿ ವಾಹನಗಳ ಮೇಲೆ ಕಲ್ಲು ತೂರುವುದು, ಬೆಂಕಿ ಹಚ್ಚುವುದು, ಕನ್ನಡ ಬಾವುಟವನ್ನು ಸುಡುವುದು ಇಂತಹ ಕೃತ್ಯಗಳಲ್ಲಿ ತೊಡಗಿದವರಿಗೆ ಕರ್ನಾಟಕ ರಾಜ್ಯದ ಪೊಲೀಸರು ಲಾಠಿಯ ರುಚಿಯನ್ನು ತೋರಿಸಿದ್ದಾರೆ. ಇಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ. ಯಾವ ಗೊಂದಲಕ್ಕೂ ಎಡೆ ಮಾಡಿಕೊಡುವುದಿಲ್ಲ. ಕಾನೂನು ಸುವ್ಯವಸ್ಥೆಗೆ ಯಾರು ಸವಾಲು ಹಾಕುತ್ತಾರೆ ಅವರನ್ನು ಸರ್ಕಾರ ಮಟ್ಟ ಹಾಕುತ್ತದೆ. ಎಂ.ಇ.ಎಸ್. ಪುಂಡಾಟಿಕೆಯೂ ಸೇರಿದಂತೆ ಬೇರೆ ಯಾವುದೇ ಪುಂಡಾಟಿಕೆಯನ್ನು ಸರ್ಕಾರ ಸಹಿಸುವುದಿಲ್ಲ ಎನ್ನುವುದನ್ನು

ಸ್ಪಷ್ಟಪಡಿಸುತ್ತೇವೆ. ಈ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಯಾವ ಸಮಯವನ್ನು ನಿಗದಿ ಮಾಡುತ್ತೀರಿ, ಆ ಚರ್ಚೆಗೆ ಸರ್ಕಾರ ಸಿದ್ಧವಿದೆ ಮತ್ತು ವಿರೋಧ ಪಕ್ಷದವರಿಗೆ ಸಮಾಧಾನವಾಗುವಂತಹ ಉತ್ತರವನ್ನು ಕೊಡುತ್ತೇವೆ ಎನ್ನುವಂತಹ ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಸನ್ಮಾನ್ಯ ಸಭಾಪತಿಯವರೇ, ಎಂ.ಇ.ಎಸ್. ಪುಂಡಾಟಿಕೆಗೆ ಇವರು ಏನೂ ಮಾಡುವುದು ಬೇಡ, ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ತಂದಿರುವ ಭೂ ಸುಧಾರಣಾ ಕಾಯಿದೆಯನ್ನು ಬೆಳಗಾವಿಯಲ್ಲಿ ಜಾರಿಗೊಳಿಸುವುದಿಲ್ಲವೆಂದು ಹೇಳಿದರೆ ಸಾಕು ಒಬ್ಬನೇ ಒಬ್ಬ ಮರಾಠಿಯವನು ಇಲ್ಲಿ ಇರುವುದಿಲ್ಲ. ಎಲ್ಲ ನಮ್ಮ ಜಮೀನಿನಲ್ಲಿ ದುಡಿಯುತ್ತಿದ್ದವರು ಭೂ ಸುಧಾರಣಾ ಕಾಯಿದೆ ಬಂದು ಅವರು ಮಾಲೀಕರಾಗಿದ್ದಾರೆ.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ ಹಾಗೂ ಶ್ರೀಯುತ ಇಬ್ರಾಹಿಂರವರೇ, ನಾನು ತಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಈಗ ಕುಳಿತುಕೊಳ್ಳಿ, ಎಲ್ಲ ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಯ ಬಗ್ಗೆ ಬೆಳಕು ಚೆಲ್ಲಿ ಎಂದು ವರದಿಯಾಗಿದೆ. ಅದನ್ನು ನಾನು ಬೆಳಗ್ಗೆಯಿಂದ ನೋಡಿದ್ದೇನೆ ಮತ್ತು ಓದಿದ್ದೇನೆ. ಅದಕ್ಕಾಗಿಯೇ ನಾನು ಬೆಳಗ್ಗೆ ತಮ್ಮೆಲ್ಲರನ್ನು ಕರೆದು ಮಾತನಾಡಿದ್ದೇನೆ.

**ಶ್ರೀ ಗೋವಿಂದ ಎಂ.ಕಾರಜೋಳ(ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸುವರ್ಣಸೌಧ ಕಟ್ಟಿರುವ ಆಶಯ ಏನೆಂದರೆ ಸ್ವಾತಂತ್ರ್ಯ ಬಂದ 65 ವರ್ಷಗಳ ನಂತರವೂ ಸಹ ಉತ್ತರ ಕರ್ನಾಟಕ ಅಭಿವೃದ್ಧಿಯಾಗಿಲ್ಲ, ಎನ್ನುವಂತಹ ಹಣೆಪಟ್ಟಿ ಏನಿದೆ, ಅದನ್ನು ಅಳಿಸುವುದಕ್ಕೆ ಇಲ್ಲಿ ಚರ್ಚೆಗಳಾಗಬೇಕು , ಇಲ್ಲಿಂದ ಅಭಿವೃದ್ಧಿ ಕೆಲಸಗಳು ಇಲ್ಲಿಂದ ಮಂಜೂರಾಗಬೇಕು ಎನ್ನುವ ಉದ್ದೇಶದಿಂದ ಈ ಸುವರ್ಣಸೌಧವನ್ನು ಕಟ್ಟಲಾಗಿದೆ. ಆದರೆ, ದುರ್ದೈವದ ಸಂಗತಿ ಏನಾಗಿದೆ ಎಂದರೆ ಪ್ರತಿ ಅಧದಿವೇಶನದಲ್ಲೂ ಇಂತಹ ಗಲಾಟೆಗಳು , ಇಂತಹ ಗೊಂದಲಗಳು, ಮತ್ತೆ ಕೆಲವರಿಂದ ಪ್ರತಿಭಟನೆ ಇದು ಒಂದೇ ಕೆಲಸವಾಗುತ್ತಾ ಬಂದಿದೆ. ಹಾಗಾಗಿ, ಪ್ರತಿಪಕ್ಷದ ನಾಯಕರು ಹೇಳಿರುವಂತಹ ವಿಚಾರ, ಮತ್ತೆ ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು, ಮತ್ತು ಶ್ರೀ ಸಿ.ಎಂ. ಇಬ್ರಾಹಿಂ ರವರು ಹೇಳಿದಂತಹ ವಿಚಾರ ಮತ್ತು ಕೆ.ಟಿ. ಶ್ರೀಕಂಠೇಗೌಡರವರು ಹೇಳಿದಂತಹ ವಿಚಾರಕ್ಕೆ ನಾನು ಸಹಮತವನ್ನು ವ್ಯಕ್ತ ಮಾಡುತ್ತೇನೆ. ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಲಿಕ್ಕೆ ಸರ್ಕಾರ ಸಿದ್ಧವಿದೆ. ಮತ್ತೆ ನಮಗೆ ಆಗಿರುವಂತಹ ಅನ್ಯಾಯ ಕೃಷ್ಣಾ ಬಗ್ಗೆ 2010 ರಲ್ಲಿ ಈ ಸಂಬಂಧ ಫೈನಲ್ ನೋಟಿಫಿಕೇಷನ್ ಆಗಿದೆ. 130 ಟಿ.ಎಂ.ಸಿ.ಗೆ ಆಲಮಟ್ಟಿಯಲ್ಲಿ.....

(ಮುಂದು)

**(1160) 20.12.2021 11.50 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು):-**

ಪ್ರತಿಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಹೇಳುವುದಾದರೆ ಒಂದು ಹನಿ ನೀರು ಕೂಡ ವ್ಯರ್ಥವಾಗದಂತೆ ಉಪಯೋಗ ಮಾಡಿಕೊಳ್ಳಲಿಕ್ಕೆ ಎಲ್ಲರ ಸಹಕಾರವನ್ನೂ ಕೇಳುವುದಕ್ಕೆ ಸರ್ಕಾರ ಬದ್ಧವಾಗಿದೆ. ಆ ನಿಟ್ಟಿನಲ್ಲಿ ಪೂರಕವಾದಂತಹ ಚರ್ಚೆಗಳು ನಡೆಯಲಿ. ಅದಕ್ಕೆ ಸರ್ಕಾರ ಸಿದ್ಧವಿದೆ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ.

**ಸಭಾಪತಿಯವರು:-** ತಮ್ಮೆಲ್ಲರ ಭಾವನೆಗಳನ್ನು ನಾನು ಅರಿತಿದ್ದೇನೆ. ಇದು ಬಹಳ ಒಳ್ಳೆಯ ಬೆಳವಣಿಗೆ ಎಂದು ನಾನು ಭಾವಿಸಿದ್ದೇನೆ. ಈ ಹಿನ್ನೆಲೆಯಲ್ಲಿ ನಾಳೆ ಬೆಳಿಗ್ಗೆ 10.30ಕ್ಕೆ ಸದನವನ್ನು ಪ್ರಾರಂಭ ಮಾಡಿ ಪ್ರಶ್ನೋತ್ತರ ಮುಗಿದ ನಂತರ ಇಡೀ ದಿನವನ್ನು ಈ ವಿಷಯದ ಚರ್ಚೆಗಾಗಿ ನಿಗದಿ ಪಡಿಸುತ್ತೇನೆ. ಸರ್ಕಾರಕ್ಕೂ ನಾನು ಇದೇ ಮಾತನ್ನು ಹೇಳಬಯಸುತ್ತೇನೆ. ಬೆಳಿಗ್ಗೆ 10.30 ರಿಂದ ಒಂದು ಗಂಟೆಯ ಅವಧಿಯಲ್ಲಿ ಪ್ರಶ್ನೋತ್ತರವನ್ನು ಮುಗಿಸೋಣ. ಎಲ್ಲರಿಗೂ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ. ಇಡೀ ದಿನ ಚರ್ಚೆ ಮಾಡಲು ಸರ್ಕಾರವೂ ಸಿದ್ಧವಿರಬೇಕು.

ಮಾನ್ಯ ವಿರೋಧ ಪಕ್ಷದ ನಾಯಕರೇ, ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭಿಸಬೇಕಾಗಿದೆ. ನಿಮ್ಮ ಪಕ್ಷದ ಸದಸ್ಯರಿಗೆ ಬಾವಿಯಿಂದ ಹೊರಗೆ ಹೋಗುವಂತೆ ಬಹಳಷ್ಟು ಸಲ ಹೇಳಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ನಾಯಕರನ್ನೇ ಸಾಕಷ್ಟು ಬಾರಿ ವಿನಂತಿ ಮಾಡಿಕೊಂಡಿದ್ದೇನೆ. ವಿರೋಧ ನಾಯಕರ ಮಾತಿಗೆ ಮನ್ನಣೆ ಕೊಟ್ಟು ಮಾನ್ಯ ಸದಸ್ಯರು ಬಾವಿಯಿಂದ ಹೊರಹೋಗಬೇಕೆಂಬುದು ನಮ್ಮ ವಿನಂತಿಯಾಗಿದೆ. ವಿರೋಧ ಪಕ್ಷದ ನಾಯಕರೇ ನಾವು ಚರ್ಚೆಗೆ ಸಿದ್ಧರಿದ್ದೇವೆಂದು ಹೇಳಿದ್ದಾರೆ. ಇದು ನೀನು ಅತ್ತಂಗೆ ಮಾಡು, ನಾನು ಸತ್ತಂಗೆ ಮಾಡುತ್ತೇನೆ ಎಂದ ಹಾಗಾಗಿದೆ. ಅವರನ್ನು ಏಕೆ ತಪ್ಪು ದಾರಿಯಲ್ಲಿ ತಂದು ಕೂರಿಸುತ್ತಾರೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಆ ಮಂತ್ರಿಯ ಮೇಲಿನ ಚರ್ಚೆಗೆ ಒಂದು ಸಮಯವನ್ನು ನಿಗದಿ ಮಾಡಿಬಿಡಿ ಸಾಕು. ಒಂದು ಗಂಟೆಯೋ, ಎರಡು ಗಂಟೆಯೋ ಚರ್ಚೆಯಾಗಲಿ. ಸರ್ಕಾರದವರು ಉತ್ತರವನ್ನು ಕೊಡಲಿ. ಅದಾದ ಮೇಲೆ ತೀರ್ಮಾನವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**(ಈ ಹಂತದಲ್ಲಿ ಹಲವು ಮಾನ್ಯ ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡಲು ಪ್ರಾರಂಭಿಸಿದರು)**

**ಸಭಾಪತಿಯವರು:-** ದಯವಿಟ್ಟು ಒಬ್ಬರು ಮಾತನಾಡಿ. ಈಗ ಮಾನ್ಯ ಸಭಾನಾಯಕರು ಮಾತನಾಡಲು ನಿಂತಿದ್ದಾರೆ. ಕೇಳಿ, ಸದನದಲ್ಲಿ ಪೀಠಕ್ಕೆ ಸ್ವಲ್ಪವಾದರೂ ಗೌರವವನ್ನು ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೊನ್ನೆ ವಿರೋಧಪಕ್ಷದ ಮುಖ್ಯ ಸಚೇತಕರು ತಮಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟು, ಪ್ರಸ್ತಾಪ ಮಾಡಿ, ಚರ್ಚೆಯಾಗಿ ತಾವು ತೀರ್ಮಾನವನ್ನೂ ಕೊಟ್ಟು ಎಲ್ಲವೂ ಮುಗಿದು ಹೋಗಿದೆ. ಮುಗಿದ ಅಧ್ಯಾಯವನ್ನು ಪುನಃ ತೆಗೆದುಕೊಂಡು ಚರ್ಚೆಗೆ ಅವಕಾಶ ಕೊಡಿ ಎಂದರೆ ಅದು ಸದನದ ಕಾರ್ಯಕಲಾಪದ ಒಟ್ಟು ಸಮಯವನ್ನು ಕೊಲ್ಲುವುದನ್ನು ಬಿಟ್ಟರೆ ಸಮಸ್ಯೆ ಪರಿಹಾರವಾಗುವುದಿಲ್ಲ. ನಾನು ತಮ್ಮ ಮೂಲಕ ಪ್ರತಿಪಕ್ಷದ ನಾಯಕರು, ಪ್ರತಿಪಕ್ಷದ ಮುಖ್ಯ ಸಚೇತಕರು ಮತ್ತು ಪ್ರತಿಪಕ್ಷದ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮುಗಿದ ಅಧ್ಯಾಯಕ್ಕೆ ಏಕೆ ಪುನಃ ಚಾಲನೆಯನ್ನು ಕೊಡುತ್ತೀರಾ? ಇದು ಮುಗಿದು ಹೋದಂತಹ ವಿಚಾರ. ಅವರು ಕೊಟ್ಟ ನಿಲುವಳಿ ಸೂಚನೆಯ ಮೇರೆಗೆ ಚರ್ಚೆಯಾಗಿ ತಾವು ತೀರ್ಪನ್ನು ನೀಡಿರುತ್ತೀರಿ. ಅದನ್ನು ತಿರಸ್ಕಾರ ಕೂಡ ಮಾಡಿಯಾಗಿದೆ. ಇನ್ನೇಕೆ ಅದರ ಬಗ್ಗೆ ಚರ್ಚೆ? ಪ್ರಶ್ನೋತ್ತರದ ನಂತರ ಗಮನ ಸೆಳೆಯುವ ಸೂಚನೆಗಳು, ಇನ್ನಿತರ ಕಾರ್ಯ ಕಲಾಪಗಳು ಆಗಬೇಕಾಗಿರುವುದರಿಂದ ದಯವಿಟ್ಟು ಸಹಕಾರ ನೀಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದುವರೆವಿಗೂ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಲಕ್ಷ್ಮಣ ಸವದಿ, ಮಾನ್ಯ ಶ್ರೀಕಂಠೇಗೌಡರು, ಮಾನ್ಯ ಇಬ್ರಾಹಿಂ ಮಾತನಾಡಿರುವ ವಿಷಯಕ್ಕೆ ನಮ್ಮ ಸಹಮತ ಇದೆ. ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಮಾತನಾಡಲು ನಾವು ಕೂಡ ಬಹಳ ಆಸಕ್ತರಾಗಿದ್ದೇವೆ. ಜೊತೆಗೆ ಎಂಇಎಸ್ ಪುಂಡಾಟಿಕೆ, ಕನ್ನಡ ಬಾವುಟವನ್ನು ಸುಟ್ಟಿರುವುದು, ಕನ್ನಡಿಗರ ಕೆಚ್ಚನ್ನು ಬಡಿದೆಬ್ಬಿಸಿದ್ದು, ಒಬ್ಬ ಕನ್ನಡಿಗನಾಗಿ ನಾವೆಲ್ಲರೂ ಅದರ ಬಗ್ಗೆ ಮಾತನಾಡಲು ತಯಾರಿದ್ದೇವೆ.

ನಾವು ಕಳೆದ ಮೂರ್ನಾಲ್ಕು ದಿನಗಳಿಂದ ಹೋರಾಟ ಮಾಡಿಕೊಂಡು ಬರುತ್ತಿದ್ದು, ಈ ಸರ್ಕಾರದಲ್ಲಿರುವ ಒಬ್ಬ ಮಂತ್ರಿ ಭ್ರಷ್ಟಾಚಾರದಲ್ಲಿ ಸಿಲುಕಿದ್ದಾರೆ. ನ್ಯಾಯಾಲಯವು ಅವರ ವಿರುದ್ಧ ಇಂತಹ ಐ.ಪಿ.ಸಿ. ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಬೇಕೆಂದು ಹೇಳಿದೆ. ನಾವು ನಿಯಮ 59ರ ಅಡಿಯಲ್ಲಿ ಅವಕಾಶ ಕೊಡುವಂತೆ ತಮಗೆ ಮನವಿಯನ್ನು ಕೊಟ್ಟಿದ್ದೆವು. ಅದು ಆಗುವುದಿಲ್ಲ ಎಂದು ತಾವು ಹೇಳಿದಾಗ ನಾವು ಬಾವಿಗಿಳಿದು ಧರಣಿ ಮಾಡಿದೆವು. ಧರಣಿಯನ್ನು ಮಾಡಬೇಕಾದರೆ ತಾವು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಮನವಿಯನ್ನು ಮಾಡಿ ಇದನ್ನು ಬೇರೆ ರೂಪದಲ್ಲಿ ತಂದರೆ ಅವಕಾಶ ಕೊಡುವುದಾಗಿ ಹೇಳಿದಿರಿ. ನಿಯಮ 68 ರ ಅಡಿಯಲ್ಲಿ ತಮಗೆ ಮನವಿಯನ್ನು ಸಲ್ಲಿಸಿ ಮೂರು ದಿನಗಳಾಗಿದೆ. ಇನ್ನೂ ಕಾರ್ಯ ಕಲಾಪಗಳ ಪಟ್ಟಿಯಲ್ಲಿ ಬಂದಿಲ್ಲ. ಮೊದಲ ಆದ್ಯತೆಯನ್ನು ಉತ್ತರ ಕರ್ನಾಟಕದ ಮೇಲಿನ ಚರ್ಚೆಗೆ ಕೊಡಿ. ಎರಡನೆಯ ಆದ್ಯತೆ ಎಂಇಎಸ್ ಪುಂಡಾಟದ ಬಗ್ಗೆ ಕೊಡಿ. ಇಂತಹ ಸಚಿವರ ವಿರುದ್ಧ ಚರ್ಚೆಗೆ ಅವಕಾಶ ಕೊಡುವುದಾಗಿ ನೀವು ಹೇಳಿದರೆ ಈಗಲೇ ನಾವು ಆಚೆ ಬರುತ್ತೇವೆ. ಅದು ಬಿಟ್ಟು ಒಂದು ವಿಷಯದ ಬಗ್ಗೆ ಚರ್ಚೆ ಮಾಡಬೇಕು, ಮತ್ತೊಂದು ವಿಷಯದ ಬಗ್ಗೆ ಚರ್ಚೆ ಮಾಡಬಾರದು ಎನ್ನುವುದಾದರೆ ಸದನದಲ್ಲಿ ನಾವು ಏಕೆ ಪ್ರಸ್ತಾಪ ಮಾಡಬೇಕು? ಇಂತಹ ಮಂತ್ರಿ ಭ್ರಷ್ಟ ಮಂತ್ರಿ ಎಂಬುದು ಎಲ್ಲರಿಗೂ ಗೊತ್ತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮುಗಿದು ಹೋಗಿರುವ ಅಧ್ಯಾಯದ ಬಗ್ಗೆ ಪುನಃ ಚರ್ಚೆ ಮಾಡಬೇಕೆಂದು ಹೇಳಿದರೆ ಏನರ್ಥ?

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾನಾಯಕರೇ, ಸುಲಭವಾಗಿ ಆಗುವುದನ್ನು ಏಕೆ ಬೇಡವೆಂದು ಹೇಳುತ್ತೀರಿ? ಅವಕಾಶವನ್ನು ಕೊಡುವುದಾಗಿ ಹೇಳಿಬಿಡಲಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ಮಾತು ಇನ್ನೂ ಮುಗಿದಿಲ್ಲ. ನಮ್ಮ ಸದನವು ಅಪಾರವಾದ ಗೌರವಯುತ ಇತಿಹಾಸವುಳ್ಳದ್ದು.

**ಸಭಾಪತಿಯವರು:-** ನೀವು ಮಾತನಾಡುವುದಕ್ಕೆ ಮುನ್ನ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ನೀವು ಯಾವ ವಿಷಯದ ಬಗ್ಗೆ ಧರಣಿ ಮಾಡುತ್ತಿದ್ದೀರೆಂಬುದು ನಮಗೆ ಗೊತ್ತಿಲ್ಲ. ನೀವು ಏನನ್ನು ಯಾವಾಗ ನನಗೆ ಕೊಟ್ಟಿದ್ದೀರಿ ಎಂಬುದನ್ನು ಹೇಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ನಾವು ನಿಯಮ 68ರ ಅಡಿಯಲ್ಲಿ ಯಾವ ಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಒತ್ತಾಯ ಮಾಡುತ್ತೀದ್ದೇವೆಯೋ ...

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಒಂದು ನಿಮಿಷ ಕೇಳಿ. ಮೊದಲು ನಿಯಮಗಳನ್ನು ಪಾಲಿಸುವುದಕ್ಕೆ ಕಲಿಯಿರಿ. ನೀವು ಮಧ್ಯಾಹ್ನ 01.30 ನಿಮಿಷಕ್ಕೆ ನೋಟಿಸ್ ಅನ್ನು ಕೊಟ್ಟಿದ್ದೀರಿ. ಆ ವೇಳೆಗೆ ಅಜೆಂಡಾ ನಿಗದಿಯಾಗಿತ್ತು. ಆಮೇಲೆ ನೀವು ಏಕೆ ಧರಣಿ ಮಾಡುತ್ತಿದ್ದೀರಿ ಎಂಬುದು ನನಗೇನೂ ತಿಳಿದಿಲ್ಲ. ನೀವೇನು ಕೊಟ್ಟಿಲ್ಲ. ನೀವು ಅಂದು ನೀಡಿದ್ದ ಸೂಚನೆಗೆ ನಾನು ಈಗಾಗಲೇ ಒಂದು ತೀರ್ಮಾನವನ್ನು ಕೊಟ್ಟಿದ್ದೇನೆ. ನಾನು ಮಾಡಿರುವ ತೀರ್ಮಾನದಿಂದ ನಾನು ಹಿಂದೆ ಸರಿಯಲು ಸಾಧ್ಯವಿಲ್ಲ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

ಮಾನ್ಯ ವಿರೋಧ ಪಕ್ಷದ ನಾಯಕರೇ, ದಯಮಾಡಿ ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಇದೇ ರೀತಿಯ ಪ್ರಕರಣವಿದ್ದ ಸಂದರ್ಭದಲ್ಲಿ ಬಿಜೆಪಿಯವರು ವಿರೋಧಪಕ್ಷದಲ್ಲಿದ್ದರು. ಆಗ ಗಣಪತಿ ಪ್ರಕರಣದಲ್ಲಿ ಇದೇ ರೀತಿಯ ವಾದ ವಿವಾದಗಳಾಯಿತು, ಅಂದು ನಮ್ಮ ಕಾಂಗ್ರೆಸ್ ಸರ್ಕಾರ ಚರ್ಚೆಗೆ ಅವಕಾಶ ಕೊಟ್ಟಿತು. ಅಂದಿನ ಸಭಾಧ್ಯಕ್ಷರಾಗಿದ್ದ ಕೆ.ಬಿ.ಕೋಳಿವಾಡ ಅವರು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದರು. ಅಂದು ಸಚಿವರಾಗಿದ್ದ ಕೆ.ಜೆ.ಜಾರ್ಜ್ ಅವರ ವಿರುದ್ಧ F.I.R. ದಾಖಲು ಮಾಡಲು ಕೋರ್ಟ್ ಹೇಳಿತ್ತು. ಅವರು ರಾಜೀನಾಮೆ ಕೊಟ್ಟರು. **(ಗೊಂದಲ)** ಈಗ ಇವರ ಮೇಲೆ F.I.R. ದಾಖಲಾಗಿದೆ.

**ಸಭಾಪತಿಯವರು:-** ಈಗ ಚರ್ಚೆ ಬೇಡ. ನೀವು ನೋಟೀಸ್‌ಅನ್ನು ಮಧ್ಯಾಹ್ನ 1.30ಕ್ಕೆ ಕೊಟ್ಟಿದ್ದೀರಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಅಂದು ಮಧ್ಯಾಹ್ನ 1.30ಕ್ಕೆ ಕೊಟ್ಟಿದ್ದು, ಇಂದು ಚರ್ಚೆಗೆ ಬರಬೇಕಾಗಿತ್ತಲ್ಲವೆ? ನೀವು ಯಾವತ್ತಾದರೂ ಚರ್ಚೆಗೆ ಅವಕಾಶ ಕೊಡಿ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೇಕಾದಾಗ ಸದನದ ಬಾವಿಗೆ ಬಂದು, ಪುನಃ ಹೋಗಿ ಮಾತನಾಡುವುದು, ಪುನಃ ಸದನದ ಬಾವಿಗೆ ಬರುವುದು ಯಾವ ನಿಯಮಗಳಡಿಯಲ್ಲಿ ಇದೆ ಎಂಬುದನ್ನು ತಿಳಿದುಕೊಳ್ಳಲು ಬಯಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರು ಅಂದು ಹೇಳಿದ್ದರು. ಬೇರೆ ನಿಯಮದ ಅಡಿಯಲ್ಲಿ ಕೊಟ್ಟರೆ ಅವಕಾಶವನ್ನು ಕೊಡುತ್ತೇನೆ ಎಂದು ಹೇಳಿದ್ದಕ್ಕೆ ನಾವು ಅಂದು ಬಾವಿಯಿಂದ ಹೊರಬಂದಿದ್ದೆವು. ನಾವು ಸುಮ್ಮನೆ ಹೊರಗೆ ಬಂದಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ಬಾವಿಯಿಂದ ಹೊರ ಹೋಗುವುದು, ಅಲ್ಲಿ ನಿಂತು ಭಾಷಣ ಮಾಡುವುದು, ಪುನಃ ಬಾವಿಗೆ ಬರುವುದು. ಇದು ಯಾವ ನಿಯಮಗಳ ಅಡಿಯಲ್ಲಿ ಅವಕಾಶ ಇದೆ?

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಆಯನೂರು ಮಂಜುನಾಥ್ ಅವರೇ, ಹೋಗುವ ಬರುವ ನಿಯಮಾವಳಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಇಬ್ರಾಹಿಂ ಅವರು ಬಹಳ ಹಿರಿಯರಿದ್ದಾರೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ದಯಮಾಡಿ ಎಲ್ಲರೂ ಏಳಬೇಡಿ. ಕುಳಿತುಕೊಳ್ಳಿ. ಮಾನ್ಯ ಆಯನೂರು ಮಂಜುನಾಥ್ ಅವರು ಮಾತನಾಡಲಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸದನದ ಬಾವಿಗೆ ಬರುವ ಹಕ್ಕು ಇದೆ. ಬರಲಿ. ಬಾವಿಯಲ್ಲಿ ಬಂದು ನಿಂತುಕೊಳ್ಳುವುದು, ಹೋಗಿ ಭಾಷಣ ಮಾಡುವುದು, ಪುನಃ ಬಾವಿಗೆ ಬರುವುದು. ಇದೇನು ಹುಡುಗಾಟವೇ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಆಯನೂರು ಮಂಜುನಾಥ್ ಅವರೇ, ನೀವೆಲ್ಲಾ ಇದನ್ನು ಮಾಡೇ ಇಲ್ಲವೇ? ಬಾವಿಯಿಂದ ಹೊರಬಂದು ನೀವು ಮಾತನಾಡಿಲ್ಲವೇ? ನಿಮಗೊಂದು ನಿಯಮ, ನಮಗೊಂದು ನಿಯಮವೇ?

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ತಮ್ಮನ್ನು ಪ್ರಶ್ನೆ ಕೇಳಿದಾಗ ಉತ್ತರ ಕೊಡುವ ಅರ್ಹತೆ, ಯೋಗ್ಯತೆ ಬೇರೆಯವರಿಗಿಲ್ಲ.

**ಸಭಾಪತಿಯವರು:-** ನಾನು ಮಾನ್ಯ ಆಯನೂರು ಮಂಜುನಾಥ್ ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ನಿಮ್ಮನ್ನು ಪ್ರಶ್ನೆ ಕೇಳಿದಾಗ ಅಥವಾ ನಿಮ್ಮಿಂದ ಮಾರ್ಗದರ್ಶನವನ್ನು ಕೇಳಿದಾಗ ಉತ್ತರ ಕೊಡುವಷ್ಟು ದೊಡ್ಡಸ್ತಿಕೆ ಯಾರಿಗೂ ಬೇಡ. ಆ ಅರ್ಹತೆ ಯಾರಿಗೂ ಬಂದಿಲ್ಲ. ನನ್ನ ಪ್ರಶ್ನೆ ಇರುವುದು ಸದನದಲ್ಲಿ ಪ್ರತಿಭಟನೆ ಮಾಡಬೇಕಾದರೆ ಬಾವಿಗಿಳಿಯುವ ಅಧಿಕಾರವಿದೆ. ಆದರೆ ಬೇಕಾದಾಗ ಬಾವಿಗಿಳಿಯುವುದು. ಮತ್ತೆ ಮಾತನಾಡುವ ಚಪಲ ಬಂತೆಂದರೆ ತಮ್ಮ ಸ್ಥಾನಕ್ಕೆ ಬಂದು ಮಾತನಾಡುವುದು. ಮಾತನಾಡುವುದು ಮತ್ತು ವಾಪಸ್ ಹೋಗುವುದು ಮಾಡಲು ಯಾವ ನಿಯಮಗಳಡಿಯಲ್ಲಿ ಅವಕಾಶವಿದೆ? ಇಲ್ಲಿ ಯಾರಾದರೂ ತಿಳುವಳಿಕಸ್ಥರು ನನಗೆ enlighten ಮಾಡಿದರೆ ನಾನು ಕುಳಿತುಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಆಯನೂರು ಮಂಜುನಾಥ್ ಅವರೇ, ನೀವು ಎಲ್ಲಾ ಇದನ್ನು ಮಾಡಿದ್ದೀರಿ.

**ಶ್ರೀ ಆಯನೂರು ಮಂಜುನಾಥ್:-** ನಾನು ಬೇಕಾದ್ದು ಮಾಡಿದ್ದೇನೆ. ಅದನ್ನು ಮಾಡುವುದಕ್ಕೋಸ್ಕರವೇ ನೀವು ಬಂದಿದ್ದೀರೇ?

**ಶ್ರೀ ಎಂ.ನಾರಾಯಣಸ್ವಾಮಿ:-** ನೀವೆಷ್ಟು ಬಾರಿ ಈ ರೀತಿ ಮಾತನಾಡಿದ್ದೀರಿ ಎಂದು ನಮಗೆ ತಿಳಿದಿದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಆಯನೂರು ಮಂಜುನಾಥ್:-** ಅದನ್ನು ಲೆಕ್ಕ ಮಾಡಿ ಪಟ್ಟಿ ಸಿದ್ದ ಮಾಡಿ ತಾರೀಖುವಾರು ಕೊಡಿ. ನಿಮ್ಮ ರೀತಿ ನಾನು ನಿಯಮಾವಳಿಗಳನ್ನು ಮೀರಿ ಇದುವರೆವಿಗೂ ವರ್ತನೆ ಮಾಡಿರುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ವಿರೋಧ ಪಕ್ಷದಲ್ಲಿದ್ದಾಗ ನೀವು ಈ ರೀತಿ ಎಷ್ಟು ಬಾರಿ ಬಂದಿದ್ದೀರಿ ಎಂಬುದನ್ನು ದಾಖಲೆಗಳಲ್ಲಿ ತೆಗೆದು ನೋಡಿ, ತಿಳಿಯುತ್ತದೆ.

**ಶ್ರೀ ಆಯನೂರು ಮಂಜುನಾಥ್:-** ನಾನು ಸಭಾಪತಿಯವರ ಪೀಠದಿಂದ ಉತ್ತರವನ್ನು ನಿರೀಕ್ಷಿಸುವಾಗ ಪಕ್ಕದವರು ಯಾರದ್ದೋ ಉತ್ತರದ ಅವಶ್ಯಕತೆ ನನಗಿಲ್ಲ. ಪೀಠಕ್ಕೆ ಬಂದು ಕುಳಿತ ದಿನ ಅವರು ಉತ್ತರವನ್ನು ಕೊಡಲಿ. ಮಾನ್ಯ ಸಭಾಪತಿಯವರು ನಿಯಮವನ್ನು ಹೇಳಿದರೆ ಅದನ್ನು ಪಾಲನೆ ಮಾಡಲು ನಾನು ತಯಾರಿದ್ದೇನೆ.

**ಸಭಾಪತಿಯವರು:-** ಹೇಳುತ್ತೇನೆ. ಮಾನ್ಯ ಹರಿಪ್ರಸಾದರೇ, ನೀವು ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಚೌಕಟ್ಟಿನಲ್ಲಿ ಈ ಸದನ ರಚನೆಯಾಗಿದೆ. ನಂತರ ಸಂವಿಧಾನದಲ್ಲಿ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳಿವೆ. ಈ ಸದನದಲ್ಲಿ ನಾನು ಯಾವುದೇ ಕೇಸ್ ಅನ್ನು ಉಲ್ಲೇಖ ಮಾಡುತ್ತಿಲ್ಲ. ಶಾಸಕಾಂಗ ಆದ ಮೇಲೆ ನ್ಯಾಯಾಂಗ, ನ್ಯಾಯಾಂಗ ಆದ ಮೇಲೆ ಕಾರ್ಯಾಂಗ ಇದೆ. ಕಾರ್ಯಾಂಗದಲ್ಲಿ ಯಾರ ಮೇಲೆ ಆದರೂ ಒಂದು ಕೇಸ್ ದಾಖಲಾದ ನಂತರ,

(ಮುಂದು)

**(1161) 20-12-2021 (12.00) ಕೆಜಿ–ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಹರಿಪ್ರಸಾದ್‌ರವರೇ, ನಾನು ಹೇಳುವುದನ್ನು ಮೊದಲು ತಿಳಿದುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ತಮ್ಮ ruling ಬೇಕು. ಮಂತ್ರಿ ಮಂಡಲದಲ್ಲಿರುವವರೆಲ್ಲರೂ ಸಂವಿಧಾನದ ಮೇಲೆ ನಂಬಿಕೆಯಿಟ್ಟು ಪ್ರಮಾಣ ವಚನವನ್ನು ಸ್ವೀಕಾರ ಮಾಡುತ್ತಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಾ?

**(ಗೊಂದಲ)**

**ಸಭಾಪತಿಯವರು:-** ನಾನು ಯಾರಿಗೆ ಹೇಳಬೇಕು? ನೀವು ಕೇಳಬೇಕಲ್ಲವೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ತಾವು ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ.

**(ಗೊಂದಲ)**

**ಸಭಾಪತಿಯವರು:-** ನಾನು ಹೇಳಿದರೂ ಸಹ, ತಾವು ಯಾರೂ ಕೇಳುವುದಿಲ್ಲವೆಂದರೆ, ನಾನು ಏನು ಮಾಡಬೇಕು ಹೇಳಿ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಗಮನಕ್ಕೆ ತರುತ್ತೇನೆ ಅಷ್ಟೇ. ಬೇರೆಯವರು ಕೇಳುತ್ತಾರೆಯೋ ಅಥವಾ ಬಿಡುತ್ತಾರೆಯೋ ಅದು ಬೇರೆ ಪ್ರಶ್ನೆ. ನಾನು ಇಲ್ಲಿಗೆ ಬಂದಿರುವುದು ಮಾತನಾಡುವುದಕ್ಕೆ. ನಾನು ಮಾತನಾಡಿ ಅದನ್ನು ತಮ್ಮ ಮುಂದೆ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಯಾರ ಮೇಲೆಯಾದರೂ ಕೇಸ್ ಫೈಲ್ ಆದಾಗ, ಅವರು ಜವಾಬ್ದಾರಿಯುತ ಸ್ಥಾನದಲ್ಲಿದ್ದರೆ,

**(ಗೊಂದಲ)**

**ಸಭಾಪತಿಯವರು:-** ಹರಿಪ್ರಸಾದ್‌ರವರೇ, ನಾನು ತಮಗೆ ಚರ್ಚೆ ಮಾಡುವುದಕ್ಕೆ ಅನುಮತಿ ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೇಸ್ ಫೈಲ್ ಆದ ವ್ಯಕ್ತಿಯು ಜವಾಬ್ದಾರಿಯುತ ಸ್ಥಾನದಲ್ಲಿದ್ದರೆ, ಆ ಕೇಸ್‌ನ್ನು 'B' report ಮಾಡಿಕೊಂಡು ಬರುತ್ತಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಹರಿಪ್ರಸಾದ್‌ರವರೇ, ಒಂದು ನಿಮಿಷ ನನ್ನ ಮಾತು ಕೇಳಿ

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. 'B' report ಆದ ಮೇಲೆ ನ್ಯಾಯಾಲಯಕ್ಕೆ ಹೋಗುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಹರಿಪ್ರಸಾದ್‌ರವರೇ, ಒಂದು ನಿಮಿಷ, ನನ್ನ ಮಾತು ಕೇಳಿ. ನೀವು ಕೇಳುವುದಿಲ್ಲವೆಂದರೆ, ಹೇಗೆ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನ್ಯಾಯಾಂಗ ಬೇರೆ. ಶಾಸಕಾಂಗ ಬೇರೆ. Judiciary can interpret both the Constitution and the Government.

**(ಗೊಂದಲ)**

**ಸಭಾಪತಿಯವರು:-** ಹರಿಪ್ರಸಾದ್‌ರವರೇ, ಒಂದು ನಿಮಿಷ ನನ್ನ ಮಾತು ಕೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ನಂತರ ತಾವು ಏನು ಬೇಕಾದರು ಹೇಳಿ. ಕಾರ್ಯಾಂಗದಲ್ಲಿ 'B' report ಆದ ಮೇಲೆ, ಕಾರ್ಯಾಂಗದವರು ಮಾಡಿರುವುದು, ಪುನಃ ಅವರ ವಿರುದ್ಧ ಕೇಸ್ ಹಾಕಬೇಕೆಂದು Judgment ನ್ಯಾಯಾಂಗದಿಂದ ಬಂದಾಗ, ತಾವು ಏನು ಮಾಡಬೇಕೆಂದು ತಾವೇ ಹೇಳಬೇಕು. ಏಕೆಂದರೆ, prosecution authority is the Government. ಸರ್ಕಾರ ಮಾಡಿರುವುದು ತಪ್ಪಾಗಿದೆ ಎಂದು ನ್ಯಾಯಾಲಯ ಹೇಳಿದ ಮೇಲೆ.,

**ಸಭಾಪತಿಯವರು:-** ನಾನು ತಮಗೆ ಚರ್ಚೆ ಮಾಡುವುದಕ್ಕೆ ಅನುಮತಿ ಕೊಟ್ಟಿಲ್ಲ. ತಾವು ಯಾವುದರ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ ಎನ್ನುವುದು ನನ್ನ ಮುಂದಿಲ್ಲ.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಚರ್ಚೆಗೆ ಅವಕಾಶ ಕೊಟ್ಟಿದ್ದೀರಾ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಚರ್ಚೆ ಮಾಡುತ್ತಿಲ್ಲ.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಚರ್ಚೆ. ತಾವು ಚರ್ಚೆಗೆ ಅವಕಾಶ ಕೊಟ್ಟಿದ್ದೀರಾ ದಯವಿಟ್ಟು ಹೇಳಿ?

**(ಗೊಂದಲ)**

**ಸಭಾಪತಿಯವರು:-** ಇಲ್ಲ, ನಾನು ಚರ್ಚೆಗೆ ಅವಕಾಶ ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ಮೇಲೆ ಮಾನ್ಯ ನಾರಾಯಣಸ್ವಾಮಿಯವರು ಮಾತನಾಡಲಿ.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಚರ್ಚೆಗೆ ಅವಕಾಶ ಕೊಟ್ಟಿಲ್ಲವೆಂದ ಮೇಲೆ ಏಕೆ ಕೇಳುತ್ತಿದ್ದೀರಿ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ನಾರಾಯಣಸ್ವಾಮಿಯವರೇ.,

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಏಕೆ ಅವರು ಹಿಂಸೆ ಕೊಡುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಬಾವಿಯಲ್ಲಿ ನಿಂತುಕೊಂಡು ಯಾರು ಮಾತನಾಡಬಾರದು.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಅವಕಾಶ ಕೊಟ್ಟಿದ್ದರೆ, ಅವರು ಮಾತನಾಡಲಿ. ನಾವು ಅದನ್ನು ಕೇಳುತ್ತೇವೆ. ಅವರಿಗೆ ಅವಕಾಶ ಕೊಟ್ಟಿಲ್ಲವೆಂದ ಮೇಲೆ ಆವರು ಏಕೆ ಮಾತನಾಡುತ್ತಾರೆ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ.

**(ಗೊಂದಲ)**

**ಸಭಾಪತಿಯವರು:-** ಎಂ.ನಾರಾಯಣಸ್ವಾಮಿಯವರೇ, ನೀವು ಬಾವಿಯಲ್ಲಿ ನಿಂತುಕೊಂಡು ಏಕೆ ಮಾತನಾಡುತ್ತೀರಿ? ಆ ರೀತಿ ಮಾತನಾಡಬಾರದು. ಇಲ್ಲಿ ಉಡುಗಾಟಿಕೆ ಮಾಡಬಾರದು. ನಿಮಗೆ ಬುದ್ದಿ ಇದೆಯೇ? ನಿಮಗೆ ತಿಳಿಯುವುದಿಲ್ಲವೇ? ಬಾವಿಯಲ್ಲಿ ನಿಂತುಕೊಂಡಿದ್ದಾಗ ಬಾಯಿಯನ್ನು ಬಂದ್ ಮಾಡಿಕೊಳ್ಳಿ. ಇಲ್ಲವೆಂದರೆ, ನಿಮ್ಮನ್ನು ಹೊರಗಡೆ ಹಾಕಿಸುತ್ತೇನೆ. ಉಡುಗಾಟಿಕೆ ಮಾಡುತ್ತೀರಾ? ಬಾವಿಯಲ್ಲಿ ನಿಂತುಕೊಂಡು ಮಾತನಾಡಬೇಡಿ ಎಂದು ನಿಮಗೆ ಎಷ್ಟು ಬಾರಿ ಹೇಳಬೇಕು? ಎಷ್ಟು ಬಾರಿ ಮಾತನಾಡುತ್ತೀರಿ? ಇದು ಧರ್ಮಶಾಲೆಯೇ? ಸ್ವಲ್ಪವಾದರೂ ತಿಳುವಳಿಕೆ ಬೇಕು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಅನುಮತಿಯನ್ನು ತೆಗೆದುಕೊಂಡು ಮಾತನಾಡುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ಹರಿಪ್ರಸಾದ್‌ರವರೇ, ನಿಮಗೆ ಮಾತನಾಡುವುದಕ್ಕೆ ಹೇಳಿದ್ದೇನೆ. ತಾವು ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿ ಇಲ್ಲದೇ ನಾನು ಮಾತನಾಡುವುದಿಲ್ಲ.

**ಸಭಾಪತಿಯವರು:-** ನಿಮಗೆ ಮಾತನಾಡುವುದಕ್ಕೆ ಹೇಳಿದ್ದೇನೆ. ತಾವು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನನಗೆ ಬೇಕಾಗಿರುವುದು ಇಷ್ಟೇ. Government is the prosecution authority. ಅದರ ವಿರುದ್ಧವಾಗಿ Judgment ಬಂದಾಗ, ತಮ್ಮ ruling ಏನು? ತಾವು ನ್ಯಾಯಾಲಯ ಮಾಡಿರುವುದು ಸರಿಯೇ ಅಥವಾ ಸರ್ಕಾರ 'B' report ಮಾಡಿರುವುದು ಸರಿಯೇ ಎನ್ನುವುದರ ಬಗ್ಗೆ ಇಷ್ಟು ಹೇಳಿಬಿಡಿ. ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ಸ

**ಸಭಾಪತಿಯವರು:-** ಹರಿಪ್ರಸಾದ್‌ರವರೇ, ತಾವು ಮಾತನಾಡಿದ್ದು ಆಯಿತೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:-** ನಾನು ಮೊನ್ನೆ ದಿವಸ ಇದರ ಬಗ್ಗೆ ruling ಕೊಟ್ಟಿದ್ದೇನೆ. ಇದರ ಬಗ್ಗೆ ಚರ್ಚೆಗೆ ಅನುಮತಿಯನ್ನು ಕೊಟ್ಟಿದ್ದೇನೆ. ಈಗ ನನ್ನ ಮುಂದೆ ನಿಯಮ 68 ರಡಿ 4 ನೋಟೀಸ್‌ಗಳಿವೆ. ಒಂದು ನೋಟೀಸ್‌ಗೆ ಸರ್ಕಾರ ಉತ್ತರ ಕೊಟ್ಟಿದ್ದಾರೆ. ಸರ್ಕಾರ ಇನ್ನೂ 3 ನೋಟೀಸ್‌ಗಳಿಗೆ ಉತ್ತರ ಕೊಡಬೇಕು. ನೀವು ಕೊಟ್ಟಿದ್ದೀರಿ. ನಾನು ಎಂ.ನಾರಾಯಣಸ್ವಾಮಿಯವರಿಗೆ ಬೇರೆ ರೂಪದಲ್ಲಿ ನೋಟೀಸ್ ಕೊಡಿ, ನಾನು ಅದನ್ನು consider ಮಾಡುತ್ತೇನೆ. ಮಾಡಿ ನಂತರ ಅದನ್ನು Agenda ದಲ್ಲಿ ತರುತ್ತೇನೆ. ಆಗ ತಮಗೆ ಮಾತನಾಡುವುದಕ್ಕೆ ಅನುಮತಿ ಕೊಡುತ್ತೇನೆ. ನೋಡುತ್ತೇನೆಂದು ಹೇಳಿದ್ದೆ.

**(ಗೊಂದಲ)**

ಒಂದು ನಿಮಿಷ. ನೀವು ನೋಟೀಸ್ ಕೊಡುವುದಿದ್ದರೆ, ಕೊಡಿ. ನಾನು consider ಮಾಡುತ್ತೇನೆ. ನಿಯಮದ ಪ್ರಕಾರ ಏನು ಮಾಡಬೇಕೆಂದು ಗೊತ್ತಿದೆ. ಆ ನಿಯಮದ ಪ್ರಕಾರ ವಿಚಾರ ಮಾಡಿ ನಿಮಗೆ ತಿಳಿಸುತ್ತೇನೆ. **(ಗೊಂದಲ)** ನಿಯಮಾನುಸಾರ ಪರಿಶೀಲನೆಯನ್ನು ಮಾಡುತ್ತೇನೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನೋಟೀಸ್ ಕೊಟ್ಟಿದ್ದೇವೆ.

**ಸಭಾಪತಿಯವರು:-** ಕೊಟ್ಟಿದ್ದೀರಿ. ಅದನ್ನೇ ಪರಿಶೀಲನೆ ಮಾಡುತ್ತೇನೆ. ಬಾವಿಯಲ್ಲಿದ್ದವರು ಯಾರು ಮಾತನಾಡಬಾರದು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ಮೊದಲನೆಯದಾಗಿ, ಬಾವಿಯಲ್ಲಿದ್ದವರು ಮಾತನಾಡಿದ್ದು ದಾಖಲೆಗೆ ಹೋಗುವುದಿಲ್ಲ. ಪ್ರತಾಪ್ ಚಂದ್ರಶೆಟ್ಟರವರೇ, ತಾವೀಗ ಮಾತನಾಡಿ.

**ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ಅವರ ಸ್ಥಾನದಿಂದ ಮಾತನಾಡಿದರು):-** ಮಾನ್ಯ ಸಭಾಪತಿಯವರೇ, ಎಲ್ಲರೂ ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡೋಣ. ಅದಕ್ಕೆ ನಮ್ಮ ಒಪ್ಪಿಗೆ ಇದೆ. ಅದಕ್ಕೆ ಏನು ತೊಂದರೆ ಇಲ್ಲ. ಆದರೆ, ಈ ಮಧ್ಯೆ ಅವರು ಇನ್ನೊಂದು ಮಾತನ್ನು ಮಾತನಾಡಿದ್ದಾರೆ. ಭ್ರಷ್ಟಚಾರದ ಬಗ್ಗೆ ಬೆಂಗಳೂರಿಗೆ ಹೋಗಿ ಮಾತಾನಾಡಿ ಎಂದು ಹೇಳಿದ್ದಾರೆ. ಇದು ಯಾವ ಅರ್ಥ? ಇದಕ್ಕೆ importance ಇಲ್ಲವೇ? ಇದಕ್ಕೆ ತಾವು ಸಹ ರಕ್ಷಣೆ ಕೊಡಬೇಕಾಗಿರುವಂತಹ ವಿಚಾರ. ಇದು ಸಹ ಆದ್ಯತೆಯ ಮೇಲೆ ಇರುವಂಥದ್ದು. ಇದನ್ನು ಬೆಂಗಳೂರಿಗೆ ಹೋಗಿ ಮಾತನಾಡಿ ಎಂದರೆ, ಸರ್ಕಾರದ ವಿಚಾರಧಾರೆಗಳು ಹಾಗೂ ಚಿಂತನೆಗಳು ಏನು? ಹಾಗಾದರೆ, ಅದನ್ನು ಮಾತನಾಡುವುದು ಬೇಡವೇ? ಇದಕ್ಕೆ ಸಮಯವನ್ನು ಕೊಡುವುದಕ್ಕೆ ಆಗುವುದಿಲ್ಲವೇ? ಸಮಯವನ್ನು ಕೊಡುವುದಕ್ಕೆ ಆಗುವುದಿಲ್ಲವೆಂಬ ವ್ಯವಸ್ಥೆಯಲ್ಲಿ ನಾವು ಇದ್ದರೆ, ನಾವು ಇದನ್ನು ಯಾರ ಹತ್ತಿರ ಕೇಳಬೇಕು? ಶಾಸನ ಬದ್ಧವಾಗಿ, ನ್ಯಾಯಾಲಯ ಕೊಟ್ಟಿರುವಂತಹ ತೀರ್ಪಿನ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಸದಸ್ಯರೇ, ಒಂದು ನಿಮಿಷ.

**ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ತಾವು ಅದಕ್ಕೂ ಸಹ ಅವಕಾಶ ಇಲ್ಲವೆಂದು ಹೇಳುವುದಾದರೆ,

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿ ಮುಗಿಸಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಸದನದ ಬಾವಿಯಲ್ಲಿ ನಿಂತು ಯಾರು ಮಾತನಾಡಬೇಡಿ.

**(ಗೊಂದಲ)**

**ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, Rule book ನಲ್ಲಿ ಏನು ಹೇಳುತ್ತದೆ? ತಮಗೆ ಅಧಿಕಾರ ಇದೆ. Rules of Procedure and Conduct of Business in the Karnataka Legislative Council ಪುಸ್ತಕದಲ್ಲಿ ಏನೇ ಹೇಳಿದರೂ ಸಹ, ಇಂತಹ ವಿಚಾರಗಳ ಬಗ್ಗೆ ಆದ್ಯತೆಯ ಮೇರೆಗೆ ತೆಗೆದುಕೊಳ್ಳುವುದಕ್ಕೆ ತಮಗೆ ಅಧಿಕಾರ ಇದೆ. ಇದು ನ್ಯಾಯಾಲಯ ಕೊಟ್ಟಿರುವಂತಹ ತೀರ್ಪಿನ ಹಿನ್ನೆಲೆಯಲ್ಲಿ, ಆ ಸಚಿವರನ್ನು ಇಟ್ಟುಕೊಳ್ಳಬೇಕೇ ಅಥವಾ ಬೇಡವೇ ಎನ್ನುವುದರ ಬಗ್ಗೆ ಇಲ್ಲಿ ಮಾತನಾಡುವುದೇ ಬೇಡ ಎಂದರೆ, ನಾವು ಇಲ್ಲಿಗೆ ಬರುವಂತಹ ಅವಶ್ಯಕತೆ ಏನಿದೆ?

**ಸಭಾಪತಿಯವರು:-** ನಾನು ಮಾತನಾಡುವುದು ಬೇಡ ಎಂದು ಹೇಳಿಲ್ಲ.

**(ಗೊಂದಲ)**

**ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಬೇಡ ಅಂದರೆ, ಅದೇ ಅರ್ಥ ಅಲ್ಲವೇ? ತಾವು ಸಮಯ ಕೊಡುವುದಿಲ್ಲ. ಯಾವಾಗ ಸಮಯ ಕೊಡುತೀರಿ ಎಂದು ಗೊತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:-** ತಾವು ಯಾವುದರ ಬಗ್ಗೆ ಕೇಳುತ್ತೀರಿ ಎಂದು ಗೊತ್ತಾಗಬೇಕಲ್ಲವೇ;

**(ಗೊಂದಲ)**

**ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ನಾನು ಹೇಳಿದ್ದು ಅರ್ಥವಾಯಿಲ್ಲವೇ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಕೇಳಿ. ತಾವೂ ಸಭಾಪತಿಯವರಾಗಿ ಕೆಲಸ ಮಾಡಿದ್ದೀರಿ. ತಾವು ಒಂದು ನಿಮಿಷ ಕೇಳಿ. ತಾವು ನೋಟೀಸ್ ಕೊಟ್ಟಿದ್ದೀರಿ. ಅದು ಶುಕ್ರವಾರದಂದು ಮಧ್ಯಾಹ್ನ 1.30 ಗಂಟೆಗೆ ಬಂದಿದೆ. ನಮ್ಮಲ್ಲಿ 'received' ಎಂದು ತೆಗೆದುಕೊಂಡಿದ್ದಾರೆ. ಅದನ್ನು ನಿಯಮಾನುಸಾರ ಪರಿಶೀಲಿಸಿ ನಮ್ಮ ನಿಯಮದ ಪ್ರಕಾರ ಏನು ಮಾಡಬೇಕೆಂದು ವಿಚಾರ ಮಾಡಿ ನಿಮಗೆ ತಿಳಿಸುತ್ತೇನೆಂದು ಹೇಳಿದ್ದೇನೆ. ಈಗಲೂ ಸಹ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೆ ನಾನು ಬದ್ಧನಿದ್ದೇನೆ. ಅದನ್ನು ನಮ್ಮ ನಿಯಮದ ಪ್ರಕಾರ ಏನು ಮಾಡಬೇಕೆಂದು ಅದರ ಸಾಧಕ-ಭಾದಕಗಳನ್ನು ವಿಚಾರ ಮಾಡಿ ಸದನಕ್ಕೆ ತಿಳಿಸುತ್ತೇನೆ. ಆಗ ಚರ್ಚೆಗೆ ಅನುಮತಿ ಕೊಟ್ಟರೆ, ತಾವು ಮಾತನಾಡಿ. ಕೊಡದಿದ್ದರೆ ಇಲ್ಲ. ಅದನ್ನು ನೀವು ಈಗಲೇ ಹೇಳಿ ಎಂದರೆ ಹೇಗೆ? ನಾನು ಅದರ ಬಗ್ಗೆ ವಿಚಾರ ಮಾಡಬೇಕಲ್ಲವೇ;

**(ಗೊಂದಲ)**

**ಸಭಾಪತಿಯವರು**:- ನಾನು ನೋಡಬೇಕಲ್ಲವೇ, ಚರ್ಚೆ ಮಾಡಬೇಕಲ್ಲವೇ; ಪರಿಶೀಲನೆ ಮಾಡಬೇಕಲ್ಲವೇ;

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**- ಮಾನ್ಯ ಸಭಾಪತಿಯವರೇ, ನಾವು ತಿಳಿದುಕೊಂಡಿರುವುದು ಇಷ್ಟೇ, ತಾವು ಹೇಳಿದಂತೆ ನಾವು ತಿಳಿದುಕೊಂಡಿದ್ದೇವೆ. ಯಾರೇ ಪ್ರಸ್ತಾವನೆಯನ್ನು ಕೊಟ್ಟರೂ ಸಹ ಅದನ್ನು ಪರಿಶೀಲನೆ ಮಾಡಿ ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವಂತಹ ಹಕ್ಕು ತಮಗಿದೆ. ತಾವು ಅದನ್ನು ಮಾಡಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಅದನ್ನು ಪೂರ್ತಿ ಚರ್ಚೆ ಮಾಡಿ, ಎಲ್ಲರ ಬಳಿ ಸಮಲೋಚನೆ ಮಾಡಿ ಅದಕ್ಕೆ ಅವಕಾಶವನ್ನು ನಾಳಿದ್ದು ಕೊಡುತ್ತೇವೆ ಎಂದಾದರೂ ಹೇಳಿ,

**ಸಭಾಪತಿಯವರು:-** ನಾನು ಹೇಳುವುದಿಲ್ಲ. ನಾನು ನೋಡಬೇಕಲ್ಲವೇ;

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**- ಮಾನ್ಯ ಸಭಾಪತಿಯವರೇ, ಮುಗಿದ ಅಧ್ಯಾಯಕ್ಕೆ ಮತ್ತೆ ಪುನಃ ಕೊಡಿ ಎಂದರೆ, ಏನು ಅರ್ಥ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಮಗೆ 24ನೇ ತಾರೀಖಿನೊಳಗೆ,

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**- ಮಾನ್ಯ ಸಭಾಪತಿಯವರೇ, ಮುಗಿದ ಅಧ್ಯಾಯಕ್ಕೆ ನಾಳೆ, ಕೊಡಿ, ನಾಳಿದ್ದು ಕೊಡಿ ಎಂದರೆ ಏನು ಅರ್ಥ?

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಗೊಂದಲ)

**ಸಭಾಪತಿಯವರು:-** ಎಲ್ಲರೂ ಸುಮ್ಮನೆ ಇರಿ. ಪ್ರತಾಪ್ ಚಂದ್ರಶೆಟ್ಟಿಯವರು ಮಾತನಾಡಲಿ.

**ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾದಂತಹ ನಮ್ಮ ಸದಸ್ಯರು ಅವರವರ ಪೀಠಗಳಿಗೆ ಬಂದು ಕುಳಿತುಕೊಳ್ಳಬೇಕಾದರೆ, ತಾವು ನಮಗೆ ಏನಾದರೂ ಮನವರಿಕೆ ಮಾಡಿಕೊಡಬೇಕಲ್ಲವೇ; ಅದು ಆಗುತ್ತದೆಯೋ ಅಥವಾ ಇಲ್ಲವೆಂದು ನಮಗೆ ಗೊತ್ತಿಲ್ಲ.

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಸಮಯ ಕೊಡುತ್ತೇವೆಂದು ಹೇಳಿದ್ದೀರಿ. ದಯವಿಟ್ಟು ಕೊಡಿ.

**ಸಭಾಪತಿಯವರು:-** ನಾರಾಯಣಸ್ವಾಮಿಯವರೇ, ಅವರು ಮಾತನಾಡುತ್ತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ, ಒಬ್ಬರು ಮಾತನಾಡುವಂತಹ ಸಂದರ್ಭದಲ್ಲಿ ಇನ್ನೊಬ್ಬರು ಮಾತನಾಡಬಾರದು. ಕೊಡುತ್ತೇನೆ. ಕುಳಿತುಕೊಳ್ಳಿ.

**ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾವು ಹೇಳುವುದು ಇಷ್ಟೇ. ಬಾವಿಯಲ್ಲಿರುವಂತಹ ನಮ್ಮ ಸದಸ್ಯರನ್ನು ಬಾವಿಯಿಂದ ತಮ್ಮ ತಮ್ಮ ಪೀಠಗಳಿಗೆ ತೆರಳಿ ಸಭೆಯಲ್ಲಿ ಭಾಗವಹಿಸಿ ಎಂದು ಹೇಳಬೇಕಾದರೆ, ನಮಗೆ ಎಲ್ಲಿಯಾದರೂ ಸಹ ಅವಕಾಶ ಮಾಡಿಕೊಡುತ್ತೇನೆಂದು ಹೇಳಬೇಕಲ್ಲವೇ; ತಮಗೆ ಬಂದಿರುವಂತಹ ನೋಟಿಸ್‌ನ್ನು ಓದಿಲ್ಲವೆಂದು ಹೇಳುವಂತಿಲ್ಲ.

**ಸಭಾಪತಿಯವರು:-** ನಾನು ಓದಿಲ್ಲವೆಂದು ಹೇಳಿಲ್ಲ. ಅದನ್ನು ಓದಿದ್ದೇನೆ.

**ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಓದಿದ್ದರೂ ಸಹ, ತಮಗೆ ಕಾರ್ಯವಿಧಾನ ನಿಯಮಾವಳಿಗಳ ಪ್ರಕಾರ ಅವಕಾಶ ಮಾಡಿಕೊಡುವಂತಹ ಅಧಿಕಾರ ಇದೆ. ಆ ಅಧಿಕಾರದ ವ್ಯಾಪ್ತಿಯಲ್ಲಿ ಯಾವುದಾದರೊಂದು ದಿವಸ ಅವಕಾಶ ಮಾಡಿಕೊಡುತ್ತೇವೆಂದು ಹೇಳಿ. ಯಾವತ್ತು ಅವಕಾಶ ಮಾಡಿಕೊಡುತ್ತೇವೆಂದು ಹೇಳುವುದಕ್ಕೂ ಆಗಲಿಲ್ಲ ಎಂದರೆ, ಹೇಗೆ?

(ಗೊಂದಲ)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ತಮ್ಮ ಅಧಿಕಾರವನ್ನು ನಾವು ಯಾರು ಸಹ ಪ್ರಶ್ನೆ ಮಾಡುತ್ತಿಲ್ಲ. ಆದರೆ, ನನ್ನ ವಿನಂತಿ ಏನೆಂದರೆ, ಈಗಾಗಲೇ ಮುಗಿದಿರುವಂತಹ ಪ್ರಕರಣಗಳನ್ನು ಮತ್ತೆ ಕೈ ಹಾಕಿದರೆ ಅದಕ್ಕೆ ಸರ್ಕಾರದ ಸ್ಪಷ್ಟವಾದ ವಿರೋಧವಿದೆ.

**ಸಭಾಪತಿಯವರು:-** ಒಂದು ನಿಮಿಷ. ತಾವೆಲ್ಲರೂ ಕೇಳಿ. ನಾರಾಯಣಸ್ವಾಮಿಯವರೇ, short ಆಗಿ ಮಾತನಾಡಿ.

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ದೊಡ್ಡ ಪ್ರಮಾಣದಲಿ ಚರ್ಚೆಯಾಗಿದೆ. ಚರ್ಚೆಮಾಡಿ ಅದಕ್ಕೆ ಅಂತ್ಯ ಹಾಡಿದ್ದಾರೆ. ತಾವು ಬೇರೆ ನಿಯಮಾವಳಿಗಳ ಕೆಳಗೆ ಕೊಡಿ ಎಂದು ಹೇಳಿದ್ದೀರಿ. ಅದರಂತೆ ಅವರು ಕೊಟ್ಟಿದ್ದಾರೆ. ಅದನ್ನು ತಮ್ಮ ವಿವೇಚನೆಗೆ ಬಿಡಲಿ. ತಾವು ಅದಕ್ಕೆ ಸಮಯ ನಿಗಧಿ ಮಾಡಿ ಅವಕಾಶ ಕೊಡುತ್ತೀರಿ. ಅವರು ಅದನ್ನು ಬಿಟ್ಟು ನಾಳೆ ಕೊಡಿ, ನಾಳಿದ್ದು ಕೊಡಿ. ಇಂತಹ ದಿವಸವೇ ಕೊಡಿ ಎಂದು ಹೇಳಿದರೆ ಹೇಗೆ? ಅವರು ಪೀಠಕ್ಕೆ ಒತ್ತಡ ಮಾಡುತ್ತಿದ್ದಾರೆ. ಸಭಾಪತಿಯವರಿಗೆ ಒತ್ತಡ ಮಾಡುವುದಕ್ಕೆ ಆಗುವುದಿಲ್ಲ. ಸಭಾಪತಿಯವರಿಗೆ ಘನತೆ ಗೌರವ ಇದೆ. ಅವರು ನಿಗದಿ ಮಾಡುತ್ತಾರೆ. Don't dictate terms to the Chair.

**(ಗೊಂದಲ)**

**ಸಭಾಪತಿಯವರು:-** ನಾರಾಯಣಸ್ವಾಮಿಯವರೇ, ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಪ್ರತಾಪ್ ಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಭ್ರಷ್ಟರ ಪರವಾಗಿ ನಿಲ್ಲಬಾರದು.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಮತ್ತು ನಾವು ಎಲ್ಲರೂ ಹಾಗೆಯೇ ಇರಬೇಕು. ಅವರು ಅಷ್ಟೇ, ನಾವು ಅಷ್ಟೇ. ಅವರು ಅದಕ್ಕೆ ಏನು ಮುಕ್ತರಾಗಿಲ್ಲ. ನಾವೆಲ್ಲರೂ ಒಂದೇ ಕಡೆ ಇದ್ದೇವೆ. ಪೀಠಕ್ಕೆ ಯಾರು dictate ಮಾಡುವುದಕ್ಕೆ ಹೋಗಬಾರದು ಎಂಬುದು ನನ್ನ ಮನವಿ ಅಷ್ಟೇ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ದಯವಿಟ್ಟು ಯಾರು ಮಾತನಾಡಬೇಡಿ. ರವಿಕುಮಾರ್‌ರವರೇ, ತಾವೀಗ ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ನಮಗೆ ಪಾಠ ಹೇಳುವುದು ಬೇಡ. ತಾವು ಒಂದು ದಿನಾಂಕವನ್ನು ನಿಗಧಿ ಮಾಡಿ. ನಿಗಧಿ ಮಾಡಿದರೆ ಬಾವಿಯಿಂದ ಹೊರಗಡೆ ಬರುತ್ತೇವೆ.

**ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಬಾವಿಯಲ್ಲಿರುವಂತಹ ವಿಷಯದ ಬಗ್ಗೆ ನನ್ನ ಅಭಿಪ್ರಾಯ ಏನೆಂದರೆ, ಈ ವಿಷಯದ ಚರ್ಚೆ ಮಾಡಬಾರದೆಂದು ಆಡಳಿತ ಪಕ್ಷ ಇಲ್ಲ. ಆದರೆ, ಚರ್ಚೆ ಮಾಡಲಿ. ಚರ್ಚೆಗೆ ಅವಕಾಶ ಕೊಟ್ಟಾಗ ಚರ್ಚೆ ಮಾಡಬೇಕು ಎನ್ನುವುದು ನನ್ನ ಸ್ಪಷ್ಟವಾದ ಅಭಿಮತ.

(ಮುಂದು)

**(1162) 20-12-2021 (12.10) ಎಂವಿ-ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್ (ಮುಂದು):-**

ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇದು 2003ರಲ್ಲಿ ಆಗಿ ಹೋಗಿರುವಂತಹ ಮತ್ತು ಕೋರ್ಟ್‌ನಲ್ಲಿ ಇರತಕ್ಕಂತಹ ವಿಷಯ. ಅದರ ನಂತರ 2013ರಲ್ಲಿ ಆಗಿರುವಂತಹ ಒಂದು ವಿಷಯವಿದೆ. ಹಿಂದೆ ಮಾನ್ಯ ದಿನೇಶ್ ಗುಂಡೂರಾವ್‌ರವರು ಸಚಿವರಾಗಿದ್ದರು. ಮಾನ್ಯ ವಿರೋಧ ಪಕ್ಷದ ನಾಯಕರು ಆಗ ಸದನದ ಸಭಾನಾಯಕರಾಗಿದ್ದರು.

**(ಗೊಂದಲ)**

ದಯವಿಟ್ಟು ನನಗೆ ಮಾತನಾಡಲು ಸ್ವಲ್ಪ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) (ಸದನದ ಬಾವಿಯಿಂದ):-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ,...

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗ ಅದರ ಬಗ್ಗೆಯೇ ಚರ್ಚೆಯಾಗುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವರು ಕಾನೂನು ಮಂತ್ರಿಗಳ ಹತ್ತಿರ ಪ್ರಸ್ತಾಪ .....

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಅದು ಅಯಿತು, ಸಾಕು ಬಿಡಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಸಭಾಪತಿಯವರು:-** ಸಾಕು ಬಿಡಿ. ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ನಾನು ಸದನವನ್ನು ನಡೆಸುವುದೇ ಬೇಡವೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಎರಡೇ ಸಾಲುಗಳಿವೆ, ಅದನ್ನು ಪೂರ್ಣಗೊಳಿಸುವುದಕ್ಕೆ ಅವಕಾಶ ಕೊಡಿ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಹಿಂದೆ ಸದನದ ಸಭಾನಾಯಕರಾಗಿದ್ದರು. ಮಾನ್ಯ ಕೆ.ಎಸ್.ಈಶ್ವರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದರು. **[XXX]**

**ಸಭಾಪತಿಯವರು:-** ಒಂದು ನಿಮಿಷ. ತಾವು ಈ ರೀತಿ ಮಾತನಾಡಿದರೆ ಹೇಗೆ? ಮಾನ್ಯ ಎನ್.ರವಿಕುಮಾರ್‌ರವರೇ ತಾವು ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆ ವಿಷಯ ಕೋರ್ಟ್‌ನಲ್ಲಿದೆ ಹಾಗಾಗಿ, ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಈ ಹಿಂದೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಎಸ್.ಆರ್.ಪಾಟೀಲ್‌ರವರು ಹೇಳಿದ್ದರು.

---

**{XXX} ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:- ನಾನು ಹೇಳುವವರೆಗೆ ಯಾವುದೂ ಸಹ ಕಡತಕ್ಕೆ ಹೋಗಬಾರದು.**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರುಗಳು ಮಾತನಾಡಿದ್ದು ದಾಖಲಿಸಿರುವುದಿಲ್ಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು **[XXX]** ಹೆಸರನ್ನು ಪ್ರಸ್ತಾಪ ಮಾಡಿದರು. ಆದರೆ, **[XXX]** ಈ ಸದನದ ಸದಸ್ಯರಲ್ಲ.

**ಸಭಾಪತಿಯವರು:-** ನಾನು ಅದನ್ನೇ ಹೇಳುವುದಕ್ಕೆ ಹೊರಟ್ಟಿದ್ದೇನೆ. ಆದರೆ, ನಾನು ಅದನ್ನು ಹೇಳುವುದಕ್ಕೆ ತಾವು ಬಿಡುತ್ತಿಲ್ಲ.

**ಶ್ರೀ ಯು.ಬಿ.ವೆಂಕಟೇಶ್ (ಸದನದ ಬಾವಿಯಿಂದ):-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ನೀವು ಸದನದ ಬಾವಿಯಲ್ಲಿ ನಿಂತುಕೊಂಡು ಏನನ್ನು ಮಾತನಾಡುತ್ತೀರಿ? ಈ ರೀತಿ ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಪದ್ಧತಿ ಇದೆಯೇ? ನೀವು ನಾನು ಹೇಳಿದ ಹಾಗೆ ಕೇಳಬೇಕು. ಆದರೆ, ನೀವು ನಾನು ಹೇಳಿದ ಹಾಗೆ ಕೇಳುತ್ತಿಲ್ಲ.

**(ಗೊಂದಲ)**

**ಈ ಸದನದಲ್ಲಿ ಇಲ್ಲದವರ ಹೆಸರನ್ನು ಪ್ರಸ್ತಾಪ ಮಾಡಬಾರದು ಎಂದು ನಾನು ಹೇಳಿದ್ದೇನೆ. ಇಲ್ಲಿ ಅವರ ಹೆಸರನ್ನು ಪ್ರಸ್ತಾಪ ಮಾಡಬಾರದು. ಏಕೆಂದರೆ, ಅವರು ಇಲ್ಲಿಗೆ ಬಂದು ತಮ್ಮನ್ನು ತಾವು defend ಮಾಡಿಕೊಳ್ಳುವುದಕ್ಕೆ ಅಧಿಕಾರವಿಲ್ಲ. ಅದಕ್ಕೆ ಹೇಳುವಂಥದ್ದು ಏನೆಂದರೆ, ಈ ಸದನದಲ್ಲಿ ಇಲ್ಲದಂತಹ ಸದಸ್ಯರ ಬಗ್ಗೆ ಮಾತನಾಡುವಂಥದ್ದು ಸರಿಯಲ್ಲ. ಅದಕ್ಕೆ ಮಾತನಾಡಬೇಡಿ.**

**ಶ್ರೀ ಯು.ಬಿ.ವೆಂಕಟೇಶ್ (ಸದನದ ಬಾವಿಯಿಂದ):-** ಮಾನ್ಯ ಸಭಾಪತಿಯವರೇ, ಅವಕಾಶವಿಲ್ಲವೆಂದು ಹೇಗೆಂದರೆ ಹಾಗೆ ಮಾತನಾಡಬಹುದೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿ ಮುಗಿಸುತ್ತೇನೆ. ಅತ್ಯಂತ ಶ್ರೇಷ್ಠ ಸಂಸದೀಯ ಪಟುಗಳು ಹಾಗೂ ಆತ್ಮೀಯರಾದಂತಹ ಮಾನ್ಯ ಆಯನೂರು ಮಂಜುನಾಥ್‌ರವರು ಏನು ಹೇಳಿದರು ಎಂದರೆ.

---

**{XXX} ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ಈ ರೀತಿ ಮಾಡಿದರೆ ನಾನು ಹೇಗೆ ಸದನವನ್ನು ನಡೆಸುವುದು?

**ಶ್ರೀ ಎಸ್.ಆರ್.ಪಾಟೀಲ್ :-** ಮಾನ್ಯ ಸಭಾಪತಿಯವರೇ, ತಾವು ನಾನು ಹೇಳುವುದನ್ನು ಕೇಳಿ. ನಾನು ಹೇಳುವುದನ್ನು ತಾವು ಕೇಳುವುದೇ ಇಲ್ಲವೆಂದರೆ ನಾನು ಏನು ಮಾಡುವುದು. ಈಗ ಮಾನ್ಯ ಆಯನೂರು ಮಂಜುನಾಥ್‌ರವರು ಏನು ಹೇಳಿದರೆಂದರೆ, ಸದನದ ಬಾವಿಯಲ್ಲಿ ಇರುವಂತಹ ಸದಸ್ಯರು ಬಾಯಿ ಚಪಲಕ್ಕೆ ಹೋಗಿ ಮಾತನಾಡುತ್ತಾರೆ ಎನ್ನುತ್ತಾರೆ. ಈ ವಿಷಯವನ್ನು ಇತ್ಯರ್ಥ ಮಾಡೋಣವೆಂದು ಬಾವಿಯಲ್ಲಿ ಇದ್ದಂತಹ ಸದಸ್ಯರಿಗೆ ತಾವು ಕೇಳುತ್ತೀರಿ ಮತ್ತು ನೀವು ಅವಕಾಶ ನೀಡಿದಾಗ ನಾವು ಇಲ್ಲಿಗೆ ಬಂದು ಮಾತನಾಡುತ್ತೇವೆ. ನೀವು ಅವಕಾಶ ನೀಡದೇ ನಮ್ಮ ಇಷ್ಟಕ್ಕೆ ನಾವೇ ಬಂದು ಮಾತನಾಡುವುದಿಲ್ಲ. ನೀವು ಹೇಳುತ್ತೀರಿ ಸದನದ ಬಾವಿಯಲ್ಲಿ ಸದಸ್ಯರು ಮಾತನಾಡಬಾರದು ಎಂದು. ನಾವು ಅದನ್ನು ಅಕ್ಷರಶಃ ಪಾಲನೆ ಮಾಡುತ್ತೇವೆ. ಮಾನ್ಯ ಆಯನೂರು ಮಂಜುನಾಥ್‌ರವರು ಒಳ್ಳೆಯ ಸಂಸದೀಯಪಟುಗಳು ಅವರಿಗೆ ಸಾಕಷ್ಟು ಅನುಭವವಿದೆ.

**ಸಭಾಪತಿಯವರು:-** ಅದಕ್ಕೆ ನಾನು ಏನಾದರೂ ಹೇಳಿದ್ದೇನೆಯೇ? ನಾನು ಏನನ್ನು ಹೇಳಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನಮಗೆ ತಾವು ಅನುಮತಿ ಕೊಟ್ಟರೆ ನಾವು ಮಾತನಾಡುತ್ತೇವೆ. ನಾವು ಇಲ್ಲಿಗೆ ಬಾಯಿ ಚಪಲಕ್ಕೆ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಅವರಿಗೆ ಹೇಳಿದ್ದೇನೆ. ನಾನು ಏನಾದರೂ objection ಮಾಡಿದ್ದೇನೆಯೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಹೀಗೆ, ಇಲ್ಲೇ ಚರ್ಚೆ ಮಾಡುವುದು ಅಷ್ಟು ವಿಹಿತವಲ್ಲ.

**ಸಭಾಪತಿಯವರು:-** ಬೇಡ. ನಾನು ಅದನ್ನೇ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ದಯಮಾಡಿ ಹತ್ತು ನಿಮಿಷ house ಅನ್ನು adjourn ಮಾಡಿ. ಇದನ್ನು ನಿಮ್ಮ Chamber ನಲ್ಲಿ ಚರ್ಚೆ ಮಾಡಿ. ಈ ವಿಷಯವನ್ನು ಅಲ್ಲಿ ಇತ್ಯರ್ಥ ಮಾಡೋಣ. ಏಕೆಂದರೆ, ಸದನದ ಕಲಾಪಗಳು ಸುಲಲಿತವಾಗಿ ನಡೆಯಬೇಕೆಂಬುದು ನನ್ನ ಅಪೇಕ್ಷೆ. ಅದಕ್ಕೆ ದಯಮಾಡಿ, ten minutes ಅವಕಾಶ ಮಾಡಿಕೊಡಿ. ಅಲ್ಲಿಗೆ ಮಾನ್ಯ ಆಡಳಿತ ಪಕ್ಷದವರನ್ನು ಮತ್ತು ನಮ್ಮನ್ನು ಕರೆಯಿಸಿ ಇದನ್ನು ಚರ್ಚೆ ಮಾಡಿ. ಇದನ್ನು ಅಲ್ಲಿ ಇತ್ಯರ್ಥ ಮಾಡೋಣ. ಹೀಗೆಯೇ ಇದನ್ನು ಇಲ್ಲೇ ಚರ್ಚೆ ಮಾಡಿಕೊಳ್ಳುತ್ತಾ ಹೋದರೆ, ಸಂಜೆಯವರೆಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೀಗೆಯೇ ಹೋಗುತ್ತದೆ. ಏಕೆಂದರೆ, ನಾವು ಮೊದಲು ಮಾತನಾಡಿದ ಮಾತುಗಳಿಗೆ ಬೆಲೆ ಸಿಗುವುದಿಲ್ಲ. Kindly adjourn the House for ten minutes. You can have a consultation with all the leaders.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಎಂ.ನಾರಾಯಣಸ್ವಾಮಿಯವರು ನೋಟಿಸ್ ಕೊಟ್ಟಿದ್ದಾರೆ. ಅದರ ಪ್ರಕಾರ ಚರ್ಚೆ ಮಾಡುತ್ತೇವೆಂದು, ತಾವು ಪೀಠದಿಂದ ತೀರ್ಮಾನವನ್ನು ಕೊಟ್ಟಿದ್ದೀರಿ. ನಾನು ಅದನ್ನು ಸ್ವಾಗತ ಮಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಇಲ್ಲ. ಒಂದು ನಿಮಿಷ. ನಾನು ನಿಯಮಾನುಸಾರ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಯಿತು ಬಹಳ ಸಂತೋಷ. ನೀವು ಅದನ್ನು ಪರಿಶೀಲನೆ ಮಾಡುವವರೆಗೂ ದಯವಿಟ್ಟು ಆ ಮಂತ್ರಿಗಳ ರಾಜೀನಾಮೆಯನ್ನು ತೆಗೆದುಕೊಳ್ಳಿ. ಆಗ ನಾವು ಏನು ಚರ್ಚೆ ಮಾಡುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಅದು ನನ್ನ ಬಳಿ ಇದೆಯೇ?

ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ. ಸಭಾನಾಯಕರು ಮತ್ತು ಸದಸ್ಯರು ನನ್ನ ಕೊಠಡಿಗೆ ಬನ್ನಿ.

**(ಸದನವು ಮಧ್ಯಾಹ್ನ 12 ಗಂಟೆ 15 ನಿಮಿಷಗಳಿಂದ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(1163) 20-12-2021 KH/RN 1-00

**(ಮಧ್ಯಾಹ್ನ 12 ಗಂಟೆ 15 ನಿಮಿಷಕ್ಕೆ 10 ನಿಮಿಷಗಳ ಅವಧಿಗೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 01 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಸದನ ಪ್ರಾರಂಭವಾಗುತ್ತಿದ್ದಂತೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡುತ್ತೇನೆ. 2018 ರ ನಂತರ ಅಪರೂಪಕ್ಕೆ 10 ದಿನಗಳ ಅಧಿವೇಶನವನ್ನು ಬೆಳಗಾವಿಯಲ್ಲಿ ಆಯೋಜನೆ ಮಾಡಿರುವ ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದ ಜನರಲ್ಲಿ ಬಹಳ ಕನಸುಗಳು ಇವೆ. ಜನರು ನಮ್ಮ ಸಮಸ್ಯೆಗಳ ಬಗ್ಗೆ ಏನಾದರೂ ಚರ್ಚೆಯಾಗುತ್ತದೆ, ಪರಿಹಾರ ಸಿಗುತ್ತದೆ ಎನ್ನುವಂತಹ ತವಕದಲ್ಲಿದ್ದಾರೆ. ದಯಮಾಡಿ ಆಳುವ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಅಧಿವೇಶನ ನಡೆಯುವುದಕ್ಕೆ, ಕಾರ್ಯಕಲಾಪಗಳು ನಡೆಯುವುದಕ್ಕೆ ಹಾಗೂ ವಿಶೇಷವಾಗಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ತಮ್ಮ ಮೂಲಕ ನಾನು ಎರಡು ಪಕ್ಷದ ನಾಯಕರಲ್ಲಿ ಮನವಿ ಮಾಡುತ್ತೇನೆ. ಈಗಾಗಲೇ ಕಳೆದ 3 ದಿನಗಳಿಂದ ಬೆಳಗಾವಿಯಲ್ಲಿ ಉದ್ವಿಗ್ನ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ನಮ್ಮ ನೆರೆ ರಾಜ್ಯದ ಗಡಿಯಿಂದ ಒಳಗೆ ಬರಬೇಕಾದರೆ ನಮ್ಮ ಪೊಲೀಸ್‌ನವರ ವಾಹನಕ್ಕೆ ಮಹಾರಾಷ್ಟ್ರದ ವಾಹನದವರು ರಕ್ಷಣೆ ಕೊಡಬೇಕಾದಂತಹ ಸ್ಥಿತಿ ನಿರ್ಮಾಣವಾಗಿದೆ.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಈಗ ಚರ್ಚೆ ಬೇಡ. ನಾವು ಏನು ಮಾಡಬೇಕೆಂದು ಮಾತ್ರ ಹೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಅಧಿವೇಶನ ನಡೆಸಬೇಕು ಮತ್ತು ಇಂದಿನ ಕಾರ್ಯಕಲಾಪಗಳನ್ನು ನಡೆಸಬೇಕು.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಆಯಿತು. ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಹೇಳಿದ ಹಾಗೆ ಅಧಿವೇಶನ ನಡೆಸುವುದಕ್ಕೆ ಮತ್ತು ಕಾರ್ಯಕಲಾಪದಲ್ಲಿ ಭಾಗವಹಿಸುವುದಕ್ಕೆ, ಉತ್ತರ ಕರ್ನಾಟಕದ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧ ಇದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮ ನಿರ್ದೇಶನ ಹೊಂದಿದವರು) (ಬಾವಿಯಿಂದ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಬಾವಿಯಿಂದ ಮಾತನಾಡಬೇಡಿ. ಹಾಗೆಯೇ ಬಾವಿಯಲ್ಲಿದ್ದವರು ಯಾರು ಮಾತನಾಡಬಾರದು?

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ನಾನು ಎಲ್ಲರಲ್ಲಿಯೂ ಮನವಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ಬಹಳ ಮಹತ್ವವಾಗಿರುವುದರಿಂದ ಸದನವನ್ನು ನಡೆಸುವುದಕ್ಕೆ ದಯಮಾಡಿ, ಎಲ್ಲರೂ ಸಹಕಾರ ಮಾಡಿ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ. ಈಗ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ಪ್ರಾರಂಭ ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು) (ಬಾವಿಯಿಂದ):-** ಮಾನ್ಯ ಸಭಾಪತಿಯವರೇ, ಸದನ ಆರ್ಡರ್‌ನಲ್ಲಿ ಇಲ್ಲ.

**ಸಭಾಪತಿಯವರು:-** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಸದನ ಆರ್ಡರ್‌ನಲ್ಲಿ ಇದೆ. ತಾವು ಬಾಯಿ ಮಾಡಬೇಡಿ. ಸುಮ್ಮನೆ ಕುಳಿತುಕೊಳ್ಳಿ. ಎಲ್ಲಾ ಆರ್ಡರ್‌ನಲ್ಲಿ ಇದೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರುಗಳು 'ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ' ಎಂದು ಘೋಷಣೆಯನ್ನು ಕೂಗುತ್ತಾ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ ನಾನು ಮತ್ತೆ ಹೇಳುತ್ತೇನೆ.

**ಡಾ|| ತೇಜಸ್ವಿನಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಮ್ಮ ಹಕ್ಕನ್ನು ಮೊಟಕುಗೊಳಿಸಬಾರದು. ಅದು ನಮ್ಮ ಹಕ್ಕು. ಪ್ರಶ್ನೋತ್ತರ ಅವಧಿ ಬೇಕೇ ಬೇಕು. ಪ್ರಶ್ನೋತ್ತರ ಅವಧಿ ನಡೆಯಲೇ ಬೇಕು.

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರದ ಮೇಲೆ ನಮ್ಮ ಹಕ್ಕಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ತಮ್ಮ ಸದಸ್ಯರುಗಳಿಗೆ ತಾವು ಹೇಳಿ.

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ನಡೆಯಲೇ ಬೇಕು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(ಗೊಂದಲ)

**ಶ್ರೀ ವಿ.ಸುನೀಲ್‌ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಇವರಿಗೆ ರೈತರ ಬಗ್ಗೆ ಮತ್ತು ಉತ್ತರ ಕರ್ನಾಟಕದ ಬಗ್ಗೆ ಕಾಳಜಿ ಇಲ್ಲ. ಜನಪರ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕೆಂಬ ಬಗ್ಗೆ ಕಾಳಜಿ ಇಲ್ಲ. ಯಾವ ವಿಷಯಗಳ ಬಗ್ಗೆಯೂ ಚರ್ಚೆ ಮಾಡುವುದಕ್ಕೆ ಇವರಿಗೆ ಆಸಕ್ತಿ ಇಲ್ಲ. ಯಾವುದೋ ವೈಯಕ್ತಿಕ ಅಜೆಂಡಾ ಹಿಡಿದುಕೊಂಡು ಇಡೀ ಸದನವನ್ನು ಹಾಳು ಮಾಡುತ್ತಿದ್ದಾರೆ. ಜನರು ಉತ್ತರ ಕರ್ನಾಟಕದ ಬಗ್ಗೆ ಮತ್ತು ರೈತರ ಬಗ್ಗೆ ಮಾತನಾಡಬೇಕೆಂದು ಅಪೇಕ್ಷೆಪಡುತ್ತಿದ್ದಾರೆ.

(ಗೊಂದಲ)

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ನನ್ನ ಚುಕ್ಕೆ ಗುರುತಿನ ಪ್ರಶ್ನೆ:864 ಅನ್ನು ಮಾನ್ಯ ಆಹಾರ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯಮಾಡಿ ತಮ್ಮ ಸದಸ್ಯರುಗಳಿಗೆ ಹೇಳಿ.

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಇವರು ರಾಜ್ಯದ ಹಣವನ್ನು ಪೋಲು ಮಾಡುತ್ತಿದ್ದಾರೆ. ಸದನದ . . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ. ಸುಮ್ಮನೆ ಇರಿ.

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ರಾಜ್ಯದ ಬೊಕ್ಕಸಕ್ಕೆ . . .

**ಸಭಾಪತಿಯವರು:-** ಮಾನ್ಯ ಸದಸ್ಯರುಗಳೇ ಒಂದು ನಿಮಿಷ. ಸುಮ್ಮನೆ ಇರಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ನೋಡಿ . . .

(ಗೊಂದಲ)

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಡಿ.ಕೆ.ಶಿವಕುಮಾರ್‌ರವರ ಮೇಲೆ ನೂರಾರು ಕೇಸ್‌ಗಳಿವೆ. ಅವರು ಮೊದಲು ರಾಜೀನಾಮೆ ಕೊಡಲಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಒಂದು ನಿಮಿಷ. ತಾವು ಮಾನ್ಯ ಸಭಾಪತಿಯವರ ಮಾತೇ ಕೇಳುವುದಿಲ್ಲ ಎಂದರೆ ಹೇಗೆ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಹೇಳಬೇಕು.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ನಾನು ಎಲ್ಲರಿಗೂ ಹೇಳುತ್ತೇನೆ. ಮೊದಲು ತಾವು ಕೇಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತಾವು ಮೊದಲು ಬಾವಿಯಲ್ಲಿರುವವರಿಗೆ ಹೇಳಬೇಕು. ನಾವು ಸಿದ್ಧವಾಗಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಒಂದು ನಿಮಿಷ. ನಾನು ಹೇಳುತ್ತೇನೆ. ತಾವು ಕೇಳಿ.

(ಮುಂದು)

(1164) ಎಸ್‌ಪಿಆರ್/ಆರ್‌ಎನ್ 1:10 20/12/2021 (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**(ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್ ರವರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಸದಸ್ಯರುಗಳೆಲ್ಲರೂ ಬಾವಿಯಲ್ಲಿ ಧರಣಿ ನಿರತರಾಗಿ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ ಬಹಳ ಮಹತ್ವವಾದ ಪ್ರಶ್ನೋತ್ತರಗಳಿವೆ; ಹೀಗಾಗಿ ಬಾವಿಯಲ್ಲಿರುವ ತಮ್ಮ ಪಕ್ಷದ ಸದಸ್ಯರುಗಳಿಗೆ ಸುಮ್ಮನಿದ್ದು, ಘೋಷಣೆಗಳನ್ನು ಕೂಗುತ್ತಿರುವಂತೆ ಅವರಿಗೆ ತಿಳಿಸುವಂತೆ ನಾನು ನಿಮ್ಮಲ್ಲಿ ವಿನಂತಿಸುತ್ತೇನೆ. ಅವರುಗಳು ಸುಮ್ಮನಿರಲಿ; ಪ್ರಶ್ನೋತ್ತರಗಳ ಕಲಾಪವನ್ನು ನಡೆಸೋಣ; ಸರ್ಕಾರವು ಅವುಗಳಿಗೆ ಉತ್ತರಿಸಲಿ ಮತ್ತು ಸದನದ ಕಲಾಪಗಳು ನಡೆಯಲಿ. ಶ್ರೀ ಹರಿಪ್ರಸಾದ್‌ರವರೇ ತಾವುಗಳೆಲ್ಲರೂ ಸಂಸತ್ತಿನಲ್ಲಿ ಕರ್ತವ್ಯ ನಿರ್ವಹಿಸಿ, ಅನುಭವಸ್ಥರಾಗಿದ್ದೀರಿ. ದಯಮಾಡಿ ತಾವು ಈ ಬಗ್ಗೆ ವಿಚಾರ ಮಾಡಿ. ಈ ರೀತಿಯಾಗಿ ನೀವುಗಳು ವರ್ತಿಸಿದರೆ ಸದನದ ಕಲಾಪಗಳು ಹೇಗೆ ಆಗುತ್ತವೆ? ನಿಮ್ಮ ವರ್ತನೆಯಿಂದ ಯಾವ ರೀತಿಯ ಸಾಧನೆ ಮಾಡಿದಂತಾಗುತ್ತದೆ ಎಂದು ನೀವೇ ಹೇಳಿ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಶ್ರೀ ಬಿ.ಕೆ.ಹರಿಪ್ರಸಾದ್ ರವರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ಶ್ರೀ ಶಾಂತಾರಾಮ್ ಬುಡ್ನ ಸಿದ್ದಿಯವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎನ್.ರವಿಕುಮಾರ್:-** ಕಾಂಗ್ರೆಸ್‌ಗೆ ಧಿಕ್ಕಾರ!

**ಸಭಾಪತಿಯವರು:-** ಸದಸ್ಯರೇ ಸುಮ್ಮನೆ ಕುಳಿತುಕೊಳ್ಳಿ; ಪ್ರಶ್ನೋತ್ತರ ಕಲಾಪವು ನಡೆಯುತ್ತಿದೆ.

**(ಗೊಂದಲದಲ್ಲಿಯೇ ಪ್ರಶ್ನೋತ್ತರ ಕಲಾಪವು ಪ್ರಾರಂಭವಾಯಿತು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 3. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ : 864**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಸರ್ಕಾರವು ನೀಡಿರುವ ಲಿಖಿತ ಉತ್ತರವು ಸಾಕಷ್ಟು ಪ್ರಮಾಣದಲ್ಲಿ ಸರಿಯಾಗಿದೆ ಎಂದು ನಾನು ಭಾವಿಸುತ್ತೇನೆ. ಆದರೂ ಸಹ ಒಂದೆರೆಡು ಅಂಶಗಳ ಬಗ್ಗೆ ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ. ರಾಜ್ಯದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಅರಣ್ಯ ಪ್ರದೇಶಗಳಲ್ಲಿ ಬುಡಕಟ್ಟು ಸಮುದಾಯಗಳು ಮನೆ ನಿರ್ಮಿಸುವ ಯಾವುದೇ ಪ್ರಸ್ತಾವನೆಗಳು ಇಲಾಖೆಯಲ್ಲಿ ಬಾಕಿ ಇಲ್ಲ ಎಂಬುದಾಗಿ ತಿಳಿಸಲಾಗಿದೆ. ಆದರೆ, ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಮೂರ್ನಾಲ್ಕು ಹಳ್ಳಿಗಳ ಪಟ್ಟಿಯನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದರಲ್ಲೂ ವಿಶೇಷವಾಗಿ...

**ಶ್ರೀ ಉಮೇಶ್ ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, ನಾಗರಹೊಳೆ ಮತ್ತು ಕೊಡಗು ಭಾಗಗಳಲ್ಲಿ 613 ಜನರು ತಮಗೆ ಮನೆ ನಿರ್ಮಿಸಲು ಅನುಮತಿ ಕೋರಿ ಸಲ್ಲಿಸಿದ ಅರ್ಜಿಗಳಿಗೆ ಈಗಾಗಲೇ ಅನುಮತಿ ನೀಡಲಾಗಿದೆ. ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡಿದ ಎಲ್ಲಾ ಪ್ರಕರಣಗಳಲ್ಲಿ ಅವರಿಗೆ ವಾಸದ ಹಕ್ಕು ಮತ್ತು ಉಳುಮೆ ಹಕ್ಕನ್ನು ಮಾನ್ಯ ಮಾಡಲಾದ ಸ್ಥಳದಲ್ಲಿ ಉಳುಮೆ ಮಾಡಲು ಮತ್ತು ಮನೆಗಳನ್ನು ನಿರ್ಮಿಸಲು ಅವರುಗಳಿಗೆ ಅನುಮತಿಯನ್ನು ನೀಡಲಾಗಿದೆ.

**ಸಭಾಪತಿಯವರು:-** ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಿದ್ದು ಯಾವುದೂ ಸಹ ಕಡತಕ್ಕೆ ಹೋಗುವುದಿಲ್ಲ.

**(ಈ ಹಂತದಲ್ಲಿ ಸಭಾಪತಿಯವರ ನಿರ್ದೇಶನದಂತೆ ಸದನದ ಬಾವಿಯಲ್ಲಿ ಧರಣಿ ನಿರತ ಸದಸ್ಯರು ಕೂಗಿದ ಘೋಷಣೆಗಳನ್ನು ದಾಖಲಿಸಿರುವುದಿಲ್ಲ)**

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಲಿಖಿತ ಉತ್ತರದ ಬಗ್ಗೆ ಇನ್ನೂ ಸ್ಪಷ್ಟೀಕರಣದ ಅವಶ್ಯಕತೆ ಇದೆ. ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಬಾವಲಿ ಹಾಡಿಯಲ್ಲಿ ಬುಡಕಟ್ಟು ಸಮಾಜದವರು ಮನೆ ನಿರ್ಮಿಸುವ ಸಂಬಂಧ ಅವರುಗಳು ಒಳಗೆ ಬಂದಿದ್ದರು ಎನ್ನುವ ಕಾರಣಕ್ಕಾಗಿ ಅವರುಗಳ ವಿರುದ್ಧ ಅರಣ್ಯ ಇಲಾಖೆಯು ಈಗಾಗಲೇ 10

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕರಣಗಳನ್ನು ದಾಖಲಿಸಿದೆ. ಅಲ್ಲಿನ ಬಳ್ಳೆಹಾಡಿ ಅಥವಾ ಬಾವಲಿಹಾಡಿ ಯಾವುದೇ ಪ್ರದೇಶಗಳಿರಬಹುದು. ಇದರ ಜೊತೆಗೆ ಅಲ್ಲಿನ ಬುಡಕಟ್ಟು ಸಮುದಾಯದವರು ಅರಣ್ಯ ಹಕ್ಕುಗಳಿಗಾಗಿ 47,000 ಕ್ಕಿಂತ ಹೆಚ್ಚು ಮನವಿಗಳನ್ನು ಸಲ್ಲಿಸಿದ್ದರು. ಆ ಪೈಕಿ 12,000 ಕ್ಕಿಂತ ಹೆಚ್ಚು ಮನವಿಗಳು ರದ್ದಾಗಿವೆ. ಬಾಕಿಯಿರುವ ಮನವಿಗಳನ್ನು ಅದಷ್ಟು ಬೇಗ ಪರಿಗಣಿಸಿ, ಮನೆಗಳನ್ನು ನಿರ್ಮಿಸಲು ಅನುಕೂಲ ಮಾಡಿಕೊಡಬೇಕೆಂದು ನಾನು ಮಂತ್ರಿಗಳನ್ನು ಕೋರುತ್ತೇನೆ.

**ಶ್ರೀ ಉಮೇಶ್ ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, ಬಾಕಿ ಇರುವ ಅರ್ಜಿಗಳನ್ನು ಮಂಜೂರು ಮಾಡುವ ಕೆಲಸಗಳನ್ನು ಮಾಡಲಾಗುತ್ತದೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಬಿ.ಕೆ.ಹರಿಪ್ರಸಾದ್ ರವರದ್ದು.

**(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಶ್ರೀ ಬಿ.ಕೆ.ಹರಿಪ್ರಸಾದ್ ರವರು ತಮ್ಮ ಪ್ರಶ್ನೆಯನ್ನು ಕೇಳಿರುವುದಿಲ್ಲ)**

**ಸಭಾಪತಿಯವರು:-** ಶ್ರೀ ಆಯನೂರು ಮಂಜುನಾಥ್ ಪ್ರಶ್ನೆಯನ್ನು ಕೇಳಿ. ಸದನದ ಬಾವಿಯಲ್ಲಿದ್ದು ಮಾತನಾಡಿರುವುದು ಯಾವುದೂ ಸಹ ಕಡತಕ್ಕೆ ಹೋಗಬಾರದು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 778 + 842**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಲಿಖಿತ ಉತ್ತರವು ಸಾಕಷ್ಟು ತೃಪ್ತಿಕರವಾಗಿಲ್ಲ. ಹೀಗಾಗಿ ಈ ಬಗ್ಗೆ ಮತ್ತೊಮ್ಮೆ ಚರ್ಚಿಸಲು ಅರ್ಧ ಗಂಟೆಗಳ ಕಾಲಾವಕಾಶವನ್ನು ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಉಮೇಶ್ ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, ಪ್ರಶ್ನಿತ ವಿಚಾರಕ್ಕೆ ಸಂಬಂಧಪಟ್ಟಂತೆ, ಈಗಾಗಲೇ 2010 ನೇ ವರ್ಷದಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿದೆ. ಈ ವಿಚಾರದಲ್ಲಿ ಸದಸ್ಯರು ಹೆಚ್ಚಿನ ಮಾಹಿತಿಯನ್ನು ಬಯಸಿದ್ದಲ್ಲಿ, ಅದನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗುವುದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ 2011 ನೇ ಸಾಲಿನ ಸುತ್ತೋಲೆಯು ಇದೆ. ಸರ್ವಿಸ್ ವಿಚಾರಗಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಸುದೀರ್ಘವಾದ ಚರ್ಚೆಯ ಅವಶ್ಯಕತೆ ಇರುವುದರಿಂದ ಅರ್ಧ ಗಂಟೆಗಳ ಕಾಲಾವಧಿಯ ಚರ್ಚೆಗೆ ಅವಕಾಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಸಭಾಪತಿಯವರು:-** <u>ಈ ಬಗ್ಗೆ ತಾವು ಮನವಿಯನ್ನು ಸಲ್ಲಿಸಿ.</u> ಮುಂದಿನ ಪ್ರಶ್ನೆ ಶ್ರೀ ಎಂ.ನಾರಾಯಣಸ್ವಾಮಿಯವರದ್ದು.

**ಪ್ರಶ್ನೆ ಸಂಖ್ಯೆ: 804**

**(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಶ್ರೀ ಎಂ.ನಾರಾಯಣಸ್ವಾಮಿಯವರು ತಮ್ಮ ಪ್ರಶ್ನೆಯನ್ನು ಕೇಳಿರುವುದಿಲ್ಲ)**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಎಂ.ಎ.ಗೋಪಾಲಸ್ವಾಮಿಯವರದ್ದು.

**ಪ್ರಶ್ನೆ ಸಂಖ್ಯೆ: 745**

**(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಶ್ರೀ ಎಂ.ಎ.ಗೋಪಾಲಸ್ವಾಮಿಯವರು ತಮ್ಮ ಪ್ರಶ್ನೆಯನ್ನು ಕೇಳಿರುವುದಿಲ್ಲ)**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಡಾ|| ತೇಜಸ್ವಿನಿಗೌಡರವರದ್ದು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 865**
**(ಉತ್ತರವನ್ನು ಲಗತ್ತಿಸಿದೆ)**

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಅರಣ್ಯ ಇಲಾಖೆ ಮಾನವ ಮತ್ತು ವನ್ಯ ಜೀವಿಗಳ ಸಂಘರ್ಷವನ್ನು ತಡೆಯುವ ನಿಟ್ಟಿನಲ್ಲಿ, ರೈತರ ಬೆಳೆಯನ್ನು ಹಾನಿಗೊಳಿಸಿ ತುಂಬಾ ತೊಂದರೆಯನ್ನು ನೀಡುತ್ತಿದ್ದ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯುವ ನಿಟ್ಟಿನಲ್ಲಿ, ಉಪಯೋಗಿಸಲ್ಪಟ್ಟ ರೈಲ್ವೆ ಹಳಿಯನ್ನು ಅಳವಡಿಸುವ ಕಾರ್ಯವನ್ನು ಸರ್ಕಾರವು ತುಂಬಾ ಚೆನ್ನಾಗಿ ಮಾಡಿದೆ. ಇದನ್ನು ಅನುಷ್ಠಾನಗೊಳಿಸಿದ ಸರ್ಕಾರ, ಅರಣ್ಯ ಇಲಾಖೆ ಹಾಗೂ ಎಲ್ಲರಿಗೂ ನನ್ನ ಧನ್ಯವಾದಗಳನ್ನು ಮತ್ತು ಅಭಿನಂದನೆಗಳನ್ನು ತಿಳಿಸುತ್ತೇನೆ.

ಪ್ರಸ್ತುತ ನಮ್ಮ ರಾಜ್ಯದಲ್ಲಿ ಆನೆಗಳಂತಹ ಬಲಿಷ್ಠ ವನ್ಯ ಜೀವಿಗಳು ನಮ್ಮ ರಾಜ್ಯದ ಅರಣ್ಯ ಪ್ರದೇಶ ಮತ್ತು ವಾತಾವರಣಗಳು ಚೆನ್ನಾಗಿರುವುದರಿಂದ ಇಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿವೆ. ಇವತ್ತಿನ ದಿವಸ ವನ್ಯ ಜೀವಿಗಳ ರಕ್ಷಣೆಯ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಒಟ್ಟು 624 ಕಿ.ಮೀ. ನಷ್ಟು ಉದ್ದದ ರೈಲ್ವೆ ಹಳಿಯನ್ನು ಅಳವಡಿಸಬೇಕಾಗಿದೆ. ಆ ಪೈಕಿ ಪ್ರಸ್ತುತ 181 ಕಿ.ಮೀ.ಗಳನ್ನು ಅಳವಡಿಸಿದ್ದಾರೆ. ಇನ್ನೂ 458.62 ಕಿ.ಮೀ.ಗಳು ಬಾಕಿಯಿದ್ದು, ಇದಕ್ಕೆ 550 ಕೋಟಿ ರೂಪಾಯಿಗಳ ಅನುದಾನದ ಅವಶ್ಯಕತೆ ಇದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಪರಿಹಾರಾತ್ಮಕ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರಕ್ಕೆ ನಮ್ಮ ಅರಣ್ಯ ಸಚಿವರು ಪ್ರಸ್ತಾವನೆ ಸಲ್ಲಿಸಿದ್ದು, ಕೇಂದ್ರ ಸರ್ಕಾರವು ಪ್ರಶ್ನಿತ ಕಾಮಗಾರಿಯನ್ನು ಒಪ್ಪಿಕೊಂಡಿರುವುದಿಲ್ಲ. ಹೀಗಾಗಿ ಸಚಿವರು ದಯಮಾಡಿ ಕೇಂದ್ರಕ್ಕೆ ಭೇಟಿ ನೀಡಿ ಅದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಬೇಕೆಂದು ನಾನು ಸಚಿವರಲ್ಲಿ ಆಗ್ರಹಿಸುತ್ತೇನೆ. ರೈಲ್ವೆ ಹಳಿಗಳನ್ನು ಉಚಿತವಾಗಿ ತಂದು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಯಾವ ರೀತಿಯ ಪ್ರಯತ್ನಗಳನ್ನು ಮಾಡಲಾಗಿದೆ ಎಂದು ನಾನು ತಮ್ಮ ಮುಖಾಂತರ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಉಮೇಶ್ ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಆರು ಬಾರಿ ಕೇಂದ್ರಕ್ಕೆ ಖುದ್ದಾಗಿ ಹೋಗಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನವನ್ನು ಮಾಡಿದ್ದೇನೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ, ಆದಷ್ಟು ಬೇಗನೇ, ಕ್ರಮಗಳನ್ನು ಜರುಗಿಸಲಾಗುವುದು.

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಅರಣ್ಯಗಳಲ್ಲಿ ಬೆಂಕಿ ಅವಘಡಗಳು ಸಂಭವಿಸಿದಾಗ, ಬೆಂಕಿಯನ್ನು ನಂದಿಸಲು ಇಲಾಖೆಯಲ್ಲಿ ವಿಮಾನ ಹಾಗೂ ಹೆಲಿಕ್ಯಾಪ್ಟರ್‌ಗಳ ಸೌಲಭ್ಯವಿಲ್ಲ. ಬೇರೆ ಇಲಾಖೆಗಳಲ್ಲಿ ಬೆಂಕಿ ಅವಘಡಗಳು ಸಂಭವಿಸಿದಾಗ, ಎರಡು ಕೋಟಿ ರೂಪಾಯಿಗಳನ್ನು ಪಾವತಿಸಲಾಗಿದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ.

---

ಸ್ವಾವಲಂಬನೆಯನ್ನು ಸಾಧಿಸುವ ನಿಟ್ಟಿನಲ್ಲಿ ನಮ್ಮ ಅರಣ್ಯ ಇಲಾಖೆಗೆ ತನ್ನದೇ ಆದ ವಿಮಾನ ಮತ್ತು ಹೆಲಿಕ್ಯಾಪ್ಟರ್‌ಗಳನ್ನು ಇಟ್ಟುಕೊಳ್ಳಬೇಕಾಗಿದೆ. ಅರಣ್ಯಗಳು ಅಮೂಲ್ಯ ಸಂಪತ್ತಾಗಿವೆ. ಈ ನಿಟ್ಟಿನಲ್ಲಿ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಕೇಳಲಿಚ್ಛಿಸುತ್ತೇನೆ.

**ಶ್ರೀ ಉಮೇಶ್ ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, ಅರಣ್ಯಗಳಲ್ಲಿ ಆಕಸ್ಮಿಕವಾಗಿ ಬೆಂಕಿ ಅವಘಢಗಳು ಸಂಭವಿಸಿದಾಗ, ಅವುಗಳನ್ನು ನಂದಿಸಲು ಇಲಾಖೆಯು ಸ್ವಂತವಾಗಿ ವಿಮಾನ ಮತ್ತು ಹೆಲಿಕ್ಯಾಪ್ಟರ್‌ಗಳನ್ನು ಹೊಂದುವಂತೆ ಸದಸ್ಯರು ತಿಳಿಸುತ್ತಿದ್ದಾರೆ. ಆದರೆ, ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಸ್ತೆಗಳ ಮೂಲಕ ಬೆಂಕಿಯನ್ನು ನಂದಿಸುವ ಪ್ರಕ್ರಿಯೆಗಳಿವೆ. ಅವುಗಳನ್ನು ನಾವು ಮಾಡೇ ಮಾಡುತ್ತೇವೆ. ಸದಸ್ಯರ ಸಲಹೆಯಂತೆ, ಅರಣ್ಯ ಇಲಾಖೆಗೆ ಪ್ರತ್ಯೇಕವಾದ ವಿಮಾನ ಮತ್ತು ಹೆಲಿಕ್ಯಾಪ್ಟರ್‌ಗಳನ್ನು ಹೊಂದುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು; ಕೇಂದ್ರ ಸರ್ಕಾರವು ಅನುದಾನ ನೀಡಿದ್ದಲ್ಲಿ, ಅವುಗಳನ್ನು ಖರೀದಿಸಲಾಗುವುದು.

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಬಲಾಢ್ಯ ವನ್ಯ ಜೀವಿಗಳಾದ ಆನೆ, ಹುಲಿ, ಕರಡಿ ಇವುಗಳಿಗೆ ರಕ್ಷಿತ ಅರಣ್ಯ ಪ್ರದೇಶಗಳಿವೆ. ಕುರುಚಲು ಕಾಡುಗಳಲ್ಲಿ ಸಣ್ಣ ಸಣ್ಣ ಪ್ರಾಣಿಗಳ ರಕ್ಷಣೆಗೆ ಇರುವ ವಿಶೇಷ ಯೋಜನೆಗೆ ನೀಡುವಂತಹ ಅನುದಾನಗಳು ಸಾಕಾಗುತ್ತಿಲ್ಲ. ಪ್ರಕೃತಿಯಲ್ಲಿ ಸಮತೋಲನವನ್ನು ಕಾಪಾಡುವ ದೃಷ್ಟಿಯಿಂದ ದಯಮಾಡಿ.... ಕೋವಿಡ್-19 ರಂತಹ ಸಾಂಕ್ರಾಮಿಕ ಕಾಯಿಲೆಯು ಬಂದ ಪರಿಸ್ಥಿತಿಯಲ್ಲಿ ಆ ಪ್ರದೇಶಗಳಿಗೆ ಮನುಷ್ಯರೂ ಸಹ ಹೋಗಲು ಸಾಧ್ಯವಾಗಲಿಲ್ಲ. ಮೂಕಪ್ರಾಣಿಗಳ ವಿಷಯದಲ್ಲಿ ಸರ್ಕಾರವು ದಯಮಾಡಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ಉಪಸಭಾಪತಿಗಳ ನೇತೃತ್ವದಲ್ಲಿ ಇತ್ತೀಚೆಗೆ ನಾವು ಅರ್ಜಿಗಳ ಸಮಿತಿಯ ವತಿಯಿಂದ ಭೇಟಿಯನ್ನೂ ಸಹ ನೀಡಿದ್ದೆವು. ಅಲ್ಲಿ ಅದ್ಭುತವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಬೇಟೆಗಾರರನ್ನು ತಡೆಯುವ ಸಲುವಾಗಿ ಅಲ್ಲಿನ ಕೆಲಸಗಾರರು ಬಹಳ ಕಷ್ಟದಲ್ಲಿ ಕೆಲಸಗಳನ್ನು ಮಾಡುತ್ತಿದ್ದಾರೆ. ಅಲ್ಲಿ 2,168 ಸಿಬ್ಬಂದಿಗಳಿದ್ದು, ಹಾಲಿ ನೀಡುತ್ತಿರುವ ಅನುದಾನವು ಸಾಕಾಗುತ್ತಿಲ್ಲ. ಅರಣ್ಯ ಇಲಾಖೆಗೆ ತುಂಬಾ ಹೆಚ್ಚಿನ ರೀತಿಯಲ್ಲಿ ಅನುದಾನದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರವು ಯಾವ ರೀತಿಯ ಪ್ರಸ್ತಾವನೆಯನ್ನು ಸಲ್ಲಿಸುತ್ತಿದೆ ಎಂದು ನಾನು ಕೇಳಬಯಸುತ್ತೇನೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದಲೂ ಸಹ ಅನುದಾನವನ್ನು ಪಡೆದುಕೊಳ್ಳಬೇಕೆಂಬ ಬೇಡಿಕೆಯನ್ನು ನಾನು ಇಡುತ್ತಿದ್ದೇನೆ.

**ಶ್ರೀ ಉಮೇಶ್ ವಿ.ಕತ್ತಿ:-** ಮಾನ್ಯ ಸಭಾಪತಿಯವರೇ, ಕಳೆದೆರೆಡು ವರ್ಷದಿಂದ ಕೋವಿಡ್-19 ರಂತಹ ಸಾಂಕ್ರಾಮಿಕ ಕಾಯಿಲೆಯಿಂದ ಆರ್ಥಿಕ ಹೊರೆಯುಂಟಾಗಿದ್ದು, ಇದರಿಂದ ಸ್ವಲ್ಪ

ತೊಂದರೆಯಾಗಿರುವುದು ನಿಜ. ಆದರೆ ಇದನ್ನು ಮುಂದಿನ ದಿನಮಾನಗಳಲ್ಲಿ ಸರಿಪಡಿಸಿ, ಅರಣ್ಯ ಇಲಾಖೆಗೆ ಹೆಚ್ಚಿನ ಅನುದಾನವನ್ನು ಪಡೆದುಕೊಂಡು, ಹೆಚ್ಚಿನ ಸುರಕ್ಷತೆಯ ಯೋಜನೆಗಳನ್ನು ರೂಪಿಸಲಾಗುವುದು. ಖಂಡಿತವಾಗಿಯೂ ಸಹ ಈ ಕಾಮಗಾರಿಗಳನ್ನು ಮಾಡುತ್ತೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಪಿ.ಎಂ.ಮುನಿರಾಜು ಗೌಡ ರವರದ್ದು.

**ಪ್ರಶ್ನೆ ಸಂಖ್ಯೆ: 798**

**ಶ್ರೀ ಪಿ.ಎಂ.ಮುನಿರಾಜು ಗೌಡ:-** ನನ್ನ ಪ್ರಶ್ನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಸದನದ ಹೊರಗೆ ಇದ್ದಾರೆ. ಹೀಗಾಗಿ ಅವರಿಂದ ಮತ್ತೆ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಯು.ಬಿ.ವೆಂಕಟೇಶ್‌ರವರದ್ದು.

**ಪ್ರಶ್ನೆ ಸಂಖ್ಯೆ: 737**

**(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಶ್ರೀ ಯು.ಬಿ.ವೆಂಕಟೇಶ್‌ರವರು ತಮ್ಮ ಪ್ರಶ್ನೆಯನ್ನು ಕೇಳಿರುವುದಿಲ್ಲ)**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಡಾ|| ತಳವಾರ್ ಸಾಬಣ್ಣರವರದ್ದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**(1165) 01-20 20-12-2021 ಸಿಎಸ್/ವಿಕೆ**

**ಪ್ರಶ್ನೆ ಸಂಖ್ಯೆ: 785**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ||ತಳವಾರ್ ಸಾಬಣ್ಣ:-** ನಾನು ಮಾನ್ಯ ಸಚಿವರಿಗೆ, ಸಹ ಪ್ರಾಧ್ಯಾಪಕರನ್ನು ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಬೇಕೆಂದು ಕೇಳಿದ್ದೆನು. ಮಾನ್ಯ ಸಚಿವರು ಈ ಸಂಬಂಧ 516 ಅರ್ಜಿಗಳು ಬಂದಿದ್ದು, ಅದರಲ್ಲಿ 37 ಪ್ರಾಧ್ಯಾಪಕರ ಹುದ್ದೆಗಳ ಪ್ರಕ್ರಿಯೆ ಮುಗಿದಿದೆ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಇನ್ನು ಉಳಿದ ಹುದ್ದೆಗಳ ಬಗ್ಗೆ ಕೂಡ ನಾನು ಪ್ರಶ್ನೆ ಮಾಡಿದ್ದೆನು. ಈ ಸಹ ಪ್ರಾಧ್ಯಾಪಕರ ಹುದ್ದೆಯಲ್ಲಿರುವವರಲ್ಲಿ ಹಲವರು ನಿವೃತ್ತಿಯ ಅಂಚಿನಲ್ಲಿದ್ದಾರೆ. ಇವರಿಗೆ ತೀವ್ರಗತಿಯಲ್ಲಿ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇದಕ್ಕೆ ಸಚಿವರ ಉತ್ತರ ನೋಡಿಕೊಂಡು ನನ್ನ ಮುಂದಿನ ಉಪಪ್ರಶ್ನೆಯನ್ನು ಕೇಳುತ್ತೇನೆ.

**ಡಾ||ಸಿ.ಎಸ್.ಅಶ್ವಥನಾರಾಯಣ**:- ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಡಾ||ತಳವಾರ್ ಸಾಬಣ್ಣನವರು ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ ಪ್ರಶ್ನೆ ಕೇಳಿದ್ದಾರೆ. 6ನೇ ವೇತನ ಆಯೋಗದಲ್ಲಿಯೇ ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿಗಾಗಿ ಅರ್ಜಿಗಳನ್ನು ಕರೆಯಲಾಗಿತ್ತು. ಈ ರೀತಿ ಕರೆದ ಅರ್ಜಿಯಲ್ಲಿ ಶೇಕಡ 75ರಷ್ಟು ಪದೋನ್ನತಿಗೆ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಇನ್ನುಳಿದ ಶೇಕಡ 25ರಷ್ಟು ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ತುಂಬಲು ಈ ಗಾಗಲೇ ಅರ್ಜಿಗಳನ್ನು ಕರೆಯಲಾಗಿದೆ. ಅದರಲ್ಲಿ 516 ಜನರು ಅರ್ಜಿಯನ್ನು ಸಲ್ಲಿಸಿದ್ದಾರೆ. ಅದರಲ್ಲಿ 319 ಜನ ಅರ್ಹ ಅಭ್ಯರ್ಥಿಗಳಿದ್ದಾರೆ. ಇವರಿಗೆ ಈಗಾಗಲೇ ಸಂದರ್ಶನ ನಡೆಸಲಾಗುತ್ತಿದ್ದು ಈಗಾಗಲೇ 37 ಜನರು ಸಂದರ್ಶನಕ್ಕೆ ಹಾಜರಾಗಿದ್ದಾರೆ. 95 ಜನರಿಗೆ ಪದೋನ್ನತಿ ನೀಡಲು ಅವಕಾಶವಿದೆ. 7 ನೇ ವೇತನ ಆಯೋಗದಲ್ಲಿ ಎಲ್ಲರಿಗೂ ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲು ಅವಕಾಶವಿದೆ. ಕೆಲವು ಷರತ್ತುಗಳಿಗೆ ಅನ್ವಯವಾಗಿ ಈ ಪದೋನ್ನತಿಗಳನ್ನು ನೀಡಲಾಗುವುದು. ಇದನ್ನೆಲ್ಲ ಆದಷ್ಟು ತ್ವರಿತವಾಗಿ ಮಾಡಲಾಗುವುದು.

**ಡಾ||ತಳವಾರ್ ಸಾಬಣ್ಣ**:- ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರ ಉತ್ತರ ತೃಪ್ತಿಕರವಾಗಿದೆ. ಆದರೆ ನನ್ನ ಮತ್ತೊಂದು ಉಪಪ್ರಶ್ನೆ ಏನೆಂದರೆ ಸರ್ಕಾರಿ ಕಾಲೇಜುಗಳಲ್ಲಿ ಗ್ರೇಡ್-1 ಪ್ರಾಂಶುಪಾಲರ ಹುದ್ದೆಗಳಿಲ್ಲ. ಬದಲಿಗೆ ಅಲ್ಲೆಲ್ಲಾ in-charge principal ಇದ್ದಾರೆ. ಹಲವಾರು ಕಾಲೇಜುಗಳಲ್ಲಿ ಒಬ್ಬರೆ ಶಿಕ್ಷಕರು in-charge principal ಆಗಿರುತ್ತಾರೆ. ಆದರೆ ಗ್ರೇಡ್-1 ಪ್ರಾಂಶುಪಾಲರು ಇರುವುದಿಲ್ಲ. ಇದರ ಬಗ್ಗೆ ಕೂಡ ಸಚಿವರು ಕ್ರಮ ಕೈಗೊಳ್ಳಬೇಕೆಂದು ಕೇಳಬಯಸುತ್ತೇನೆ. ಪ್ರಾಂಶುಪಾಲರಿಲ್ಲದೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಗ್ರೇಡ್-1 ಪ್ರಾಂಶುಪಾಲರನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತುಂಬಲು ಹೆಚ್ಚಿನ ಆದ್ಯತೆಯನ್ನು ನೀಡಬೇಕು. 43 ಕಾಲೇಜುಗಳಿಗೆ 4 ಮಂದಿ ಗ್ರೇಡ್-1 ಪ್ರಾಂಶುಪಾಲರಿದ್ದಾರೆ. ಈ ಗ್ರೇಡ್-1 ಪ್ರಾಂಶುಪಾಲರ ಹುದ್ದೆಗಳನ್ನು ತುಂಬಬೇಕೆಂದು ನಾನು ಮತ್ತೊಮ್ಮೆ ಸಚಿವರಿಗೆ ಒತ್ತಾಯವನ್ನು ಮಾಡುತ್ತೇನೆ.

**ಡಾ||ಸಿ.ಎಸ್.ಅಶ್ವಥನಾರಾಯಣ**:- ಮಾನ್ಯ ಸಭಾಪತಿಗಳೇ, ಈ ಹುದ್ದೆಗಳಿಗೆ ಈಗಾಗಲೇ ಅರ್ಜಿಗಳನ್ನು ಕರೆಯಲಾಗಿದೆ. ಈ ಮಧ್ಯೆ ವಯೋಮಿತಿಯ ಸಡಿಲಿಕೆ ಕೇಳಿದ ಹಿನ್ನಲೆಯಲ್ಲಿ ಆದಷ್ಟು ಬೇಗ ಕ್ರಮ ಕೈಗೊಂಡು ನೇಮಕಾತಿಗಳನ್ನು ಮಾಡಿಕೊಳ್ಳಲಾಗುವುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## ಪ್ರಶ್ನೆ ಸಂಖ್ಯೆ 817
## (ಉತ್ತರಗಳನ್ನು ಲಗತ್ತಿಸಲಾಗಿದೆ)

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಗಳೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ಕಳೆದ ಸಾಲಿನಲ್ಲಿ ನೀಡಿರುವ 5 ಕೋಟಿ ರೂಪಾಯಿಗಳಲ್ಲಿ ಶೇಕಡ 50ರಷ್ಟು ಸಿಬ್ಬಂದಿಯ ವೇತನಕ್ಕೆ ಹೋಗುತ್ತದೆ. ಉಳಿದ ಹಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಸಾಕಾಗುವುದಿಲ್ಲ. ಇನ್ನು ಹೆಚ್ಚಿನ ಅನುದಾನವನ್ನು ನೀಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ವಿ.ಸುನೀಲ್ ಕುಮಾರ್:-** ಮಾನ್ಯ ಸಭಾಪತಿಗಳೇ, ಕನ್ನಡ ಸಾಹಿತ್ಯ ಪರಿಷತ್ತಿಗೆ ಕಳೆದ 3 ವರ್ಷಗಳಲ್ಲಿ ಬೇರೆ ಬೇರೆ ರೀತಿಯ ಅನುದಾನಗಳನ್ನು ನೀಡುತ್ತಿದ್ದೇವೆ. 2019ರಲ್ಲಿ ರೂ.7 ಕೋಟಿ, 2020ರಲ್ಲಿ ರೂ. 5 ಕೋಟಿ ಮತ್ತು 2021 ರಲ್ಲಿ ರೂ.5 ಕೋಟಿ ರೂಪಾಯಿಗಳ ಅನುದಾನವನ್ನು ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ನೀಡಲಾಗಿದೆ. ಹೆಚ್ಚುವರಿ ಅನುದಾನ ಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ವಿಶೇಷವಾಗಿ ವಿವಿಧ ರೀತಿಯಲ್ಲಿ ಸರ್ಕಾರ ಅನುದಾನಗಳನ್ನು ನೀಡುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಚ್ಚಿಗೆ ಅನುದಾನ ಬೇಕೆನ್ನುವ ಬೇಡಿಕೆಯ ಬಗ್ಗೆ ಮುಂದಿನ ದಿನಮಾನಗಳಲ್ಲಿ ಪರಿಶೀಲಿಸಲಾಗುವುದು.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಗಳೇ, ಕನ್ನಡ ಸಾಹಿತ್ಯ ಪರಿಷತ್ತು ಪ್ರಸ್ತುತ ಎಷ್ಟು ಜನ ಸದಸ್ಯರನ್ನು ಹೊಂದಿದೆ ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೆನು, ಅದಕ್ಕೆ 3 ಲಕ್ಷ 40 ಸಾವಿರ ಅಜೀವ ಸದಸ್ಯರನ್ನು ಹೊಂದಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆರೂವರೆ ಕೋಟಿ ಜನಸಂಖ್ಯೆ ಇರುವ ನಮ್ಮ ಕರ್ನಾಟಕ ರಾಜ್ಯದಲ್ಲಿ ಮುಂದಿನ ದಿವಸಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ವಿ.ಸುನೀಲ್ ಕುಮಾರ್**:- ಮಾನ್ಯ ಸಭಾಪತಿಗಳೇ, ಕನ್ನಡ ಸಾಹಿತ್ಯ ಪರಿಷತ್ತಿಗೆ ಸದಸ್ಯರನ್ನು ನೇಮಿಸುವುದು ಸರ್ಕಾರದ ಕೆಲಸ ಅಲ್ಲ. ಆ ಕೆಲಸವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾಡಬೇಕು. ಈ ವರ್ಷದ ನೂತನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ತಮ್ಮ ಸದಸ್ಯರ ಸಂಖ್ಯೆಯನ್ನು 1 ಕೋಟಿಗೆ ವಿಸ್ತರಿಸುವುದಾಗಿ ಅವರೇ ಹೇಳಿಕೊಂಡಿದ್ದಾರೆ. ನಾವು ಕೂಡ ಈ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಅವರು ಏನೇನು ಕ್ರಮ ಕೈಗೋಳ್ಳಬೇಕೆಂಬ ಈ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿಗೆ ನಿರ್ದೇಶನವನ್ನು ನೀಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಶ್ನೆ ಸಂಖ್ಯೆ 824
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಗಳೇ, ನನ್ನ ಪ್ರ ಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಆದರೆ ನಾನು ಕೇಳಿರುವುದಕ್ಕೆ ಸರಿಯಾಗಿ ಉತ್ತರ ನೀಡಿರುವುದಿಲ್ಲ. ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳಿಗೆ ಅನುದಾನವನ್ನು ನೀಡದಿರುವುದಕ್ಕೆ ಕಾರಣವನ್ನು ನಾನು ಕೇಳಿದ್ದರೆ, ಅನುದಾನ ನೀಡುತ್ತಿರುವುದಾಗಿ ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಈ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳಿಗೆ ಅನುದಾನ ಪಡೆಯಲು ಯಾವುದೇ ಮಂಜೂರಾತಿ ದೊರೆಯುತ್ತಿಲ್ಲ. ಕನ್ನಡ ಆಯುಕ್ತಾಲಯಗಳು ಮತ್ತು ಪದವಿ ಪೂರ್ವ ನಿರ್ದೇಶನಾಲಯದಲ್ಲಿ ಪ್ರಸ್ತಾವನೆಗಳು ಉಳಿದುಕೊಳ್ಳುತ್ತವೆ. ಕನ್ನಡ ಮಾಧ್ಯಮದ ಶಾಲಾ ಕಾಲೇಜುಗಳು ಉಳಿಯಬೇಕೆಂದರೆ ಕನ್ನಡ ಮಾಧ್ಯಮದ ಶಾಲಾ ಕಾಲೇಜುಗಳ ಶಿಕ್ಷಕರಿಗೆ ವೇತನವನ್ನು ಸರಿಯಾಗಿ ನೀಡಬೇಕು. ಮಠದ ಶಾಲೆಗಳು ಮತ್ತು ಸಂಘಸಂಸ್ಥೆಗಳು ನಡೆಸುತ್ತಿರುವ ಕನ್ನಡ ಶಾಲೆಗಳು ಕರ್ನಾಟಕದಲ್ಲಿ ಮುಚ್ಚುವ ಹಂತದಲ್ಲಿವೆ. ಹಾಗಾಗಿ ಮಾನ್ಯ ಸಚಿವರು ನೀಡಿರುವ ಉತ್ತರ ಸಮರ್ಪಕವಾಗಿಲ್ಲ. ಆಯುಕ್ತರು ಮತ್ತು ನಿರ್ದೇಶಕರ ಕಚೇರಿಗಳಲ್ಲಿಯೇ ಅನುದಾನದ ಕಡತಗಳು ಉಳಿದುಕೊಂಡು ಆರ್ಥಿಕ ಇಲಾಖೆಗೆ ಹೋಗಿ ಹಿಂದಕ್ಕೆ ಬರುವ ಕೆಲಸಗಳು ಆಗುತ್ತಿದೆ. ಕನ್ನಡ ಶಾಲಾ ಕಾಲೇಜುಗಳು ಮತ್ತು ಅಲ್ಲಿನ ಶಿಕ್ಷಕರು ಉಳಿಯಬೇಕೆಂದರೆ ಅವುಗಳಿಗೆ ಸರಿಯಾಗಿ ಅನುದಾನ ನೀಡಬೇಕು. ಕನ್ನಡ ಮಾಧ್ಯಮದ ಶಾಲಾ ಶಿಕ್ಷಕರು ಮನೆ ಮನೆಗೆ ಹೋಗಿ ಮಕ್ಕಳ ದಾಖಲಾತಿಗಳನ್ನು ಮಾಡಿಕೊಂಡಿದ್ದಾರೆ. ಆ ಶಿಕ್ಷಕರಿಗೆ ವಯೋಮಿತಿ ಮೀರುತ್ತಿದೆ, ಎಲ್ಲಾ ಖಾಸಗಿ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಈಗಾಗಲೇ ಮಾನ್ಯ ಸಭಾಪತಿಯವರ ಸಮ್ಮುಖದಲ್ಲಿಯೇ ಈ ಬಗ್ಗೆ ಸಭೆಗಳನ್ನು ನಡೆಸಲಾಗಿದೆ. ಆ ಸಭೆಯಲ್ಲಿ ತೀರ್ಮಾನ ಆದಂತೆ ಕನ್ನಡ ಮಾಧ್ಯಮ ಶಾಲೆಗಳಿಗೆ ಈ ಕೂಡಲೇ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಅರುಣ್ ಶಹಾಪೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಅವಕಾಶಕ್ಕಾಗಿ ಧನ್ಯವಾದಗಳು. 1995ರ ನಂತರ ಕನ್ನಡ ಮಾಧ್ಯಮ ಶಾಲೆಗಳು ಅನುದಾನಕ್ಕೆ ಒಳಪಡಿಸಬೇಕೆನ್ನುವ ಸಮಸ್ಯೆ ಎಷ್ಟು ಗಂಭೀರವಾಗಿದೆ ಎನ್ನುವುದು ಎಲ್ಲಾ ಸದಸ್ಯರಿಗಿಂತಲೂ ತಮಗೆ ಚೆನ್ನಾಗಿ ತಿಳಿದಿದೆ. ಕಳೆದ 20 ವರ್ಷಗಳಿಗಿಂತ ಹೆಚ್ಚಿನ ಕಾಲ, ವೇತನ ಇಲ್ಲದೆ ಕೆಲಸ ಮಾಡುತ್ತಿರುವ ಪರಿಸ್ಥಿತಿ ಈ ಶಿಕ್ಷಕರಿಗೆ ಬಂದಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1166)/1-30/20-12-2021/ಎಲ್ಎಂ/ವಿಕೆ

**ಶ್ರೀ ಅರುಣ ಶಹಾಪೂರ(ಮುಂದು)**:-

೧೯೯೫ರ ನಂತರ ಅನುದಾನ ಕೊಡುವ ಬಗ್ಗೆ ನಾವು ಮಾಹಿತಿಯನ್ನು ಸಂಗ್ರಹ ಮಾಡುತ್ತೇವೆ ಎಂದು ಹೇಳುತ್ತಲೇ ಬರುತ್ತಿದೆ. ಇದರಿಂದ ಬಹಳ ತೊಂದರೆಯಂಟಾಗುತ್ತಿದೆ. ಕನ್ನಡ ಮಾಧ್ಯಮ ಶಾಲೆಗಳು ಬಂದ್ ಆಗುವಂತಹ ಸ್ಥಿತಿಗೆ ಬಂದಿವೆ. ಯಾವ ಕಾಲಮಿತಿಯೊಳಗೆ ಅನುದಾನ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ ಎನ್ನುವ ಪ್ರಶ್ನೆಯನ್ನು ಮಾನ್ಯ ಶಿಕ್ಷಣ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್**:- ಮಾನ್ಯ ಸಭಾಪತಿಗಳೆ, ೨೦೧೮ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ೧೯೯೫ರ ಒಳಗೆ ಅನುದಾನಕ್ಕಾಗಿ ಎಷ್ಟು ಶಾಲೆಗಳಿಂದ ಅರ್ಜಿಗಳು ಬಂದಿವೆ ಆ ಎಲ್ಲಾ ಅರ್ಜಿಗಳನ್ನು ತೆಗೆದುಕೊಳ್ಳಬೇಕು ಮತ್ತು ಮುಂದೆ ಬರುವ ಅರ್ಜಿಗಳನ್ನು ಸ್ವೀಕರಿಸಬಾರದು ಎನ್ನುವ ತೀರ್ಮಾನವಾಗಿದೆ. ಮಾನ್ಯ ಸಭಾಪತಿಗಳ ನೇತೃತ್ವದಲ್ಲಿಯು ಈ ವಿಷಯವಾಗಿ ಒಂದು ಸಭೆಯನ್ನು ಮಾಡಲಾಗಿದೆ. ಇನ್ನೊಮ್ಮೆ ಈ ವಿಚಾರವಾಗಿ ಎಲ್ಲರನ್ನು ಕರೆದು ಸಭೆ ಮಾಡೋಣ ಎಂದು ತೀರ್ಮಾನವಾಗಿತ್ತು. ಆದರೆ ೨೦೧೯ರಲ್ಲಿ ಚುನಾವಣೆಗಳು ಘೋಷಣೆಯಾಗಿ Code of Conduct ಬಂದಿತ್ತು. ಆದ್ದರಿಂದ ಮುಂದಿನ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆ ಮಾಡಿ ಈ ವಿಚಾರವನ್ನು ಪರಿಗಣಿಸುವಂತಹ ಪ್ರಯತ್ನವನ್ನು ಮಾಡುತ್ತೇವೆ, ಅದಕ್ಕಾಗಿ ಹಿಂದಿನದ್ದನ್ನೆಲ್ಲ ಮುಂದುವರೆಸುವಂತೆ ಹೇಳಿದ್ದೇವೆ.

**ಶ್ರೀ ಅ.ದೇವೇಗೌಡ**:- ಮಾನ್ಯ ಸಭಾಪತಿಗಳೆ, ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಕನ್ನಡ ಶಾಲೆಗಳನ್ನು ಮುಚ್ಚುವಂತಹ ಪರಿಸ್ಥಿತಿ ಬರುತ್ತದೆ. ದಯಮಾಡಿ ಮಾನ್ಯ ಸಭಾಪತಿಗಳ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಸಿ.ನಾಗೇಶ್**:- ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆ ಮಾಡಿ ಖಚಿತವಾಗಿ ಈ ಸಮಸ್ಯೆಯನ್ನು ಪರಿಶೀಲಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 848**
(**ಉತ್ತರವನ್ನು ಲಗತ್ತಿಸಲಾಗಿದೆ**)

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನಸಭೆಯಿಂದ ಚುನಾಯಿತರಾದವರು) (ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರ ಪರವಾಗಿ**):- ಮಾನ್ಯ ಸಭಾಪತಿಗಳೆ, ಸೂರ್ಯರೈತ ಎನ್ನುವ ಹೊಸ ವಿದ್ಯುತ್ ಯೋಜನೆ ರಾಜ್ಯದಲ್ಲಿ ಪ್ರಾರಂಭವಾಗಿದೆ. ಒಬ್ಬರಿಗೆ ಮೂರು ಮೇ.ವ್ಯಾ ವಿದ್ಯುತ್‌ನ್ನು ಕೊಡಬೇಕು ಎನ್ನುವ ಸಂಕಲ್ಪವನ್ನು ಇಟ್ಟುಕೊಂಡು ಈ ಯೋಜನೆಯನ್ನು ಪ್ರಾರಂಭ ಮಾಡಲಾಗಿದೆ. ಮಾನ್ಯ ಸದಸ್ಯರು ಖಾಸಗಿಯವರು ಉತ್ಪಾದನೆ ಮಾಡುವ ವಿದ್ಯುತ್‌ನ ಮಾಹಿತಿಯನ್ನು ಕೇಳಿದ್ದಾರೆ. ಯಾವ ರೈತ ಎಷ್ಟು ವಿದ್ಯುತ್ ಉತ್ಪಾದನೆ ಮಾಡಿದ್ದಾರೆ ಎನ್ನುವುದಕ್ಕೆ ಒಬ್ಬ ರೈತನ ಹೆಸರು ಇಲ್ಲಿ ಇಲ್ಲ. ಕೇವಲ ಕೈಗಾರಿಕೆಗಳ ಹೆಸರು ಮಾತ್ರ ಇದೆ. ದೊಡ್ಡ-ದೊಡ್ಡ ಕಂಪನಿಗಳ ಹೆಸರು ಬರುತ್ತಿದೆ. ಖಿಳ.ಲಲ ಮೆ.ವ್ಯಾ ವಿದ್ಯುತ್‌ನ್ನು ಉತ್ಪಾದನೆ ಮಾಡುವ ರೈತರ ಹೆಸರು ಎಲ್ಲಿಯು ಬಂದಿರುವುದಿಲ್ಲ. ಆ ಮಾಹಿತಿಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ವಿ.ಸುನೀಲ್ ಕುಮಾರ್:-** ಮಾನ್ಯ ಸಭಾಪತಿಗಳೆ, ಮಾಹಿತಿಯನ್ನು ಒದಗಿಸಿಕೊಡಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## ಪ್ರಶ್ನೆ ಸಂಖ್ಯೆ:761
## (ಉತ್ತರವನ್ನು ಲಗತ್ತಿಸಲಾಗಿದೆ)

**ಡಾ: ವೈ.ಎ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಗಳೆ, ಸರ್ಕಾರದ ಪ್ರಕಾರ ರಾಜ್ಯದ ಅನುದಾನಿತ ಪ್ರೌಢಶಾಲೆಗಳಲ್ಲಿ ಒಟ್ಟು ೭೦೪೫ ಹುದ್ದೆಗಳು ಖಾಲಿ ಇವೆ. ಕರ್ನಾಟಕ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪಾತ್ರ ಬಹಳ ದೊಡ್ಡದಾಗಿದೆ. ಆದರೆ ಬರುವ ಎಲ್ಲಾ ಸರ್ಕಾರಗಳು ಕಾಲ-ಕಾಲಕ್ಕೆ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ನಿರ್ಲಕ್ಷ್ಯ ಧೋರಣೆಯನ್ನು ಅನುಸರಿಸುತ್ತಿವೆ. ೭೦೪೫ ಹುದ್ದೆಗಳು ಖಾಲಿ ಇದ್ದರೂ ೨೦೧೫ ಡಿಸೆಂಬರ್ ೩೧ರವರೆಗೆ ಬರಿ ೨೯೧೫ ಹುದ್ದೆಗಳನ್ನು ತುಂಬಲು ಮಾತ್ರ ಅನುಮತಿಯನ್ನು ಕೊಟ್ಟಿದ್ದಾರೆ. ಇನ್ನು ೪೧೩೫ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿಯನ್ನು ಕೊಟ್ಟಿರುವುದಿಲ್ಲ. ಅನುಮತಿ ಕೊಟ್ಟಿರುವ ೨೯೧೫ ಹುದ್ದೆಗಳನ್ನು ಪೂರ್ತಿ ತುಂಬಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಬೇರೆ-ಬೇರೆ ಹಂತಗಳಲ್ಲಿ ಇನ್ನು ೨೦೦೦ ಹುದ್ದೆಗಳು ಖಾಲಿ ಉಳಿದಿವೆ. ಸರ್ಕಾರಕ್ಕೆ ಅನುದಾನಿತ ಶಾಲೆಗಳ ಮೇಲೆ ಇರುವ ಧೋರಣೆ ಏನು? ಅನುದಾನಿತ ಶಾಲೆಗಳು ಒಳ್ಳೆಯ ಶಿಕ್ಷಣವನ್ನು ಕೊಡಬೇಕು, ಉತ್ತಮ ಫಲಿಂತಾಶವನ್ನು ತೋರಿಸಬೇಕು ಎಂದು ಸರ್ಕಾರ ಅಪೇಕ್ಷೆ ಪಡುತ್ತದೆ. ಆದರೆ ಖಾಲಿಯಾಗುತ್ತಿರುವ ಹುದ್ದೆಗಳನ್ನು ಕಾಲ ಕಾಲಕ್ಕೆ ತುಂಬಿಕೊಳ್ಳಲು ಏಕೆ ಅನುಮತಿಯನ್ನು ಕೊಡುತ್ತಿಲ್ಲ? ಸರ್ಕಾರಕ್ಕೆ ನೇರವಾಗಿ ಒಂದು ಪ್ರಶ್ನೆಯನ್ನು ಕೇಳಲು ಬಯಸುತ್ತೇನೆ, ೨೯೧೫ ಹುದ್ದೆಗಳ ಜೊತೆಗೆ ಹಾಲಿ ಖಾಲಿ ಇರುವಂತಹ ೭೦೪೫ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರ ಯಾವ ಕಾಲಮಿತಿಯೊಳಗಡೆ ಅನುಮತಿಯನ್ನು ಕೊಡುತ್ತದೆ? ವಿಶೇಷವಾಗಿ ಖಾಸಗಿ ಅನುದಾನಿತ ಶಾಲೆಗಳಲ್ಲಿ ಖಾಲಿಯಾಗುವ ಹುದ್ದೆಗಳನ್ನು ತುಂಬಿಕೊಳ್ಳದೆ ಇಷ್ಟು ವರ್ಷಗಳಿಂದ ಏಕೆ ಇಟ್ಟುಕೊಳ್ಳಲಾಗುತ್ತಿದೆ? ಹುದ್ದೆ ತುಂಬಿಕೊಳ್ಳುವುದಕ್ಕಿಂತ ಮೊದಲು ಎಷ್ಟು ಹುದ್ದೆಗಳು ಖಾಲಿಯಾಗಿವೆ ಎನ್ನುವ ಮಾಹಿತಿ ನಿಮಗೆ ಇರುತ್ತದೆ. ಅದರ ಬಗ್ಗೆ data ನಿಮ್ಮ ಹತ್ತಿರ ಇರುತ್ತದೆ. ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ೬ ತಿಂಗಳ ಮೊದಲೇ ಅನುಮತಿಯನ್ನು ಕೊಟ್ಟು, ನಿವೃತ್ತಿ ಹೊಂದುವ ಮೊದಲೇ ಆ ಹುದ್ದೆಗಳನ್ನು ತುಂಬಲು ಸರ್ಕಾರಕ್ಕೆ ಏನು ಸಮಸ್ಯೆ ಇದೆ?

**ಶ್ರೀ ಬಿ.ಸಿ.ನಾಗೇಶ್**:- ಮಾನ್ಯ ಸಭಾಪತಿಗಳೆ, ನಿಯಮಾನುಸಾರ ಮುಂದಿನ ದಿನಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಪ್ರಯತ್ನಸುತ್ತೇವೆ.

**ಡಾ: ವೈ.ಎ.ನಾರಾಯಣಸ್ವಾಮಿ**:- ಮಾನ್ಯ ಸಭಾಪತಿಗಳೆ, ಮಾನ್ಯ ಮಂತ್ರಿಗಳು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. Don't take it lightly. ಈಗ ಹಾಲಿ ಅನುಮತಿ ಕೊಟ್ಟಿರುವ ೨೯೦೦ಗಳಲ್ಲಿ ೨೦% ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿಯನ್ನು ಕೊಟ್ಟಿರುವುದಿಲ್ಲ.

ಶಿಕ್ಷಣ ಸಂಸ್ಥೆಗಳು ಶಾಲೆಗಳನ್ನು ನಡೆಸುವುದು ಹೇಗೆ ಎನ್ನುವುದಕ್ಕೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕು. ಇನ್ನೊಂದು ಸಮಸ್ಯೆ ಎಂದರೆ, ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಜಿಲ್ಲಾ ಮತ್ತು ರಾಜ್ಯ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಕೊಟ್ಟಿರುವುದಿಲ್ಲ ಎಂದು ೨೩೪ ಹುದ್ದೆಗಳನ್ನು ತುಂಬಿಕೊಳ್ಳಲು ಆಯುಕ್ತಾಲಾಯದವರು reject ಮಾಡಿದ್ದಾರೆ. ಇಲಾಖೆ ನಡೆದುಕೊಂಡು ವ್ಯವಸ್ಥೆಯಲ್ಲಿ ಯಾವುತ್ತು ಈ ಸ್ಥಿತಿ ಇರಲಿಲ್ಲ. ಮಾನ್ಯ ವಿಜಯ ಭಾಸ್ಕರ್‌ರಂತಹ ಅಧಿಕಾರಿಗಳು ಬೇರೆ ಅಧಿಕಾರಿಗಳು ಕೂಡಾ ಅನುಮತಿ ಕೊಡುತ್ತಲೇ ಬಂದಿದ್ದಾರೆ. ಆದರೆ ಈಗ ಹೊಸದಾಗಿ ಹುದ್ದೆಗಳ ಭರ್ತಿ ಬಗ್ಗೆ ರಾಜ್ಯ ಮತ್ತು ಜಿಲ್ಲಾ ಪತ್ರಿಕೆಗಳಲ್ಲಿ ಜಾಹೀರಾತು ಕೊಡಬೇಕು ಎಂದು ಮಾಡಿದ್ದಾರೆ. ಈ ರೀತಿ ಮಾಡಿ ನಿಮ್ಮ ಕಮೀಶನರ್ ಕಛೇರಿಯಲ್ಲಿ ೨೩೪ ಹುದ್ದೆಗಳನ್ನು ತುಂಬಿಕೊಳ್ಳುವುದನ್ನು reject ಮಾಡಿ ಇಟ್ಟಿದ್ದಾರೆ. ಇದಕ್ಕೆ ಯಾವಾಗ ಅನುಮತಿಯನ್ನು ಕೊಡುತ್ತೀರಿ, ಆ ಶಿಕ್ಷಕರು strike ಮಾಡುತ್ತಿದ್ದಾರೆ. ೧೦೦ ಶಿಕ್ಷಕರು ನಿವೃತ್ತಿ ಹಂತದಲ್ಲಿದ್ದಾರೆ. ಅವರ ವಯೋಮಿತಿ ಮೀರುತ್ತದೆ. ಮತ್ತೆ ಸುತ್ತಿಕೊಂಡು ಬರಲು ಆಗುವುದಿಲ್ಲ. ಮಾನ್ಯ ಸಭಾಪತಿಗಳ ಅಧ್ಯಕ್ಷತೆಯಲ್ಲಿ ಈ ವಿಷಯವಾಗಿ ಚರ್ಚೆಯನ್ನು ಮಾಡಲಾಗಿತ್ತು. ಆದರೂ ಯಾವುದೇ ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ. ಜಾಹೀರಾತಿನ ವಿಷಯವಾಗಿ ಪೆಂಡಿಂಗ್ ಇರುವ ೨೩೪ ಹುದ್ದೆಗಳನ್ನು ತುಂಬಿಕೊಳ್ಳಲು ಯಾವಾಗ ಅನುಮತಿಯನ್ನು ಕೊಡುತ್ತಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೇ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು Director, Department of Pre-University Education ಬಹಳ ಕೆಟ್ಟದಾಗಿ ಇಲ್ಲ ಸಲ್ಲದ query ಗಳನ್ನು ಹಾಕಿ, ಹಣಕಾಸು ಇಲಾಖೆಯವರು ಅನುಮತಿ ಕೊಟ್ಟರು ಹುದ್ದೆಗಳನ್ನು ತುಂಬಿಕೊಳ್ಳಲು ಬಿಡುತ್ತಿಲ್ಲ. ಈ ಇಬ್ಬರು ಅಧಿಕಾರಿಗಳನ್ನು ಮಾನ್ಯ ಮಂತ್ರಿಗಳು ಕರೆದು ಮಾತನಾಡಬೇಕು. Three Men Committee ಯಲ್ಲಿ Deputy CEO ಅಧ್ಯಕ್ಷರಾಗಿರುತ್ತಾರೆ. Deputy CEO ಇವರು ಐಎಎಸ್ ಅಧಿಕಾರಿಗಳು. ಅಲ್ಲಿರುವ ಐಎಎಸ್ ಅಧಿಕಾರಿಗಳು ಮಾಡಿರುವುದಕ್ಕೆ ಇಲ್ಲಿ ಇರುವ ಐಎಎಸ್ ಅಧಿಕಾರಿ query ಹಾಕಿದ್ದಾರೆ. ಈ ರೀತಿ ಎಲ್ಲೇಲಿ ಆ ಅಧಿಕಾರಿಗಳು query ಹಾಕಿದ್ದಾರೆ ಅವುಗಳನ್ನು ಸರಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಮುನಿರಾಜು ಗೌಡ ಪಿ.ಎಂ**:- ಮಾನ್ಯ ಸಭಾಪತಿಗಳೆ, ೨೩೪ ಹುದ್ದೆಗಳನ್ನು ತುಂಬಿಕೊಳ್ಳುವ ವಿಚಾರದಲ್ಲಿ ಕೇವಲ ಪತ್ರಿಕೆಗಳಲ್ಲಿ ಸರಿಯಾಗಿ ಜಾಹೀರಾತನ್ನು ಕೊಟ್ಟಿಲ್ಲ ಎನ್ನುವ ಕಾರಣ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿಯನ್ನು ಕೊಡದೆ ಇರುವುದು ಇದೊಂದು ಜ್ವಲಂತ ಸಮಸ್ಯೆಯಾಗಿದೆ. ಹುದ್ದೆಗಳನ್ನು ತುಂಬಿಕೊಳ್ಳದೆ ಹಾಗೆ ಪೆಂಡಿಂಗ್ ಇಟ್ಟಿರುವುದು ದುರದೃಷ್ಟಕರವಾಗಿ ಸಂಗತಿಯಾಗಿದೆ. ಅಧಿಕಾರಿಗಳ ಮೇಲೆ control ಇಡಬೇಕಾಗುತ್ತದೆ. ಕಾನೂನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕಾರ ಮಾಡುತ್ತೇನೆ ಎಂದು ಹೇಳುವುದು ಸರಿಯಲ್ಲ. ಈಗಾಗಲೇ ಎಲ್ಲವು ಕಾನೂನು ಪ್ರಕಾರವೇ ಆಗಿದೆ. ಮತ್ತೆ ಅವರು ೧೦ ರಿಂದ ೧೫ ವರ್ಷ ಹಿಂದಕ್ಕೆ ಹೋಗಿ ಮತ್ತೆ ಜಾಹೀರಾತು ಕೊಟ್ಟು ಮಾಡಲು ಆಗುವುದಿಲ್ಲ. ವೇತನವನ್ನು ತೆಗೆದುಕೊಳ್ಳದೆ ಅವರು ೧೦ ರಿಂದ ೧೫ ವರ್ಷಗಳಿಂದ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಈಗ ಅವರು ಹೋರಾಟ ಮಾಡುತ್ತಿದ್ದಾರೆ. ಅವರಿಗೆ ಒಂದು ತಿಂಗಳ ಅವಧಿಯಲ್ಲಿ appointment order ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ ಎಂದು ಮಾನ್ಯ ಸಚಿವರು ಈ ಸದನದಲ್ಲಿ ಈಗ ಭರವಸೆಯನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

(ಮುಂದು)

(1167)20-12-2021(01-40)bsd-bns

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಬಾವಿಯಲ್ಲಿ "ನೀತಿಗೆಟ್ಟ ಸರ್ಕಾರಕ್ಕೆ ಧಿಕ್ಕಾರ", "ಕುಲಗೆಟ್ಟ ಸರ್ಕಾರಕ್ಕೆ ಧಿಕ್ಕಾರ", "ಅಪರಾಧಿ ಸಚಿವರನ್ನು ರಕ್ಷಿಸುತ್ತಿರುವ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ" ಎಂಬ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಶಿಕ್ಷಣಾಧಿಕಾರಿಗಳ ನಿಲುವು " ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು" ಎಂಬಂತೆ ಇದೆ. ಒಂದು ಬಾರಿ SSLC result ಇಲ್ಲ ಎಂದು reject ಮಾಡಿದರು. ಇನ್ನೊಂದು ಬಾರಿ roster ಪಾಲನೆಯಾಗಿಲ್ಲ ಎಂದು reject ಮಾಡಿದರು. ಈಗ ಯಾವ ಪತ್ರಿಕೆಯಲ್ಲಿ advertisement ಮಾಡಬೇಕು ಎಂಬ ಬಗ್ಗೆ ೨-೩ ವರ್ಷಗಳಿಂದ ಇಲಾಖೆಗೆ ಅಲೆದು ಅವರ ಚಪ್ಪಲಿಗಳು ಸವೆದು ಹೋಗಿವೆ. ಈಗ ಪತ್ರಿಕೆ ಯಾವ edition ನಲ್ಲಿರಬೇಕು ಎಂಬ ಬಗ್ಗೆ..... ಧಾರವಾಡ Commissionerate ವ್ಯಾಪ್ತಿಯಲ್ಲಿ ೨೪ ಸಂಸ್ಥೆಗಳ ೩೭ ಹುದ್ದೆಗಳನ್ನ ತಿರಸ್ಕಾರ ಮಾಡಿರುವ ಸಂಗತಿ ತಮಗೂ ಗೊತ್ತಿದೆ. ಪ್ರಥಮವಾಗಿ ಎಲ್ಲಾ ಪ್ರಸ್ತಾವನೆಗಳನ್ನು ಪುನರ್ ಪರಿಶೀಲನೆ ಮಾಡಬೇಕು. Reject ಮಾಡಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಎರಡನೆಯದಾಗಿ ತಮ್ಮ ನೇತೃತ್ವದಲ್ಲಿ ಒಂದು ಸಭೆ ನಡೆದು, ಈ advertisement ಅನ್ನು redesign ಮಾಡಬೇಕೆಂದು ಸಂಗತಿ ಬಗ್ಗೆ ತಾವು ಹೇಳಿದ್ದಿರಿ. ಹಿಂದೆ ಸಭೆ ಕರೆದ ಸಂದರ್ಭದಲ್ಲಿ ಅಧಿಕಾರಿಗಳು ಒಪ್ಪಿಕೊಂಡು ಹೋಗಿದ್ದರು. ನಾನು ತಮ್ಮ ಕೈಗೆ ಪತ್ರಿಕೆಯನ್ನು ಕೊಡುತ್ತೇನೆ, ಅದರಲ್ಲಿ ಯಾವ page ಮತ್ತು edition ಎಂದು ಅಧಿಕಾರಿಗಳು ಹೇಳಲಿ. ಅವರು ಪತ್ರಿಕೆಯನ್ನು ಓದಿ ಇಂತಹ edition ಎಂದು ಹೇಳಿದರೆ ತಾವು ಹೇಳಿದಂತೆ ನಾನು ಕೇಳಲು ತಯಾರಿದ್ದೇನೆ. ವಿನಾಃಕಾರಣ ಗೊಂದಲ ಉಂಟು ಮಾಡಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ೭,೦೦೦ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಉಳಿಸಿರುವುದು ಅಪರಾಧವಾಗಿದೆ. ಇದಕ್ಕೆ ಶಿಕ್ಷಣಾಧಿಕಾರಿಗಳು ಬೆಲೆ ತೆರಬೇಕಾಗಿದ್ದು, ಈ ಹಿನ್ನಲೆಯಲ್ಲಿ ಅವರ ವಿರುದ್ಧ ಕ್ರಮ ಜರುಗಿಸಬೇಕೆಂಬ ಆಗ್ರಹ ಮಾಡುತ್ತೇನೆ. ಆದಷ್ಟು ಬೇಗ ತಿರಸ್ಕಾರಗೊಂಡಿರುವ ಪ್ರಸ್ತಾವನೆಗಳಿಗೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮರು ಜೀವ ನೀಡಬೇಕು, ಪುನರ್ ಪರಿಶೀಲನೆ ಮಾಡಿ ಅನುದಾನಕ್ಕೆ ಒಳಪಡಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ವಿನಂತಿಸುತ್ತೇನೆ.

**ಶ್ರೀ ಶಶಿಲ್ ಜಿ** ನಮೋಶಿ **(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಹಂತದಲ್ಲಿ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದ್ದು, ಎಲ್ಲಾ ವಿಷಯಗಳ ಬಗ್ಗೆ ಮಾನ್ಯ ಮಂತ್ರಿಗಳ ಗಮನದಲ್ಲಿದೆ. ಹತ್ತಾರು ವರ್ಷಗಳಿಂದ ಅವರು ಸೇವೆಯಲ್ಲಿದ್ದು, ಇನ್ನೂ ಎಷ್ಟು ವರ್ಷಗಳ ಕಾಲ ಕಾಯಬೇಕು? ಇದಕ್ಕೆ ಏನಾದರೂ ಒಂದು time limit ಇಲ್ಲವೇ? ಎಲ್ಲಿಯವರೆಗೂ ಹೀಗೆಯೇ ಮುಂದುವರೆಸುತ್ತಾರೆ? ಒಂದು ತಿಂಗಳೊಳಗೆ ಕ್ರಮ ಕೈಗೊಳ್ಳುವ ಉತ್ತರವನ್ನು ನಾವು ಮಾನ್ಯ ಸಚಿವರಿಂದ ಬಯಸುತ್ತಿದ್ದೇವೆ. ದಯವಿಟ್ಟು ಈ ಉತ್ತರವನ್ನು ಕೊಟ್ಟು, ಆದಷ್ಟು ಬೇಗ ಇತ್ಯರ್ಥ ಮಾಡಿ ಮುಕ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮುಂದಿನ ಹುದ್ದೆಗಳಿಗೆ ಅಂದರೆ ೨೦೧೫ರ ನಂತರದ ಹುದ್ದೆಗಳಿಗೆ ಅವರು ಯಾವ ನಿಯಮವನ್ನಾದರೂ ಮಾಡಲಿ, ಅದನ್ನು management ಗಳಿಗೆ ಹೇಳೋಣ. ಆದರೆ ಇಲ್ಲಿಯವರೆಗೆ ಮೊದಲು ಮಾಡುತ್ತಿದ್ದಂತೆ ಮುಂದುವರೆಸಬೇಕು. ಇದಕ್ಕೆ ಒಂದು ಸಮಯ ಕೊಟ್ಟು, ಒಂದು ತಿಂಗಳೊಳಗೆ ಮುಕ್ತಾಯ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಸಭಾಪತಿಯವರೇ, ಇದು ೧೯೯೫ರ ನಿಯಮವಾಗಿದ್ದು, ಇದರ ಪ್ರಕಾರ ರಾಜ್ಯ ಮತ್ತು ಜಿಲ್ಲಾ ಪತ್ರಿಕೆಗಳಲ್ಲಿ advertisement ಕೊಡಬೇಕೆಂದು ಇದೆ. ಇದರ ಬಗ್ಗೆ ತಮ್ಮ ನೇತೃತ್ವದಲ್ಲಿ ಸಭೆ ಮಾಡಿ ಹೇಗೆ one time settlement ಮಾಡಬೇಕೆಂದು ನಡೆದಿತ್ತು. ನಂತರ ಮಾನ್ಯ ಮುಖ್ಯಮಂತ್ರಿಗಳ ಜೊತೆ ಕುಳಿತು ನಾವೆಲ್ಲರೂ ಮಾತನಾಡೋಣ ಎಂದು ಆಗಿತ್ತು. ಸದ್ಯದಲ್ಲಿ ಅದನ್ನು ಪೂರ್ತಿ ಮಾಡಿ one time settlement ಎನ್ನುವಂತೆ ಏನಾದರೂ ಒಂದು ಪ್ರಯತ್ನವನ್ನು ಮಾಡೋಣ.

**ಸಭಾಪತಿಯವರು:-** ಇದೊಂದು ಬಾರಿ ಕೊಟ್ಟು ಮುಗಿಸಿ, next time strict ಆಗಿ ಮಾಡಿ.

**ಶ್ರೀ ಶಶಿಲ್ ಜಿ ನಮೋಶಿ:-** ಇದೊಂದು ಬಾರಿ ಮಾಡಲಿ, 'yes sir' ಎಂದು ಮಾನ್ಯ ಸಚಿವರು ಹೇಳಿಬಿಡಲಿ.

**ಶ್ರೀ ಬಿ.ಸಿ. ನಾಗೇಶ್:-** ಮಾನ್ಯ ಮುಖ್ಯಮಂತ್ರಿಗಳ ಜೊತೆ ಸದ್ಯದಲ್ಲಿ ಸಭೆ ಮಾಡುವ ನಿಶ್ಚಯ ಮಾಡೋಣ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## <u>ತಡೆಹಿಡಿಯಲಾದ ಪ್ರಶ್ನೆಗಳು</u>

### ಪ್ರಶ್ನೆ ಸಂಖ್ಯೆ: 321
### (ಉತ್ತರದ ಪ್ರತಿ ಲಗತ್ತಿಸಿದೆ)

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಅತ್ಯಂತ ನೇರವಾಗಿದ್ದು, ಕೋವಿಡ್-೧೯ನಿಂದಾಗಿ ೨೦೨೦ ಇಸ್ವಿಯಿಂದ ಇತ್ತೀಚಿನವರೆಗೆ ಶಾಲೆಗಳು ಪ್ರಾರಂಭವಾಗುವವರೆಗಿನ ಮಕ್ಕಳಲ್ಲಿನ ಖಿನ್ನತೆ ಬಗ್ಗೆ, behavioural challenges ಬಗ್ಗೆ ಅಧ್ಯಯನ ಮಾಡಲಾಗಿದೆಯೇ ಎಂದು ಕೇಳಿದ್ದು, ಇಲಾಖೆಯು ಉತ್ತರದಲ್ಲಿ ಮಾಡಿಲ್ಲ ಎಂದು ಹೇಳಿದೆ. ದಯಮಾಡಿ ಇದನ್ನು ಅಧ್ಯಯನ ಮಾಡದಿದ್ದರೆ ಮಕ್ಕಳ ಕಲಿಕಾ ಸಾಮರ್ಥ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಮತ್ತು ಮಕ್ಕಳಿಗೆ ಒಂದು ರೀತಿಯ ಕೀಳರಿಮೆ ಕಾಡುತ್ತದೆ. ಕೋವಿಡ್ ಸಲುವಾಗಿ ಮನೆಯಲ್ಲಿಯೇ ಇರಬೇಕಾದ ಹಾಗೂ ಚಟುವಟಿಕೆಗಳು ಇಲ್ಲದೇ ಇರುವ ಸಂದರ್ಭದಲ್ಲಿ ಅವರ behavioural challenges ಬಗ್ಗೆ ಅಧ್ಯಯನ ನಡೆಸಬೇಕೆಂದು ಕೇಳುತ್ತೇನೆ.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದು, ಮಕ್ಕಳ ಕಲಿಕೆ ಮೇಲೆ ಯಾವ ರೀತಿ ಪರಿಣಾಮ ಬೀರಿದೆ, ಇಷ್ಟು ದಿವಸ ನಾವು ಶಾಲೆಯನ್ನು ಪ್ರಾರಂಭ ಮಾಡುವ ಹಂತದಲ್ಲಿದ್ದೇವೆ. ಒಂದೂವರೆ ವರ್ಷದಿಂದ ಶಾಲೆಗೆ ಮಕ್ಕಳು ಬಂದಿರಲಿಲ್ಲ, ಹಂತಹಂತವಾಗಿ ಎಲ್ಲಾ ಮಟ್ಟದ ಶಾಲೆಗಳನ್ನು ಪ್ರಾರಂಭ ಮಾಡಿದ್ದು, ಈಗ ಮಕ್ಕಳು ಶಾಲೆಗೆ ಬರುತ್ತಿವೆ. ಅವರ academic loss ಅನ್ನು study ಮಾಡುವ ಪ್ರಯತ್ನವನ್ನು ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಈ loss ಅನ್ನು ಹೇಗೆ ಸರಿಮಾಡಬೇಕು ಎನ್ನುವ ಪ್ರಯತ್ನವನ್ನು ಖಂಡಿತ ಮಾಡುತ್ತೇವೆ. ಇದಕ್ಕೋಸ್ಕರ ತಜ್ಞರ ವರದಿಯನ್ನು ಈ ವಿಷಯದಲ್ಲಿ ತೆಗೆದುಕೊಂಡು, ಮಕ್ಕಳ ಶಿಕ್ಷಣದ loss ಅನ್ನು ಸರಿಮಾಡುವ ಪ್ರಯತ್ನ ಮಾಡುತ್ತೇನೆ.

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, online ಶಿಕ್ಷಣದಿಂದಾಗಿ ಮಕ್ಕಳು ಅನಿವಾರ್ಯವಾಗಿ mobile ಅನ್ನು ಉಪಯೋಗ ಮಾಡುವ ಸಂದರ್ಭ ಒದಗಿ ಬಂತು. ಒಮ್ಮೆ online ಶಿಕ್ಷಣದಲ್ಲಿ ಕಲಿಕೆಗಾಗಿ mobile use ಮಾಡಿದ ಮೇಲೆ ಮಕ್ಕಳು mobile use ಗೆ addict ಆಗಿದ್ದಾರೆ. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಯಾವುದು ಒಳ್ಳೆಯದು, ಯಾವುದು ಬೇಡ ಎನ್ನುವ ನಿರ್ಧಾರ ಮಾಡುವ ಸ್ವಯಂ ಸಾಮರ್ಥ್ಯ ಇರುವುದಿಲ್ಲ. ಹೀಗಾಗಿ ಆರೋಗ್ಯ ಮತ್ತು addiction ನಿಂದ ಹೊರಬರಲು ಹಾಕಿಕೊಳ್ಳುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇದನ್ನು ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಇಲಾಖೆ ಜಂಟಿಯಾಗಿ ಮಾಡಬೇಕೆಂಬ ಬೇಡಿಕೆಯನ್ನಿಡುತ್ತಿದ್ದೇನೆ.

ಅದೇರೀತಿ ಹಿರಿಯ ನಾಗರಿಕರು ಅಸಹಾಯಕತೆಯಿಂದ ಮನೆಯಲ್ಲಿಯೇ ಇರುವ ಅಂದರೆ confinement situation ಎಂದು ಕೇಳಿದ್ದೇನೆ, ಅಂತಹ ಪರಿಸ್ಥಿತಿ ಇದೆ. ಅಂದರೆ ಗೃಹ ಬಂಧಿ ಅಲ್ಲ,

ಗೃಹ ಬಂಧಿಯಾಗಿ ಇರಬೇಕಾದ ಅಸಹಾಯಕತೆ ಉಂಟಾಗಿದೆ. ಸರ್ಕಾರವು ಉತ್ತರದಲ್ಲಿ ಒಂದು word use ಮಾಡಿದ್ದು, ಆ ನಿರ್ಗತಿಕರು ಎಂಬ ಪದವನ್ನು withdraw ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಿರ್ಗತಿಕ ಹಿರಿಯ ನಾಗರಿಕರು ಎನ್ನುವ ಬದಲು ಅಸಹಾಯಕ ಹಿರಿಯ ನಾಗರಿಕರು ಎನ್ನುವ ಪದ ಬಳಸಿದರೆ ಒಳ್ಳೆಯದು. ಕರ್ತವ್ಯದ ವೇಳೆ ಮನೆಯಿಂದ ಹೊರಗೆ ಹೋಗುವವರು ಕೋವಿಡ್-೧೯ ನಿಂದಾಗಿ ಮನೆಯಲ್ಲಿ ಇರಬೇಕಾಗಿ ಬಂದಾಗ ಏಕತಾನತೆ, ಒಂಟಿತನ ಕಾಡುತ್ತದೆ. ನನ್ನ ಸಲಹೆ ಏನೆಂದರೆ, ಹೊರಗೆ ವೈದ್ಯಕೀಯ ಸೌಲಭ್ಯ ದೊರೆಯುವಂತಹ recreation centre ಗಳಲ್ಲಿ ಅವರಿಗೆ ಚಿಕಿತ್ಸೆ ಸಿಗಬೇಕು. ಊಟ ಮತ್ತು ಆರೈಕೆ ಸಿಗಬೇಕು. Working hours ಆದ ಮೇಲೆ ಮನೆಗೆ ಹೋಗುವಂತಾಗಬೇಕು. ಇದನ್ನು ಸ್ವಯಂಸೇವಾ ಸಂಸ್ಥೆಗಳಿಗೆ ಬಿಟ್ಟಿದ್ದು, ಈ ಹೊಣೆಗಾರಿಕೆಯನ್ನು ಸರ್ಕಾರವು ಹೊರಬೇಕು. ಖಾಸಗಿ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಬಿಡಬಾರದು. ಹಿರಿಯ ನಾಗರಿಕರ ಹೊಣೆಗಾರಿಕೆ ಸರ್ಕಾರದ ಹೊಣೆಗಾರಿಕೆಯಾಗಬೇಕು. ಅವರ contribution ಅನ್ನು ಪರಿಗಣಿಸಿ, ಅವರ ಸಂಧ್ಯಾಕಾಲದಲ್ಲಿ ಗೌರವಯುತ dignified ಜೀವನವನ್ನು ಒದಗಿಸಬೇಕೆಂಬ ನಿಟ್ಟಿನಲ್ಲಿ ಯಾವುದೇ ಕ್ರಮ ಕಾಣುತ್ತಿಲ್ಲ. ಇವುಗಳನ್ನು ಮಾಡಬೇಕೆಂದು ಆಗ್ರಹ ಮಾಡುತ್ತೇನೆ.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಕೋವಿಡ್-೧೯ ಕಾಲದಲ್ಲಿ ೧ ರಿಂದ ೧೦ನೇ ತರಗತಿ ಮಕ್ಕಳಿಗೆ DD1 ಮತ್ತು radio ಮೂಲಕ ಶಿಕ್ಷಣ ಕೊಡುವ ಪ್ರಯತ್ನ ಮಾಡಿದ್ದೇವೆ. ಆದರೆ ಮಾನ್ಯ ಸದಸ್ಯರು ಹೇಳಿದಂತೆ mobile ಬಳಕೆ ಮಕ್ಕಳಲ್ಲಿ ರೂಢಿಯಾಗಿರುವುದು ನಿಜ. ಶಾಲೆಗಳಲ್ಲಿ ಅದರ ಪರಿಣಾಮದ ಬಗ್ಗೆ ಶಿಕ್ಷಕರು ತಿಳಿಸುವ ಪ್ರಯತ್ನ ಮಾಡಿ, ಅದರ ಬಳಕೆಯನ್ನು ಕಡಿಮೆ ಮಾಡುವ ಪ್ರಯತ್ನವನ್ನು ಮಾಡುತ್ತೇವೆ. ಹಿರಿಯ ನಾಗರಿಕರಿಗೆ ವಯಸ್ಸಾಗಿದ್ದು, ಕೋವಿಡ್ ಕಾಲದಲ್ಲಿ ಹೊರಗೆ ಬಂದರೆ ಸೋಂಕು ತಗಲಬಹುದೆಂಬ ಕಾರಣಕ್ಕಾಗಿ ಹೊರಗೆ ಬರಬಾರದೆಂಬ ನಿಯಮ ಮಾಡಲಾಗಿತ್ತು. ಮಾನ್ಯ ಸದಸ್ಯರು ಹೇಳಿದಂತಹ ಪದವನ್ನು ತೆಗೆದುಹಾಕುವ ಕೆಲಸವನ್ನು ಖಂಡಿತ ಮಾಡೋಣ.

<u>**ಪ್ರಶ್ನೆ ಸಂಖ್ಯೆ 455**</u>

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ನಾಳಿದ್ದು ಕೊಡಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 20ನೇ ಡಿಸೆಂಬರ್ 2021ರ ಸಮೂಹ 1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 147 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

(ಉತ್ತರಗಳನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು

**ಅ) ವಿಷಯ:- ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ ಹಾಗೂ ಇನ್ನಿತರೆ ಕಾರಣಗಳಿಂದ ಖಾಲಿಯಾಗಿರುವ ಬೋಧಕರ ಹುದ್ದೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮತ್ತು ಜಾಹೀರಾತು ನೀಡುವ ಸಂಬಂಧ ಗೊಂದಲ ಸೃಷ್ಟಿಯಾಗಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಕುಟುಂಬಗಳು ಸಂಕಷ್ಟದಲ್ಲಿರುವುದರಿಂದ ನೇಮಕಾತಿಯಲ್ಲಿ ಆಗಿರುವ ತೊಂದರೆ ಬಗ್ಗೆ.**

---------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಹಣಮಂತ ಆರ್. ನಿರಾಣಿ ರವರು ದಿನಾಂಕ ೧೫-೧೨-೨೦೨೧ ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಆ)ವಿಷಯ:- ಕೋಲಾರ ನಗರದ ದರ್ಗಾ ಮೊಹಲ್ಲಾದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೂಲ ಸೌಕರ್ಯಗಳ ಕೊರತೆ ಬಗ್ಗೆ**

--------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ):-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಗೋವಿಂದರಾಜು ರವರು ದಿನಾಂಕ ೧೫-೧೨-೨೦೨೧ ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಶೂನ್ಯವೇಳೆ ಶ್ರೀ ಯು.ಬಿ.ವೆಂಕಟೇಶ್ ವಿಷಯವನ್ನು ಪ್ರಸ್ತಾಪಿಸಿ, ನಂತರ ಶ್ರೀ ಪ್ರತಾಪ ಚಂದ್ರ ಶೆಟ್ಟಿಯವರು ವಿಷಯವನ್ನು ಪ್ರಸ್ತಾಪಿಸಿ.

ಈಗ ಸದನವನ್ನು 3 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡಲಾಯಿತು)**

(1168) 20-12-2021 3.20 DS-GR

**(ಸದನವು ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ 3 ಗಂಟೆ 25 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**(ಸದನ ಪ್ರಾರಂಭವಾಗುತ್ತಿದ್ದಂತೆ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿ ಧರಣಿ ಕುಳಿತರು)**

**5. ವಿಷಯ: ಎಂ.ಇ.ಎಸ್. ಪುಂಡರ ಹಾವಳಿ ಬಗ್ಗೆ ಸದನದಲ್ಲಿ ಚರ್ಚಿಸಲು ಅವಕಾಶ ನೀಡಬೇಕೆನ್ನುವ ಬಗ್ಗೆ.**

---------

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ಬೆಳಗ್ಗೆ ಚರ್ಚೆ ಮಾಡಿದ್ದೆ. ತಾವು ಅದಕ್ಕೆ ಒಪ್ಪಿಗೆ ಸೂಚಿಸಿ ನಾಳೆ ಇಡೀ ದಿವಸ ಪೂರ್ತಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೀರಿ. ಅದಕ್ಕಾಗಿ ನಾನು ವಿಶೇಷವಾಗಿ ಇಡೀ ಉತ್ತರ ಕರ್ನಾಟಕದ ಸಮಸ್ತ ಜನತೆಯ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅದರ ಜೊತೆಗೆ ಎಂ.ಇ.ಎಸ್. ಪುಂಡರು ವೀರಯೋಧ ರಾಣಿ ಚೆನ್ನಮ್ಮರವರ ಬಲಗೈ ಭಂಟ, ವೀರ ಸ್ವಾತಂತ್ರ್ಯ ಹೋರಾಟಗಾರ ಮತ್ತು ಬ್ರಿಟಿಷರಿಗೆ ಚಳ್ಳೆಹಣ್ಣು ತಿನ್ನಿಸಿದಂತಹ ಶ್ರೀಯುತ ಸಂಗೊಳ್ಳಿ ರಾಯಣ್ಣರವರ ಮೂರ್ತಿಯನ್ನು ಭಗ್ನ ಮಾಡಿರುವುದನ್ನು ನೋಡಿದರೆ ಇವೆಲ್ಲಾ ದುಃಖಪಡುವಂತಹ ಸಂಗತಿಯಾಗಿದೆ. ಅಷ್ಟೇ ಅಲ್ಲ, ಶಿವಾಜಿಯ ಪ್ರತಿಮೆಗೆ ಮಸಿ ಬಳಿಯುವಂತಹ ಕೆಲಸ - ಇವೆಲ್ಲವನ್ನು ನಾವು ಖಂಡಿಸಬೇಕಾಗುತ್ತದೆ ಮತ್ತು ಕನ್ನಡ ನಾಡಿನ ಬಾವುಟವನ್ನು ಸುಡುವಷ್ಟರ ಮಟ್ಟಿಗೆ ಉದ್ಧಟತನ ಮಾಡುತ್ತಾರೆಂದರೆ ಇವರನ್ನು ಯಾರು ಹೇಳುವವರು, ಕೇಳುವವರು ಇಲ್ಲ ಎಂದು ಕಾಣಿಸುತ್ತಿದೆ. ಸರ್ಕಾರ ಇದರ ಬಗ್ಗೆ ಸೂಕ್ತವಾದಂತಹ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಒಂದು ದೃಷ್ಟಿಯಲ್ಲಿ ಸರ್ಕಾರದ ವೈಫಲ್ಯ ಎಂದು ನಾನು ಹೇಳಬಯಸುತ್ತಿದ್ದೇನೆ. ಯಾರೇ ತಪ್ಪು ಮಾಡಿರಲಿ, ಅವರಿಗೆ ಸರಿಯಾದಂತಹ ಶಾಸ್ತಿ ಮಾಡಬೇಕು. ಅವರನ್ನು ಶಿಕ್ಷೆಗೆ ಒಳಪಡಿಸುವಂತಹ ಕೆಲಸ ಆಗಬೇಕು. ಇದರ ಬಗ್ಗೆ ಸರ್ಕಾರ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಬೇಕು. ಅದಕ್ಕೆ ನಾನು ಪೀಠಿಕೆಯಾಗಿ ಹೇಳುತ್ತಿದ್ದೇನೆ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ಏನು ವಿಷಯವನ್ನು ತಂದಿದ್ದಾರೆ, ಅದು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಮುಖವಾದದ್ದು. ಅದನ್ನು ಪ್ರಾರಂಭ ಮಾಡುವುದಕ್ಕೆ ನಾನು ಅನುಮತಿಯನ್ನು ನೀಡುತ್ತೇನೆ. ನಾನು ತಮಗೆಲ್ಲರಿಗೂ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಬೆಲ್ ಹೊಡೆದ ತಕ್ಷಣ ಕುಳಿತುಕೊಳ್ಳಬೇಕು. ಐದೈದು ನಿಮಿಷ ಮಾತನಾಡಿ, ಎಲ್ಲರೂ ಅರ್ಧ ಗಂಟೆ ಮಾತನಾಡಿದರೆ ಆಗುವುದಿಲ್ಲ. ನಾನು ಅನುಮತಿ ಕೊಡುತ್ತೇನೆ, ಆಸಕ್ತಿಯುಳ್ಳವರೆಲ್ಲರೂ ಮಾತನಾಡಿ. ಇದೇ ವಿಷಯದ ಬಗ್ಗೆ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ನಿಯಮ ೬೮ ಕ್ಕೆ ಪರಿವರ್ತನೆ ಮಾಡಿದ್ದೇನೆ. ಅದಕ್ಕೆ ಈಗ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮಾತನಾಡಲಿ. ನಂತರ ತಾವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರೆಲ್ಲರೂ ಬಾವಿಯಲ್ಲಿದ್ದಾರೆ.

**ಸಭಾಪತಿಯವರು:-** ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇವತ್ತು ಬೆಳಗ್ಗೆ ನಾವು ಕೇಳಿದ್ದಕ್ಕೆ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆ ಬಗ್ಗೆ ಮಾತನಾಡುವುದಕ್ಕೆ ನಾಳೆ ಪೂರ್ತಿ ದಿನ ನಿಗದಿ ಮಾಡಿದ್ದೀರಿ. ಅದೇ ರೀತಿ ನಾವು ಪ್ರಮುಖವಾಗಿ ಎಂ.ಇ.ಎಸ್. ಪುಂಡರ ಕನ್ನಡದ ಬಾವುಟವನ್ನು ಸುಟ್ಟು ಹಾಕಿರುವುದರ ಬಗ್ಗೆಯೂ ನಾವು ಮಾತನಾಡಬೇಕಾಗಿದೆ. ಅದಕ್ಕೆ ತಾವು ಹೇಳಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ನಿಯಮ 68 ಅಡಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ನಾವು ತಮಗೆ ಕೇಳಿದ್ದೆವು. ನಮ್ಮನ್ನು ಸಂಧಾನ ಮಾಡುವುದಕ್ಕೆ ಕರೆದಂತಹ ಸಂದರ್ಭದಲ್ಲಿ ಆಡಳಿತ ಪಕ್ಷದ ನಾಯಕರಿಗೆ ಹೇಳಿದಿರಿ, ನಾನು ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿ ಆಮೇಲೆ ನಿಯಮದ ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಬರುತ್ತದೆಯೋ ಇಲ್ಲವೋ ಎನ್ನುವ ತೀರ್ಮಾನ ಮಾಡುತ್ತೇನೆಂದು ತಾವು ಹೇಳಿದ್ದೀರಿ. ಸರ್ಕಾರದ ಜೊತೆಯಲ್ಲಿ ತಾವು ಮಾತನಾಡಿದ್ದೀರೋ ಇಲ್ಲವೋ ಎಂಬುದು ನನಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿಲ್ಲ. ಇದರ ಬಗ್ಗೆ ಅರ್ಧ ಗಂಟೆಯಾದರು ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

(ಮುಂದು)

1169/20-12-2021/3-30/bkp-md (ಸಭಾಪತಿಯವರು ಪೀಠದಲ್ಲಿದ್ದರು)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ಬಹಳ ಗಂಭೀರವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಪ್ರತಿಮೆಗೆ ಮತ್ತು ಶಿವಾಜಿ ಮಹಾರಾಜರ ಪ್ರಿತಿಮೆಗೆ ಆಗಿರುವಂತಹ ಅಗೌರವದ ಬಗ್ಗೆ ಇಡೀ ರಾಜ್ಯ ಒಟ್ಟಾಗಿ, ಒಂದಾಗಿ ಕೆಲಸ ಮಾಡಬೇಕು, ಅಂತಹ ಪುಂಡಾಟಿಕೆಯನ್ನು ನಿಲ್ಲಿಸಲಿಕ್ಕೆ ಆಗ್ರಹ ಮಾಡಲಿಕ್ಕೆ ನಾವು ಸಿದ್ಧರಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ ಮತ್ತೆ ಈ ವಿಚಾರದಲ್ಲಿ ಗೊಂದಲಗಳು ಬೇಡ. ದಯವಿಟ್ಟು ವಿರೋಧ ಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡುವುದೇನೆಂದರೆ ಬಾವಿಯಿಂದ ಹೊರಗಡೆ ಬಂದು ಒಟ್ಟಾಗಿ ಎಲ್ಲರೂ ಚರ್ಚೆ ಮಾಡೋಣ. ತಾವು ಈ ವಿಚಾರದಲ್ಲಿ ಏನು ಹೇಳುತ್ತೀರಿ, ಏನು ಅಭಿಪ್ರಾಯ ಹೇಳುತ್ತೀರಿ, ಅದರ ಬಗ್ಗೆ ಸರ್ಕಾರ ಚರ್ಚೆ ಮಾಡಲಿಕ್ಕೆ ಸಿದ್ಧವಿದೆ. ಮತ್ತೆ ನೀವು ಚರ್ಚೆ ಮಾಡುವಂತಹ ವಿಷಯದಲ್ಲಿ ಅಡಕವಾಗಿರುವ ವಿಷಯವನ್ನು ಕೂಡ ಸರ್ಕಾರ ಒಪ್ಪಿಕೊಳ್ಳುತ್ತದೆ. ಬೇರೆ ಬೇರೆ ಕಾರಣಗಳಿಗೋಸ್ಕರ ಇಂತಹ ದಾಂಧಲೆ ಮಾಡುವುದನ್ನು ಬಹಳ ದಿವಸಗಳ ಕಾಲ ಬಿಡಲಿಕ್ಕೆ ಆಗುವುದಿಲ್ಲ. ಆ ಕಾರಣಕ್ಕೆ ಚರ್ಚೆಗೆ ತೆಗೆದುಕೊಳ್ಳೋಣ. ಈ ಸಮಸ್ಯೆಗಳನ್ನು ಒಟ್ಟಾಗಿ ಚರ್ಚೆ ಮಾಡೋಣ. ಆದ್ದರಿಂದ ತಮ್ಮ ಮೂಲಕ ನಾನು ವಿನಂತಿ ಮಾಡುವುದೇನೆಂದರೆ ಬಾವಿಯಿಂದ ಹೊರಗಡೆ ಬಂದು ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಈಗ ಚರ್ಚೆಗೆ ಸಿದ್ಧವೆಂದು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾನು ನಿಮ್ಮ ಪ್ರಸ್ತಾಪದ ಬಗ್ಗೆ ಹೇಳಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಪ್ರಸ್ತಾಪ ಮಾಡಿದ್ದು, ಬಾವಿಯಲ್ಲಿದ್ದ ವಿಷಯ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ನಾನು ವಾಸ್ತವಿಕ ವಿಚಾರದ ಬಗ್ಗೆ ಮಾತನಾಡಿದೆ. ನೀವು ಹೇಳಿರುವಂತಹ ಚರ್ಚೆ ಏನಿದೆ, ಈ ಚರ್ಚೆಗೆ ಉತ್ತರ ಕರ್ನಾಟಕದ ಸಮಸ್ಯೆಗಳು ನಂತರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಡಿರುವಂತಹ ಅಗೌರವ, ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಮಾಡಿರುವಂತಹ ಅಗೌರವ ಮತ್ತು ಕನ್ನಡ ಬಾವುಟಕ್ಕೆ ಮಾಡಿರುವ ಅಪಮಾನ ಇದೆಲ್ಲವೂ ಸೇರಿದಂತೆ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕೆಂದು ತಾವು ಏನು ಹೇಳಿದ್ದೀರಿ. ಅದನ್ನು ಚರ್ಚೆ ಮಾಡಲಿಕ್ಕೆ ಸಿದ್ಧರಿದ್ದೇವೆ.

**(ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎಂ.ನಾರಾಯಣಸ್ವಾಮಿಯವರು ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರು)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮುಖ್ಯ ಸಚೇತಕರಾಗಿ ಬಾವಿಯಲ್ಲಿ ನಿಂತುಕೊಂಡು ಪುನಃ ಪುನಃ ಈ ರೀತಿಯಲ್ಲಿ ಮಾತನಾಡಿದರೆ ಹೇಗೆ?

**ಸಭಾಪತಿಯವರು:-** ಸಭಾನಾಯಕರು ಒಂದು ನಿಮಿಷ ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಬಾವಿಯಲ್ಲಿ ಇರುವುದು ಸುಮ್ಮನೆ ಇರುವುದಲ್ಲ. ಮಂತ್ರಿಗಳ ಮೇಲೆ ಗುರುತರವಾದ ಆಪಾದನೆ ಇದೆ, ನ್ಯಾಯಾಲಯ cognizance ತೆಗೆದುಕೊಂಡಿದೆ. Indian Penal Code ನ ಅತ್ಯಂತ ಗುರುತರವಾದಂತಹ ಕಲಂ ಕೆಳಗಡೆ ಅವರಿಗೆ summons issue ಮಾಡಿದ್ದಾರೆ.

**ಸಭಾಪತಿಯವರು:-** ಸಭಾನಾಯಕರೆ, ನಾನು ತಮಗೆ ಹೇಳಿದ್ದೇನೆ. ನಾವು ನಮ್ಮ ನಿಯಮದ ಪ್ರಕಾರ ಪರಿಶೀಲಿಸುತ್ತೇವೆಂದು ಹೇಳಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಿಯಮ 59ರ ನಿಲುವಳಿ ಸೂಚನೆಯಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ಪ್ರಸ್ತಾವವೊಂದನ್ನು ನೀಡಿದ್ದೇವೆ. ಆದರೆ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದರಿಂದ ಅದನ್ನು ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲವೆಂದು ಹೇಳಿ ತಾವು ತಿರಸ್ಕಾರ ಮಾಡಿದ್ದೀರಿ. ಅದಕ್ಕೆ ಅಪವಾದವೂ ಸಹ ಇದೆ. ತಾವು ಮನಸ್ಸು ಮಾಡಿದ್ದರೆ ಅವಕಾಶವನ್ನು ಕೊಡಬಹುದಿತ್ತು. ತದನಂತರ ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ ಎಂದಾಗ ನಾವು ನಿಯಮ 68 ರಡಿಯಲ್ಲಿ ನೋಟೀಸ್

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದೇವೆ. ನೋಟೀಸ್ ಕೊಟ್ಟ ಕೂಡಲೇ ತಾವು ಅವಕಾಶವನ್ನು ಕೊಟ್ಟಿದ್ದರೆ, ನಾವು ಬಾವಿಗೆ ಬರುವಂತಹ ಪ್ರಶ್ನೆಯೇ ಬರುತ್ತಿರಲಿಲ್ಲ.

**ಸಭಾಪತಿಯವರು:-** ಈಗ ನನ್ನ ಹತ್ತಿರ 4 ನೋಟೀಸ್‌ಗಳಿವೆ. ಒಂದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಮೂರನೆಯದನ್ನು ನಾನು ನಿಮಗೆ ತೋರಿಸಿದ್ದೇನೆ. ನನಗೆ ಸಮಯವನ್ನು ಕೊಡಿ. ನಿಯಮದ ಪ್ರಕಾರ ನಾನು ಪರಿಶೀಲಿಸಿ, ನಂತರ ತಿಳಿಸುತ್ತೇನೆ.

**ಶ್ರೀ ಎಸ್. ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಈ ಸಂದರ್ಭದಲ್ಲಿ ತಾವು ಪರಿಶೀಲಿಸಿ ನಂತರ ನಿರ್ಣಯ ಕೊಡುತ್ತೇನೆಂದು ಹೇಳುತ್ತಿದ್ದೀರಿ. ತಾವು ನೇರವಾಗಿ ಇಂತಹ ದಿವಸ ತೆಗೆದುಕೊಳ್ಳುವುದಾಗಿ ತಿಳಿಸಿದರೆ ಬಹಳ ಚೆನ್ನಾಗಿರುತ್ತದೆ. ಏಕೆಂದರೆ, ರಾಜ್ಯದ ಹಿತದೃಷ್ಟಿಯಿಂದ ಸಂಪುಟದ ಒಬ್ಬ ಸಚಿವರ ಮೇಲೆ ಗುರುತರವಾದ ಆಪಾದನೆ ಇದ್ದಾಗ ಅವರು ಆ ಆಪಾದನೆಯನ್ನು ಹೊತ್ತುಕೊಂಡು ಸಂಪುಟದಲ್ಲಿ ಮುಂದುವರಿದರೆ ಒಳ್ಳೆಯದಲ್ಲ; ನಮಗೂ ಒಳ್ಳೆಯದಲ್ಲ, ಅವರಿಗೂ ಒಳ್ಳೆಯದಲ್ಲ. ನಾಳೆ Republic Day ದಿವಸ ಅವರು ಹೋಗಿ flag hoist ಮಾಡಿದಾಗ ಹಿರಿಯ ಪೊಲೀಸ್ ಅಧಿಕಾರಿಗಳು ಅವರಿಗೆ salute ಹೊಡೆಯಬೇಕು. ಅಂದರೆ, ಆರೋಪಿಗಳಿಗೆ salute ಹೊಡೆಯಬೇಕು. ಎಂತಹ ದುರಂತ ನೋಡಿ! ಅದರೂ ಕೂಡ ತಾವು ಇದನ್ನು ಪರಿಶೀಲಿಸುತ್ತೇವೆ, ನೋಡುತ್ತೇವೆ, ಮಾಡುತ್ತೇವೆ, ವಿಚಾರ ಮಾಡುತ್ತೇವೆ ಎಂದು ಹೇಳುತ್ತೀರಿ, ಅಂದರೆ, ತಾವು ಸರ್ಕಾರದ ಈ ವಿಚಾರವನ್ನು ತಿಳಿದುಕೊಂಡು ಹೇಳುತ್ತೀರಲ್ಲಾ, ಇದನ್ನು ನಾವು ಸುತಾರಾಮ್ ಒಪ್ಪುವುದಿಲ್ಲ. ಇದನ್ನು ವಿರೋಧಿಸಿ, ನಾವುಗಳು ಸಭಾತ್ಯಾಗ ಮಾಡುತ್ತೇವೆ.

**( ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 6. <u>ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ</u>

**ವಿಷಯ: ಕಳೆದ 3 ದಿನಗಳಿಂದ ಅಖಂಡ ಕರ್ನಾಟಕದಲ್ಲಿ ಯಾರೂ ಸಹ ನಿರೀಕ್ಷೆ ಮಾಡದೇ ಇರತಕ್ಕಂತಹ ಅತ್ಯಂತ ಅಹಿತಕರ ಘಟನೆ ನಡೆದು ನಾಡಿನ ಕನ್ನಡಿಗರನ್ನು ಕೆರಳಿಸಿರುವ ಬಗ್ಗೆ.**

\- - - - - - - -

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕಳೆದ 3 ದಿನಗಳಿಂದ ಅಖಂಡ ಕರ್ನಾಟಕದಲ್ಲಿ ನಾವು ಯಾರು ಸಹ ನಿರೀಕ್ಷೆ ಮಾಡದೇ ಇರತಕ್ಕಂತಹ ಅತ್ಯಂತ ಅಹಿತಕರ ಘಟನೆಗಳು ನಡೆದು ನಾಡಿನ ಕನ್ನಡಿಗರನ್ನು ಕೆರಳಿಸತಕ್ಕಂತಹ ಸಂದರ್ಭವನ್ನು ನಾನು ನಿಯಮ 59ರಡಿಯಲ್ಲಿ ಪ್ರಸ್ತಾಪಿಸಬಯಸುತ್ತಿದ್ದೇನೆ. ಇವತ್ತು ಕರ್ನಾಟಕದಲ್ಲಿ ಬೆಂಗಳೂರಿಗೆ ಎಷ್ಟು ಮಹತ್ವವನ್ನು ಕೊಟ್ಟಿದ್ದೇವೆಯೋ ಅಷ್ಟೇ ಮಹತ್ವವನ್ನು ಬೆಳಗಾವಿಗೂ ಕೊಟ್ಟಿದ್ದೇವೆ. ಎಲ್ಲಿಯವರೆಗೆ ಈ ಹಿಂದೆ ಇದ್ದಂತಹ ಶ್ರೀ ಹೆಚ್.ಡಿ.ಕುಮಾರ ಸ್ವಾಮಿಯವರು ಮತ್ತು ಶ್ರೀ ಬಿ.ಎಸ್. ಯಡಿಯೂರಪ್ಪನವರು ಹೋಗಿದ್ದರು ಎಂದರೆ ಬೆಂಗಳೂರು ರಾಜಧಾನಿಯಲ್ಲಿ ವಿಧಾನಸೌಧ ಇದೆ, ಬೆಳಗಾವಿಯನ್ನೂ ಸಹ 2ನೇ ರಾಜಧಾನಿ ಮಾಡಬೇಕೆಂದು ಹೇಳಿ. .. .

**ಸಭಾಪತಿಯವರು:-** ತಮಗೆ ನಾನು ಮೊದಲು ಹೇಳಿದ್ದೇನೆ. ತಾವು ಇದನ್ನು ಚರ್ಚೆ ಮಾಡಲು ನಿಯಮ 59 ರಡಿಯಲ್ಲಿ ನೋಟೀಸ್ ಕೊಟ್ಟಿದ್ದೀರಿ. ಅದನ್ನು convert ಮಾಡಿ ನಿಯಮ 68ರಡಿಯಲ್ಲಿ ಕೊಡುತ್ತೇನೆಂದು ತಮಗೆ ಹೇಳಿದ್ದು **<u>ನಿಯಮ 68 ರಡಿಯಲ್ಲಿಯೇ ಮಾತನಾಡಿ.</u>**

## 7. <u>ನಿಯಮ 68 ರ ಮೇರೆಗೆ ಚರ್ಚೆ.</u>

**ವಿಷಯ: ಕಳೆದ 3 ದಿನಗಳಿಂದ ಅಖಂಡ ಕರ್ನಾಟಕದಲ್ಲಿ ಯಾರೂ ಸಹ ನಿರೀಕ್ಷೆ ಮಾಡದೇ ಇರತಕ್ಕಂತಹ ಅತ್ಯಂತ ಅಹಿತಕರ ಘಟನೆ ನಡೆದು ನಾಡಿನ ಕನ್ನಡಿಗರನ್ನು ಕೆರಳಿಸಿರುವ ಬಗ್ಗೆ.**

\- - - - - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಆಯಿತು, ಮಾನ್ಯ ಸಭಾಪತಿಯವರೆ, ನಾನು ನಿಯಮ 68 ರಡಿಯಲ್ಲಿಯೇ ಮಾತನಾಡುತ್ತೇನೆ. ನಿಯಮ 59 ರಡಿಯಲ್ಲಿ ನೋಟೀಸ್ ಕೊಟ್ಟಿರುವ ನನ್ನ ನೋಟೀಸ್ ಅನ್ನು ತಾವು convert ಮಾಡಿ ನಿಯಮ 68ರಡಿಯಲ್ಲಿ ಅವಕಾಶ ಮಾಡಿ ಕೊಟ್ಟಿರುವುದಕ್ಕೆ ನಾಡಿನ ಜನರ ಪರವಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾನ್ಯ ಸಭಾಪತಿಯವರೆ, ಮಾನ್ಯ ಕುಮಾರಸ್ವಾಮಿಗಳು ಮುಖ್ಯಮಂತ್ರಿಗಳಾಗಿ, ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದಂತಹ ಸಮಿಶ್ರ ಸರ್ಕಾರದ ಸಮಯದಲ್ಲಿ ಬೆಂಗಳೂರಿಗೆ ಕೊಡುವಷ್ಟೇ ಗೌರವವನ್ನು ಗಡಿನಾಡು ಜಿಲ್ಲೆ ಬೆಳಗಾವಿಗೆ ಕೊಡಬೇಕೆನ್ನುವ ನಿಲುವನ್ನು ತಳೆದು ಇಲ್ಲಿ ಸುವರ್ಣಸೌಧವನ್ನು ನಿರ್ಮಾಣ ಮಾಡಬೇಕೆಂದು ಹೇಳಿ, ಆ ಸಮಯದಲ್ಲಿ ಒಂದು ವಿಶೇಷ ಅಧಿವೇಶನವನ್ನು ನಮ್ಮ ಕೆಎಲ್ಎ. ಆಶ್ರಯದಲ್ಲಿ ನಡೆಸಿದ್ದು, ಒಂದು ದೊಡ್ಡ ಇತಿಹಾಸ. ಆ ನಂತರ ಇಲ್ಲಿ ಸುವರ್ಣಸೌಧವನ್ನು ನಿರ್ಮಾಣ ಮಾಡಿ ಪ್ರತಿ ವರ್ಷ ಇಲ್ಲಿ ಅಧಿವೇಶನ ನಡೆಸಬೇಕೆಂದು ತೀರ್ಮಾನಿಸಲಾಯಿತು.

**ಸಭಾಪತಿಯವರು:-** ಶ್ರೀಕಂಠೇಗೌಡರವರೆ, ಆಗ ನಾನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವನಾಗಿದ್ದೆ. ಆಗ ಕಾನೂನು ಕಾರ್ಯದರ್ಶಿ ಶ್ರೀ ದಕ್ಷಿಣಾಮೂರ್ತಿ ಅವರೊಡನೆ ಮೀಟಿಂಗ್ ನಡೆದಿತ್ತು. ಇದರ ವಿಚಾರವಾಗಿ ಪರಿಶೀಲನೆ ಮಾಡುವಾಗ ಗಲಾಟೆ ನಡೆದಿತ್ತು. ನಾನು ನೇರವಾಗಿ ದೆಹಲಿಯಿಂದ ಬಂದು ಬೆಳಗಾವಿಯಲ್ಲಿಯೇ ಅಧಿವೇಶನ ನಡೆಸುತ್ತೇನೆಂದು ಹೇಳಿ ಹೋಗಿದ್ದೆ. ಆ ದಿಸೆಯಲ್ಲಿ ಅಂದು ಬೆಳಗಾವಿಯಲ್ಲಿ ಅಧಿವೇಶನ ನಡೆಯಿತು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಇದರಲ್ಲಿ ತಮ್ಮದೂ ಸಹ ಪಾಲು ಮತ್ತು ಕೊಡುಗೆ ಇದೆ. ಅದನ್ನು ನಾನು ನೆನಪು ಮಾಡಿಕೊಳ್ಳುತ್ತೇನೆ. ನನ್ನ ಪ್ರಶ್ನೆ ಇವತ್ತು ಬೆಳಗಾವಿ ಕರ್ನಾಟಕ ರಾಜ್ಯದ ಅವಿಭಾಜ್ಯ ಅಂಗ. ಕನ್ನಡದ ನೀರನ್ನು ಕುಡಿಯುತ್ತಾರೆ, ಕನ್ನಡದ ನೆಲದ ಅನ್ನವನ್ನು ತಿಂದು ಕರ್ನಾಟಕ ರಾ ಜ್ಯಕ್ಕೆ ದ್ರೋಹ ಬಗೆಯುವಂತಹ ನಡವಳಿಕೆಗಳು ನಡೆಯುತ್ತಿವೆ, ಅದರ ಬಗ್ಗೆ ಸರ್ಕಾರ ಗಮನಹರಿಸಬೇಕಲ್ಲವೇ? ಇವತ್ತಿನ ಘಟನೆಗೆ ಕಾರಣ ಏನು? ಇಲ್ಲಿ ಅಧಿವೇಶನ ಆರಂಭವಾಗಿದೆ. ಈ ಅಧಿವೇಶನಕ್ಕೆ ಪರ್ಯಾಯವಾಗಿ ಮಹಾಮೇಳವನ್ನು ಮಾಡಬೇಕೆಂದು ಹೇಳಿ, ಕೆಲವು ಪುಂಡರು ಹೊರಟರು. ಅದನ್ನು ಏಕೀಕರಣ ಸಮಿತಿಯವರೆಂದು ಅಥವಾ ಇನ್ನೇನು ಎಂದು ಹೇಳುತ್ತೀರೋ ಗೊತ್ತಿಲ್ಲ. ಅಥವಾ ನೆರೆ ರಾಜ್ಯದ ಸಂಘಟನೆ ಎನ್ನುತ್ತಾರೋ ಏನೋ ಗೊತ್ತಿಲ್ಲ. ಪುಂಡರು, ಆ ಪುಂಡರು ಒಂದು ಮಹಾಮೇಳದ ಸಿದ್ಧತೆಯಲ್ಲಿ ಹೊರಟರು. ಆ ಮಹಾಮೇಳದ ಸಿದ್ಧತೆಯ ಕಾರಣಕ್ಕಾಗಿ ಇವತ್ತು ಇಷ್ಟೆಲ್ಲಾ ಸಿದ್ಧಾಂತಗಳು ನಡೆದಿವೆ. ಆ ಮಹಾಮೇಳದ ಸಿದ್ಧಾಂತವನ್ನು ನಿರಾಕರಣೆ ಮಾಡಬೇಕು. ಅವರು ಸಭಾಂಗಣವನ್ನು ಅನುಮತಿ ಇಲ್ಲದೆಯೇ ನಿರ್ಮಾಣ ಮಾಡಿದರು. ಅದನ್ನು ಜಿಲ್ಲಾಡಳಿತ ಒಪ್ಪಲಿಲ್ಲ. ಮತ್ತೆ ಇಲ್ಲಿನ ಕನ್ನಡಿಗರನ್ನು ಅವರು ಕೆರಳಿಸಿದರು. ಅದನ್ನು ಕನ್ನಡಿಗರು ವಿರೋಧ ಮಾಡಿದರು. ಅವರು ವೇದಿಕೆಗೆ ಹೋಗಲು ಒಪ್ಪಲಿಲ್ಲ. ಅಂದು ಒಂದು ಸಣ್ಣ ಘಟನೆ ಮಸಿ ಎರಚುವಂತಹ ಕೆಲಸ ನಡೆಯಿತು. ಆ ಮಸಿ ಎರಚುವ ಒಂದು ಸಣ್ಣ ಘಟನೆ ಎಲ್ಲಿಗೆ ಹೋಯಿತು ಎಂದರೆ, ನಮ್ಮ ಗೃಹ ಸಚಿವರು ಏನು ಇದ್ದಾರೆ, ಆ ಒಂದು ಸಣ್ಣ ಘಟನೆಗೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರಣವಾದಂತಹ ಶ್ರೀ ಸಂಪತ್ ಕುಮಾರ್ ಎನ್ನುವವರನ್ನು ಇವತ್ತು ಕೊಲೆಗಟುಕ ಎನ್ನುವಂತಹ attempt to murder case ದಾಖಲೆ ಮಾಡಿದ್ದಾರೆ. ಅದರಲ್ಲೂ, ಕನ್ನಡಿಗರ ಮೇಲೆ. ಯಾರು ಕನ್ನಡಿಗರ ಪರ ನಿಂತರೋ, ಯಾರು ಈ ನೆಲದ ರಕ್ಷಣೆಗೆ ನಿಂತರೋ ಯಾರು ಈ ಭಾಷೆಗೆ ನಿಂತರೋ ಅವರ ಮೇಲೆ ನೀವು attempt to murder case ಅನ್ನು ಹೂಡುತ್ತೀರಿ. ಕೊಲೆ ಮೊಕದ್ದಮೆ ಯನ್ನು ಹೂಡುತ್ತೀರಿ. ಆಮೇಲೆ ಈ ಘಟನೆ ಎಲ್ಲಿಗೆ ಹೋಯಿತು ಎಂದರೆ ಕೊಲ್ಲಾಪುರದಲ್ಲಿ ಪ್ರತಿಧ್ವನಿಸಿತು, ಕೊಲ್ಲಾಪುರದಲ್ಲಿ ದಿಢೀರನೆ ಕನ್ನಡ ಭಾವುಟವನ್ನು ಸುಟ್ಟರು. ಕನ್ನಡಿಗರ ವಾಹನಗಳನ್ನು ತಡೆದರು. ಇಲ್ಲಿಂದ ಅಲ್ಲಿಗೆ ಹೋದಂತಹ ಪೊಲೀಸರನ್ನು ಬಿಡಲಿಲ್ಲ. ಮಹಾರಾಷ್ಟ್ರದ ಪೊಲೀಸರ ನೆರವನ್ನು ತೆಗೆದುಕೊಂಡು ಬಂದರು. ಇಲ್ಲಿ ಪರಿಸ್ಥಿತಿ ಏನಾಯಿತು? ಇಲ್ಲಿ ನಮ್ಮ ಅಧಿವೇಶನ ನಡೆಸಲಿಕ್ಕೆ ವಿಧಾನಮಂಡಲದ ವಾಹನಗಳು ಏನು ಇಲ್ಲಿಗೆ ಬಂದಿದ್ದವು, ಅವುಗಳ ಮೇಲೆ ಅವ್ಯಾಹತವಾಗಿ ಹಲ್ಲೆ ಮಾಡಿದರು. ಪೊಲೀಸರ ಎದುರಿನಲ್ಲಿಯೇ ಪೊಲೀಸ್ ವಾಹನಕ್ಕೆ ಬೆಂಕಿ ಇಟ್ಟರು. ಪೊಲೀಸ್‌ನವರು ಅಸಹಾಯಕ ಸ್ಥಿತಿಯಲ್ಲಿ ನಿಂತಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಇಷ್ಟೆಲ್ಲಾ ಘಟನೆಗಳು ಆಗುತ್ತಿರುವುದು ಗೊತ್ತಿದೆ. ಇದರ ಸೂಚನೆ ಇದೆ. ನಮ್ಮ ಗೃಹ ಇಲಾಖೆ ಏನು ಮಾಡುತ್ತಿತ್ತು? ಆ ಮಾಹಿತಿ ನಿಮಗೆ ಸಿಕ್ಕಲಿಲ್ಲವೇ? ಇವತ್ತು ಸಂಗೊಳ್ಳಿ ರಾಯಣ್ಣನಂತಹ ಒಬ್ಬ ರಾಷ್ಟ್ರ ನಾಯಕ, ಅಪ್ರತಿಮ ಸ್ವತಂತ್ರ ಹೋರಾಟಗಾರರ ಪ್ರತಿಮೆಯನ್ನು ಧ್ವಂಸ ಆಯಿತಲ್ಲಾ, ನಮ್ಮ ಪೊಲೀಸ್‌ನವರು ಏನು ಮಾಡುತ್ತಿದ್ದರು. ಒಂದು ಪ್ರತಿಮೆಯನ್ನು ದ್ವಂಸ ಮಾಡುವುದು ಹುಡುಗಾಟಿಕೆಯ ವಿಷಯವೇ? ಅದರ ಜೊತೆಗೆ ಮತ್ತೊಬ್ಬ ನಾಯಕರಾದ ಶಿವಾಜಿ ಪ್ರತಿಮೆ ಮೇಲೆ ದ್ವಂಸ ಆಯಿತು. ಎರಡು ಪ್ರತಿಮೆಗಳ ಮೇಲೆ ಆಗಿರುವಂತಹ ಧ್ವಂಸವನ್ನು ಖಂಡಿಸುವಂತಹದ್ದು. ಈ ಘಟನೆಗೆ ಕಾರಣರಾದವರನ್ನು ನೀವು ಬಂಧಿಸಬೇಕು. ಒಪ್ಪುತ್ತೇನೆ. ಆದರೆ, ಕನ್ನಡಿಗರ ಮೇಲೆ ಕೊಲೆ ಮೊಕದ್ದಮೆ, ಯಾರು ಬೇರೆ ಭಾಷೆಯವರು ಇದ್ದಾರೋ ಅವರ ಮೇಲೆ ಸಾಧಾರಣವಾದ ಕೇಸ್ ದಾಖಲು ಮಾಡತಕ್ಕಂತಹ ದುರಂತದ ಸಂದರ್ಭದಲ್ಲಿ ನಾವು ಇದ್ದೇವೆ. ಅದು ಎಲ್ಲಿ ಎಂದರೆ ಕನ್ನಡದ ನೆಲದಲ್ಲಿ. ಹೌದು, ಮಹಾರಾಷ್ಟ್ರದಲ್ಲಿ ಕನ್ನಡಿಗರು ಇದ್ದಾರೆ, ನಮ್ಮ ರಾಜ್ಯದಲ್ಲೂ ಮರಾಠಿಗರು ಇದ್ದಾರೆ. ಅತ್ಯಂತ ಸೌಹಾರ್ದಯುತವಾಗಿ ನಡೆಯುತ್ತಿದೆ. ಬೆಳಗಾವಿ ನಮ್ಮ ಅವಿಭಾಜ್ಯ ಅಂಗ ಎನ್ನುವುದನ್ನು ಸಾರಿ ಸಾರಿ ಹೇಳಲಾಗಿದೆ. ಇದಕ್ಕೆ ಇಲ್ಲಿ ಇಂದು ಅಧಿವೇಶನ ನಡೆಯುತ್ತಿರುವುದೇ ಸಾಕ್ಷಿ. ಇಂತಹ ಸಮಯದಲ್ಲಿ ಕನ್ನಡಿಗರನ್ನು ಕೆರಳಿಸುವಂತಹ ಕೆಲಸ ಅವ್ಯಾಹತವಾಗಿ ನಡೆಯುತ್ತಾ ಬಂದಿದೆಯಲ್ಲಾ, ಯಾರಿಂದ ಅಂದರೆ ಆ ಮಹಾರಾಷ್ಟ್ರ ಏಕೀಕರಣ ಸಮಿತಿ ಎಂದು ಹೆಸರನ್ನು ಹೇಳಿಕೊಂಡು ಬರುವಂತಹ ಗೂಂಡಗಳಿಂದ ಆಗಿದೆ. ನೀವು ಇನ್ನೂ ಕರ್ನಾಟಕದಲ್ಲಿ ಮಹಾರಾಷ್ಟ್ರ ಏಕೀಕರಣ ಎನ್ನುವಂತಹ ಸಮಿತಿಯನ್ನು ಅಸ್ತಿತ್ವದಲ್ಲಿರುವುದಕ್ಕೆ ಬಿಟ್ಟಿದ್ದೀರಲ್ಲಾ ಇದು ಒಪ್ಪುವಂತಹ ವಿಚಾರವೇ? ಅದನ್ನು ಏತಕ್ಕೆ ಇನ್ನು ನಿಷೇಧ ಮಾಡಲಿಲ್ಲ? ಆ ಮಹಾರಾಷ್ಟ್ರ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏಕೀಕರಣ ಸಮಿತಿ ಇರುವುದು ಕರ್ನಾಟಕದ ಬೆಳಗಾವಿಯಲ್ಲಿ. ಇದೆ. ಪ್ರತಿಯೊಂದು ಸಂದರ್ಭದಲ್ಲಿ ಅವರ ದಾಂಧಲೆ ಇದ್ದೇ ಇರುತ್ತದೆ. ಅವರ ಅಟ್ಟಹಾಸ ಇದ್ದೇ ಇರುತ್ತದೆ. ಅವರ ಗೂಂಡಾಗಿರಿ ಇದ್ದೇ ಇರುತ್ತದೆ. ಏತಕ್ಕೆ ಇದನ್ನು ಇನ್ನೂ ನಿಷೇದ ಮಾಡಲಿಲ್ಲ. ಏತಕ್ಕೆ ಆ ಪುಂಡರನ್ನು ಗಡಿಪಾರು ಮಾಡಲಿಲ್ಲ?

(ಮುಂದು)

**(1170) 20.12.2021 03.40 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಇಂದು ನಮ್ಮ ಪೊಲೀಸರು ಕೊಲ್ಹಾಪುರದಿಂದ ಕರ್ನಾಟಕಕ್ಕೆ ಬರಬೇಕಾದಾಗ ಮಹಾರಾಷ್ಟ್ರ ಪೊಲೀಸರ ನೆರವು ಪಡೆಯುವಂತಹ ಸಂದರ್ಭ ಸೃಷ್ಟಿಯಾಗಿರುವುದು ವಿಪರ್ಯಾಸದ ಸಂಗತಿಯಲ್ಲವೆ? ನಮ್ಮ ಪೊಲೀಸರ ಎದುರಿಗೆ ಪೊಲೀಸರ ವಾಹನವನ್ನು ಸುಟ್ಟು ಹಾಕುವುದು ವಿಪರ್ಯಾಸದ ಸಂಗತಿಯಲ್ಲವೆ? ನಮ್ಮ ಪೊಲೀಸರ ಮೇಲೆ ಕಲ್ಲು ಬೀಸಿ ದಾಂಧಲೆ ಮಾಡಿರುವುದು ವಿಪರ್ಯಾಸದ ಸಂಗತಿಯಲ್ಲವೆ? ಇಂದು ರಾಜ್ಯದ ಮೂಲೆ ಮೂಲೆಗಳಿಂದ ಸಾವಿರ ಸಾವಿರ ಸಂಖ್ಯೆಯಲ್ಲಿ ಜನ ಸುವರ್ಣ ಸೌಧದ ಮುತ್ತಿಗೆಗಾಗಿ ಬೆಳಗಾವಿಗೆ ಹೊರಟಿದ್ದಾರೆ. ಕನ್ನಡದ ನೆಲ ಜಲ ರಕ್ಷಣೆಗಾಗಿ ಜನ ಹೊರಟಿದ್ದಾರೆ. ಹಿಂದೆ ನಾವು ಗಡಿ ಪ್ರದೇಶಾಭಿವೃದ್ಧಿ ಆಯೋಗವನ್ನು ಬೆಳಗಾವಿಗೆ ವರ್ಗಾವಣೆ ಮಾಡಿ ಎಂದು ಕೇಳಿದ್ದೆವು. ಸರ್ಕಾರ ಮಾಡಲಿಲ್ಲ. ಗಡಿ ಸಮಸ್ಯೆಗಳ ಪರಿಹಾರಕ್ಕಾಗಿ, ಗಡಿ ರಕ್ಷಣೆಗಾಗಿ ಒಂದು ಸಚಿವ ಖಾತೆಯನ್ನು ನಿರ್ಮಿಸಿ ಎಂದು ಕೇಳಿದ್ದೆವು. ಮಾಡಲಿಲ್ಲ. ಇನ್ನೂ ಎಷ್ಟು ದಿನಗಳ ಕಾಲ, ಇನ್ನೂ ಎಷ್ಟು ವರ್ಷಗಳ ಕಾಲ ಈ ಸಮಸ್ಯೆಯನ್ನು ಜೀವಂತವಾಗಿ ಇಡುತ್ತೀರಿ?

ಮಾನ್ಯ ಗೃಹ ಸಚಿವರೇ, ನಮ್ಮ ನೆಲದ ನೀರನ್ನು ಕುಡಿಯುತ್ತಾ, ನಮ್ಮ ನೆಲದ ಅನ್ನವನ್ನು ಊಟ ಮಾಡುತ್ತಾ ನಮ್ಮನ್ನು ಕೆರಳಿಸಿ, ನಮ್ಮ ಭಾಷೆಯನ್ನು ಕೊಲ್ಲುವಂತಹ, ನಮ್ಮ ಬಾವುಟವನ್ನು ಸುಟ್ಟುಹಾಕುವಂತಹ, ನಮ್ಮ ಬಾವುಟದ ಮೇಲೆ ಚಪ್ಪಲಿಯನ್ನು ಇಡುವಂತಹ, ನಮ್ಮ ಬಾವುಟದ ಮೇಲೆ ನಾಯಿಗಳನ್ನು ಕೂರಿಸುವಂತಹ ವಿಷಯಗಳು ಅತ್ಯಂತ ಖಂಡನಾರ್ಹ ಮತ್ತು ಅಪಮಾನದ ವಿಚಾರ. ಈ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು? ಕಳೆದ ನಾಲ್ಕೈದು ದಿನಗಳಿಂದ ಈ ಘಟನೆ ನಿರಂತರವಾಗಿ ನಡೆಯುತ್ತಾ ಬಂದಿದೆ. ಸರ್ಕಾರದ ದಿವ್ಯ ನಿರ್ಲಕ್ಷ್ಯ, ದಿವ್ಯ ಮೌನ ಏಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈ ವಿಷಯ ಎಲ್ಲಿಯವರೆಗೆ ಹೋಗಿದೆಯೆಂದರೆ ನಮ್ಮ ಶಾಸಕರು, ಬಂದಿರುವ ನಮ್ಮ ಜನರು ತಿರುಗಾಡುವುದಕ್ಕೆ ಸಾಧ್ಯವೇ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿ ಹೋಗಿತ್ತು. ಇಂದಿಗೂ ಅದೇ ಪರಿಸ್ಥಿತಿ ಇದೆ. ನಮ್ಮ ಕರ್ನಾಟಕದ ನೆಲದೊಳಗೆ ಅತ್ಯಂತ ಸ್ವಚ್ಛಂದವಾಗಿ ತಿರುಗಾಡಲಿಕ್ಕೆ ಸಾಧ್ಯವಿಲ್ಲ. ನಮ್ಮ ವಾಹನಗಳ ನೋಂದಣಿ ಸಂಖ್ಯೆಯನ್ನು ನೋಡಿ ಆ ವಾಹನಗಳ ಮೇಲೆ ಹಲ್ಲೆ ಮಾಡುತ್ತಾರೆಂದರೆ, ಜನರ ಮೇಲೆ ಹಲ್ಲೆ ಮಾಡುತ್ತಾರೆಂದರೆ ಪರಿಸ್ಥಿತಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಎಲ್ಲಿಗೆ ಹೋಗಿ ನಿಂತಿದೆ? ಸರ್ಕಾರವಿದೆಯೇ? ಗೃಹ ಇಲಾಖೆಯಿದೆಯೇ? ಪೊಲೀಸರೇ ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದಾದರೆ ನಮ್ಮ ನಾಡಿನ ಜನರನ್ನು ಏನು ರಕ್ಷಣೆ ಮಾಡುತ್ತಾರೆ? ಪೊಲೀಸರ ಎದುರಿಗೆ ಪೊಲೀಸ್ ವಾಹನವೇ ಸುಟ್ಟು ಹೋಗುತ್ತಿದೆಯೆಂದರೆ, ಪೊಲೀಸರ ಮೇಲೆ ಕಲ್ಲು ಬೀರಲಾಗುತ್ತಿದೆಯೆಂದರೆ ಏನಿದರ ಅರ್ಥ? ಸರ್ಕಾರ ಇದೆಯೇ ಅಥವಾ ಸತ್ತು ಹೋಗಿದೆಯೇ? ಗೃಹ ಇಲಾಖೆಯು ಜೀವಂತವಾಗಿದೆಯೇ ಅಥವಾ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆಯೇ? ನನಗೆ ಅರ್ಥವಾಗುತ್ತಿಲ್ಲ. ಇಂದು ಇಲ್ಲಿ ಮುಖ್ಯಮಂತ್ರಿಗಳಿದ್ದಾರೆ. ಸಚಿವ ಸಂಪುಟದ ಸದಸ್ಯರಿದ್ದಾರೆ. ಶಾಸಕರಿದ್ದೇವೆ. ಇಡೀ ಸರ್ಕಾರ ಇದೆ. ಸರ್ಕಾರದ ಅಧಿಕಾರಿಗಳೆಲ್ಲಾ ಇಲ್ಲಿ ಇದ್ದಾರೆ. ನಮ್ಮ ಕಣ್ಣೆದುರಿಗೆ, ಸರ್ಕಾರದ ಕಣ್ಣೆದುರಿಗೆ ಈ ರೀತಿಯ ಗೂಂಡಾ ವರ್ತನೆ ನಡೆದರೆ, ಇಂತಹ ಅಹಿತಕರ ಘಟನೆಗಳು ನಡೆದರೆ, ಪೊಲೀಸರ ಮೇಲೆ ಹಲ್ಲೆ ನಡೆದರೆ, ಸರ್ಕಾರಿ ವಾಹನಗಳನ್ನು ಜಖಂಗೊಳಿಸಿದರೆ ಇಲ್ಲಿಯವರೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? ಯಾಕೆ ಈ ರೀತಿಯ ಉದಾಸೀನ ಮನೋಭಾವ? ಕನ್ನಡಿಗರ ಮೇಲೆ ಅಭಿಮಾನ ಇಲ್ಲವೆ? ಕನ್ನಡ ನೆಲದ ಮೇಲೆ ಅಭಿಮಾನ ಇಲ್ಲವೆ? ನಾವು ಸರ್ಕಾರವನ್ನು ಎಚ್ಚರಿಸಬೇಕೆ? ನಾಡಿನ ವಿವಿಧೆಡೆಗಳಿಂದ ಜನರು ಬಂದು ಕೂಗೆಬ್ಬಿಸಿ ನಿಮಗೆ ಹೇಳಬೇಕೆ? ಸುವರ್ಣಸೌಧಕ್ಕೆ ಬಂದು ಮುತ್ತಿಗೆ ಹಾಕುವಂತಹ ಪರಿಸ್ಥಿತಿಗೆ ಸರ್ಕಾರ ಏಕೆ ಕಾರಣವಾಯಿತು?

ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಿಸುತ್ತೇನೆ. ಈ ವಿಚಾರದಲ್ಲಿ ಸರ್ಕಾರದ ನಿರ್ಲಕ್ಷ್ಯ ಇದೆ. ಈ ನಿರ್ಲಕ್ಷ್ಯ ಧೋರಣೆ ಇಷ್ಟೆಲ್ಲಾ ಬೆಳವಣಿಗೆಗೆ ಕಾರಣ ಆಗಿದೆ. ಯಾವಾಗ ಅವರು ಈ ವಿಧಾನಮಂಡಲ ಅಧಿವೇಶನಕ್ಕೆ ಪರ್ಯಾಯವಾಗಿ ಈ ನೆಲದಲ್ಲಿ ಒಂದು ಮಹಾಮೇಳವನ್ನು ನಡೆಸಲು ಹೊರಟರೋ ಆಗಲೇ ಸರ್ಕಾರ ಕ್ರಮಕ್ಕೆ ಮುಂದಾಗಿದ್ದರೆ, ಆಗಲೇ ಅವರನ್ನು ಹದ್ದುಬಸ್ತಿನಲ್ಲಿಟ್ಟಿದ್ದರೆ ಇಷ್ಟೆಲ್ಲಾ ಬೆಳವಣಿಗೆಗಳು ಆಗುತ್ತಿದ್ದವೇ? ಇಂದು ಅಲ್ಲಿರುವ ಕನ್ನಡಿಗರ ರಕ್ಷಣೆ ಮಾಡುವವರು ಯಾರು? ಮಹಾರಾಷ್ಟ್ರವನ್ನು ನಾವು ಅತ್ಯಂತ ಸಹೋದರ ಭಾವದೊಂದಿಗೆ ಪ್ರೀತಿಯಿಂದ ನೋಡುತ್ತಿದ್ದೇವೆ. ನಮ್ಮ ತಾಳ್ಮೆಯನ್ನು ಕೆಣಕುವಂತಹ ಕೆಲಸ ನಿರಂತರವಾಗಿ ನಡೆಯುತ್ತಿದೆ. ಇಂದು ಕನ್ನಡ ಭಾಷೆಗೆ, ಕನ್ನಡ ನೆಲ್ಲಕ್ಕೆ, ಕನ್ನಡ ಧ್ವಜಕ್ಕೆ ಆಗಿರುವಂತಹ ಅವಮಾನವನ್ನು ಸರ್ಕಾರ ಹೇಗೆ ಸರಿಗಟ್ಟುತ್ತದೆ? ಸಂಪತ್ ಕುಮಾರ್ ಎನ್ನುವವರ ಮೇಲೆ ಹಾಕಿರುವ ಕೊಲೆ ಮೊಕದ್ದಮೆಯನ್ನು ಕೂಡಲೇ ಹಿಂಪಡೆಯಬೇಕು. ಯಾರು ಗೂಂಡಾಗಳಿದ್ದರೋ, ಯಾರು ಹಲ್ಲೆ ಮಾಡಿದರೋ, ಯಾರು ಕನ್ನಡ ಬಾವುಟವನ್ನು ಸುಟ್ಟರೋ ಅವರ ಮೇಲೆ ಆ ಕೇಸನ್ನು ದಾಖಲು ಮಾಡಲಿ. ಅದು ಬಿಟ್ಟು ಬಹಳ ಸರಳವಾಗಿ, ವಿನಯದಿಂದ, ಸೌಹಾರ್ದಯುತವಾಗಿ ನಡೆದುಕೊಳ್ಳುವ ಕನ್ನಡಿಗರ ಮೇಲೆ ಗದಾಪ್ರಹಾರ, ಮರಾಠಿಗರ ಮೇಲಿನ ಪ್ರೀತಿಯೇ ಇದು? ಅಪ್ಪಿಕೊಳ್ಳುವಂತಹ ವಿಚಾರವೇ? ನಾನು ಇದನ್ನು ಉಗ್ರವಾಗಿ ಖಂಡಿಸುತ್ತೇನೆ. ಇಡೀ ನಾಡಿನ ಜನರು ಇದನ್ನು ಖಂಡಿಸುತ್ತಿದ್ದಾರೆ. ದಯಮಾಡಿ ಸರ್ಕಾರ ಈ ವಿಚಾರದಲ್ಲಿ ತನ್ನ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

-----------------------------------------------------------------------------------------------------------------------------------

ನಿರ್ಲಕ್ಷ್ಯವನ್ನು ಮರೆತು ಯಾರೆಲ್ಲಾ ಪುಂಡರಿದ್ದಾರೆಯೋ ಆ ಪುಂಡರನ್ನು ಮತ್ತು ಪುಂಡರ ಸಂಘಟನೆ ಎಂ.ಇ.ಎಸ್ ಅನ್ನು ನಿಷೇಧ ಮಾಡುವಂತಹ ಘೋಷಣೆಯನ್ನು ಇಲ್ಲಿ ಮಾಡಬೇಕು. ಆ ಎಲ್ಲಾ ಪುಂಡರನ್ನು ಗಡಿ ಪಾರು ಮಾಡುವಂತಹ ನಿರ್ಣಯವನ್ನು ಇಲ್ಲಿ ಮಾಡಬೇಕು. ಪುಂಡರ ಗಡಿಪಾರು ಮತ್ತು ಎಂ.ಇ.ಎಸ್. ಸಂಘಟನೆಯ ನಿಷೇಧದ ಘೋಷಣೆ ಆಗುವವರೆವಿಗೆ ನಾವು ಇಲ್ಲಿಂದ ವಿರಮಿಸುವುದಿಲ್ಲ ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಶ್ರೀಕಂಠೇಗೌಡರು ಹೇಳಿದಂತಹ ಎಲ್ಲಾ ಮಾತುಗಳಿಗೂ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಮುಂದುವರೆದು 1956ರಲ್ಲಿ ಹರಿದು ಹಂಚಿ ಹೋಗಿದ್ದ ಭಾಷೆಗಳನ್ನು ಸೇರಿಸಿ ಸಂಯುಕ್ತವಾಗಿ ಅಖಂಡ ಕರ್ನಾಟಕ ಎಂದು ಮಾಡಿದ ಮೇಲೆ ಬೇರೆ ಬೇರೆ ಕಡೆಗಳಲ್ಲಿದ್ದಂತಹ ಕನ್ನಡ ಜನರೆಲ್ಲಾ ಒಂದು ಕಡೆ ಸೇರಿ ನಮ್ಮ ರಾಜ್ಯ ಉದಯವಾಯಿತು. ಅಲ್ಲಿಂದ ಇಲ್ಲಿಯವರೆವಿಗೂ ವಿನಾಕಾರಣ ಇದೊಂದು ಅಂಶ ನಡೆಯುತ್ತಲೇ ಇದೆ. ನಮ್ಮ ಬಾವುಟ ಸುಮಾರು 1959-60ರಲ್ಲಿ ಅ.ನ.ಕೃಷ್ಣರಾಯರು ಮತ್ತು ಮ.ರಾಮಮೂರ್ತಿರವರಿಂದ ರೂಪಿಸಲ್ಪಟ್ಟಿತು. ಅನೇಕ ರಾಜ್ಯಗಳಲ್ಲಿ ಅವರದ್ದೇ ಆದ ಬಾವುಟ ಇದೆ. ಆದರೆ ನಮ್ಮ ಬಾವುಟಕ್ಕೆ ಅದರದ್ದೇ ಆದ ಒಂದು ವೈಶಿಷ್ಟ್ಯವಿದೆ. ಅರಿಶಿಣ-ಕುಂಕುಮ ಬಣ್ಣದಿಂದ ಕೂಡಿದೆ. ನಾವು ದೇವರಿಗೆ ಅರಿಶಿಣ ಕುಂಕುಮದಲ್ಲಿ ಪೂಜೆ ಮಾಡುತ್ತೇವೆ. ಅಂತಹ ಒಂದು ಬಾವುಟವನ್ನು ಆ ಕಾಲದಲ್ಲಿಯೇ ನಮ್ಮ ಹಿರಿಯರು ನಮಗೆ ಕೊಟ್ಟು ಹೋಗಿದ್ದಾರೆ. ನಾವು ಅದನ್ನು ನಮ್ಮ ತಾಯಿ ಸಮಾನ ನೋಡಿಕೊಂಡಿದ್ದೇವೆ. ಭಾಷೆ ಆಗಬಹುದು, ಬಾವುಟ ಆಗಬಹುದು, ನಮ್ಮ ಕನ್ನಡ ನಾಡಿನ 6.5 ಕೋಟಿ ಜನರದ್ದು ಒಂದೇ ಇಚ್ಛೆ. ಕನ್ನಡ-ಕರ್ನಾಟಕ ಅಖಂಡವಾಗಿರಬೇಕು. ಎಲ್ಲರೂ ಸಹಬಾಳ್ವೆಯಿಂದ ಬಾಳಬೇಕು. ಅನೇಕ ಸರ್ಕಾರಗಳು ಬಂದವು. ಬೇಕಾದಷ್ಟು ತೀರ್ಪುಗಳನ್ನು ನೀಡಿದವು. ಕಾರಣಾಂತರಗಳಿಂದ ರಾಜ್ಯದಲ್ಲಿ ಒಂದು ಸರ್ಕಾರವಿದ್ದರೆ ಕೇಂದ್ರದಲ್ಲಿ ಒಂದು ಸರ್ಕಾರವಿರುತ್ತಿತ್ತು. ಈಗ ಎಲ್ಲಾ ಕಡೆಯೂ ಒಂದೇ ಸರ್ಕಾರವಿದ್ದರೂ ಮಹಾಜನ್ ವರದಿಯನ್ನು ಒಪ್ಪಿಕೊಂಡು ಇದು ಇಷ್ಟೇ ಎಂದು ಹೇಳಿದರೆ ಇದಕ್ಕೆ ಒಂದು ಅಂತ್ಯ ಬೀಳುತ್ತದೆ. ಆದರೆ ಯಾರೂ ಅದಕ್ಕೆ ಇಚ್ಛಾಶಕ್ತಿ ತೋರಿಸುತ್ತಿಲ್ಲ. ಪುಂಡ-ಪೋಕರಿಗಳಿಗೆ ಸಹಾಯ ಮಾಡಲಾಗುತ್ತಿದೆ. ಕನ್ನಡಕ್ಕಾಗಿ ಹೋರಾಡಿದವರ ಮೇಲೆ ಕೊಲೆ ಪ್ರಕರಣ ದಾಖಲಿಸಲಾಗುತ್ತದೆ. ನಮ್ಮನ್ನು ಹಿಂಸಿಸುವ ಬೇರೆಯವರ ಮೇಲೆ ಬೇಡದಿರುವ ಕೇಸ್ ಅನ್ನು ಹಾಕಲಾಗುತ್ತದೆ. ಏಕೆ ಪೊಲೀಸರು ಇಷ್ಟು ನಿರ್ಲಕ್ಷ್ಯ ಭಾವ ತೋರಿದ್ದಾರೆ?

ನಮ್ಮ ಮಾನ್ಯ ಗೃಹ ಮಂತ್ರಿಗಳು ಪೊಲೀಸರನ್ನು ಬೈದಷ್ಟು ಯಾರೂ ಬೈಯುವುದಿಲ್ಲ. ನಾವು ನೋಡಿದ್ದೇವೆ. ಅವರೇನೂ defend ಮಾಡಿಕೊಳ್ಳುವುದಿಲ್ಲ. ಆದರೆ ಪೊಲೀಸ್‌ನವರಿಗೆ ಏಕೆ ಇಷ್ಟು ಕಠಿಣ ಕ್ರಮ ಕೈಗೊಳ್ಳಲಾಗುತ್ತಿಲ್ಲ? ಹತ್ತು ದಿನಗಳ ಕಾಲ ಅಧಿವೇಶನ ನಡೆಯುತ್ತದೆ, ಈ ರೀತಿ ಗಲಾಟೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವ ಕಾರ್ಯಕ್ರಮ ಇದೆ ಎನ್ನುವುದು ಗುಪ್ತಚರ ಇಲಾಖೆಗೆ ಮೊದಲೇ ಮಾಹಿತಿ ಇರಲಿಲ್ಲವೇ? ಏಕಾಏಕಿ ಇದು ಉದ್ಭವವಾಯಿತೇ ಎಂಬುದನ್ನು ಮಾನ್ಯ ಗೃಹ ಮಂತ್ರಿಗಳು ಹೇಳಬೇಕು.

ಮಾನ್ಯ ಗೃಹ ಸಚಿವರೇ, ನಾವು 6.5 ಕೋಟಿ ಕನ್ನಡಿಗರ ಪರವಾಗಿ ಹೇಳುತ್ತಿದ್ದೇವೆ. ನಾವು ವಿರೋಧ ಪಕ್ಷದಲ್ಲಿರಬಹುದು. ಏನೇ ಕಷ್ಟ ಬಂದರೂ ಸರ್ಕಾರದ ಜೊತೆಯಲ್ಲಿ ನಾವಿದ್ದೇವೆ. ನೀವು ಈ ಸದನ ಮುಗಿಯುವುದರೊಳಗೆ ಇವರಿಗೊಂದು ಗತಿ ಕಾಣಿಸಬೇಕು. ಇಲ್ಲವಾದಲ್ಲಿ 6.5 ಕೋಟಿ ಕನ್ನಡಿಗರೂ ಬೆಳಗಾವಿಗೆ ಬರುವಂತಹ ಕೆಲಸವಾಗುತ್ತದೆ. ಮಾನ್ಯ ಶ್ರೀಕಂಠೇಗೌಡರು 10,000 ಎಂದು ಹೇಳಿದರು. ಕೇವಲ 10,000 ಮಾತ್ರವಲ್ಲ, ಎಲ್ಲಾ ಕಡೆಗಳಿಂದಲೂ ಜನ ಇಲ್ಲಿಗೇ ಬರುತ್ತಾರೆ. ಇದೇ ಪ್ರಕಾರವಾಗಿ ಕನ್ನಡಿಗರು ಬೇರೆ ರಾಜ್ಯಗಳಲ್ಲಿಯೂ ಇದ್ದಾರೆ. ಅವರಿಗೂ ತೊಂದರೆಯಾಗುತ್ತಿದೆ. ಇಲ್ಲಿ ನಮ್ಮ ನೆಲದ ಅನ್ನ ತಿಂದು ನಮಗೇ ಹೊಡೆಯುತ್ತಿದ್ದಾರೆ. ಉದಾಹರಣೆಗೆ ನಾನು ಉಡುಪಿಯವನು. ನಮ್ಮವರು ಸುಮಾರು 10 ಲಕ್ಷ ಜನ ಹೋಟೆಲ್ ಉದ್ಯಮದಲ್ಲಿ ಮುಂಬೈನಲ್ಲಿದ್ದಾರೆ. ಅವರಿಗೇನೂ ಭಯವಿಲ್ಲ. ಏಕೆಂದರೆ ಅವರು ಅಂಡರ್‌ವರ್ಲ್ಡ್, ಮಿಸ್‌ವರ್ಲ್ಡ್ ಎಲ್ಲಕ್ಕೂ ಭಯ ಪಡುವುದಿಲ್ಲ. ಆದರೆ ಬಲಹೀನರು ಕೊಲ್ಹಾಪುರ ಮುಂತಾದ ಕಡೆಗಳಲ್ಲಿ ಹಿಡಿದುಕೊಂಡು ಹೊಡೆಯುತ್ತಿದ್ದಾರೆ. ಇದಾಗಬಾರದು. ಸರ್ಕಾರ ಮಧ್ಯ ಪ್ರವೇಶಿಸಬೇಕು. ಯಾವುದೇ ಪಕ್ಷದವರಿರಲಿ, ಅವರ ಕೈ ಕಾಲು ಮುರಿದು ಹಾಕಿ. ಬೇಕಾದರೆ ಸಾಯಿಸಿ. ಇದರಲ್ಲಿ ಪಕ್ಷಾತೀತವಾಗಿ ನಾವು ನಿಮ್ಮ ಜೊತೆಗಿದ್ದೇವೆ. ಆದರೆ ಮೊದಲು ಯಾರು ಈ ಕಾರ್ಯಕ್ರಮ ಮಾಡುತ್ತಿದ್ದಾರೆ, ಯಾರು ಯಾರಿಗೆ ಪೊಲೀಸರು ಬೆಂಬಲ ನೀಡುತ್ತಿದ್ದಾರೆ ಅವರಿಗೆಲ್ಲಾ ನೀವು ತೊಂದರೆ ಕೊಡಬೇಕು. ಏಕೆಂದರೆ ತಾಯಿಗೆ ಏಟು ಬಿದ್ದಾಗ ಮಗ ಇದ್ದರೇನು, ಸತ್ತರೇನು? ನಮ್ಮ ಧ್ವಜಕ್ಕೆ ಹೊಡೆಯುತ್ತಾರೆ, ಸಂಗೊಳ್ಳಿ ರಾಯಣ್ಣನಿಗೆ ಹೊಡೆಯುತ್ತಾರೆ. ಇನ್ನೇನು ಉಳಿಸಿದ್ದಾರೆ? ಬಿಜೆಪಿ ಸರ್ಕಾರ ಎಲ್ಲವನ್ನೂ ನಾವು ಮಾಡುತ್ತೇವೆಂದು ಹೇಳುತ್ತದೆ. ಇದನ್ನು ಏಕೆ ನಿಮ್ಮ ಕೈಯಲ್ಲಿ ಮಾಡಲಾಗುತ್ತಿಲ್ಲ? ಅದು ಇಂತಹ ಸಮಯದಲ್ಲಿ. ಪ್ರತಿಯೊಂದು ಬೆಳಗಾವಿಯಲ್ಲಿಯೇ ಇದೆ. ಎಲ್ಲಿಂದಲೋ ಹೊಸದಾಗಿ ಏನೂ ತರಬೇಕಾಗಿಲ್ಲ. ಮುಖ್ಯಮಂತ್ರಿಗಳು, ಗೃಹಮಂತ್ರಿಗಳಿಂದ ಹಿಡಿದು ಒಬ್ಬ ಸಬ್-ಇನ್ಸ್‌ಪೆಕ್ಟರ್ ವರೆಗೆ ಎಲ್ಲರೂ ಇಲ್ಲಿಯೇ ಇದ್ದಾರೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿ ಇಂದೇ ಅಥವಾ ಈ ಸದನ ಮುಗಿಯುವುದರೊಳಗೆ ಆದಷ್ಟು ಬೇಗ ಇದನ್ನು ಮಟ್ಟ ಹಾಕುವುದಕ್ಕೆ ಏನು ಬೇಕೋ ಅದನ್ನು ತೀರ್ಮಾನ ಮಾಡಿ ನಮ್ಮ ಸದನಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ನಿಯಮ 59ರಡಿಯಲ್ಲಿ ಮಂಡಿಸಿದಂತಹ ವಿಷಯವನ್ನು ನಿಯಮ 68ಕ್ಕೆ convert ಮಾಡಿ ಚರ್ಚೆಗೆ ಅವಕಾಶ ಕಲ್ಪಿಸಿ, ನಮಗೂ ಮಾತನಾಡಲು ಅವಕಾಶ ನೀಡಿರುವುದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/Unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**(1171) 20-12-2021 3.50 ಕೆಜಿ-ಎಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಮಾನ್ಯ ಸಭಾಪತಿಯವರೇ, ನಮ್ಮ ಕನ್ನಡದ ನೆಲ, ಜಲ ಮತ್ತು ಗಡಿ ಪ್ರಶ್ನೆಗಳು ಬಂದಾಗ, ಇಂತಹ ಯಾವುದೇ ಪ್ರಶ್ನೆಗಳು ಬಂದಾಗ ಜತ್ಯಾತೀತವಾಗಿ, ಪಕ್ಷಾತೀತವಾಗಿ, ಧರ್ಮತೀತವಾಗಿ ನಾವೆಲ್ಲರೂ ಒಂದಾಗಿ, ನಮ್ಮ ಕನ್ನಡ ನೆಲ, ಜಲ ಮತ್ತು ಗಡಿ ಪ್ರಶ್ನೆಗಳಿಗೆ ಹೋರಾಟ ಮಾಡುವ ದಿಶೆಯಲ್ಲಿ ನಮ್ಮ ರಾಜ್ಯ ಹೆಸರು ಪಡೆದಿದೆ. ಇಡೀ ನಮ್ಮ ಭಾರತ ದೇಶದಲ್ಲಿ ಸೌಹಾರ್ದತೆಯಿಂದ, ಸ್ನೇಹದಿಂದ, ಪ್ರೀತಿಯಿಂದ, ವಿಶ್ವಾಸದಿಂದ ಇರುವಂತಹ ಒಂದೇ ರಾಜ್ಯ ಅಂದರೆ, ಅದು ನಮ್ಮ ಕರ್ನಾಟಕವೆಂದು ಬಹಳ ಅಭಿಮಾನದಿಂದ ಹೇಳುತ್ತೇವೆ. Here, all are law-abiding citizens. ಇಂತಹದ್ದರಲ್ಲಿ ಶ್ರೀ ಶಿವಾಜಿ ಮಹಾರಾಜರ ಪುತ್ಥಳಿಗೆ ಮಸಿ ಬಳಿಯುವಂತಹದ್ದು ಸರಿಯಾದುದಲ್ಲ. ಈ ದಿಶೆಯಲ್ಲಿ ಸರ್ಕಾರ ಕಾರ್ಯನಿರತವಾಗಬೇಕು. ಶ್ರೀಮತಿ ವೀರರಾಣಿ ಚೆನ್ನಮ್ಮನ ಬಲಗೈ ಬಂಟ, ವೀರ ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲ, ಬ್ರಿಟಿಷರಿಗೆ ಚಳ್ಳೆ ಎಣ್ಣೆ ತಿನಿಸಿದಂತಹ ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ನಮ್ಮ ದೇಶ ಸ್ವಾತಂತ್ರ ಪಡೆಯಲಿಕ್ಕೆ ಬಹು ದೊಡ್ಡ ಕೊಡುಗೆಯನ್ನು ನೀಡಿದಂತಹವರು. ಶ್ರೀ ಸಂಗೋಳ್ಳಿ ರಾಯಣ್ಣನವರ ಪುತ್ಥಳಿಯನ್ನು ಎಂ.ಇ.ಎಸ್ ಪುಂಡರು ಭಗ್ನ ಮಾಡುತ್ತಾರೆಂದರೆ, after all you are a government. ಸರ್ಕಾರಕ್ಕೆ ಎಲ್ಲಾ ಅಧಿಕಾರ ಇದೆ. ಇಂತಹ ಸಮಾಜ ದ್ರೋಹಿಗಳಿಗೆ, ನಾಡ ದ್ರೋಹಿಗಳಿಗೆ ಏನಾದರೊಂದು ಸರಿಯಾದಂತಹ ತಕ್ಕ ಶಾಸ್ತಿ, ಮಾಡಬೇಕಲ್ಲವೇ; ಈಗ ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರವರು ಹೇಳಿದಂತೆ, ನಮ್ಮ ಕನ್ನಡ ನೆಲ, ಜಲ, ಕನ್ನಡ ಭಾಷೆಗಾಗಿ ಹೋರಾಟ ಮಾಡುವವರ ವಿರುದ್ಧ IPC Section 307 ಅಡಿಯಲ್ಲಿ 'Attempt to Murder' case ಹಾಕುತ್ತೀರಿ. ನಮ್ಮ ಭಾಷೆ, ನೆಲ, ಜಲದ ಬಗ್ಗೆ ಪ್ರಶ್ನೆ ಮಾಡುವವರ ವಿರುದ್ಧ ಸಾಧಾರಣವಾದ criminal case, petty case ಹಾಕಿದರೆ ನಿಮಗೆ ಏನು ಅನಿಸುತ್ತದೆ? ಸರ್ಕಾರದ ಈ ದೋರಣೆ ಏಕೆ? ನಾವು ಕನ್ನಡಿಗರು, ನಮಗೆ ನಮ್ಮ ರಾಜ್ಯದಲ್ಲಿ ಪರಕೀಯರಂತಿರುವ ಪರಿಸ್ಥಿತಿ ನಿರ್ಮಾಣವಾಗಿದೆ.

ಮಾನ್ಯ ಸಭಾಪತಿಯವರೇ, ಮಹಾಜನ್ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಗೌರವಿಸಿ ನಾವೆಲ್ಲರೂ ಒಂದಾಗಿರಬೇಕಲ್ಲವೇ; ಮಹಾಜನ್ ವರದಿಗೆ ಬೆಲೆ ಇಲ್ಲವೇ; ಅದಕ್ಕೆ ಕವಡೆ ಕಾಸಿನ ಕಿಮ್ಮತ್ತು ಇಲ್ಲವೇ; ಈ ರೀತಿ ಏಕೆ ಮೇಲಿಂದ ಮೇಲೆ ಇಂತಹ ಘಟನೆಗಳು ನಡೆಯುತ್ತೀವೆ? ಈ ರಾಜ್ಯದ 2ನೇ ರಾಜಧಾನಿ ಎನಿಸಿಕೊಳ್ಳುವಂತಹ ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿರುವಂತಹ ಸಂದರ್ಭದಲ್ಲಿ ಶ್ರೀ ಸಂಗೋಳ್ಳಿ ರಾಯಣ್ಣನವರ ಪುತ್ಥಳಿಯನ್ನು ಭಗ್ನಗೊಳಿಸಿ ಅವಮಾನ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಹಾದಿಯಾಗಿ ಇಡೀ ಕರ್ನಾಟಕ ಸರ್ಕಾರವೇ ಈಗ ಬೆಳಗಾವಿಯಲ್ಲಿದೆ. ಈಗ ಬೆಂಗಳೂರಿನಲ್ಲಿ ಯಾರು ಇಲ್ಲ. ಸರ್ಕಾರವೇ ಇಲ್ಲಿರುವಂತಹ ಸಂದರ್ಭದಲ್ಲಿ ಇಂತಹ ಕೆಲಸವನ್ನು ಮಾಡುತ್ತಾರೆಂದರೆ, ಅವರು how dare they are? ಇಂತಹವರಿಗೆ ತಕ್ಕ ಪಾಠ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಲಿಸಬೇಕು. ಮಾನ್ಯ ಗೃಹ ಮಂತ್ರಿಯವರ ಬಗ್ಗೆ ನನಗೆ ಗೌರವ ಇದೆ. ಮಾನ್ಯ ಸಚಿವರು ಅವರ ಇಲಾಖೆಯಲ್ಲಿ ಯಾರೋ ಎಂಜಲು ಕಾಸು ತಿನ್ನುವುದರ ಬಗ್ಗೆ ನೇರವಾಗಿ ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರನ್ನು appreciate ಮಾಡುತ್ತೇನೆ. ಇಂತಹ ಸಮರ್ಥ ಇಲಾಖೆ ನಮ್ಮಲ್ಲಿದೆ. ಇಡೀ ನಮ್ಮ ಕರ್ನಾಟಕ ಸರ್ಕಾರವೇ ಇಲ್ಲಿ ಇರುವಂತಹ ಸಂದರ್ಭದಲ್ಲಿ ಮಾಡಿದ್ದಾರೆಂದರೆ, ಅವರು ಮಾನ್ಯ ಸಚಿವರನ್ನು ಬಹಳ ಸರಳವಾಗಿದ್ದಾರೆದು ಬಾವಿಸಿದ್ದಾರ್ರೆಂದು ಕಾಣುತ್ತೇ; ಈ ನಮೂನೆಯ ಪುಂಡಾಟಿಕೆಯನ್ನು ಮಾಡಿದ್ದಾರೆ. ಇದನ್ನು ಸಹಿಸುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು ಇದನ್ನು ಯಾವ ರೀತಿ ಸಹಿಸುತ್ತಾರೆಂದು ನನಗೆ ಅರ್ಥವಾಗುವುದಿಲ್ಲ. ಕೊಲ್ಲಾಪುರದಲ್ಲಿ ಕನ್ನಡದ ಬಾವುಟವನ್ನು ಸುಟ್ಟಿದ್ದಾರೆ, ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರು ಅದರ ಹಿನ್ನೆಲೆಯ ಬಗ್ಗೆ ಹೇಳಿದ್ದಾರೆ. ನಮ್ಮ ಬಾವುಟದ ಮೇಲೆ ನಾಯಿಯನ್ನು ಕೂರಿಸುತ್ತಾರೆ. ಅವಮಾನ ಮಾಡುವುದಕ್ಕೂ ಸಹ ಒಂದು ಇತಿಮಿತಿ ಇದೆ ಅಲ್ಲವೇ; ಇವತ್ತು ಮಹಾರಾಷ್ಟ್ರದಲ್ಲಿ ನಮ್ಮ ರಾಜ್ಯದ ನೋಂದಣಿಯ ವಾಹನಗಳನ್ನು ಕಂಡರೆ, ಆ ವಾಹನಗಳ ಮೇಲೆ ಕಲ್ಲುಗಳನ್ನು ಎಸೆಯುತ್ತಾರೆ. ಅಲ್ಲಿ ನಮ್ಮ ಜನರಿಗೆ ತೊಂದರೆ ಮಾಡುತ್ತಿದ್ದಾರೆ. ಅವರೆಲ್ಲರೂ ನಮ್ಮ ಕನ್ನಡ ನೆಲದಲ್ಲಿ ವಾಸ ಮಾಡುವಂತಹವರು, ಇಲ್ಲಿನ ಆಹಾರ ಸೇವನೆ ಮಾಡುತ್ತಾರೆ, ಇಲ್ಲಿನ ನೀರನ್ನು ಕುಡಿಯುತ್ತಾರೆ, ಇಲ್ಲಿನ ವಾಯು ಸೇವನೆ ಮಾಡುತ್ತಾರೆ. ಮತ್ತೆ ಕನ್ನಡ ನಾಡಿಗೆ ದ್ರೋಹ ಬಗೆಯುತ್ತಾರೆ. ಇಂತಹವರಿಗೆ ಏನು ಹೇಳಬೇಕು? ನಮ್ಮ ಜಿಲ್ಲೆಯ ಭಾಷೆಯಲ್ಲಿ ಹೇಳಬೇಕೆಂದರೆ, ಬಹಳ ಕೆಟ್ಟದ್ದಾಗಿ ಹೇಳಬೇಕಾಗುತ್ತದೆ. ಅದನ್ನು ಹೇಳುವುದಕ್ಕೆ ನನಗೆ ಮನಸ್ಸು ಒಪ್ಪುತ್ತಿಲ್ಲ.

**ಸಭಾಪತಿಯವರು:-** ಪಾಟೀಲ್‌ರವರೇ, ಈಗ ಹೇಳುವುದು ಬೇಡ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಬೇಡವೆಂದು ಹೇಳಿದ್ದೀರಿ. ಈ ಘಟನೆಯನ್ನು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಖಂಡಿಸಬೇಕಲ್ಲವೇ; ಒಬ್ಬ ವೀರ ಸ್ವಾತಂತ್ರ್ಯ ಹೋರಾಟಗಾರ, ಈ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಪಿತ ಮಹಾತ್ಮ ಗಾಂಧಿಜೀಯವರಂತಹ ಹಿರಿಯರ ಜೊತೆಗೆ ಹೋರಾಟ ಮಾಡಿದಂತಹವರು. ಮಹಾನ್ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವುದಕ್ಕೆ ತನ್ನದೇ ಆದಂತಹ ಕೊಡುಗೆಯನ್ನು ನೀಡಿದಂತಹ ಒಬ್ಬ ಸ್ವಾಮಿ ಭಕ್ತ. ಶ್ರೀ ಸಂಗೊಳ್ಳಿ ರಾಯಣ್ಣನವರ ಮೂರ್ತಿ ಭಗ್ನವಾಗಿದ್ದನ್ನು ಮಹಾರಾಷ್ಟ್ರದ ಮುಖ್ಯಮಂತಿಯವರು ಇದು ತಪ್ಪು ಎಂದು ಖಂಡಿಸಬೇಕು. ಇದು ಸರಿಯಾದ ಕ್ರಮವಲ್ಲವೆಂದು ಹೇಳಬೇಕು. ಮನೆಯ ದೀಪಕ್ಕೆ ಮುತ್ತು ಕೊಡುವುದಕ್ಕೆ ಆಗುತ್ತದೆಯೇ? ಆ ರೀತಿ ಕೊಟ್ಟರೆ, ನಮ್ಮ ಮುಖ ಸುಡುತ್ತದೆ. ಯಾರೇ ತಪ್ಪು ಮಾಡಿದರೂ ಸಹ, ನಮ್ಮ ಹೊಟ್ಟೆಯಲ್ಲಿ ಹುಟ್ಟಿರುವಂತಹ ಮಗ ತಪ್ಪು ಮಾಡಿದಾಗಲೂ ಸಹ, ಅದನ್ನು ತಪ್ಪು ಎಂದು ನಾವು ಖಂಡಿಸಬೇಕು.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಆಗ ಜನ ನಂಬುತ್ತಾರೆ. ಇದನ್ನು encourage ಮಾಡಿದರೆ. ಆಗ ದ್ವೇಶಮಯವಾದ ವಾತಾವರಣ ಬೆಳೆಯುತ್ತದೆ.

ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಹೇಳಬೇಕೆಂದರೆ, ಇಡೀ ನಮ್ಮ federal structure ಏನಿದೆ, Constituent Assembly ನಲ್ಲಿ ನಮ್ಮ ಭಾರತ ರತ್ನ ಡಾ||ಬಾಬಾ ಸಹೇಬ್ ಅಂಬೇಡ್ಕರ್‌ರವರು ನಮ್ಮ ದೇಶಕ್ಕೆ ಸಂವಿಧಾನ ಕೊಡುವ ಮುನ್ನ ಇದನ್ನು federal structure ಮಾಡಿದ್ದಾರೆ. ಆದರೆ, ರಾಜ್ಯಗಳಿಗೆ ಇಲ್ಲಿ autonomy ಕೊಟ್ಟಿಲ್ಲ. ಇದು ನಮ್ಮ ದೇಶದ ಒಕ್ಕೂಟದ ವ್ಯವಸ್ಥೆ. ಹಾಗಾಗಿ, ಈ ಘಟನೆ ನಮ್ಮ ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುತ್ತದೆ. ಇದು ಸಂವಿಧಾನದ ಆಶಯಗಳಿಗೆ ವಿರುದ್ಧವಾದಂತಹ ಘಟನೆ. ನಮ್ಮ ರಾಜ್ಯದಲ್ಲಿ ಮಾತ್ರ ಶ್ರೀ ಸಂಗೊಳ್ಳಿ ರಾಯಣ್ಣನವರ ಮೂರ್ತಿಗೆ ಮಸಿ ಬಳಿದರು ಎಂದಲ್ಲ. ಇದು ಇಡೀ ನಮ್ಮ ಭಾರತದ ಒಕ್ಕೂಟದ ವ್ಯವಸ್ಥೆಗೆ ಧಕ್ಕೆಯಾಗುವಂಥದ್ದು. ಮಾನ್ಯ ಗೃಹ ಸಚಿವರು ಇದನ್ನು ಸಣ್ಣ ವಿಚಾರವೆಂದು ತಿಳಿಯಬಾರದು. ಮಾನ್ಯ ಗೃಹ ಮಂತ್ರಿಯವರು, he must not take it lightly. ಏಕೆಂದರೆ, ಒಕ್ಕೂಟ ವ್ಯವಸ್ಥೆಯಲ್ಲಿ ಬಲಿಷ್ಠವಾದಂತಹ ಕೇಂದ್ರ ಸರ್ಕಾರ ಇರಬೇಕು. ರಾಜ್ಯಗಳಿಗೆ ಸ್ವಾತಂತ್ರ್ಯ ನೀಡಿಲ್ಲ. Autonomous power ಇಲ್ಲ. ಎಲ್ಲಾ ರಾಜ್ಯಗಳು ಕೇಂದ್ರಕ್ಕೆ ಅಧೀನವಾಗಿರಬೇಕು. ಅಂದರೆ, ನಮ್ಮ ದೇಶದ ಭದ್ರತೆ, ಆಖಂಡತೆ, ಈ ದೇಶದ ಸಾರ್ವಭೌಮತಕ್ಕೆ ಧಕ್ಕೆ ಬರುವುದಿಲ್ಲ. ನಮ್ಮ ರಾಜ್ಯದವರು ಒಂದು ಮಾಡುವುದು, ತಮಿಳುನಾಡಿನವರು ಒಂದು ಮಾಡುವುದು, ಮಹಾರಾಷ್ಟ್ರದವರು ಒಂದು ಮಾಡುವುದು, ಆಂಧ್ರದವರು ಒಂದು ಮಾಡುವುದು ಈ ರೀತಿಯಾದರೆ ನಮ್ಮ ಭಾರತ ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುತ್ತದೆ. Federal structure ಗೆ ಧಕ್ಕೆ ಯಾಗುತ್ತದೆ. It is not a small matter. ಇದು ಸಣ್ಣ ಘಟನೆಯಾಗಿರಬಹುದು. ಆದರೆ, ಇದರ ಹಿನ್ನೆಲೆಯನ್ನು ಮಾನ್ಯ ಸಚಿವರು deep ಆಗಿ ಅಧ್ಯಯನ ಮಾಡಬೇಕು.

ಮಾನ್ಯ ಸಭಾಪತಿಯವರೇ, ನಾವು ಭಾರತೀಯರು ಎಂದು ಎದೆ ಉಬ್ಬಿಸಿ ಹೇಳುತ್ತೇವೆ. ನಮ್ಮ ಭಾಷೆಗಳು ಬೇರೆ ಬೇರೆ ಇರಬಹುದು, ನಮ್ಮ ರಾಜ್ಯಗಳು ಬೇರೆ ಬೇರೆ ಇರಬಹುದು. ಆದರೆ, ನಾವೆಲ್ಲರೂ ಭಾರತೀಯರು. Ultimately, we should be loyal to our country. ನಾವು ಭಾರತೀಯರು ಎನ್ನುವಂತಹ ಹೆಮ್ಮೆಯಿಂದ ಗೌರವದಿಂದ ಬದುಕಬೇಕಾಗಿದೆ. ನಮ್ಮ ಭಾಷೆಗಳು ಬೇರೆ ಬೇರೆಯಾದ ಕೂಡಲೇ ನಾವು ಬೇರೆ ಬೇರೆಯಾಗುವುದಿಲ್ಲ. ಇದನ್ನು ಇದೇ ರೀತಿ ಬಿಟ್ಟರೆ, ಈ ರಾಜ್ಯ ಸರ್ಕಾರಗಳೇ ಮುಂದೊಂದು ದಿವಸ ಒಂದೊಂದು ದೇಶವಾಗುವುದಕ್ಕೆ ಪ್ರಯತ್ನ ಪಡಬಹುದು. ಇಡೀ ಪ್ರಪಂಚದಲ್ಲಿಯೇ ನಮ್ಮ ದೇಶ ಒಂದು ಶಕ್ತಿಶಾಲಿಯಾದಂತಹ, ಪ್ರಚಂಡವಾದಂತಹ ದೇಶವಾಗಿ ಹೊರಹೊಮ್ಮಿದೆ. ಏಕೆ ಹೊರಹೊಮ್ಮಿದೆ ಎಂದರೆ, federal structure ಇದೆ ಎಂದು ಹೊರಹೊಮ್ಮಿದೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮೋದಿಯವರ ನೇತೃತ್ವದಲ್ಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ರವಿಕುಮಾರ್‌ರವರು ಏನಾದರೊಂದು ಹೇಳುತ್ತೀರುತ್ತಾರೆ. ತಾವು ಅವರಿಗೆ ಸ್ವಲ್ಪ ಹೇಳಿ.

**ಸಭಾಪತಿಯವರು:-** ನಾನು ಅವರಿಗೆ ಬಹಳ ಹೇಳಿದ್ದೇನೆ. ಅವರು ಕೇಳಬೇಕಲ್ಲವೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮೋದಿಯವರ ನೇತೃತ್ವದಲ್ಲಿ ಎಂದು ಹೇಳಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ನಮ್ಮ ದೇಶದ ಪ್ರಧಾನ ಮಂತ್ರಿಗಳು. ಅವರು ಅವರಿಗಷ್ಟೇ ಪ್ರಧಾನ ಮಂತ್ರಿಗಳಲ್ಲ. ನಮಗೂ ಪ್ರಧಾನ ಮಂತ್ರಿಗಳು. ನಮಗೆ ಆ ಗೌರವ ಇದೆ. ನಾವು ಯಾವಾಗಲೂ ಗೌರವದಿಂದಲೇ ಮಾತನಾಡುತ್ತೇವೆ. ಅವರು ಏಕೆ ಇದನ್ನು ಒತ್ತಿ ಹೇಳುತ್ತಿದ್ದಾರೆ? ಅವರಿಗೆ ಸಂಶಯ ಬಂದಿದೆಯೇ?

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಪಾಟೀಲ್‌ಜೀರವರು ಪ್ರತಿಪಕ್ಷದ ನಾಯಕರು. ನಾವು ಅದೇ ಗೌರವವನ್ನು ಅವರಿಗೂ ಕೊಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರಿಗೆ ಧನ್ಯವಾದಗಳು. ನಾವು ಇದನ್ನು ಹಾಗೆಯೇ ಬಿಟ್ಟುಕೊಂಡು ಹೋದರೆ, ಇದು ಸರಿಯಾದ ಕ್ರಮವಲ್ಲ. This is not a small or a silly matter. ಏನೋ ಒಂದು ಘಟನೆ ನಡೆದಿದೆ ಎಂದಲ್ಲ. Ultimately, it leads to a very bad thing. ಬಲಿಷ್ಠವಾದಂತಹ ಕೇಂದ್ರ ಸರ್ಕಾರವನ್ನು ಮಾಡುವಂತಹ ಉದ್ದೇಶ ಏನೆಂದರೆ, ದೇಶ ಒಂದಾಗಿರುವುದಕ್ಕೆ ಮಾಡಲಾಗಿದೆ. ದೇಶ ಐಕ್ಯತೆಯಿಂದ ಇರಬೇಕು. ನಮ್ಮ ದೇಶದ ಭದ್ರತೆಗೆ ಧಕ್ಕೆ ಬಾರಬಾರದು. ಈ ದೇಶದ ಸರ್ವಭೌಮತಕ್ಕೆ ಸವಾಲು ಎಸೆಯುವಂತಹ ಘಟನೆಗಳು ನಮ್ಮ ದೇಶದಲ್ಲಿ ಅಲ್ಲ, ಬೇರೆ ದೇಶಗಳಲ್ಲಿಯೂ ಸಹ ನಡೆಯಬಾರದು ಎನ್ನುವಂತಹ ಉದ್ದೇಶದಿಂದ ತಜ್ಞರು ಈ ರೀತಿಯಾದಂತಹ ಒಂದು ಸಂವಿಧಾನವನ್ನು ರಚನೆ ಮಾಡಿದ್ದಾರೆ. ಅದಕ್ಕೆ ಆ federal structure ಗೆ ಧಕ್ಕೆಯಾಗುವಂತಹ ಕೆಲಸ ದೇಶದಲ್ಲಿ ವಿಚಿತ್ರಕಾರಿಯಾದಂತಹ ಶಕ್ತಿಗಳನ್ನು ಸೆದೆಬಡಿಯುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕು. the government must mercilessly suppress such acts with iron hands. The government must not hesitate. ನಮ್ಮ ನಾಡಿನ ನೆಲ, ಜಲ ಭಾಷೆಗಾಗಿ ಹೋರಾಟ ಮಾಡುವವರ ವಿರುದ್ಧವೇ murder case ಹಾಕುತ್ತಾರೆ, heinous offence ಆಗುವಂತಹ IPC section ಬಳಕೆ ಮಾಡಿದರೆ, ನಾಳೆ ಒಂದು ದಿವಸ ಅವರಿಗೆ ಕರ್ನಾಟಕದಲ್ಲಿದ್ದೇವೆ ಅಥವಾ ಬೇರೆ ಎಲ್ಲಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಇದ್ದೇವೆಂಬ ಸಂಶಯ ಬರುತ್ತದೆ. ಪರಕೀಯರು ಎನಿಸಿಕೊಳ್ಳುವಂತಹ ಸಂಶಯ ಬರುತ್ತದೆ. ಈಗ ಮಾನ್ಯ ಸಭಾಪತಿಯವರು ಬೆಲ್ ಹೊಡೆದಿದ್ದಾರೆ. ಮಾನ್ಯ ಸಭಾಪತಿಯವರು ಬೆಲ್ ಹೊಡೆದ ಕೊಡಲೇ ನಾನು ಮಾತನಾಡುವುದನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆ. ಅದಕ್ಕೆ ನಂಬಿಸುವುದಕ್ಕೆ ಹೋಗುವುದಿಲ್ಲ. ಈ ಘಟನೆಯಲ್ಲಿ ಎಂ.ಇ.ಎಸ್. ರವರನ್ನು ಮೀನಾಮೇಷ ಮಾಡುವಂತಿಲ್ಲ. ಕೆಲವು ಸದಸ್ಯರು ಇಂದು ಸಂಜೆಯೊಳಗೆ ಎಂದು ಹೇಳಿದ್ದಾರೆ.

(ಮುಂದು)

**(1172) 20-12-2021 (12.10) ಎಂವಿ-ಎಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಈ ಅಧಿವೇಶನದ ಒಳಗಾಗಿಯಾದರೂ, ಎಂ.ಇ.ಎಸ್. ನವರನ್ನು ನಿಷೇಧ ಮಾಡಬೇಕು. ಅವರನ್ನು ಗಡಿಪಾರು ಮಾಡುವಂತಹ ಉಗ್ರವಾದ ಶಿಕ್ಷೆಯನ್ನು ನೀಡಬೇಕು. ಇವತ್ತು ನಮ್ಮ ಈ ನಾಡಿನ ನೆಲ, ಜಲ, ಭಾಷೆ ಮತ್ತು ಗಡಿಯ ಬಗ್ಗೆ ಚಕಾರ ಶಬ್ದ ಎತ್ತಲಾರದ ಹಾಗೆ ಅವರ ವಿರುದ್ಧ ನಿರ್ಧಾಕ್ಷಿಣ್ಯವಾದ ಕ್ರಮಕೈಗೊಳ್ಳುತ್ತಾರೆ ಎಂಬ ವಿಶ್ವಾಸದೊಂದಿಗೆ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 59ರ ಅಡಿಯಲ್ಲಿ ತಂದಿರತಕ್ಕಂಥ ವಿಷಯವನ್ನು, ತಾವು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 68ಕ್ಕೆ convert ಮಾಡಿದ್ದೀರಿ. ಮೊದಲನೆಯದಾಗಿ, ನಾನು ನಮ್ಮ ದೇಶದ ಅಪ್ರತಿಮ ವೀರ ಮತ್ತು ಸ್ವಾತಂತ್ರ್ಯ ಸೇನಾನಿಯಾದ ಶ್ರೀ ಸಂಗೊಳ್ಳಿ ರಾಯಣ್ಣರವರ ಪ್ರತಿಮೆಯನ್ನು ಭಗ್ನಗೊಳಿಸಿರುವುದನ್ನು ಅತ್ಯುಗ್ರವಾಗಿ ಖಂಡಿಸುತ್ತೇನೆ. ಅದೇ ರೀತಿ ನಾನು ಶ್ರೀ ಶಿವಾಜಿ ಮಹಾರಾಜರ ಪ್ರತಿಮೆಗೆ ಅವಮಾನ ಮಾಡಿರುವುದನ್ನು ಸಹ ಒಪ್ಪುವುದಿಲ್ಲ. ಆದರೆ, ವ್ಯತ್ಯಾಸವೇನೆಂದರೆ, ಅವರು ಕನ್ನಡಿಗರನ್ನು ಕೆರಳಿಸಿ ನಮ್ಮ ಶ್ರೀ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಭಗ್ನ ಮಾಡಿರುವುದರಿಂದ, ಅದರಿಂದ ಪ್ರೇರೇಪಿತರಾಗಿ ಕೆರಳಿ ಅದಕ್ಕೆ ಹೋಗಿ ತೊಂದರೆ ಮಾಡುವಂಥದ್ದು. ಅಂದರೆ, ಒಂದನ್ನು ಮಾಡಿದರೆ ಇನ್ನೊಂದು ಏನೋ ನಡೆಯುತ್ತದೆ. ಆದರೆ, ಸರ್ಕಾರ ಏನು ವ್ಯತ್ಯಾಸ ಮಾಡಿದೆ ಎಂದರೆ, ಶ್ರೀ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಭಗ್ನ ಮಾಡಿರುವಂತಹ ಪುಂಡರು ಮತ್ತು ಪೋಕರಿಗಳು. ಅಂದರೆ, ಮಹಾರಾಷ್ಟ್ರ ಏಕೀಕರಣದ ಹೆಸರು ಹೇಳಿಕೊಂಡು ಮಾಡಿರುವಂತಹ ಪುಂಡರುಗಳ ಮೇಲೆ ಸಾಮಾನ್ಯ ಕೇಸ್ ಹಾಕಿ. ಅಲ್ಲಿ ಶ್ರೀ ಶಿವಾಜಿ ಮಹಾರಾಜರಿಗೆ ಅವಮಾನ ಮಾಡಿದಂತಹ ಕನ್ನಡಿಗರ ಮೇಲೆ ಕೊಲೆಯತ್ನದ ಮೊಕದ್ದಮೆ ಹಾಕಿರುವುದು ಸರಿಯಲ್ಲ ಎನ್ನುವುದು ನನ್ನ ಅನಿಸಿಕೆ. ಅದರ ಜೊತೆಗೆ, ಇವತ್ತಿನ ದಿನ ಏನು ಶ್ರೀ ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಅವಮಾನ ಮಾಡಿರುವುದು,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸುಮ್ಮನೆ ಮಾಡಿರುವುದು ಅಲ್ಲ. ಇದನ್ನು ಅತ್ಯಂತ ಸಂಘಟಿತರಾಗಿ, ಮೊದಲೇ ಪೂರ್ವಯೋಜನೆ ಮಾಡಿಕೊಂಡು, ಬೆಳಗಾವಿಯಲ್ಲಿ ಸದನ ನಡೆಯುವಾಗಲೇ ಇಂತಹ ದಿವಸ, ಇಂತಹ ಸಮಯದಲ್ಲೇ ಮಾಡಬೇಕು ಎನ್ನುವಂತಹ ದೃಷ್ಠಿಯಿಟ್ಟುಕೊಂಡು ಮಾಡಿರುವಂತಹ ಕೃತ್ಯ ಇದು. ಹಾಗಾಗಿ, ಇವರನ್ನು ಕೇವಲ ಗಡಿಪಾರು ಮಾಡಿದರೆ ಸಾಲದು, ಇವರ ಮೇಲೆ ಕೇವಲ ಮೊಕದ್ದಮೆಗಳನ್ನು ಹಾಕಿದರೆ ಸಾಲದು. ಆದರೆ, ಸಂಘಟಿತ ಅಪರಾಧ ಮಾಡಿರುವಂತಹ ಇಂತಹ ಪುಂಡರುಗಳ ಮೇಲೆ K.C.O.C.A (Karnataka Control of Organized Crime Act) ಅಡಿಯಲ್ಲಿ ಪ್ರಕರಣ ದಾಖಲು ಮಾಡಿ, ಅವರನ್ನು ಒಳಗಡೆಗೆ ಹಾಕಬೇಕು. ಆಗ ಮಾತ್ರ, ನಮ್ಮ ಭಾರತದ ಸಾರ್ವಭೌಮತ್ವ ಮತ್ತು ಒಕ್ಕೂಟ ವ್ಯವಸ್ಥೆ success ಆಗುವುದಕ್ಕೆ ಸಾಧ್ಯ. ಈಗ ಯಾರೋ ನಾಲ್ಕು ಜನ ಮಾಡಿರುವುದಕ್ಕೆ ಇಡೀ ವ್ಯವಸ್ಥೆ, ಈಗ ಮಹಾರಾಷ್ಟ್ರದವರು ನಮ್ಮ ಮೇಲೆ ಬೀಳುವುದಿಲ್ಲ. ನಾವುಗಳೇನು ಅವರ ಮೇಲೆ ಬೀಳುವುದಿಲ್ಲ. ಆದರೆ, ಯಾರೋ ನಾಲ್ಕು-ಹತ್ತು ಜನ ಸೇರಿಕೊಂಡು ಮಾಡುವಂತಹ ಇಂತಹ ಕೆಟ್ಟ ಕೆಲಸಕ್ಕೆ, ಅಲ್ಲಿ ಮಹಾರಾಷ್ಟ್ರಕ್ಕೆ ಹೋಗಿರುವಂತಹ ಕನ್ನಡಿಗರಿಗೆ ತೊಂದರೆಯಾಗುತ್ತದೆ. ಈಗ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದು ಓಡಾಡುತ್ತಿದ್ದರೆ, ಅನಗತ್ಯವಾಗಿ ಅಂತಹವರಿಗೆ ತೊಂದರೆಯಾಗುತ್ತದೆ. ಅದಕ್ಕೆ ನಾನು ಸರ್ಕಾರ ಮತ್ತು ಮಾನ್ಯ ಗೃಹ ಸಚಿವರನ್ನು ಒತ್ತಾಯ ಮಾಡುತ್ತೇನೆ. ಯಾವುದೇ ಕಾರಣಕ್ಕೂ ಕೂಡ ಇವರ ಮೇಲೆ ಕನಿಕರ ಬೇಡ ಮತ್ತೆ ಅವರು ಸರಿಯಾಗುತ್ತಾರೆ ಎಂಬುದು ಬೇಡ. ಇನ್ನು ಮುಂದೆ ಯಾರೂ ಕೂಡ ಇಂತಹ ಕೃತ್ಯಗಳಿಗೆ ಕೈ ಹಾಕಿ ಮತ್ತು ತಲೆ ಹಾಕಬಾರದು. ಇದು ನೂರಕ್ಕೆ ನೂರು ಭಾಗ ಸಂಘಟಿತ ಅಪರಾಧ. ಇದರಲ್ಲಿ ಯಾವ ಅನುಮಾನವೂ ಬೇಡ. ಆದರೆ, ಆ ಒಂದು ಘಟನೆ ನಿನ್ನೆ ಮತ್ತು ಇವತ್ತಿನ ದಿವಸ ಇಡೀ ಕರ್ನಾಟಕದ ಜನರು, ಹೋರಾಟಗಾರರು, ಕನ್ನಡಪರ ಹೋರಾಟಗಾರರು ಮತ್ತು ರೈತ ಹೋರಾಟಗಾರರು ಈ ಎಲ್ಲರೂ ಕೂಡ ಬೀದಿಗೆ ಬರುವಂತಹ ಪರಿಸ್ಥಿತಿ ಉದ್ಭವವಾಗಿದೆ. ಇದೆಲ್ಲಾ ಬೇಕಿತ್ತೇ? ಇದು ಸುಮ್ಮನೆ ಯಾರೋ ಕಿಡಿಗೇಡಿಗಳು, ಎಲ್ಲೋ ಕುಳಿತುಕೊಂಡು, ಈ ರೀತಿ ಮಾಡಬೇಕೆಂದು ಒಂದು ಐಡಿಯಾ ಇಟ್ಟುಕೊಂಡು, ಇದನ್ನು ಮಾಡಿ. ರಾಜ್ಯಕ್ಕೆ ಬೆಂಕಿ ಹಚ್ಚುವಂತಹ ಕೆಲಸವನ್ನು ಮಾಡಿದ್ದಾರೆ. ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮತ್ತೊಮ್ಮೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವುದೇ ಕಾರಣಕ್ಕೂ ಅವರನ್ನು ಬಿಡುವುದು ಬೇಡ. ಅದೇ ರೀತಿ ಕನ್ನಡಿಗರ ಮೇಲೆ ಅನಗತ್ಯವಾಗಿ, ಈಗ ಮೊದಲು ಮಾಡಿದವರು ಯಾರು ಎಂದರೆ, ಈ ಪುಂಡರುಗಳು. ಅವರ ಮೇಲೆ ಕ್ರಮ ಕೈಗೊಳ್ಳಬೇಕೆ ಹೊರತು, ಅದರಿಂದ ಕೆರಳಿ ಮತ್ತು ಬೇಸರವಾಗಿ ಈ ರೀತಿ ಮಾಡಿದರಲ್ಲ ಎಂದು ಏನೋ ಒಂದು ಸಣ್ಣದನ್ನು ಮಾಡಿದರೆ, ಅವರ ಮೇಲೆ ಕೊಲೆಯತ್ನದ ಕೇಸ್‌ಗಳನ್ನು ಹಾಕುವುದರ ಬದಲು, ಇಂತಹ ಪುಂಡರು ಇನ್ನೆಂದೂ ಕೂಡ ತಲೆ ಎತ್ತದಂತೆ, ಅವರ ವಿರುದ್ಧ K.C.O.C.A ಅಡಿಯಲ್ಲಿ ಪ್ರಕರಣ ದಾಖಲು ಮಾಡಿ ಅವರನ್ನು ಒಳಗಡೆ ಹಾಕುವಂತಹ ಕೆಲಸ ಮಾಡಲಿ. ಅವರಿಗೆ ಎಚ್ಚರಿಕೆಯನ್ನು ಕೊಟ್ಟು, ಇನ್ನು ಮುಂದೆ ಯಾರೂ ಕೂಡ ಈ ರೀತಿ ಮಾಡದಂತೆ, ಇಡೀ ರಾಜ್ಯಕ್ಕೆ ಒಂದು ಸಂದೇಶವನ್ನು ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ಈಗ ಏನು ಸ್ವಾತಂತ್ರ್ಯ ಸೇನಾನಿಗಳಾದಂತಹ ಸನ್ಮಾನ್ಯ ಸಂಗೊಳ್ಳಿ ರಾಯಣ್ಣ ಹಾಗೆಯೇ ಸನ್ಮಾನ್ಯ ಶಿವಾಜಿ ಮಹಾರಾಜರು ಇವರಿಬ್ಬರೂ ಕೂಡ ಕೇವಲ ಪ್ರಾಂತ್ಯಕ್ಕಾಗಲಿ ಅಥವಾ ಯಾವುದೇ ಒಂದು ಸಮುದಾಯಕ್ಕಾಗಲಿ ಸೀಮಿತವಾಗಿರತಕ್ಕಂತಹವರಲ್ಲ. ಈ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ವೀರ ಮರಣವನ್ನು ಹೊಂದಿದ ಮಹಾನ್ ಚೇತನಗಳು. ಇವತ್ತು ಕನ್ನಡ ಭಾಷೆಗೆ ತನ್ನದೇ ಆದಂತಹ ಪ್ರತೀತಿ ಇದೆ. ಇಡೀ ನಮ್ಮ ದೇಶದಲ್ಲಿ ಎಷ್ಟು ರಾಜ್ಯಗಳು ಮತ್ತು ಎಷ್ಟು ಭಾಷೆಗಳಿವೆಯೋ? ಅದರಲ್ಲಿ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಬಂದಿರುವಂಥದ್ದು ಕನ್ನಡ ಭಾಷೆಗೆ. ಕನ್ನಡ ಭಾಷೆಗೆ ಸುಮಾರು ಒಂಬತ್ತು ಜ್ಞಾನಪೀಠ ಪ್ರಶಸ್ತಿಗಳು ಬಂದಿವೆ. ನಾವು ಕನ್ನಡಿಗರು ಶಾಂತಿಪ್ರಿಯರು. ಈಗ ಹೊರಗಡೆಯಿಂದ ಯಾರೇ ಬಂದರೂ ನಮಗೆ ಒಂದು ಹೊತ್ತು ತಿನ್ನುವುದಕ್ಕೆ ಇಲ್ಲದೇ ಹೋದರೂ ಕೂಡ, ಬಂದಂತಹ ಅತಿಥಿಗಳನ್ನು ನಮ್ಮ ಸಹೋದರ ಭಾವತ್ವದಿಂದ ನೋಡಿ, ಅವರಿಗೆ ಆಶ್ರಯ ಕೊಡುವಂಥದ್ದನ್ನು ಇದುವರೆಗೂ ನಾವು ತಲೆತಲಾಂತರದಿಂದ ನಡೆಸಿಕೊಂಡು ಬಂದಿದ್ದೇವೆ. ಇವತ್ತಿನ ದಿವಸ ಕನ್ನಡಿಗರಿಗೆ ಅದೇ ಎಲ್ಲೋ ಒಂದು ದೌರ್ಭಾಗ್ಯ ಎನ್ನುವಂತಹ ಭಾವನೆ ಮೂಡಿದೆ. ಅದರ ಪ್ರಯುಕ್ತವಾಗಿ, ಕರ್ನಾಟಕ ರಾಜ್ಯ ಏಕೀಕರಣವಾದ ಮೇಲೆ, ಭಾಷೆಗಳ ಆಧಾರದ ಮೇಲೆ ಯಾವ್ಯಾವ ಭಾಷೆಗಳನ್ನು ಮಾತನಾಡುತ್ತಿದ್ದವೋ, ಆ ಪ್ರಾಂತ್ಯಗಳನ್ನು ಒಗ್ಗೂಡಿಸಿ, ಈ ರಾಜ್ಯಗಳನ್ನು ಮಾಡಿರುವಂಥದ್ದು. ಅಂದು ಈ ಬೆಳಗಾವಿ ಜಿಲ್ಲೆಯಲ್ಲಿ ನೆರೆ ರಾಜ್ಯದ ಜನ ಏನು ಇಲ್ಲಿ ನೆಲೆಸಿದ್ದರು. ಅವರೂ ಕೂಡ 1956ರಲ್ಲಿ 'ಚೆಲುವ ಕನ್ನಡ ನಾಡು' ಏನು ಉದಯವಾಯಿತೋ, ಅವತ್ತು ಮರಾಠಿ ಭಾಷಿಗರು ಕೂಡ ಕರ್ನಾಟಕ ರಾಜ್ಯದಲ್ಲಿ ಇರುತ್ತೇವೆ ಎನ್ನುವಂತಹ ಸಹಮತಿಯನ್ನು ನೀಡಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಈ ಪುಂಡರು, ಮಹಾರಾಷ್ಟ್ರ ಏಕೀಕರಣ ಎಂದು ಏನು ಪಕ್ಷವಿದೆ, ಅದರ ಸದಸ್ಯರು ಕನ್ನಡಿಗರ ಮೇಲೆ ದಬ್ಬಾಳಿಕೆ ಮಾಡುತ್ತಿರುವಂಥದ್ದನ್ನು ಮೊದಲಿಗೆ ನಾವು ಖಂಡಿಸುತ್ತೇವೆ. ಮಾನ್ಯ ಗೃಹಸಚಿವರೇ, ಇದು ಕೇವಲ ಒಂದು ಬಾರಿ, ಎರಡು ಬಾರಿ ಆಗಿರುವಂಥದ್ದಲ್ಲ. ಇಲ್ಲಿ ಆಗಿಂದಾಗ್ಗೆ ಕನ್ನಡಿಗರ ಮೇಲೆ ದೌರ್ಜನ್ಯವಾಗುತ್ತಲೇ ಇದೆ. ಯಾವುದಾದರೂ ಕನ್ನಡ ಸಂಘಟನೆಗಳು ಕನ್ನಡ ಬಾವುಟವನ್ನು ಹಾಕುವುದಕ್ಕೆ ಹೋದರೆ. ಉದಾಹರಣೆಗೆ; ಬೆಳಗಾವಿಯ ಕಾರ್ಪೊರೇಷನ್ ಮುಂದೆ ಕನ್ನಡ ಬಾವುಟ ಹಾಕುವುದಕ್ಕೆ ಬಿಡಲಿಲ್ಲ. ಕರ್ನಾಟಕ ರಾಜ್ಯೋತ್ಸವ ಮಾಡುವುದಕ್ಕೆ ಬಿಡುವುದಿಲ್ಲ. ಆದ್ದರಿಂದ, ಆಗಿಂದಾಗ್ಗೆ ಸರ್ಕಾರ ಎಚ್ಚೆತ್ತುಕೊಂಡು, ಅವರಿಗೆ ಬಿಸಿ ಮುಟ್ಟಿಸುವಂತಹ ಕೆಲಸವನ್ನು ಮಾಡಿದ್ದರೆ, ಅವರು ಇಲ್ಲಿಯ ತನಕ ಬರುತ್ತಿರಲಿಲ್ಲ. ಈಗ ಮೂರು ವರ್ಷವಾದ ಮೇಲೆ, ಉತ್ತರ ಕರ್ನಾಟಕದ ರೈತರ ಬಗ್ಗೆ, ನೆಲ-ಜಲದ ಬಗ್ಗೆ ಬಹಳ ಪರಿಣಾಮಕಾರಿಯಾಗಿ ನಾವು ಮಾತನಾಡಬೇಕೆಂದು ಇವತ್ತಿನ ಅಧಿವೇಶನವನ್ನು ಕರೆದಿರುವಂಥದ್ದು. ನಾವು ಅಧಿವೇಶನವನ್ನು ಕರೆದ ದಿನವೇ, ಅವರು ಮಹಾಮೇಳ ಮಾಡಬೇಕೆಂದು ಹೊರಟ್ಟಿದ್ದರು. ಅವತ್ತು ಏನಾದರೂ ಸರ್ಕಾರ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಚ್ಚೆತ್ತುಕೊಂಡು, ಅವರಿಗೆ ಬಿಸಿ ಮುಟ್ಟಿಸಿದ್ದರೆ, ಅವರು ಇಲ್ಲಿಯವರೆಗೆ ಹೋಗುತ್ತಿರಲಿಲ್ಲ. ಶ್ರೀ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಧ್ವಂಸ ಮಾಡಿ, ಕನ್ನಡಿಗರನ್ನು ಕೆರಳಿಸುವುದಕ್ಕೆ ಇದು ಕೂಡ ಒಂದು ಘಟನೆಯಾಯಿತು. ಇಲ್ಲಿ ಇವತ್ತು ಏನು ಅಧಿವೇಶನ ನಡೆಯುತ್ತಿದೆ, ಇಡೀ ಸರ್ಕಾರವೇ ಬೆಳಗಾವಿ ಜಿಲ್ಲೆಯಲ್ಲಿ ಇದೆ. ಅಧಿಕಾರಿಗಳು ರಾತ್ರಿ 12 ಗಂಟೆಗೆ ಅಧಿವೇಶನ ಮುಗಿಸಿಕೊಂಡು ತಮ್ಮ ತಮ್ಮ ನಿಲಯಗಳಿಗೆ ಹೋಗಿ ಇರಬೇಕಾದರೆ, ಕಿಡಿಗೇಡಿಗಳು ರಾತ್ರಿ ಬಂದು, ಸುಮಾರು 30-40 ಸರ್ಕಾರಿ ವಾಹನಗಳನ್ನು ಜಖಂ ಮಾಡಿ, ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚುತ್ತಾರೆ.

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಸುಮಾರು ಆರು ವಾಹನಗಳಿಗೂ ಸಹ ಕಲ್ಲು ಹೊಡೆದಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೌದು, ವಿಧಾನ ಪರಿಷತ್ತಿನ ವಾಹನಗಳಿಗೂ ಸಹ ಕಲ್ಲು ಹೊಡೆದಿರತಕ್ಕಂಥದ್ದು. ಅಂದರೆ, ಅವರಿಗೆ ಎಷ್ಟು ಧೈರ್ಯ ಇರಬೇಕು. ಇವತ್ತು ನಾವು ದೃಶ್ಯ ಮಾಧ್ಯಮದ footage ನಲ್ಲಿ ನೋಡುತ್ತಿದ್ದೇವೆ. ಈಗ ಯಾರೋ ಸುಮಾರು 24 ಜನರನ್ನು ಬಂಧಿಸಿದ್ದೇವೆಂದು ಸರ್ಕಾರ ಹೇಳುತ್ತಿದೆ. ಆದರೆ, ನಮ್ಮೆಲ್ಲಾ ಸದಸ್ಯರು ಹೇಳಿದ ಹಾಗೆ, ಇವರು ನಮ್ಮನ್ನು ಕೆರಳಿಸಿ, ಶ್ರೀ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಧ್ವಂಸ ಮಾಡಿ, ಸರ್ಕಾರಿ ವಾಹನಗಳನ್ನು ಜಖಂ ಮಾಡಿ ಅವುಗಳಿಗೆ ಬೆಂಕಿ ಇಟ್ಟು, ಈ ರೀತಿ ವರ್ತನೆ ಮಾಡುತ್ತಿದ್ದರೆ ಅವರನ್ನು ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿ ಅವರ ವಿರುದ್ಧ ಒಂದು ಸಾಧಾರಣ ಪ್ರಕರಣ ದಾಖಲು ಮಾಡುತ್ತಾರೆ.

(ಮುಂದು)

(1173) 20.12.2021 04.10 LL-RN **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು)**

ಆದರೆ, ಸಂಗೊಳ್ಳಿ ರಾಯಣ್ಣರವರ ಪ್ರತಿಮೆ ಧ್ವಂಸ ಮಾಡಿದ್ದಕ್ಕಾಗಿ, ಕನ್ನಡಿಗರು ಕೆರಳಿ ಬೆಂಗಳೂರಿನಲ್ಲಿರುವ ಶಿವಾಜಿ ಪ್ರತಿಮೆಗೆ ಮಸಿ ಬಳಿದ ಕೂಡಲೇ ಕನ್ನಡ ಸ್ವಾಭಿಮಾನಿಗಳನ್ನು ಅರೆಸ್ಟ್ ಮಾಡಿ ಅವರ ವಿರುದ್ಧ ತೀವ್ರವಾದಂತಹ ಪ್ರಕರಣವನ್ನು ಹಾಕುತ್ತಾರೆ. ಇದರಿಂದಾಗಿ, ಕರ್ನಾಟಕ ಸರ್ಕಾರ ಕನ್ನಡಿಗರ ಪರವಾಗಿದೆಯೇ ಅಥವಾ ಮಹಾರಾಷ್ಟ್ರದವರಿಗೆ ಹೆದರಿ ಆಡಳಿತ ಮಾಡುತ್ತಿದ್ದಾರೆಯೇ? ಅಥವಾ ಬೇರೆ ಯಾವುದಾದರೂ ಮುಲಾಜಿಗೆ ಸರ್ಕಾರ yield ಆಗಿದೆಯೇ? ಎಂದು ಸಂಶಯ ವ್ಯಕ್ತವಾಗುತ್ತದೆ.

ಇಷ್ಟೆಲ್ಲಾ ಘಟನೆಗಳಾದರೂ ಕೂಡ ಈ ಕೂಡಲೇ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು, “ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಮರಾಠಿಗರನ್ನು ಕಾಪಾಡತಕ್ಕಂತಹ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಕೆಲಸವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ತಿಳಿಸಬೇಕೆಂದು" ಕೋರುತ್ತಾರೆ. ಇವೊತ್ತಿನ ದಿವಸ ಮಹಾರಾಷ್ಟ್ರ ರಾಜ್ಯದಲ್ಲಿರುವಂತಹ ಕನ್ನಡಿಗರ ಮೇಲೆ ಅಂದರೆ, ಯಾರು ತಮ್ಮ ಅಂಗಡಿ ಮುಂಗಟ್ಟುಗಳ ಮೇಲೆ ಕನ್ನಡದಲ್ಲಿ ಬೋರ್ಡ್‌ಗಳನ್ನು ಹಾಕಿ ವ್ಯಾಪಾರ ಮಾಡುತ್ತಿದ್ದಾರೋ ಆ ಅಂಗಡಿ ಮುಂಗಟ್ಟುಗಳನ್ನು ಧ್ವಂಸ ಮಾಡುತ್ತಿದ್ದಾರೆ. ಅದನ್ನು ನಾವು ಟಿ.ವಿ. ಮಾಧ್ಯಮಗಳಲ್ಲಿ ಲೈವ್ ಆಗಿ ನೋಡುತ್ತಿದ್ದೇವೆ. ನಮ್ಮ ರಾಜ್ಯದ ಕನ್ನಡ ಧ್ವಜವನ್ನು ಸುಟ್ಟು ಹಾಕಿ, ನಮ್ಮ ಧ್ವಜದ ಮೇಲೆ ನಾಯಿಯನ್ನು ಕೂರಿಸಿ ನಮ್ಮ ನಾಡಿಗೆ ಅಗೌರವ ತೋರಿಸುತ್ತಿದ್ದರೂ ಸಹ, "ಮಹಾರಾಷ್ಟ್ರದಲ್ಲಿರತಕ್ಕಂತಹ ಕನ್ನಡಿಗರನ್ನು ಕಾಪಾಡುವುದು ತಮ್ಮ ಕರ್ತವ್ಯವೆಂದು ಮಹಾರಾಷ್ಟ್ರ ಸರ್ಕಾರಕ್ಕೆ ಹೇಳಬೇಕೆಂದು" ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವುದಕ್ಕೆ ನಮ್ಮ ಸರ್ಕಾರಕ್ಕೆ ತಾಕತ್ತು ಇರುವುದಿಲ್ಲವೇ? ಇದರಿಂದಾಗಿ, ಇನ್ನು ಎಷ್ಟು ಜನ ಅಮಾಯಕರು ಪ್ರಾಣ ಕಳೆದುಕೊಳ್ಳಬೇಕು.

ಈ ಘಟನೆ ಬಗ್ಗೆ ಟಿ.ವಿ.ಮಾಧ್ಯಮದಲ್ಲಿ ನೋಡುತ್ತಿದ್ದಾಗ, ಮಹಾರಾಷ್ಟ್ರಕ್ಕೆ ಪ್ರವಾಸ ಹೋಗಿರತಕ್ಕಂತಹ ಕನ್ನಡಿಗರು ಅಂದರೆ, ಕರ್ನಾಟಕ ರಿಜಿಸ್ಟ್ರೇಷನ್ ಇರತಕ್ಕಂತಹ ವಾಹನವನ್ನು ಕೆಲವು ಪುಂಡರು ಅಟ್ಟಾಡಿಸಿಕೊಂಡು ಬಂದು, ಆ ವಾಹನದ ಮೇಲೆ ದಪ್ಪದಾದ ಕಲ್ಲನ್ನು ಹಾಕುತ್ತಾರೆ. ನಂತರ, ಆ ವಾಹನದವರು ಹೇಗೋ ತಪ್ಪಿಸಿಕೊಂಡು ವೇಗವಾಗಿ ಹೋಗುತ್ತಾರೆ ಮತ್ತು ಆ ಅಮಾಯಕರನ್ನು ರಾಜಾರೋಷವಾಗಿ ಅವರು ಹೊಡೆಯುತ್ತಾರೆಂದರೆ, ನಾವು ಕನ್ನಡಿಗರಿಗೆ ಒಂದು ಕರೆ ಕೊಟ್ಟರೆ, ಮಹಾರಾಷ್ಟ್ರದಲ್ಲಿರತಕ್ಕಂತಹ ಜನರ ಮೇಲೆ ಕೈ ಮಾಡುವುದಕ್ಕೆ ಅವರಿಗೆ ಸಾಧ್ಯವಿಲ್ಲವೇ?

ಇದು ಇಡೀ ಆರೂವರೆ ಕೋಟಿ ಕನ್ನಡಿಗರ ಸ್ವಾಭಿಮಾನದ ಪ್ರಶ್ನೆಯಾಗಿದೆ. ಒಂದು ವೇಳೆ, "ನಾವೆಲ್ಲರೂ ಕನ್ನಡ ಪರ ಸಂಘಟನೆಗಳಿಗೆ ಧ್ವನಿಯಾಗಿ ನಿಲ್ಲುತ್ತೇವೆ, ನಾವು ತಮಗೆ ಸಹಕಾರ ಕೊಡುತ್ತೇವೆಂದು" ಎಂದು ಹೇಳಿಕೆ ನೀಡಿದರೆ ಸಾಕು, ನಾಳೆ ದಿವಸ ಲಕ್ಷಾಂತರ ಜನರು ಬೆಳಗಾವಿಗೆ ಬರುವುದಿಲ್ಲವೇ? ಶಾಂತಿಯನ್ನು ಕದಡಬೇಕು, ಕರ್ನಾಟಕ ರಾಜ್ಯಕ್ಕೆ ಕೆಟ್ಟ ಹೆಸರು ತರಬೇಕು ಎನ್ನುವಂತಹ ಉದ್ದೇಶದಿಂದ ಇವೊತ್ತಿನ ದಿವಸ ಎಂ.ಇ.ಎಸ್.ನವರು ಏನು ಮಾಡುತ್ತಿದ್ದಾರೆ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಮಾನ್ಯ ಆಡಳಿತ ಪಕ್ಷದ ನಾಯಕರು ಮತ್ತು ಮಾನ್ಯ ಗೃಹ ಸಚಿವರಲ್ಲಿ ನಾನು ಮನವಿ ಮಾಡುವುದೇನೆಂದರೆ, ಈ ವಿಚಾರದಲ್ಲಿ ವಿರೋಧ ಪಕ್ಷವಾಗಿರತಕ್ಕಂತಹ ಈ ಕಾಂಗ್ರೆಸ್ ಪಕ್ಷ ತಮ್ಮ ಪರವಾಗಿ ನಿಲ್ಲುತ್ತದೆ. ಸರ್ಕಾರ ತೆಗೆದುಕೊಳ್ಳುವಂತಹ ತೀರ್ಮಾನಕ್ಕೆ ನಾವು ಸಂಪೂರ್ಣವಾದ ಸಹಕಾರ ನೀಡುತ್ತೇವೆ. ಈ ಪುಂಡರನ್ನು ಈ ಕೂಡಲೇ ಗಡಿಪಾರು ಮಾಡಬೇಕು ಮತ್ತು ಅವರ ವಿರುದ್ಧ ತೀಕ್ಷ್ಣವಾದ ಕ್ರಮ ಕೈಗೊಳ್ಳಬೇಕು. ಆ ಕ್ರಮ ಯಾವ ರೀತಿ ಇರಬೇಕೆಂದರೆ, ಇನ್ನು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಂದೆ ಯಾವುದೇ ಒಬ್ಬ ಎಂ.ಇ.ಎಸ್. ಕಾರ್ಯಕರ್ತ ಕನ್ನಡಿಗರ ಜೊತೆ ಚೆಲ್ಲಾಟ ಆಡಬಾರದು ಎಂಬ ಎಚ್ಚರಿಕೆ ಕೊಡತಕ್ಕಂತಹ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಇದರ ಜೊತೆಗೆ, ಎಂ.ಇ.ಎಸ್. ಪುಂಡರು ನಡೆಸಿರುವಂತಹ ಘಟನೆ ವಿರುದ್ಧ ಕನ್ನಡದ ಪರ ಏನು ತಮ್ಮ ಧ್ವನಿಯನ್ನು ಎತ್ತಿ ಅರೆಸ್ಟ್ ಆಗಿರುವಂತಹ ಕನ್ನಡಿಗರನ್ನು ಈ ಕೂಡಲೇ ಬಿಡುಗಡೆ ಮಾಡಿ, ಅವರ ವಿರುದ್ಧ ದಾಖಲು ಮಾಡಿರುವಂತಹ ಪ್ರಕರಣವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಆಗ್ರಹ ಮಾಡುತ್ತೇನೆ. ಇವೊತ್ತಿನ ದಿವಸ ಕನ್ನಡ ನಾಡಿಗೆ ತನ್ನದೇ ಆದಂತಹ ಕೀರ್ತಿ ಇದೆ. ದೇಶ-ವಿದೇಶಗಳಲ್ಲಿ ಕನ್ನಡ ನಾಡಿನ ಕಡೆ ಗಮನವನ್ನು ಕೊಡುತ್ತಿದ್ದಾರೆ. ಇವೊತ್ತಿನ ದಿವಸ ಇಂತಹ ಅಹಿತಕರ ಘಟನೆ ಆಗುವುದರಿಂದ, ನಮ್ಮ ರಾಜ್ಯಕ್ಕೆ ವಿದೇಶಿ ಹೂಡಿಕೆದಾರರು ಬರಬೇಕೆಂದು ಭಾವಿಸುತ್ತಿದ್ದಾರೆಯೋ ಅದೆಲ್ಲದರ ಮೇಲೆ ಈ ಘಟನೆ ಪರಿಣಾಮ ಬೀರುತ್ತದೆ ಆದುದರಿಂದ, ನಾನು ತಮ್ಮ ಮೂಲಕ ಮಾನ್ಯ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಈ ಘಟನೆಯಲ್ಲಿ ಭಾಗಿಯಾಗಿರುವಂತಹ ಪುಂಡರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು. ಆ ಕ್ರಮ ಯಾವ ರೀತಿ ಇರಬೇಕೆಂದರೆ, ಇನ್ನು ಅವರ ಜೀವಮಾನದಲ್ಲಿ ಕನ್ನಡಿಗರ ತಂಟೆಗೆ ಬರಬಾರದ ರೀತಿ ಎಚ್ಚರಿಕೆ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಬಹುಶಃ ಮೇಲ್ನೋಟಕ್ಕೆ ಅಥವಾ ಒಳನೋಟಕ್ಕೆ ಈ ಮಹಾರಾಷ್ಟ್ರ ಏಕೀಕರಣ ಸಮಿತಿ ಆಗಬಹುದು ಅಥವಾ ಶಿವಸೇನೆಗೆ ಸೇರಿದ ಕಿಡಿಗೇಡಿಗಳು ಇವೊತ್ತಿನ ದಿವಸ ಮಾಡಿರುವಂತಹ ಕೃತ್ಯ ಬೆಳಗಾವಿಯ ಅಧಿವೇಶನವನ್ನು ಭಗ್ನ ಮಾಡುವುದಕ್ಕೆ ಮಾಡಿರತಕ್ಕಂತಹ ಪ್ರಯತ್ನವಾಗಿರುತ್ತದೆ. ಇದನ್ನು ಗೃಹ ಇಲಾಖೆಯ ಏತಕ್ಕಾಗಿ ಮೊದಲೇ ಅರಿತುಕೊಳ್ಳಲಿಲ್ಲ ಎಂಬುದು ಗೊತ್ತಾಗಲಿಲ್ಲ. ಬಹುಶಃ ಅವರು ಈ ಮೊದಲೇ ಆಲೋಚನೆ ಮಾಡಿದ್ದರೆ, “ಸುಮಾರು ಎರಡು ವರ್ಷಗಳ ನಂತರ ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದೆ; ಈ ರೀತಿಯಾಗಿ ವಿಘ್ನಗಳು ಬರಬಹುದು; ಅಧಿವೇಶನಕ್ಕೆ ಮುಂಚೆ ಕಿಡಿಗೇಡಿಗಳು ಈ ರೀತಿ ಮಾಡುತ್ತಾರೆ” ಎಂಬ ಬಗ್ಗೆ ಗುಪ್ತ ಸಮಾಲೋಚನೆಗಳು ನಡೆಯಲಿಲ್ಲವೆಂದು ಕಾಣುತ್ತಿದೆ.

ಇವೊತ್ತಿನ ದಿವಸ ಕನ್ನಡ ಧ್ವಜ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರವರ ಪ್ರತಿಮೆಗೆ ಏನು ಭಂಗ ಮಾಡಿದ್ದಾರೆ ಅದು ಅವಹೇಳನಕಾರಿ. ಅದೇ ರೀತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಅವಮಾನ ಮಾಡಿರುವುದು ಸಹ ಖಂಡನೀಯ. ಯಾವುದೇ ದೇಶ ಅಥವಾ ರಾಜ್ಯದ ಭಾಷೆ, ನೆಲ, ನುಡಿ, ಗಡಿ ಮತ್ತು ಧ್ವಜ ಅವು ಭಾವನಾತ್ಮಕವಾಗಿ ಎಲ್ಲರನ್ನೂ ಕೆರಳಿಸುತ್ತವೆ. ಯಾರೂ ಕೂಡ ತನ್ನ ಭಾಷೆಗೆ, ತನ್ನ ಧ್ವಜಕ್ಕೆ ಮತ್ತು ಹಿರಿಮೆ ಉಳ್ಳಂತಹವರ ವ್ಯಕ್ತಿಗಳಿಗೆ ಕೀಳರಿಮೆಯಾದರೆ ಅಥವಾ ಅವರ

ಪ್ರತಿಮೆಗಳಿಗೆ ಭಗ್ನ ಆದರೆ ಅದನ್ನು ಸಹಿಸುವುದಿಲ್ಲ. ಆ ದೃಷ್ಟಿಯಲ್ಲಿ ಇವೊತ್ತಿನ ದಿವಸ ನಡೆದಿರುವಂತಹ ಘಟನೆ ಬಗ್ಗೆ ಮಾನ್ಯ ಸರ್ಕಾರ ದಯಮಾಡಿ ಎಚ್ಚೆತ್ತುಕೊಳ್ಳಬೇಕು. ಕಾರಣವೇನೆಂದರೆ, ಬೆಳಗಾವಿ ಅಧಿವೇಶನದ ಸಮಯದಲ್ಲಿ ಏನಾದರೂ ಅಹಿತಕರ ಘಟನೆಯಾದರೆ, ಸಂಗೊಳ್ಳಿ ರಾಯಣ್ಣರವರು, ಬಸವೇಶ್ವರರವರು ಅಥವಾ ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಗಳಿಗೆ ವಿಘ್ನ ಆಗುತ್ತದೆ ಎಂದು ಹೇಳಿದರೆ, ಪ್ರಪ್ರಥಮವಾಗಿ ಬೆಂಗಳೂರಿನಲ್ಲಿರತಕ್ಕಂತಹ ಎರಡು ಶಿವಾಜಿ ಪ್ರತಿಮೆಗಳಿಗೆ ಹಾನಿ ಮಾಡುತ್ತಾರೆ. ಒಂದನೆಯದಾಗಿ, ಬೆಂಗಳೂರಿನ ಸದಾಶಿವನಗರದ ರಾಯಣ್ಣ ಸರ್ಕಲ್‌ನ ಬಳಿ ಇರುವ ಛತ್ರಪತಿ ಶಿವಾಜಿ ಪ್ರತಿಮೆ. ಎರಡನೆಯದಾಗಿ, ಚಾಮರಾಜಪೇಟೆಯಲ್ಲಿರುವಂತಹ ಛತ್ರಪತಿ ಶಿವಾಜಿ ಪ್ರತಿಮೆ. ಇದನ್ನು ಮಾನ್ಯ ಗೃಹ ಸಚಿವರು ಅಥವಾ ಗೃಹ ಇಲಾಖೆ ಏತಕ್ಕಾಗಿ ಮನಗಾಣಲಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ.

ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೋರಿಕೊಳ್ಳುವುದೇನೆಂದರೆ, ದಯಮಾಡಿ ಈ ರೀತಿ ಘಟನೆಯಾಗಬಾರದು. ಅದು ಸಂಗೊಳ್ಳಿ ರಾಯಣ್ಣರವರ ಪ್ರತಿಮೆ ಇರಬಹುದು, ಶಿವಾಜಿ ಮಹಾರಾಜರ ಪ್ರತಿಮೆ ಇರಬಹುದು ಅಥವಾ ಬೇರೆ ಯಾವುದಾದರೂ ಪ್ರತಿಮೆ ಇರಬಹುದು ಅವುಗಳಿಗೆ ವಿಘ್ನ ಆಗದ ರೀತಿ ಇರಬೇಕಾದರೆ, ಇಂತಹ ಪುಂಡರ ವಿರುದ್ಧ ಸರಿಯಾದಂತಹ ಪ್ರಕರಣಗಳನ್ನು ಸಿ.ಆರ್.ಪಿ.ಸಿ. ಅಡಿಯಲ್ಲಿ ಹಾಕಿ ಅವರಲ್ಲಿರತಕ್ಕಂತಹ property forfeiture ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಅದೇ ರೀತಿ ಸಿ.ಆರ್.ಪಿ.ಸಿ ಅಡಿಯಲ್ಲಿ 2-3 ವರ್ಷಗಳ ಕಾಲ ಆ ಕ್ಷೇತ್ರದಿಂದ ಅಥವಾ ಇಡೀ ಜಿಲ್ಲೆಯಿಂದ ಅವರನ್ನು ಗಡಿಪಾರು ಮಾಡಬೇಕು. ಅಂತಹ ವ್ಯಕ್ತಿಗಳನ್ನು ಗಡಿಪಾರು ಮಾಡುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ಮಾನ್ಯ ಉಚ್ಚ ನ್ಯಾಯಾಲಯ ತೀರ್ಪು ಇದ್ದು, ಅವುಗಳ ರೀತ್ಯಾ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಬೆಳಗಾವಿ ಮಹಾನಗರ ಕರ್ನಾಟಕದ ಅವಿಭಾಜ್ಯ ಅಂಗ. ಅದನ್ನು ಯಾರೂ ಕೂಡ ಬೇರ್ಪಡಿಸುವುದಕ್ಕೆ ಸಾಧ್ಯವಿಲ್ಲ. 1956ನೇ ಇಸವಿಯಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾದಾಗ, ಅವೊತ್ತಿನ ದಿವಸ ಬೆಳಗಾವಿ ಮಹಾನಗರ ಕೂಡ ಕರ್ನಾಟಕ ರಾಜ್ಯದ ಅವಿಭಾಜ್ಯ ಅಂಗವಾಗಿತ್ತು. ಇನ್ನೂ 1966ನೇ ಇಸವಿಯಲ್ಲಿ ಮಹಾರಾಷ್ಟ್ರದಲ್ಲಿ ಪ್ರಮುಖರಾಗಿದ್ದಂತಹ, ಶ್ರೀ ಬಾಪಟ್‌ರವರು ನಡೆಸಿದ್ದಂತಹ ಸತ್ಯಾಗ್ರಹ ಹೋರಾಟದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ನಡುವಿನ ಗಡಿ ವಿವಾದಕ್ಕೆ ಸಂಬಂಧಪಟ್ಟ ಹಾಗೆ, ಅಂದಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದಂತಹ ಶ್ರೀ ಮೆಹರ್‌ಚಂದ್ ಮಹಾಜನ್ ಎಂಬುವವರನ್ನು ನೇಮಕ ಮಾಡಿದ್ದರು. ಆ ಕಮೀಷನ್ ಪೂರ್ಣವಾದಂತಹ ಸಮಗ್ರವಾದಂತಹ ವಿಚಾರಣೆ ಮಾಡಿ, ಈ ರಾಜ್ಯಗಳ ಎಲ್ಲಾ ಭಾಗಗಳಲ್ಲಿ ಸಂಚಾರ ಮಾಡಿ ಒಂದು ವರದಿಯನ್ನು ಕೊಟ್ಟಿರುತ್ತದೆ. ಆ ವರದಿ ನೀಡುವುದಕ್ಕೆ ಮುಂಚೆ ಅಂದಿನ ಮಹಾರಾಷ್ಟ್ರ ರಾಜ್ಯದಲ್ಲಿ ಅಂದರೆ, ಅಂದಿನ ಮುಂಬೈ ರಾಜ್ಯದಲ್ಲಿ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀ ವಿ.ಪಿ.ನಾಯಕ್‌ರವರು ಒಂದು ಹೇಳಿಕೆ ಮಾಡುತ್ತಾರೆ. ಅದೇನೆಂದರೆ, **"ಶ್ರೀ ಮೆಹರ್‌ಚಂದ್ ಮಹಾಜನ್‌ರವರ ಆಯೋಗ ಕೊಡತಕ್ಕಂತಹ ವರದಿಯಲ್ಲಿನ ಶಿಫಾರಸ್ಸುಗಳು ನಮಗೆಲ್ಲರಿಗೂ ಒಪ್ಪಿಗೆ ಇದೆ. ನಾವು ಯಾವ ರೀತಿಯಲ್ಲಿಯೂ ಕೂಡ ಅವುಗಳನ್ನು ಪ್ರಶ್ನೆ ಮಾಡುವುದಿಲ್ಲ"** ಎಂದು ಹೇಳುತ್ತಾರೆ. ತದನಂತರವಾಗಿ ಇರುವುದನ್ನು ತಾವೆಲ್ಲರೂ ನೋಡಿರುತ್ತೀರಿ. ಆ ಮೆಹರ್‌ಚಂದ್ ಮಹಾಜನ್‌ರವರ ಆಯೋಗದ ವರದಿ ಪ್ರಕಾರವಾಗಿ ಬೆಳಗಾವಿ ಮಹಾನಗರ ಕರ್ನಾಟಕದ ಅವಿಭಾಜ್ಯ ಅಂಗವಾಗಿ ಉಳಿಯುತ್ತದೆ. ಅದರ ಬದಲಾಗಿ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿರುವ ಸುಮಾರು 22 ರಿಂದು 24 ಗ್ರಾಮಗಳನ್ನು ಸ್ಥಳಾಂತರ ಮಾಡಿಕೊಡಬೇಕೆಂದು ಹೇಳುವಂತಹ ಶಿಫಾರಸ್ಸು ಕೂಡ ಬರುತ್ತದೆ. ಈ ಭಾಗದಲ್ಲಿ ಯಾವ ಪ್ರತಿಮೆಗಳು ಸಹ ವಿಘ್ನ ಆಗುವುದಿಲ್ಲ. ನಾನು ಕೂಡ ಬೀದರ್ ಜಿಲ್ಲೆಯಲ್ಲಿ ಉಪವಿಭಾಗಾಧಿಕಾರಿಯಾಗಿ 1999 ರಿಂದ ಸುಮಾರು ಎರಡು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಆ ಸಂದರ್ಭದಲ್ಲಿ ನನ್ನ ಸ್ನೇಹಿತರಾಗಿದ್ದಂತಹ ಶ್ರೀ ವಿಜಯ್‌ಸಿಂಗ್‌ರವರು ಸಹ ಈ ಸದನದಲ್ಲಿ ಹಾಜರಿದ್ದಾರೆ.

ಅಷ್ಟೇ ಅಲ್ಲದೇ, ಬಸವಕಲ್ಯಾಣ, ಔರಾದ್ ಮತ್ತು ಬಾಲ್ಕಿಯಂತಹ ಹಲವಾರು ಗ್ರಾಮಗಳಲ್ಲಿ ಪಹಣಿ(ಆರ್.ಟಿ.ಸಿ.)ಗಳನ್ನು ಈಗಲೂ ಕೂಡ ಮರಾಠಿ ಭಾಷೆಯಲ್ಲಿಯೇ ಬರೆಯುವುದನ್ನು ನಾವು ನೋಡಬಹುದು. ಅಲ್ಲಿ ಸಾಕಷ್ಟು ಜನ ಮರಾಠಿಗರು ಇದ್ದಾರೆ. ಅವರೆಲ್ಲರೂ ಸಹ ಅನ್ಯೋನ್ಯವಾಗಿದ್ದಾರೆ. ಆದರೆ, ಯಾರೋ ಕೆಲವು ಕಿಡಿಗೇಡಿಗಳು ಮಾಡತಕ್ಕಂತಹ ಕೆಲಸಕ್ಕೆ ಅಮಾಯಕರು ಬಲಿಯಾಗಬಾರದು. ಇದರಿಂದ ನಮಗೆ ಆಶ್ಚರ್ಯವಾಗುವುದೇನೆಂದರೆ, ನಾವು ಕರ್ನಾಟಕ ರಾಜ್ಯದಲ್ಲಿದ್ದೇವೋ ಅಥವಾ ಇಲ್ಲವೋ ಎಂಬ ಸಂಶಯವಾಗುತ್ತದೆ. ಏಕೆಂದರೆ, ಸರ್ಕಾರಿ ವಾಹನಗಳಿಗೆ ಕೂಡ ಧ್ವಂಸ ಮಾಡುವಂತಹ ಕೃತ್ಯಗಳಿಗೆ ಕೈ ಹಾಕುತ್ತಾರೆಂದರೆ, ಅವರಿಗೆ ಎಷ್ಟು ಧೈರ್ಯ ಇರಬಹುದು. ಆದುದರಿಂದ, ಈ ವಿಚಾರದಲ್ಲಿ ನನ್ನ ಕೋರಿಕೆ ಏನೆಂದರೆ, ಇಂತಹ ಕೃತ್ಯಗಳಲ್ಲಿ ಭಾಗಿಯಾಗಿರುವವರ ಆಸ್ತಿ ಏನಿದೆ, ಅದನ್ನು forfeiture ಸರ್ಕಾರಕ್ಕೆ ವಹಿಸಿಕೊಳ್ಳಬೇಕು ಮತ್ತು ಅವರನ್ನು ಕೋರ್ಟ್ ಮುಖೇನ 2 ರಿಂದ 3 ವರ್ಷಗಳ ಕಾಲ ಸ್ವಸ್ಥಾನದಿಂದ ಅಂದರೆ, ಅವರ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ಸ್ಥಳಾಂತರ ಮಾಡುವಂತಹ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

(ಮುಂದು)

(1174) 20.12.2021 4.20 YL-RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇಂತಹ ಒಂದು ಘಟನೆಯನ್ನು it is not in isolation ಎಂದರೆ ತಪ್ಪಾಗಲಾರದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮಗೆ ಬುದ್ಧಿ ಬಂದಾಗಲಿಂದಲೂ ನೋಡುತ್ತಿದ್ದೇವೆ. State Re-organization Commission, ರಾಜ್ಯಗಳನ್ನು ಭಾಷಾವಾರು ರಾಜ್ಯಗಳಾಗಿ ಪುನರ್ ವಿಂಗಡಣೆಯಾದ ನಂತರ ಕೆಲವು ಸಮಸ್ಯೆಗಳು dispute ಬಂದಾಗ ಕೇಂದ್ರ ಸರ್ಕಾರದವರು ಬೆಳಗಾವಿ ಜಿಲ್ಲೆ ಮಹಾರಾಷ್ಟ್ರಕ್ಕೆ ಸೇರಬೇಕೇ ಅಥವಾ ಕರ್ನಾಟಕಕ್ಕೆ ಸೇರಬೇಕೆ ಎಂಬುದರ ಕುರಿತು ಮಹಾಜನ್ ಆಯೋಗವನ್ನು ನೇಮಿಸುತ್ತಾರೆ. ಮಹಾಜನ್ ಆಯೋಗದವರು ಕರ್ನಾಟಕದವರಾಗಿರಲಿಲ್ಲ, ಮಹಾರಾಷ್ಟ್ರದವರಾಗಿದ್ದರು. ಮಹಾಜನ್ ಆಯೋಗದಿಂದ ತೀರ್ಪು ಬಂದ ನಂತರ ಮಹಾಜನ್‌ರವರು ಬೆಳಗಾವಿ ಜಿಲ್ಲೆ ಕರ್ನಾಟಕಕ್ಕೆ ಸೇರಿರುವುದು ಅದರ ಬಗ್ಗೆ ಯಾರು ಚರ್ಚೆ ಮಾಡುವ ಅವಶ್ಯಕತೆ ಇಲ್ಲ, it is integral part of Karnataka, ಕರ್ನಾಟಕ ಎಂದು ಹೇಳುತ್ತಾರೆ. ಅಂದಿನಿಂದ ಇಂದಿನವರೆಗೂ ಕೆಲವು ರಾಜಕೀಯ ಸಣ್ಣ-ಸಣ್ಣ ಘಟನೆಗಳು ನಡೆದುಕೊಂಡೇ ಬರುತ್ತಿದೆ. ನಿರಂತರವಾಗಿ ವಿದ್ಯಾರ್ಥಿಗಳ ದೆಸೆಯನ್ನು ಸಹ ನೋಡುತ್ತಿದ್ದೇವೆ. ಜೊತೆಗೆ ಕನ್ನಡ ಚಳುವಳಿ ಹೋರಾಟಗಾರ ಶ್ರೀ ವಾಟಾಳ್ ನಾಗರಾಜ್‌ರವರು ಸಹ ಇದರ ವಿರುದ್ಧ ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ. ಆದಾಗ್ಯೂ ಸಹ ಎಲ್ಲಿಯೋ ಒಂದು ಕಡೆ ಸರ್ಕಾರ ಎಚ್ಚರ ತಪ್ಪಿದೆ ಎಂದು ಅನಿಸುತ್ತದೆ. ಸದನ ಪ್ರಾರಂಭಗೊಳ್ಳುವ ಮೊದಲು ಯಾರಿಗೋ ಮಸಿ ಬಳಿದಿರುವ ವಿಚಾರ ಗೊತ್ತಾದ ತಕ್ಷಣ ಈ ಘಟನೆ ಇವತ್ತಿಗೆ ಮುಗಿಯುವುದಿಲ್ಲ, ಮತ್ತೆ ಮುಂದುವರೆಯುತ್ತದೆ ಎಂದು ಮುಂಜಾಗ್ರತಾ ಕ್ರಮ ವಹಿಸಬೇಕಾಗಿತ್ತು. ಏಕೆಂದರೆ, ಇಂತಹ ಘಟನೆ ಮೊದಲಿನಿಂದ ನಡೆದುಕೊಂಡು ಬಂದಿದ್ದು, ಮುಂದೆಯೂ ಸಹ ನಡೆಯುತ್ತದೆ. ಕರ್ನಾಟಕಕ್ಕೆ ಇಂತಹ ದುಸ್ಥಿತಿ ಏತಕ್ಕೆ ಬಂದಿದೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. 1971ನೇ ಸಾಲಿನಿಂದ 2011ನೇ ಸಾಲಿನವರೆಗೂ ಎಲ್ಲಾ ಭಾಷೆಗಳು ಒಂದು ಹಂತದಲ್ಲಿ ಬೆಳೆದಿದೆ. ಹಿಂದಿ ಭಾಷೆ ಶೇಕಡ 56 ರಷ್ಟು ಹಾಗೂ ತಮಿಳು, ತೆಲುಗು ಶೇಕಡ 9 ರಷ್ಟು ಬೆಳೆದಿದ್ದರೆ, ಕನ್ನಡ ಕೇವಲ ಶೇಕಡ 3 ರಷ್ಟು ಮಾತ್ರ ಬೆಳೆದಿದೆ. ಕರ್ನಾಟಕದವರು ಬಹಳ ದುರ್ಬಲರು ಏನೇ ಮಾಡಿದರೂ ಸಹಿಸಿಕೊಂಡಿದ್ದಾರೆ ಎನ್ನುವಂಥ ಮಲತಾಯಿ ಧೋರಣೆ ಏನಿದೆ, ಅದು ಆರ್ಟಿಕಲ್ 351ರ ಪ್ರಕಾರ ಹಿಂದಿ ಅಧಿಕೃತವಾದ ಭಾಷೆಯಾಗಿದ್ದು, ಅದರ ಜೊತೆಗೆ 22 ಅಧಿಕೃತವಾದ ಭಾಷೆಗಳು ಇವೆ. ಆದರೆ, ಎಲ್ಲಾ ಭಾಷೆಗಳನ್ನು ಬೆಳೆಸಿ, propagate, practice and speak ಎಂದು ಏನು ಮಾಡುತ್ತಾರೆ, ಅದಕ್ಕೆ ಕೇಂದ್ರ ಸರ್ಕಾರದವರು ಹಣ ನೀಡುತ್ತಾರೆ. ಏನು ಸಂಸ್ಕೃತ ಭಾಷೆಯನ್ನಾಗಿ 28 ಸಾವಿರ ಜನ ಮಾತನಾಡುತ್ತಾರೆ, ಅದಕ್ಕೆ ರೂ.650.00 ಕೋಟಿ ರೂಪಾಯಿ ನೀಡುತ್ತಾರೆ. ಆದರೆ, ಕನ್ನಡಕ್ಕೆ ಕೇವಲ ರೂ.3.00 ಕೋಟಿ ನೀಡುತ್ತಾರೆ. ಏಕೆಂದರೆ, ನಾವೆಲ್ಲರೂ ಬಹಳ ದುರ್ಬಲರು ಏನು ಮಾಡಿದರೂ ನಡೆಯುತ್ತದೆ ಎಂಬುದೇ ಇದಕ್ಕೆಲ್ಲಾ ಕಾರಣ. ನಾಯಿ ಕಚ್ಚುತ್ತದೆ ಎಂದು, ನಾಯಿ ಕಚ್ಚಲು ಸಾಧ್ಯವಿಲ್ಲ. ಆದರೆ, ಸಂಗೊಳ್ಳಿ ರಾಯಣ್ಣ ಮತ್ತು ಛತ್ರಪತಿ ಶಿವಾಜಿಯವರು ಈ ರಾಷ್ಟ್ರದ ಹೆಮ್ಮೆಯಾಗಿದ್ದವರು. ಅವರಿಗೆ ಅವಮಾನ ಮಾಡುವುದು ನಿಜಕ್ಕೂ ಈ ರಾಷ್ಟ್ರಕ್ಕೆ ಅವಮಾನ ಮಾಡಿದಂತಾಗುತ್ತದೆ. ಹಾಗಾಗಿ ಎಂ.ಇ.ಎಸ್.ಪುಂಡರ ಮೇಲೆ sedition ಕೇಸ್ ದಾಖಲಿಸಬೇಕಾಗುತ್ತದೆ. ಯಾರ್ಯಾರ ಮೇಲೋ

---

sedition ಕೇಸ್ ಹಾಕುವುದಲ್ಲ. ಕೆಲವೊಮ್ಮೆ ಪತ್ರಕರ್ತರ ಮೇಲೆ ಕೇಸ್ ಆಗೊಗುತ್ತದೆ. ವ್ಯಕ್ತಿತ್ವದ ಮೇಲೆ ಅವಮಾನ ಮಾಡಿದಂಥ ಕೆಲಸ ಮಾಡಿದವರ ಮೇಲೆ ಕ್ರಮ ಜರುಗಿಸಬೇಕಾಗುತ್ತದೆ. ಮಾನ್ಯ ಗೃಹ ಸಚಿವರು ಸದನದಲ್ಲಿಯೇ ಇರುವುದರಿಂದ ನಾನು ಪ್ರಶ್ನೆ ಮಾಡಲು ಬಯಸುವುದೇನೆಂದರೆ, ಆ ಮಸಿ ಬಳಿದ ಘಟನೆ ನಡೆದ ತಕ್ಷಣ ಮಹಾರಾಷ್ಟ್ರದ ಮಾಜಿ ಗೃಹ ಸಚಿವರು ಬೆಳಗಾವಿಗೆ ಭೇಟಿ ನೀಡಿದ್ದರು. ಅವರು ಬೆಳಗಾವಿಗೆ ಭೇಟಿ ನೀಡಿದ ತಕ್ಷಣ ಏನು ಮಾಡಿದ್ದಾರೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕಲ್ಲವೇ? ಈ ಸಂಬಂಧ ಮಾನ್ಯ ಗೃಹ ಸಚಿವರ ಗಮನದಲ್ಲಿ ಇದೆಯೇ, ಇಲ್ಲವೇ ಎಂಬುದನ್ನು ಆಮೇಲೆ ತಿಳಿಸಬೇಕು. ಕನ್ನಡ ಧ್ವಜ ಎನ್ನುವುದು; ಮಾನ್ಯ ಯು.ಬಿ.ವೆಂಕಟೇಶ್‌ರವರು ಈಗಾಗಲೇ ಹೇಳಿದ ಹಾಗೆ, ಮ.ರಾಮಮೂರ್ತಿ ಎಂಬ ಹೆಸರನ್ನು ಉಲ್ಲೇಖಿಸಿದರು. ಕನ್ನಡ ಸಾಹಿತ್ಯ, ಸಂಸ್ಕೃತಿ ಬಿಂಬಿಸುವ 'ಉದಯವಾಯಿತು ನಮ್ಮ ಚೆಲ್ಲುವ ಕನ್ನಡ ನಾಡು' ಎಂಬ ಗೀತೆಯನ್ನು ಮರಾಠಿಯವರಾದ ಕಾಳಿಂಗರಾವ್ ಎಂಬುವವರು ಪ್ರಸಿದ್ಧಗೊಳಿಸಿದ್ದರು. ದ.ರಾ.ಬೇಂದ್ರೆಯವರು ಮರಾಠಿ ಸಾಹಿತ್ಯಗಳನ್ನು ಕನ್ನಡದಲ್ಲಿ ಬರೆದಿರುವಂಥ ಉದಾಹರಣೆಗಳಿವೆ. ಕರ್ನಾಟಕದವರಾಗಲಿ, ಮರಾಠಿಗಳಾಗಲಿ ಅನ್ಯೋನ್ಯತೆಯಿಂದ ಬಾಳಿರುವ ಉದಾಹರಣೆಗಳಿವೆ. ಯಾರೋ ಕಿಡಿಗೇಡಿಗಳು ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕೋಸ್ಕರ ಬೆಳಗಾವಿ ನಮಗೆ ಸೇರಿದ್ದು ಎಂದು ಇಂತಹ ದುಷ್ಕೃತ್ಯ ಎಸೆದಿರುವವರಿಗೆ ಕಡಿವಾಣ ಹಾಕಬೇಕು. ಇಂತಹ ಘಟನೆ ಹೊಸದಾಗಿ ನಡೆದಿರುವುದಲ್ಲ. 'ಹಮ್‌ಚಿ ಮುಂಬೈ' ಎಂದು ಮುಂಬೈನಲ್ಲಿ ನೆಲೆಸಿದಂತಹ ಸುಮಾರು 10 ಲಕ್ಷ ಮಂದಿ ದಕ್ಷಿಣ ಕನ್ನಡದ ಹೋಟೆಲ್ ನಡೆಸುವವರನ್ನು ಓಡಿಸಲು ಅಲ್ಲಿನ ಜನ ಪ್ರಯತ್ನಿಸಿದಾಗ, ಅವರು ಯಾರು ಓಡಿ ಬರದೇ ಈ ದೇಶ ನಮ್ಮದು ಎಂದು ಅಲ್ಲಿಯೇ ಧೈರ್ಯವಾಗಿ ನಿಂತುಕೊಂಡರು. ಅವರಲ್ಲಿ ಮರಾಠಿ ಮತ್ತು ತುಳು ಭಾಷೆಯನ್ನು ಮಾತನಾಡುವಂಥ ಜನರೇ ಹೆಚ್ಚಾಗಿದ್ದಾರೆ. ಹಾಗಾಗಿ ಇದೆಲ್ಲವನ್ನೂ ನೋಡಿದಾಗ ಎಲ್ಲಿಯೋ ಒಂದು ಕಡೆ ನಮ್ಮ weakness ಇದೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ, ನಾವು ಇದೆಲ್ಲವನ್ನೂ ಗಂಭೀರವಾಗಿ ತೆಗೆದುಕೊಂಡಿಲ್ಲ. ನಾನು ಈ ರಾಷ್ಟ್ರವನ್ನೆಲ್ಲಾ ಸಂಪೂರ್ಣವಾಗಿ ಸುತ್ತಿದ್ದು, ನನ್ನ ಅನುಭವದ ಆಧಾರಿತವಾಗಿ ಹೇಳುವುದಾದರೆ, ಈ ರಾಷ್ಟ್ರದಷ್ಟು progressive State ಬೇರೆ ಯಾವ ರಾಜ್ಯವು ಇಲ್ಲ. ಉತ್ತರ ಭಾರತದ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ನಮ್ಮ ರಾಜ್ಯವು 100 ವರ್ಷಗಳಷ್ಟು ಮುಂದೆ ಇದ್ದೇವೆ. ಹಾಗಾಗಿ ಈ ರಾಜ್ಯಕ್ಕೆ ಇಂತಹ ದುಸ್ಥಿತಿ ಬರುವುದು ಸರಿಯಲ್ಲ. ನಾನು ರಾಜಕೀಯವಾಗಿ ಭಾಷಣ ಮಾಡಿ, ಅವರ ಮೇಲೆ ಆಪಾದನೆ ಮಾಡಬೇಕೆಂದು ಮಾತನಾಡುತ್ತಿಲ್ಲ. ಆ ರಾಜ್ಯದಲ್ಲಿಯೂ ಪೊಲೀಸ್‌ನವರಿದ್ದಾರೆ. ನಮ್ಮಲ್ಲಿರುವವರೂ ಪೊಲೀಸ್‌ನವರೆ, ಇಬ್ಬರ ಕೆಲಸವೂ ಒಂದೇ. ಎಲ್ಲಿಯೋ ಒಂದು ಕಡೆ intelligence fail ಆಗಿದೆ. ಮಹಾರಾಷ್ಟ್ರ ಮಾಜಿ ಗೃಹ ಸಚಿವರು ಬೆಳಗಾವಿ ಜಿಲ್ಲೆಗೆ ಬಂದಾಗಲೇ ಏತಕ್ಕೆ ಬಂದಿದ್ದಾರೆ, ಏನಾಗಿದೆ ಎಂಬುದರ ಕುರಿತು ಎಚ್ಚರ ವಹಿಸಬೇಕಾಗಿತ್ತು, ಇದೊಂದು common sense. ಆದರೆ, ಅದ್ಯಾವುದು ಆಗಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ಏನು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬಹುದೋ, ಅದನ್ನು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಳ್ಳಬಹುದು. ಕಾನೂನಿಗಿಂತ, ಸಂವಿಧಾನಕ್ಕಿಂತ ದೊಡ್ಡದು ಯಾವುದು ಇಲ್ಲ. ಇಂತಹ ಘಟನೆ ಪುನರಾವರ್ತನೆ ಆಗದ ರೀತಿ ಏನು ಮಾಡಬೇಕೆಂದು ಬಗ್ಗೆ ಯೋಚನೆ ಮಾಡಬೇಕು. ಭಾಷಾ ವಿಚಾರದಲ್ಲಿ ಬಹಳ ಎಚ್ಚರಿಗೆ ವಹಿಸಬೇಕಾಗುತ್ತದೆ. ಏಕೆಂದರೆ, ಬೆಂಗಳೂರು ನಗರದಲ್ಲಿಯೇ ಸುಮಾರು 109 ಭಾಷೆಯನ್ನು ಬಳಕೆ ಮಾಡುತ್ತಾರೆ. ಅದೇ ರೀತಿ ಪುಣೆಯಲ್ಲಿ ಸುಮಾರು 98 ಭಾಷೆಯನ್ನು ಬಳಕೆ ಮಾಡುತ್ತಾರೆ. Bengaluru is one of the best Cosmopolitan City in the World. ಇಂತಹ ರಾಜ್ಯಕ್ಕೆ ಅಂತಹ ದುಸ್ಥಿತಿ ಬರಬಾರದು. ಎಲ್ಲಿಯೋ ಕಡೆ ನಮ್ಮ intelligence fail ಆಗಿ, ಈ ಘಟನೆ ನಡೆದಿದ್ದು, ಮತ್ತೆ ಮರುಕಳಿಸಬಾರದೆಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಡಾ|| ತೇಜಸ್ವಿನಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅತ್ಯಂತ ಸುಕ್ಷ್ಮವಾದಂಥ ನಾಡು, ನುಡಿ, ನಾಡಿನ ಜನತೆಯ ರಕ್ಷಣೆ ಬಗ್ಗೆ ಅಭಯವನ್ನು ನೀಡುವಂಥ ಶಾಸಕರ ಪ್ರತಿನಿಧಿಗಳ ಸಭೆಯಲ್ಲಿ ಚರ್ಚೆ ಮಾಡಲು ಅನುವು ಮಾಡಿಕೊಟ್ಟಿದ್ದೀರಿ ಹಾಗೂ ಸದನದಲ್ಲಿ ಈ ಪ್ರಸ್ತಾವನೆಯನ್ನು ತಂದ ಮಾನ್ಯ ಶ್ರೀಕಂಠೇಗೌಡರಿಗೂ ಅಭಿನಂದಿಸುತ್ತೇನೆ. ವೀರ ಮಾತೆ ಚೆನ್ನಮ್ಮನವರು ಬ್ರಿಟಿಷರ ವಿರುದ್ಧ ಹೋರಾಟ ಮಾಡಿ, Thackeray ಯ ರುಂಡವನ್ನು ಚೆಂಡಾಡಿ, ತದನಂತರ ಮೋಸದಿಂದ ಸೆರೆವಾಸಕ್ಕೆ ಹೋದಾಗ ಸಹ ಸಂಗೊಳ್ಳಿ ರಾಯಣ್ಣನಂತಹ ವೀರ ಪುತ್ರನ ನಿರೀಕ್ಷೆಯಲ್ಲಿ ಸ್ವಾತಂತ್ರ್ಯಕೋಸ್ಕರ ಕನಸು ಕಂಡವರು ತಮ್ಮ ಕೈಲಾದ ಹೋರಾಟವನ್ನು ಮಾಡಿದವರಾಗಿದ್ದಾರೆ. ಸ್ವಾತಂತ್ರ್ಯ ಬಂದ ನಂತರ ನಾವು ಅದನ್ನು ಮರೆಯದೇ ಅವರ ನೆನಪಿನಲ್ಲಿ ಬೆಳಗಾವಿ ಜಿಲ್ಲೆ ನಮ್ಮದು, ನಮಗೆ ಸೇರಬೇಕೆಂದು ಕನ್ನಡಿಗರು ಮತ್ತು ಮಹಾರಾಷ್ಟ್ರ ಮಧ್ಯೆ ದೊಡ್ಡ ಹೋರಾಟ ನಡೆದಾಗ ಅನೇಕರು ಉಲ್ಲೇಖಿಸಿದ ಹಾಗೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಧ್ಯತೆ ಇದ್ದ ಪ್ರಕ್ರಿಯೆಯಲ್ಲಿ ಮಹಾಜನ್ ಆಯೋಗ ವರದಿ ಬಂದ ನಂತರ ಅನೇಕ ಭಾಷಾವಾರು, ಪ್ರಾಂತ್ಯಗಳ ರಚನೆ ಮರುವಿಂಗಡಣೆಯಲ್ಲಿ ಕರ್ನಾಟಕದ ಪಾಲಿಗೆ ಬಂದಂತಹ ಬೆಳಗಾವಿಯನ್ನು ರಕ್ಷಣೆ ಮಾಡುವಂಥ ಎಲ್ಲಾ ಕಾರ್ಯವನ್ನು ಯಾವುದೇ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಪ್ರಯತ್ನವನ್ನು ಮಾಡುತ್ತಾ ಬಂದಿದ್ದೇವೆ. ಆದರೂ ಸ್ವಲ್ಪ ನಿರಾಶೆಯಾಗಿದ್ದು, ಇವತ್ತಿನ ದಿವಸ ಕಲ್ಲು ಹೊಡೆದವರು, ರಾಯಣ್ಣನ ಪ್ರತಿಮೆಯನ್ನು ಬೀಳಿಸಿದವರು, ಕಿತ್ತೂರು ರಾಣಿ ಚೆನ್ನಮ್ಮಾಜೀಗೆ ಬೈದವರು, ಛತ್ರಪತಿ ಶಿವಾಜಿ ಪ್ರತಿಮೆಯನ್ನು ಹೊಡೆದು ಹಾಕಿದವರನ್ನು ಕನ್ನಡಿಗರು ಮರಾಠರು ಎನ್ನುವುದಕ್ಕಿಂತ ನನ್ನ ದೃಷ್ಟಿಯಲ್ಲಿ ಪೊಕ್ರಿಗಳು, ಪುಂಡರು, ಕಿಡಿಗೇಡಿಗಳು ಎಂದು ಹೇಳಬಯಸುತ್ತೇನೆ. ಭಾಷೆಯನ್ನು ಸೇರಿಸುತ್ತಾ ಹೋದರೆ, ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದಂಥ ಅನೇಕ ಸಾಹಿತಿಗಳಿದ್ದಾರೆ. ಅವರಲ್ಲಿ ದ.ರಾ.ಬೇಂದ್ರೆಯವರು ಕನ್ನಡದ ಪ್ರತಿಮೆಗಳನ್ನು, ಇತಿಹಾಸ, ಸಂಸ್ಕೃತಿಗಳನ್ನು ದಕ್ಷಿಣ ಭಾರತದಿಂದ ಬೇರ್ಪಡಿಸಲು

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಾಧ್ಯವೇ ಇಲ್ಲ. ಭಾರತದಲ್ಲಿ ದಕ್ಷಿಣ ಭಾರತದ ಕೊಡುಗೆಯಾದ ಪ್ರಾಚೀನ ಭಾಷೆ, ancient language ಇದೆಲ್ಲದಕ್ಕೂ ಸಹ ನಮ್ಮದೇ ಆದಂತಹ ಸಾಧನೆ, ಹೆಮ್ಮೆಯನ್ನು ಪಡೆದಿದ್ದೇವೆ.

(ಮುಂದು)

(1175) 20-12-2021 / 4.30 / SK-VK (ಸಭಾಪತಿಯವರ ಉಪಸ್ಥಿತಿ)

**ಡಾ: ತೇಜಸ್ವಿನಿ ಗೌಡ (ಮುಂದು):-**

ಸರ್ಕಾರ ತಕ್ಷಣ ಪ್ರತಿಕ್ರಿಯೆ ತೋರದೇ ಇದ್ದಿದ್ದರೆ, ಈ ಸದನ ನಡೆಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈ ಪೊಲೀಸ್‌ನವರು ನೀವಿದ್ದರೂ ಅವರನ್ನೇ, ನಾವಿದ್ದರೂ ಅವರನ್ನೇ ಪ್ರಶ್ನೆ ಅಲ್ಲ. ಕಿಡಿಗೇಡಿಗಳನ್ನು ಅತ್ಯಂತ ಸೂಕ್ಷ್ಮ ಪರಿಸ್ಥಿತಿಯಲ್ಲಿ ನಿಯಂತ್ರಣ ಮಾಡಿ, ತಕ್ಷಣ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಮರು ಸ್ಥಾಪನೆ ಮಾಡಿ, ಮತ್ತು ಶಿವಾಜಿ ಮಹಾರಾಜರ ಪ್ರತಿಮೆ ಬೆಂಗಳೂರಿನಲ್ಲಿ ಒಂದೇ ಅಲ್ಲ. ರಾಜ್ಯದ ಎಲ್ಲಾ ಕಡೆಯಲ್ಲಿ ಇರುವಂತಹ ಶಿವಾಜಿ ಮಹಾರಾಜರ ಪ್ರತಿಮೆ ಇರುವಂತಹದ್ದು. ಶಿವಾಜಿ ಮಹಾರಾಜರು ಒಂದು ರಾಜ್ಯ ಮತ್ತು ಒಂದೇ ಕುಲಕ್ಕೆ ಸೇರಿದವರಲ್ಲ. ಅವರು ಇಡೀ ಭಾರತವನ್ನು ಕತ್ತಿಯ ಮೊನೆಯಲ್ಲಿ ರಕ್ತವನ್ನು ಚೆಲ್ಲಿ ಮತಾಂತರ ಮಾಡಬೇಕೆಂದು ಹೋದಾಗ, ಇಡೀ ಹಿಂದೂಸ್ಥಾನದ ಹೃದಯ ಸಾಮ್ರಾಟರಾಗಿ, ಸೂರ್ಯ ಚಂದ್ರ ಇರುವ ತನಕ ಶಿವಾಜಿ ಮಹಾರಾಜರ ನೆನಪು ಇರುವವರೆಗೆ ನಮ್ಮೆಲ್ಲರ ಹೆಮ್ಮೆಯ ನೆನಪಾಗಿರುತ್ತದೆ. ಅವರ ಪ್ರತಿಮೆಯ ರಕ್ಷಣೆ ಮತ್ತು ವ್ಯಕ್ತಿತ್ವದ ರಕ್ಷಣೆ ಪ್ರತಿಯೊಬ್ಬ ಭಾರತೀಯರೂ ಮಾಡುತ್ತಾರೆ ಮತ್ತು ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಚೆನ್ನಮ್ಮಾಜಿಯ ವಿಚಾರ ಬಂದಾಗ ಕೂಡ, ಇವತ್ತು ಬೆಳಗಾವಿಯಲ್ಲಿ ಬಿ.ಜೆ.ಪಿ ಸಮ್ಮಿಶ್ರ ಸರ್ಕಾರವಿದ್ದಾಗ, ಈ ಭವ್ಯ ಸುವರ್ಣ ಸೌಧವನ್ನು ಕಟ್ಟಿದ್ದು, ಆಗ ಮಹಾರಾಷ್ಟ್ರದಲ್ಲಿ ಕೂಡ ಬಿ.ಜೆ.ಪಿ., ಸರ್ಕಾರವಿತ್ತು. ಶಿವಸೇನೆಯ ವಿರೋಧದ ನಡುವೆಯೂ ಕೂಡ ಬಿ.ಜೆ.ಪಿ., ಸಮ್ಮಿಶ್ರ ಸರ್ಕಾರ compromise ಮಾಡದೇ, ಈ ಸುವರ್ಣ ಸೌಧವನ್ನು ಕಟ್ಟಿರುವಂತಹದ್ದು, ನಮ್ಮ ಬದ್ಧತೆಗೆ ಮತ್ತು ಈ ಸರ್ಕಾರದ ಬದ್ಧತೆಗೆ ಮತ್ತು ಈ ಒಂದು ಸಮರ್ಪಣೆಗೆ ಸಾಕ್ಷ್ಯ ಎಂದು ನಾನು ಹೇಳಬೇಕಾಗುತ್ತದೆ. ಎರಡನೆಯದಾಗಿ ಉದಾಹರಣೆ ಏನೆಂದರೆ, ಇಲ್ಲಿ ಅಂತರ ರಾಷ್ಟ್ರೀಯ ಕನ್ನಡ ಸಮ್ಮೇಳನ ನಡೆದಿದೆ. ತಮ್ಮಂತಹವರು ಈ ಪೀಠದ ಮೇಲೆ ಕುಳಿತಾಗ, ಒಳ್ಳೆಯ ದಾಖಲೆಗಳನ್ನು ದಾಖಲಿಸಬೇಕಾಗುತ್ತದೆ. ನಮ್ಮ ಕರ್ನಾಟಕದ ದಕ್ಷಿಣ ಜಿಲ್ಲೆಯಾದ ಐಶ್ವರ್ಯ ರೈ ಎಂಬುವ ಹೆಣ್ಣು ಮಗಳು ವಿಶ್ವ ಸುಂದರಿ ಏನಾಗಿದ್ದರೂ, ಅವರು ಮಹಾರಾಷ್ಟ್ರ ರಾಜ್ಯಕ್ಕೆ ಸೊಸೆಯಾಗಿ ಹೋಗಿದ್ದಾರೆ. ಒಂದು ಅಪ್ರತಿಮ ಕಲಾ ಕುಟುಂಬ ಮತ್ತು ಅಮಿತಾಬ್ ಬಚ್ಚನ್‌ರವರ ಸೊಸೆಯಾಗಿ ಹೋಗಿದ್ದಾರೆ. ಆ ಹೆಣ್ಣುಮಗಳನ್ನು, ಅಂತರ ರಾಷ್ಟ್ರೀಯ ಸಮ್ಮೇಳನಕ್ಕೆ ಅವರನ್ನು ಅತಿಥಿಯಾಗಿ ಕರೆದಿದ್ದೇವೆ. ಅಂತರ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ರಾಷ್ಟ್ರೀಯ ಸಮ್ಮೇಳನವನ್ನು ಈ ಸುವರ್ಣ ಸೌಧದಲ್ಲಿಯೇ ಮಾಡಿದ್ದೇವೆ. ಅಲ್ಲಿ ಯಾರೇ ನಮ್ಮವರು ಇರಲಿ, ಉದ್ಭವ್ ಠಾಕ್ರೆ ಇನ್ನಷ್ಟು ಉದ್ಧಟತನದ ಹೇಳಿಕೆಗಳನ್ನು ಕೊಟ್ಟರೆ, ಬೆದರುವವರು ಇಲ್ಲಿ ಯಾರೂ ಇಲ್ಲ. ಪುಂಡರು ಯಾರೇ ಆಗಿದ್ದರೂ, ಪುಂಡರ ಮೇಲೆ ಕಿಡಿಗೇಡಿತನದ ಪ್ರಕರಣಗಳನ್ನು ದಾಖಲು ಮಾಡಿ, ಅವರನ್ನು ಒಳಗೆ ಹಾಕಬೇಕು. ಇದೇ ರೀತಿ ಮತ್ತೊಮ್ಮೆ ಮರುಕಳಿಸದಂತೆ ನೋಡಿಕೊಳ್ಳಬೇಕು. ಹೆಮ್ಮೆ ಪಡುವಂತಹದ್ದರ ಬಗ್ಗೆ ತಂಬಾ ಜನರು ಮರೆತಿದ್ದೇವೆ. ನಾನು ಮ್ಮುಂದೆ ತಮ್ಮಲ್ಲಿ ಚರ್ಚೆ ಮಾಡುವುದಕ್ಕೆ ತುಂಬಾ ಸಮಯವರನ್ನು ಕೇಳಿದ್ದೇನೆ. ಕೆಳದಿಯ ವೀರ ಇತಿಹಾಸ ನಮ್ಮ ಮುಂದೆ ಇದೆ. ವಿಜಯನಗರ ಸಾಮ್ರಾಜ್ಯ ಪತನದ ನಂತರ 263 ವರ್ಷಗಳ ಕಾಲ ಸುದೀರ್ಘವಾಗಿ ಆಳಿದಂತಹ ನಾಲ್ಕು ರಾಜಧಾನಿಗಳನ್ನು ಹೊಂದಿದಂತಹ ಕೆಳದಿಯ 18ನೇ ಅರಸರಲ್ಲಿ 13 ನೇ ಅರಸಿ ವೀರ ಚೆನ್ನಮ್ಮಾಜಿಯ ಕಾಲದಲ್ಲಿ ಶಿವಾಜಿ ಮಹಾರಾಜರ ಪುತ್ರ ರಾಜರಾಂರನ್ನು ಏನು ಔರಂಗಜೇಬ ಮತಾಂತರಕ್ಕೆ ಹತ್ಯೆ ಮಾಡಬೇಕೆಂದು ನೋಡುತ್ತಿದ್ದಾಗ, ರಾಜರಾಂರ ಆಶ್ರಯ ಕೇಳಿ ಬಂದಿದ್ದು, ಕೆಳದಿಯ ಚೆನ್ನಮ್ಮಜಿ ಯವರಲ್ಲಿ ಎನ್ನುವುದನ್ನು ದಾಖಲೆ ಸಮೇತ ಇದೆ. ಇವತ್ತು ಯಾರೂ ಕನ್ನಡಿಗರ ಮೇಲೆ ಕೈ ಎತ್ತುವ ಪುಂಡರು, ಕನ್ನಡಿಗರು ಹೇಡಿ ಎಂದು ಹೆಳುವಂತಹ ಪುಂಡರಿಗೆ ಈ ಸದನದ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅರಮನೆಯ ಕೊಪ್ಪದಲ್ಲಿ ರಾಜರಾಂರಿಗೆ ಆಶ್ರಯವನ್ನು ಕೊಟ್ಟು, ಔರಂಗಜೇಬನಂತಹ ಕ್ರೂರಿ ರಾಜರನ್ನು ಎದುರು ಹಾಕಿಕೊಂಡು, ಹೈದರಾಲಿ ಮತ್ತು ಔರಂಗಜೇಬನ ವಿರುದ್ಧ ಇಬ್ಬರೂ ಮಹಾಮಾತೆ ಅರಸಿಯರು ಯುದ್ಧ ಮಾಡಿದ್ದಾರೆ. ಹೈದರಾಲಿ ವಿರುದ್ಧ ವೀರ ರಾಣಿ ಚೆನ್ನಾಮ್ಮನವರು ಇಪ್ಪತ್ತೊಂದು ದಿನಗಳ ಕಾಲ ಯುದ್ಧ ಮಾಡಿ, ಅವರನ್ನು ಹಿಮ್ಮೆಟ್ಟಿಸಿದ್ದಾರೆ. ವೀರ ರಾಣಿ ಚೆನ್ನಮ್ಮಜಿನವರು ಅವರಿಗೆ ಆಶ್ರಯವನ್ನು ಕೊಟ್ಟು, ಇವತ್ತು ಅವರ ನೆನಪಿಗಾಗಿ, ದ್ವಿಬಾಹುವುಳ್ಳ ಪಾರ್ವತಿ ದೇವಸ್ಥಾನವನ್ನು ಶಿವಾಜಿಯ ಪುತ್ರ ರಾಜರಾಂರವರು ಬಿದೂನೂರಿನ ಕೋಟೆಯೊಳಗೆ ಭವ್ಯವಾದಂತಹ ದೇವಸ್ಥಾನವನ್ನು ನಿರ್ಮಾಣ ಮಾಡಿದ್ದಾರೆ. ಹುಂಚ ಜೈನರ ಒಂದು ಪವಿತ್ರ ದೇವಾಲಯ ಬಸದಿಗಳು ಏನಿವೆ, ಪದ್ಮಾವತಿಯನ್ನು ಜೈನ ಬಂಧುಗಳು ಯಕ್ಷಿಣಿ ಎಂದು ಕರೆಯುತ್ತಾರೆ. ಅಲ್ಲಿಗೆ ಲಕ್ಷಾಂತರ ಮರಾಠ ಭಕ್ತಾದಿಗಳು ಬರುತ್ತಿದ್ದಾರೆ. ನಾವು ಕೂಡ ಅಲ್ಲಿಗೆ ಹೋಗುತ್ತೇವೆ. ಈ ಕಿಡಗೇಡಿಗಳನ್ನು ಸದೆ ಬಡಿಯುವಂತಹ ಇಚ್ಛಾಶಕ್ತಿ ಮತ್ತು ಬದ್ಯತೆ ನಮ್ಮ ಸರ್ಕಾರಕ್ಕೆ ಇದೆ. ಈಗಾಗಲೇ ಮಾಡಿದ್ದಾರೆ. ಕೊರತೆಗಳಿದ್ದರೆ, ನಮಗೆ ಏನು ಆತ್ಮ ಒಂದು ಪ್ರತಿಷ್ಠೆ ಇಲ್ಲ. ಪ್ರತಿಪ್ರಕ್ಷಗಳಲ್ಲಿ ಕೊರತೆಗಳು ಆಗಿದ್ದರೆ, ಅದನ್ನು ಹೇಳಿದರೆ, ನಮ್ಮ ನಮ್ಮ ಸರ್ಕಾರ ಕೇಳುತ್ತದೆ. ತಕ್ಷಣ ಅದನ್ನು ನಿಯಂತ್ರಣಕ್ಕೆ ತಂದು, ಅವರಿಂದ ಮತ್ತೊಮ್ಮೆ ಮರುಕಳಿಸದ ಹಾಗೇ, ಮಾಡುವುದಕ್ಕೆ ಬೇಕಾದಂತಹ ಕ್ರಮಗಳನ್ನು ಕೈಗೊಳ್ಳುತ್ತೇವೆ. ಬೆಳಗಾವಿ ನಮ್ಮದಾಗಿತ್ತು. ಇವತ್ತು ಬೆಳಗಾವಿ ನಮ್ಮದೇ ಆಗಿದೆ. ಬೆಳಗಾವಿ ಇದು ಎಂದಿಂದಿಗೂ ನಮ್ಮದಾಗಿರುತ್ತದೆ. ದಯಮಾಡಿ, ಒಂದು ವಿನಂತಿ ಮಾಡುವುದೇನೆಂದರೆ, ಬೆಳಗಾಂ ಎಂದು ಯಾರೂ ಕರೆಯಬೇಡಿ. ಬೆಳಗಾವಿ, ಬೆಳಗಾವಿ, ಬೆಳಗಾವಿ ಇದು ಯಾವತ್ತೂ ಕೂಡ ನಮ್ಮದೇ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚೆನ್ನಮ್ಮಾಜಿ, ಸಂಗೋಳ್ಳಿ ರಾಯಣ್ಣ, ಶಿವಾಜಿ ಇಡೀ ರಾಷ್ಟ್ರದ ಒಂದು ಪ್ರತೀಕಗಳು ಕೂಡ ಆಗಿದೆ. ಯಾವತ್ತಿಗೂ ಕೂಡ ಭಾರತದಾದ್ಯಂತ ಇವರನ್ನು ಗೌರವಿಸಲ್ಪಡುವಂತಹ ಒಂದು ಸನ್ನಿವೇಶ. ಸಂಗೋಳ್ಳಿ ರಾಯಣ್ಣನ ತ್ಯಾಗ ಬಲಿದಾನಗಳಿಗೆ ಈ ರೀತಿಯ ಕೃತ್ಯಗಳನ್ನು ಮಾಡಿದಾಗ, ಅರ್ಥನೇ ಇರುವುದಿಲ್ಲ. ಈ ರೀತಿಯ ಕೃತ್ಯಗಳನ್ನು ಮಾಡುವುದಕ್ಕೆ ನಾವ್ಯಾರೂ ಬಿಡಬಾರದು ಎಂದು ಹೇಳಿ ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಹಿಂದು ದುಷ್ಕೃತ್ಯದ ಬಗ್ಗೆ ವಿಧಾನ ಪರಿಷತ್ತಿನ ಹಿರಿಯ ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ. ಇದಕ್ಕೆ ನಾನು ಸಹ ಮತವನ್ನು ವ್ಯಕ್ತ ಪಡಿಸುತ್ತೇನೆ. ಈ ದಿನ ಸಂಗೋಳ್ಳಿ ರಾಯಣ್ಣ ಪ್ರತಿಮೆಯನ್ನು ಭಗ್ನಗೊಳಿಸಿರುವಂತಹದ್ದು. ಶಿವಾಜಿ ಮಹಾರಾಜನ ಪ್ರತಿಮೆಗೆ ಮಸಿ ಬಳಿದಿರುವಂತಹದ್ದು, ಕನ್ನಡ ಬಾವುಟವನ್ನು ಸುಟ್ಟಿ ಹಾಕಿರುವಂತಹದ್ದು, ಇಂತಹ ದುಷ್ಕೃತ್ಯ ಮಾಡಿರುವಂತಹದ್ದು. ಇದು ರಾಷ್ಟ್ರ ದ್ರೋಹಿ ಕೆಲಸ. ರಾಷ್ಟ್ರ ದ್ರೋಹಿ ಕೃತ್ಯದಲ್ಲಿ ತೊಡಗಿರುವಂತಹವರು ಯಾರೇ ಆಗಿರಲಿ, ಅವರಿಗೆ ಕಠಿಣವಾದಂತಹ ಶಿಕ್ಷೆಯಾಗುವುದಕ್ಕೆ ಕಾನೂನಿನಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡುವಂತಹ ಕೆಲಸವನ್ನು ನಮ್ಮ ಘನ ಸರ್ಕಾರ ಮಾಡಬೇಕು. ಮಾನ್ಯ ಬಿ.ಕೆ. ಹರಿಪ್ರಸಾದ್ ಮತ್ತು ಮಾನ್ಯ ಪುಟ್ಟಣ್ಣನವರು ಹೇಳಿದ ಹಾಗೇ, ವಿಶೇಷವಾಗಿ ನಿಯಮಗಳ ಅಡಿಯಲ್ಲಿ ಕಠಿಣ ಶಿಕ್ಷೆ ಅಂತಾ ಹೇಳಿದರೂ, ಸುಮಾರು 4-5 ವರ್ಷಗಳ ಕಾಲ ಸಜೆಯಾಗುವಂತಹ ಒಂದು ಕಲಂಗಳಲ್ಲಿ ಈ ಪ್ರಕರಣವನ್ನು ದಾಖಲು ಮಾಡಬೇಕೆಂದು ಹೇಳಿ, ನಾನು ಈ ಸದನದ ಮೂಲಕ ಘನ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇಂತಹ ಘಟನೆಯನ್ನು ಸಂಪೂರ್ಣವಾಗಿ ನಾನು ಖಂಡಿಸುತ್ತೇನೆ. ಆದರೆ ಈ ಬೆಳಗಾವಿ ಅಧಿವೇಶನಕ್ಕೆ ಬಂದ ಕೂಡಲೇ ಪ್ರತಿಮೆಗೆ ಮಸಿ ಬಳಿಯುವಂತಹ ಕೆಲಸ ಪ್ರಾರಂಭವಾದ ಕೂಡಲೇ, ಗೃಹ ಇಲಾಖೆಯ ಅಧಿಕಾರಿಗಳು ಬಹಳ ಸೂಕ್ಷ್ಮವಾಗಿ ಮತ್ತು ಬಹಳ ಹೆಚ್ಚಿನ ಆಸಕ್ತಿಯನ್ನು ರಕ್ಷಣಾ ವ್ಯವಸ್ಥೆಯ ದೃಷ್ಟಿಯಿಂದ ಮತ್ತು ಇಂತಹ ಘಟನೆಗಳು ಮರುಕಳಿಸಬಹುದೆಂಬ ದೃಷ್ಟಿಯಿಂದ ಜಾಗರೂಕತೆ ವಹಿಸಬೇಕು. ಎಲ್ಲೋ ಒಂದು ಕಡೆ ನಿರ್ಲಕ್ಷ್ಯ ಆಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಆದರೂ ಕೂಡ ಇಂತಹ ಘಟನೆಗಳನ್ನು ನಮ್ಮ ಪೊಲೀಸರು ಹಗಲು-ರಾತ್ರಿ ಕಾದು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇಂತಹ ಘಟನೆಗಳು ನಡೆಸುವಂತಹ ದುಷ್ಕರ್ಮಿಗಳು ಯಾವುದೇ ಸರ್ಕಾರವಿದ್ದರೂ ಕೂಡ ಅದರ ಕಣ್ಣಿಗೆ ತಪ್ಪಿಸಿಕೊಂಡು ಇಂತಹ ಕೆಲಸ ಮಾಡುವಂತಹ ಚಮಾತ್ಕಾರವನ್ನು ಹೊಂದಿದ್ದಾರೆ. ಆದರೂ ಕೂಡ ಇಂತಹ ಘಟನೆಯ ಬಗ್ಗೆ ಇನ್ನು ಕೂಡ ಸರಿಯಾದ ಕ್ರಮಗಳನ್ನು ನಮ್ಮ ರಕ್ಷಣಾ ಇಲಾಖೆಯ ಅಧಿಕಾರಿಗಳು ಕೈಗೊಳ್ಳಬೇಕು. ಯಾರು ಯಾರು ಇಂತಹ ದುಷ್ಕೃತ್ಯದಲ್ಲಿ ಭಾಗವಹಿಸಿದ್ದಾರೆ, ಅವರೆಲ್ಲರಿಗೂ ಕೂಡ ಮೊಕದ್ದಮೆಗಳು ದಾಖಲು ಮಾಡಿ, ಕಠಿಣವಾದಂತಹ ಶಿಕ್ಷೆ ಕೊಡಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳುತ್ತಾ, ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಒಂದು ಮಾತು ಇಲ್ಲಿ ನೆನಪು ಆಗುತ್ತದೆ. ಶ್ರೀ ಸ್ವಾಮಿವಿವೇಕಾನಂದರವರು ಹೇಳಿದ್ದಾರೆ. ಅದೇನೆಂದರೆ, ಜಗತ್ತಿನಲ್ಲಿ ಆಶಾಂತಿ, ಹಿಂಸೆ ಎಲ್ಲಿಯವರೆಗೆ ಇರುತ್ತದೆ ಎಂದು ಹೇಳಿದರೆ, ಈ ಜಗತ್ತಿನಲ್ಲಿ ಅಶಾಂತಿ ಮತ್ತು ಹಿಂಸೆ ಎರಡು ಇರುವಂತಹದ್ದು, ಏತಕ್ಕಾಗಿ ಎಂದು ಹೇಳಿದರೆ, ಒಂದು ಸ್ವಮತ ಭ್ರಾಂತಿ. ಎರಡನೆಯದು, ಅನ್ಯ ಧರ್ಮ ದ್ವೇಷಿ. ಇವೆರಡು ಕಾರಣಗಳಿಂದ ಜಗತ್ತಿನಲ್ಲಿ ಅಶಾಂತಿ ಮತ್ತು ಹಿಂಸೆ ಎಲ್ಲಾ ಕಡೆಯಿದೆ. ದಯವಿಟ್ಟು, ನಾನು ತಮ್ಮ ಮೂಲಕ ಘನ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಇದರ ಮೇಲೆ ಕಠಿಣವಾದ ಕ್ರಮಗಳನ್ನು ಕೈಗೊಳ್ಳುವ ತೆಗೆದುಕೊಳ್ಳಬೇಕು. ಇಂತಹ ಘಟನೆಗಳು ಸ್ವಾತಂತ್ರ್ಯ ಪೂರ್ವದಲ್ಲಿತ್ತು ಮತ್ತು ಸ್ವಾತಂತ್ರ್ಯ ನಂತರ ನಾವು ಗಮನಿಸುತ್ತಿದ್ದೇವೆ. ಬೆಳಗಾವಿ ಅಧಿವೇಶನ ಈಗ ಮಾತ್ರವಲ್ಲ. ಇದಕ್ಕೆ ಏನಾದರೂ ನಿರ್ದಿಷ್ಟವಾದಂತಹ ಬದಲಾವಣೆಗಳನ್ನು ಕಾನೂನಿನಲ್ಲಿ ತಂದರೆ, ಪ್ರತಿಮೆಗಳ ಮೇಲೆ ಹಾಕುವಂತಹ ದುಷ್ಕರ್ಮಿಗಳ ಕೃತ್ಯವನ್ನು ತಪ್ಪಿಸುವುದಕ್ಕೆ ಸರ್ಕಾರ ಏನಾದರೂ ಈಗಾಗಲೇ ಕಾಯಿದೆ ಇದ್ದರೆ, ಅದಕ್ಕೊಂದು ತಿದ್ದುಪಡಿ ತರುವಂತಹದ್ದರ ಬಗ್ಗೆ ಚಿಂತನೆಯನ್ನು ಮಾಡಬೇಕು.

(ಮುಂದು)

(1176)20.12.2021/4.40/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು):-**

ದಯಮಾಡಿ ಇನ್ನು ಮುಂದೆ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಮೆಗಳನ್ನು ಸ್ಥಾಪನೆ ಮಾಡುವುದಾದರೆ ಅದಕ್ಕೆ ಸರ್ಕಾರದ ಅನುಮತಿ ಬೇಕು. ಇಲ್ಲದಿದ್ದರೆ ವಿಧಾನಸೌಧದ ಸುತ್ತಲೂ ಹಾಕಿರುವ ಪ್ರತಿಮೆಗಳಿಗೆ ಪೊಲೀಸ್ ಕಾವಲು ಏನಿದೆ ಹಾಗೆ ಎಲ್ಲಾ ಪ್ರತಿಮೆಗಳಿಗೂ 24 ಗಂಟೆಗಳ ಕಾಲ ಪೊಲೀಸ್ ಕಾವಲು ಕೊಡಬೇಕಾಗುತ್ತದೆ. ದಯಮಾಡಿ ಸರ್ಕಾರ ಒಂದು ಚಿಂತನೆ ಮಾಡಬೇಕು. ಇಂತಹ ಮಹಾನ್ ವ್ಯಕ್ತಿಗಳ ಪ್ರತಿಮೆಗಳನ್ನು ಸುರಕ್ಷಿತವಾದಂತಹ ಸ್ಥಳಗಳಲ್ಲಿ, ಇಂತಹ ಘಟನೆಗೆ ಆಸ್ಪದವಾಗದಂತಹ ಸ್ಥಳಗಳಲ್ಲಿ ಹಾಕಬೇಕು ಮತ್ತು ಪ್ರತಿಯೊಂದು ಪ್ರತಿಮೆಗಳನ್ನು ಕೂಡ ಯಾವುದೇ ಸಂಘ ಸಂಸ್ಥೆ ಇರಲಿ, ಸಮುದಾಯವಿರಲಿ, ಯಾರೇ ಇರಲಿ ಹಾಕುವಾಗ ಸರ್ಕಾರದ ಅನುಮತಿ ಪಡೆಯಬೇಕು ಎನ್ನುವ ಒಂದು ಹೊಸ ನಿಯಮವನ್ನು ತೆಗೆದುಕೊಂಡು ಬರುವುದು ಅಥವಾ ಇಂತಹ ಮಹಾನ್ ವ್ಯಕ್ತಿಗಳ ಚರಿತ್ರೆಯನ್ನು ಪ್ರೌಢಶಿಕ್ಷಣ ವ್ಯವಸ್ಥೆಯ ಪಠ್ಯಕ್ರಮಗಳಲ್ಲಿಅಚ್ಚುಕಟ್ಟಾಗಿ ತರುವಂತಹದ್ದು ಆಗಬೇಕು. ಇದರ ಜೊತೆಗೆ ನಾಲ್ಕು ಭಾಗಗಳಲ್ಲೂ ಕೂಡ ಒಂದು ಮ್ಯೂಸಿಯಂ ಮಾಡಿ ಇಂತಹ ಮಹಾಪುರುಷರ ಪ್ರತಿಮೆಗಳನ್ನು ಅಲ್ಲಿಟ್ಟು ಅದನ್ನೊಂದು ಪ್ರವಾಸಿ ತಾಣವನ್ನಾಗಿ ಮಾಡಿ ದೇಶ ವಿದೇಶಗಳಿಂದ ಬಂದ ಪ್ರವಾಸಿಗಳೆಲ್ಲರೂ ಕೂಡ ಆ ಸ್ಥಳಕ್ಕೆ ಭೇಟಿ ಕೊಡುವಂತಹ ಒಂದು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಮಾಡುವುದು ಮತ್ತು ಅಲ್ಲಿ ಸೂಕ್ತವಾದಂತಹ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡುವಂತಹ ಒಂದು ಹೊಸ ಚಿಂತನೆ ಸರ್ಕಾರದಲ್ಲಿ ನಡೆದರೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳ್ಳೆಯದು. ಏಕೆಂದರೆ, ಪದೇ ಪದೇ ಈ ರೀತಿ ಹಗಲು ಅಥವಾ ರಾತ್ರಿ ನಡೆದರೆ ಪೊಲೀಸರು ಕಾಯ್ದುಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಈಗ ನಾವು ಇಂತಹ ಮಹಾಪುರುಷರ ಪ್ರತಿಮೆಗಳೆಲ್ಲವನ್ನೂ ಕೂಡ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲಾ ಕಡೆ ಅಭಿಮಾನದಿಂದ ನಿಲ್ಲಿಸಿಬಿಟ್ಟಿದ್ದೇವೆ. ಈಗ ಆ ಪ್ರತಿಮೆಗಳಿಗೆ ರಕ್ಷಣೆ ಕೊಡುವುದಕ್ಕೆ ಯಾವ ಸರ್ಕಾರದಿಂದಲೂ ಆಗುತ್ತಿಲ್ಲ. ಇಂತಹ ಕಿಡಿಗೇಡಿಗಳು ಜಗತ್ತಿನುದ್ದಕ್ಕೂ ಕೂಡ ಸ್ವಾಮಿ ವಿವೇಕಾನಂದರು ಹೇಳಿದ ಹಾಗೆ ಎಲ್ಲಿಯವರೆಗೆ ಇರುತ್ತದೆ ಎಂದರೆ, ಮಾನವ ಕೋಟಿ ಇರುವವರೆಗೂ ಕೂಡ ಈ ಕಿಡಿಗೇಡಿಗಳು ಇದ್ದೇ ಇರುತ್ತಾರೆ. ಇಂತಹ ಸಮಸ್ಯೆಗಳು ಎಲ್ಲಾ ಸರ್ಕಾರಗಳಿಗೂ ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತದೆ. ಆದ್ದರಿಂದ ನಮ್ಮ ರಾಜ್ಯದಲ್ಲಿ, ನಮ್ಮ ಸರ್ಕಾರದಲ್ಲಿ ಇವತ್ತು ಕನ್ನಡ ನಾಡು ಎಂದರೆ, ಭಾರತ ದೇಶದಲ್ಲಿ ಶಾಂತಿಯ ನೆಲೆಬೀಡು, ಕನ್ನಡ ನಾಡು ಕರುನಾಡು, ಸರ್ವ ಜನಾಂಗದ ಶಾಂತಿಯ ತೋಟ ಇದನ್ನು ಕುವೆಂಪುರವರು ಹೇಳಿದ್ದಾರೆ. ಇಂತಹ ಕಡೆ ಇಂತಹ ಘಟನೆಗಳು ಆಗಾಗ ನಡೆಯುತ್ತಿರುವುದು ಎಲ್ಲೋ ಒಂದು ಕಡೆ ನಮ್ಮೆಲ್ಲರ ಮನಸ್ಸಿಗೆ ಬಹಳ ನೋವುಂಟು ಮಾಡುತ್ತದೆ. ಇದರಲ್ಲಿ ಶಾಂತಿಯನ್ನು ಕದಡುವ ವ್ಯವಸ್ಥೆಯಾಗುತ್ತದೆ. ಇದಕ್ಕೆ ಆಸ್ಪದವಾಗಬಾರದು. ದಯಮಾಡಿ ಇದಕ್ಕೊಂದು ಕಾಯಿದೆಯನ್ನು ತೆಗೆದುಕೊಂಡು ಬಂದು ಇನ್ನು ಮುಂದೆ ಈ ಪ್ರತಿಮೆಗಳ ರಕ್ಷಣೆ ಮತ್ತು ಪ್ರತಿಮೆಗಳನ್ನು ಇಡುವಾಗ, ಆ ಪ್ರತಿಮೆಗಳನ್ನು ಎಲ್ಲಿಡಬೇಕು ಎನ್ನುವುದರ ಬಗ್ಗೆ ಒಂದು ಚಿಂತನೆಯನ್ನು ಆ ಕಾಯಿದೆ ಮೂಲಕ ಮಾಡಿದರೆ ಎಷ್ಟೋ ಸುರಕ್ಷತೆಯಾಗುತ್ತದೆ. ಇಂತಹ ಮಹಾಪುರುಷರಿಗೆ ನಾವು ಹೆಚ್ಚಿನ ಗೌರವ ಕೊಟ್ಟ ಹಾಗಾಗುತ್ತದೆ. ಇಂತಹ ಮಹಾಪುರುಷರ ಇತಿಹಾಸವನ್ನು ಪಠ್ಯಕ್ರಮಗಳಲ್ಲಿ ಅಳವಡಿಸಿದರೆ ನಮ್ಮ ಮಕ್ಕಳು ಬಾಲ್ಯದಲ್ಲಿಯೇ ಅದನ್ನು ಓದುವುದು ಮತ್ತು ಈ ಮಹಾಪುರುಷರನ್ನು ಅನುಕರಣೆ ಮಾಡುವುದು ಇದೆಲ್ಲವೂ ಆಗುತ್ತದೆ. ಅದರ ಬಗ್ಗೆ ಒಂದು ಚಿಂತನೆ ಮಾಡಬೇಕೆಂದು ಹೇಳುತ್ತಾ, ಈ ಘಟನೆಯನ್ನು ಖಂಡಿಸಿ ಮತ್ತೊಮ್ಮೆ ಘನಸರ್ಕಾರದಲ್ಲಿ; ಇವತ್ತು ಮಾನ್ಯ ಈಶ್ವರಪ್ಪನವರು ಇಲ್ಲಿಲ್ಲ. ಅವರು ರಾಯಣ್ಣ ಬ್ರಿಗೇಡ್ ಎಂದು ಮಾಡಿದರು. ಅದನ್ನು ಮಾಡಿ ಬಹಳ ಕಾಲ ದೊಡ್ಡ ಅಬ್ಬರ ಎಬ್ಬಿಸಿದರು. ಯಾಕೋ ನಿನ್ನೆಯಿಂದ ರಾಯಣ್ಣ ಪ್ರತಿಮೆಗೆ ಇಷ್ಟೆಲ್ಲಾ ಆದರೂ ಒಂದು ಹೇಳಿಕೆಯನ್ನು ಕೊಟ್ಟಿರುವುದನ್ನು ಕೂಡ ನಾನು ನೋಡಲಿಲ್ಲ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಮರಿತಿಬ್ಬೇಗೌಡರೇ, ಜಿಲ್ಲಾ ಆವೃತ್ತಿಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಆದರೆ ಮಾನ್ಯ ಈಶ್ವರಪ್ಪನವರು ರಾಯಣ್ಣ ಬ್ರಿಗೇಡ್‌ನಲ್ಲಿ ಗುಡುಗಿದ್ದು ಪತ್ರಿಕೆಯಲ್ಲಿ ಭಾರತ ದೇಶಕ್ಕೇ ಕೇಳುತ್ತಿತ್ತು. ಇವತ್ತು ಅವರ ಪ್ರತಿಮೆಗೆ ಆಗಿರುವ ಅವಮಾನಗಳ ಬಗ್ಗೆ ಅವರು ಗುಡುಗಿದ್ದನ್ನು ಎಲ್ಲೋ ಒಂದೆರಡು ಲೈನ್ ಬರೆಯುತ್ತಾರೆ. ಅವರು ಇದ್ದಿದ್ದರೆ ಚೆನ್ನಾಗಿತ್ತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಅದರ ಬಗ್ಗೆ ಕೆಣಕುವುದಕ್ಕೆ ಹೋಗುವುದಿಲ್ಲ. ದಯಮಾಡಿ ಈ ಘಟನೆಯಲ್ಲಿ ಭಾಗವಹಿಸಿರುವವರ ಮೇಲೆ ಬಹಳ ಕಠಿಣವಾದ ಶಿಕ್ಷೆಗೆ ಗುರಿಪಡಿಸುವಂತಹ ಕಾಲಂಗಳಲ್ಲಿ ಮೊಕದ್ದಮೆಗಳನ್ನು ಹಾಕಬೇಕು ಎಂದು ಹೇಳುತ್ತಾ ಈ ಘಟನೆಯನ್ನು ಖಂಡಿಸಿ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕದಲ್ಲಿ ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿರುವಂತಹ ಸಂದರ್ಭದಲ್ಲಿಯೇ ಈ ಒಂದು ಅಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡುವಂತಹ, ದ್ವೇಷದ ವಾತಾವರಣವನ್ನು ನಿರ್ಮಾಣ ಮಾಡಿದಂತಹ ರಣಹೇಡಿಗಳ ಕುಕೃತ್ಯವನ್ನು ನಾನು ಮೊದಲನೆಯದಾಗಿ ಖಂಡಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಪೀಠವನ್ನಲಂಕರಿಸಿದರು)**

ಸರ್ಕಾರಕ್ಕೆ ನನ್ನ ಒಂದು ಸಲಹೆಯೇನೆಂದರೆ, ಶಿವಾಜಿ ಪ್ರತಿಮೆ ಇರಬಹುದು, ಅದೇ ರೀತಿ ಸಂಗೊಳ್ಳಿ ರಾಯಣ್ಣನವರ ಪ್ರತಿಮೆ ಇರಬಹುದು, ಬಸವೇಶ್ವರರ ಪ್ರತಿಮೆ ಅಥವಾ ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆ ಇರಬಹುದು ಆಗಾಗ ಈ ಮಹಾಪುರುಷರ ಪ್ರತಿಮೆಗಳಿಗೆ ಧಕ್ಕೆ ಮಾಡಿ, ಹಲ್ಲೆ ಮಾಡಿ ವಿಕೃತ ಸಂತೋಷವನ್ನು ಪಡೆಯುವಂತಹ ರಣಹೇಡಿಗಳ ಕುಕೃತ್ಯ ಆಗಾಗ ನಡೆಯುತ್ತಿರುತ್ತದೆ. ಅದಕ್ಕೆ ನನ್ನ ಸಲಹೆಯೇನೆಂದರೆ, ಯಾರು ಆ ಪ್ರತಿಮೆಗೆ ಹಲ್ಲೆ ಮಾಡುತ್ತಾರೆ, ಅಗೌರವವನ್ನು ತೋರುತ್ತಾರೆ; ಬೇರೆ ಬೇರೆ ಕಡೆಗಳಲ್ಲಿ ಚಪ್ಪಲಿ ಹಾರವನ್ನು ಹಾಕಿ ಕೂಡ ವಿಕೃತ ಸಂತೋಷವನ್ನು ಪಡೆಯುತ್ತಾರೆ, ಅಂತಹವರನ್ನು ಸರಿಯಾಗಿ ಗುರುತಿಸಿ ಕನಿಷ್ಟ10 ವರ್ಷ ಜೈಲಿನಲ್ಲಿಡಬೇಕು ಮತ್ತು ಬಹಳ ಕಠಿಣ ಶಿಕ್ಷೆಯನ್ನು ಕೊಡಬೇಕು. 10 ವರ್ಷಗಳ ಕಾಲ ಹೊರಗಡೆ ಬಿಡುವುದಿಲ್ಲ ಎಂಬ ಒಂದು ಕಾನೂನನ್ನು ರಚಿಸಬೇಕೆಂದು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುತ್ತೇನೆ. ಎರಡನೆಯದಾಗಿ ನಮ್ಮ ಸಭಾಪತಿಯವರು ಹೇಳಿದ ಹಾಗೆ ವಿಧಾನ ಪರಿಷತ್ತಿನ ಆರು ವಾಹನಗಳ ಮೇಲೆ ಹಲ್ಲೆಯನ್ನು ನಡೆಸಿದ್ದಾರೆ. ಪೊಲೀಸ್ ವಾಹನಕ್ಕೆ ಬೆಂಕಿ ಹಚ್ಚಿದ್ದಾರೆ, ಕನ್ನಡದ ಆಸ್ತಿಪಾಸ್ತಿಗಳಿಗೆ ಹಾನಿ ಮಾಡಿದ್ದಾರೆ ಎಂದು ಏನು ಪತ್ರಿಕೆಯಲ್ಲಿ, ಟಿ.ವಿ.,ಯಲ್ಲಿ ಬಂದಿದೆ ಅದನ್ನು ನಾವು ಕೂಡ ನೋಡಿದ್ದೇವೆ. ಯಾರು ಆ ರೀತಿ ವಾಹನವನ್ನು ಸುಟ್ಟಿದ್ದಾರೆ, ಯಾರು ಆಸ್ತಿ ಪಾಸ್ತಿಯನ್ನು ಸುಟ್ಟಿದ್ದಾರೆ ಅವರಿಂದಲೇ ವಸೂಲಿ ಮಾಡಬೇಕು. ಅಂದರೆ ಉಪ್ಪು ತಿಂದವನೇ ನೀರು ಕುಡಿಯಬೇಕು. ಹಾಗಾಗಿ ಅವರಿಂದ ವಸೂಲಿ ಮಾಡಬೇಕು, ವಸೂಲಿ ಮಾಡುವವರೆಗೂ ಬಿಡಬಾರದು. ಅವನು ಯಾವ ಮನೆಗೆ ಸಂಬಂಧಪಟ್ಟಿದ್ದಾನೆ, ಯಾವ ಕುಟುಂಬಕ್ಕೆ ಸಂಬಂಧಪಟ್ಟಿದ್ದಾನೆ ಮತ್ತು ಸಮಾಜ ಅವನನ್ನು ಅಗೌರವವಾಗಿ ನೋಡಬೇಕು. ಆ ರೀತಿಯ ಶಿಕ್ಷೆಯನ್ನು ಕೊಡಬೇಕು. ಅದರಲ್ಲಿಯೂ ರಾತ್ರಿ ಹೊತ್ತಲ್ಲಿ ಈ ಘಟನೆಯನ್ನು ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದರೆ ಸರ್ಕಾರಕ್ಕೆ ಮತ್ತು ಸಮಾಜದ ಜನರಿಗೆ ಒಂದು ಹೆಮ್ಮೆ ಇದೆ. ಸುರಕ್ಷಿತವಾಗಿರುತ್ತದೆ, ಏನೂ ತೊಂದರೆಯಿಲ್ಲವೆಂದು. ಆದರೆ ಇದರ ದುರುಪಯೋಗವನ್ನು ಪಡೆದುಕೊಂಡಿರುವಂತಹವರು ಯಾರಿದ್ದಾರೆ ಅವರನ್ನು ಹಿಡಿದು, ಅರೆಸ್ಟ್ ಮಾಡಿ, ಶಿಕ್ಷೆಯನ್ನು ವಿಧಿಸಿದ್ದಾರೆ ಅದಕ್ಕೆ ನಾನು ಸರ್ಕಾರಕ್ಕೆ ಮತ್ತು ಗೃಹ ಮಂತ್ರಿಗಳಿಗೆ ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಕನ್ನಡದ ಧ್ವಜವನ್ನು ಸುಟ್ಟಿದ್ದಾರೆ. ಅದಕ್ಕೆ ಪ್ರತಿಯಾಗಿ ನಾವು ಮಹಾರಾಷ್ಟ್ರದ ಧ್ವಜವನ್ನು ಸುಡಬಹುದು. ಆದರೆ ಅದು ನಮ್ಮ ಹೇಡಿತನವಾಗುತ್ತದೆ ಅದನ್ನು ನಾವು ಮಾಡಬಾರದು. ಮತ್ತೆ ರಣಹೇಡಿಗಳ ಕೆಲಸವನ್ನು ನಾವು ಮಾಡಿದ ಹಾಗಾಗುತ್ತದೆ. ಭಾರತದ ಧ್ವಜವನ್ನು ಸುಡುವುದು ಎಂದರೆ, ಭಾರತದ ರಾಷ್ಟ್ರಗೀತೆಗೆ ಅವಮಾನ ಮಾಡುವುದು ಎಂದರೆ ಅದು ಇಡೀ ದೇಶಕ್ಕೆ ಅವಮಾನ ಮಾಡಿದ ಹಾಗೆ. ಶಿವಾಜಿಗೆ ಅವಮಾನ ಮಾಡುವುದು ಎಂದರೆ, ರಾಯಣ್ಣನವರಿಗೆ ಅವಮಾನ ಮಾಡುವುದು ಎಂದರೆ, ಡಾ. ಬಿ.ಆರ್. ಅಂಬೇಡ್ಕರ್‌ರವರಿಗೆ ಅವಮಾನ ಮಾಡುವುದು ಎಂದರೆ, ಭಾರತಕ್ಕೆ ಅವಮಾನ ಮಾಡಿದ ಹಾಗೆ, ನಮ್ಮ ಹೆತ್ತ ತಾಯಿಗೆ ಅಗೌರವ ಮಾಡಿದ ಹಾಗೆ ಆಗುತ್ತದೆ. ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಕ್ಕೆ ನನ್ನ ಸಲಹೆಯೊಂದನ್ನು ಹೇಳಿ ನನ್ನ ವಿಚಾರವನ್ನು ಮುಗಿಸುತ್ತೇನೆ. ನಾವು ಬೆಳಗಾವಿಯಲ್ಲಿ ವರ್ಷಕ್ಕೊಂದು ಸಲ ಅಧಿವೇಶನವನ್ನು ನಡೆಸಿಯೇ ನಡೆಸುತ್ತೇವೆ. ಈ ಸುವರ್ಣಸೌಧವನ್ನು ಬಹಳ ವಿಶೇಷವಾದ ಕಾರಣಕ್ಕೋಸ್ಕರವಾಗಿ ಕಟ್ಟಲಾಗಿದೆ. ಮಹಾರಾಷ್ಟ್ರ ಮತ್ತೊಮ್ಮೆ ಬೆಳಗಾವಿಯ ತಂಟೆಗೆ ಬರಬಾರದು. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದೆ. ಹೇಗೆ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿದೆಯೋ ಅದೇ ರೀತಿಯಲ್ಲಿ ಬೆಳಗಾವಿಯು ಕೂಡ ಕರ್ನಾಟಕದ ಅವಿಭಾಜ್ಯ ಅಂಗವೆಂದು ಬೆಳಗಾವಿಯಲ್ಲಿ ಸುವರ್ಣಸೌಧವನ್ನು ಕಟ್ಟಿ ಉತ್ತರ ಕರ್ನಾಟಕದ, ಇಡೀ ರಾಜ್ಯದ ಸಮಸ್ಯೆಗಳು, ಅಭಿವೃದ್ಧಿ, ಸಮಗ್ರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಈ ಭಾಗದಲ್ಲಿ ಚರ್ಚೆಯಾಗಬೇಕೆನ್ನುವ ಕಾರಣಕ್ಕೋಸ್ಕರವಾಗಿ ಇಲ್ಲಿ ಸುವರ್ಣಸೌಧವನ್ನು ಕಟ್ಟಲಾಗಿದೆ. ಇದಕ್ಕೆ ಎಲ್ಲರ ಸಹಮತವಿದೆ. ಅದು ಕಾಂಗ್ರೆಸ್ ಇರಲಿ, ಬಿ.ಜೆ.ಪಿ., ಇರಲಿ, ಜೆ.ಡಿ(ಎಸ್) ಇರಲಿ ಇಡೀ ನಾಡಿನ ಆರೂವರೆ ಕೋಟಿ ಜನರ ಬೆಂಬಲದಿಂದ ಇದನ್ನು ಕಟ್ಟಲಾಗಿದೆ.

(ಮುಂದು)

(1107) 20-12-2021 KH/BNS 4-50 **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್(ಮುಂದು):-**

ಆರೂವರೆ ಕೋಟಿ ಜನರಿಗೆ ವಿರೋಧವಾಗಿ ಯಾರು ನಡೆದುಕೊಳ್ಳುತ್ತಾರೆ, ಅವರಿಗೆ ಕಠಿಣಾತಿ ಕಠಿಣ ಶಿಕ್ಷೆಯನ್ನು ವಿಧಿಸಬೇಕು. ಈ ನಾಡಿನಲ್ಲಿ ಯಾರೇ ಸಾರ್ವಜನಿಕ ಆಸ್ತಿಯನ್ನು ನಷ್ಟ ಮಾಡಿದರೂ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೂಡ ಅದನ್ನು ಅವರ ಕಡೆಯಿಂದ ವಸೂಲಿ ಮಾಡಬೇಕು ಮತ್ತು ಗಡಿಪಾರು ಮಾಡಬೇಕು. ಏನು Karnataka Control of Organised Crimes Act (KCOCA) ಎಂದು ಹೇಳಿದರು. ಎಲ್ಲವನ್ನೂ ಕೂಡ ಸೇರಿಸಿ, ಅವರಿಗೆ ಆ ರೀತಿಯಾದಂತಹ ಕಠಿಣ ಶಿಕ್ಷೆಯನ್ನು ವಿಧಿಸಬೇಕೆಂದು ಹೇಳುತ್ತಾ ಮತ್ತು ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಇದಕ್ಕೆ ಒಂದು ಪೂರ್ವಭಾವಿ ಸಭೆಯನ್ನು ನಡೆಸಬೇಕು. ಈ ಪೂರ್ವಭಾವಿ ಸಭೆಯನ್ನು ಹೇಗೆ ನಡೆಸಬೇಕೆಂದರೆ, ಇನ್ನು ಮುಂದೆ ಅಧಿವೇಶನ ಪ್ರಾರಂಭವಾಗುವ 3 - 4 ದಿನಗಳ ಮುಂಚೆ ಈ ಸಭೆಯನ್ನು ನಡೆಸಿ, ಯಾರಾದರೂ ಈ ರೀತಿಯ ಕುಕೃತ್ಯವನ್ನು ನಡೆಸಿದರೆ ಅವರಿಗೆ ನಾವು ಈ ರೀತಿಯ ಕಾನೂನಿನಡಿಯಲ್ಲಿ ತಕ್ಷಣದಲ್ಲಿಯೇ ಬಂಧಿಸುತ್ತೇವೆ. ಯಾರೇ ಈ ರೀತಿಯ ಘಟನೆಗೆ ಕಾರಣರಾದವರನ್ನು ಇಷ್ಟು ವರ್ಷಗಳ ಕಾಲ ಹೊರಗೆ ಬಿಡುವುದಿಲ್ಲ ಎಂದು ಮುಂಚಿತವಾಗಿಯೇ ಒಂದು ಹೇಳಿಕೆಯನ್ನು ಕೊಡಬೇಕು. ಸಭೆಯನ್ನು ನಡೆಸಬೇಕು. ಈ ರೀತಿಯ ಘಟನೆಗಳು ಆಗದೇ ಇರುವ ಹಾಗೆ ನೋಡಿಕೊಳ್ಳಬೇಕು ಮತ್ತು ಈಗ ಸರ್ಕಾರ ಎಚ್ಚೆತ್ತುಕೊಂಡು ಈ ರೀತಿಯ ಕ್ರಮಗಳನ್ನು ಏನು ತೆಗೆದುಕೊಂಡಿದೆ. ಅದಕ್ಕೆ ನಾನು ಅಭಿನಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ಎಂ.ರಮೇಶಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ಬಹಳಷ್ಟು ಜನ ಹಿರಿಯರು ಮಾತನಾಡಿದ್ದಾರೆ. ಈ ಬೆಳಗಾವಿ ಅಧಿವೇಶನ ನಡೆಸುತ್ತಿರುವಂತಹ ಸಂದರ್ಭದಲ್ಲಿ ಈ ಅಧಿವೇಶನ ನಡೆಯುವುದೇ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳೇನಿವೆ, ಆ ಸಮಸ್ಯೆಗಳ ಬಗ್ಗೆ ಈ ಸದನದಲ್ಲಿ ವಿಸ್ತಾರವಾಗಿ ಚರ್ಚೆಯಾಗಬೇಕೆಂದು ಈ ಚಳಿಗಾಲದ ಬೆಳಗಾವಿ ಅಧಿವೇಶನವನ್ನು ಇಲ್ಲಿ ಕರೆಯುತ್ತಾರೆ. ಆದರೆ, ದುರ್ದೈವ ಏನೆಂದರೆ, ಈ ಬೆಳಗಾವಿಯಲ್ಲಿ ಅಧಿವೇಶನ ಕರೆದಿರುವಂತಹ ಸಂದರ್ಭದಲ್ಲಿ ಪ್ರತಿ ಬಾರಿಯೂ ಸಹ ಇಂತಹದ್ದೇ ಏನಾದರೂ ಒಂದು ಕೃತ್ಯವನ್ನು ನಡೆಸುತ್ತಾರೆ. ವಿರೋಧ ಪಕ್ಷದವರು ಏನೋ ಮಾಡಿದರು, ಆಡಳಿತ ಪಕ್ಷದವರು ಏನೋ ಮಾಡಿದರು ಎನ್ನುವುದರಲ್ಲಿಯೇ ಸದನದ ಸಮಯವೆಲ್ಲಾ ಹಾಳಾಗುತ್ತಿದೆ. ಇವತ್ತಿನ ದಿವಸ ಸಂಗೊಳ್ಳಿ ರಾಯಣ್ಣನವರ ಪ್ರತಿಮೆಯನ್ನು ಧ್ವಂಸ ಮಾಡಿದ್ದಾರೆ. ನಾವು ಹಿಂದೆ ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆಯನ್ನು ಅನಾವರಣ ಮಾಡಿದ್ದೇವೆ. ಈ ಪ್ರತಿಮೆಗಳನ್ನು ಎಲ್ಲೋ ಒಂದು ಕಡೆ ಅನಾವರಣ ಮಾಡುವ ಉದ್ದೇಶವೇನೆಂದರೆ, ನಾವು ಕನ್ನಡಿಗರು, ಯಾವುದೇ ಜಾತಿ ಇರಬಹುದು. ನಮ್ಮ ಜಾತಿ ವ್ಯವಸ್ಥೆಯಲ್ಲಿ ಯಾವುದೇ ಒಂದು ಸಮುದಾಯಕ್ಕೆ ನೋವಾಗಬಾರದೆನ್ನುವ ದೃಷ್ಟಿಯಿಂದ ಎಲ್ಲರ ಪ್ರತಿಮೆಗಳು ಇರಲಿ. ಎಲ್ಲರೂ ಸಹ ನಮ್ಮ ಅಣ್ಣ-ತಮ್ಮಂದಿರು ಮತ್ತು ಸಹೋದರರ ರೀತಿ ಬಾಳ್ವೆಯನ್ನು ನಡೆಸಬೇಕು. ಯಾವುದೇ ಸರ್ಕಾರಗಳು ಮತ್ತು ಸಂಘಟನೆಗಳು ಇರಬಹುದು, ಅಂತಹ ನಿಟ್ಟಿನಲ್ಲಿ ಈ ರೀತಿಯ ಕೆಲಸಗಳನ್ನು ಮಾಡುತ್ತಾರೆ. ಆದರೆ, ಕೆಲವೇ ಕೆಲವು ಜನರು ಇಂತಹ ನೀಚ ಕೆಲಸವನ್ನು ಮಾಡುತ್ತಾರೆಯಲ್ಲವೇ, ಅಂತಹವರಿಂದ ಇಡೀ ರಾಜ್ಯದ ಕಾನೂನು ಸುವ್ಯವಸ್ಥೆಗೆ ಭಂಗ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತರುವಂತಹದ್ದು ಆಗುತ್ತಿದೆ. ಇದು ಎಲ್ಲರಿಗೂ ಸಹ ಗೊತ್ತಿರುವಂತಹ ವಿಚಾರ. ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ಶಿವಾಜಿ ಪ್ರತಿಮೆಗೆ ಮಸಿ ಬಳಿದಿರುವಂತಹದ್ದು ಇರಬಹುದು, ದೇಶ ಪ್ರೇಮಿ ಸಂಗೊಳ್ಳಿ ರಾಯಣ್ಣನವರ ಪ್ರತಿಮೆಯನ್ನು ಧ್ವಂಸ ಮಾಡಿರುವಂತಹದ್ದನ್ನು ಪ್ರತಿ ಬಾರಿ ನಾವು ನೋಡುತ್ತಿದ್ದೇವೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಮತ್ತು ಎಂಇಎಸ್ ನವರು ಬೆಳಗಾವಿ ಈ ಭಾಗದಲ್ಲಿರುವಂತಹ ಪುಂಡರು ಏನಿದ್ದಾರೆ? ಇವರು ಎರಡರಿಂದ ಮೂರು ತಿಂಗಳಿಗೊಮ್ಮೆ ಒಂದೊಂದು ಬಾರಿ ಇಂತಹ ದುಷ್ಕೃತ್ಯಗಳಿಗೆ ಕೈಹಾಕುತ್ತಾರೆ. ಇಲ್ಲಿ ಯಾವುದೇ ಸರ್ಕಾರಗಳು ಇರಬಹುದು, ಇದರಲ್ಲಿ ಗೃಹ ಮತ್ತು ಗುಪ್ತಚರ ಇಲಾಖೆ ಕೂಡ ಇದ್ದು, ಯಾವ್ಯಾವ ರಾಜಕಾರಣಿಗಳು ಯಾರ್ಯಾರ ಜೊತೆ ಮಾತನಾಡಿದರು, ಯಾವ್ಯಾವ ರಾಜಕಾರಣಿ ಯಾರ್ಯಾರ ಮನೆಗೆ ಹೋದರು, ಯಾರ್ಯಾರ ಜೊತೆ ಫೋನಿನಲ್ಲಿ ಮಾತನಾಡಿದರು ಎನ್ನುವುದರ ಬಗ್ಗೆ ಇವರು ಹೆಚ್ಚು ಗಮನ ಕೊಡುವುದನ್ನು ಬಿಟ್ಟು ಯಾರು ಬಾಂಬ್ ಇಡುವುದಕ್ಕೆ ಬರುತ್ತಾರೆ. ಯಾರು ಇಂತಹ ನೀಚ ಕೆಲಸವನ್ನು ಮಾಡುತ್ತಾರೆ. ಕೇಂದ್ರ ಸಚಿವರು ಯಾರಾದರೂ ಬಂದರೆ, ಇಲ್ಲಿ ಯಾವುದೋ ಸಂಘಟನೆಯವರು ಅವರ ವಿರುದ್ಧ ಪ್ರತಿಭಟನೆ ಮಾಡುತ್ತಾರೆ ಎಂದರೆ 3 ದಿವಸಗಳ ಮುಂಚೆ ಅವರನ್ನು ಹಿಡಿದು ಒಳಗೆ ಹಾಕುತ್ತಾರೆ. ಆದರೆ, ಬೆಳಗಾವಿ ಒಂದು ಸೂಕ್ಷ್ಮ ಪ್ರದೇಶವಾಗಿದ್ದು, ಪ್ರತಿ ಬಾರಿಯೂ ಸಹ ಇವರು ಇಂತಹ ನೀಚ ಕೆಲಸವನ್ನು ಮಾಡುತ್ತಲೇ ಇದ್ದಾರೆ. ಇದು ಒಂದು ಬಾರಿಯಲ್ಲ. ಇದನ್ನು ಮೂರು ತಿಂಗಳಿಗೊಮ್ಮೆ ನೋಡುತ್ತಲೇ ಇರುತ್ತೇವೆ. ಯಾವುದೇ ಒಂದು ಚುನಾವಣೆಯಾಗಬಹುದು ಅಥವಾ ಯಾವುದೋ ಒಂದು ಸಂಘಟನೆಯವರು ಇನ್ಯಾವುದೋ ಪ್ರತಿಮೆಯ ಬಗ್ಗೆ ಹೋರಾಟ ಮಾಡುವುದಕ್ಕೆ ಬರಬಹುದು. ಪ್ರತಿ ಬಾರಿಯೂ ಸಹ ಎಂಇಎಸ್‌ನ ಪುಂಡರು ಇಂತಹ ನೀಚ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಹಾಗಾಗಿ, ಈಗ ಇಲ್ಲಿ ಅಧಿವೇಶನ ನಡೆಯುತ್ತಿದೆ ಎಂದು ಅವರಿಗೆ ಗೊತ್ತು. ಇಲ್ಲಿ ಪೊಲೀಸ್ ಇಲಾಖೆ ಮತ್ತು Commissionerate ನವರು ಏನು ಮಾಡುತ್ತಿದ್ದರು? ಹಾಗೆಯೇ, ಡಾ|| ಅಂಬೇಡ್ಕರ್ ಪ್ರತಿಮೆ ಇರಬಹುದು ಅಥವಾ ಇನ್ನೊಂದು ಪ್ರತಿಮೆ ಇರಬಹುದು, ನಾವು ಆ ಪ್ರತಿಮೆಗಳಿಗೂ ರಕ್ಷಣೆಯನ್ನು ಕೊಡುತ್ತೇವೆ. ಆದರೆ, ಇಂತಹ ಸೂಕ್ಷ್ಮ ಪ್ರದೇಶವಾದ ಬೆಳಗಾವಿಯಲ್ಲಿ ಅದರಲ್ಲಿಯೂ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಬಂದು ಒಂದು ಪ್ರತಿಮೆಯನ್ನು ಒಡೆದು ಹಾಕಿ ಹೋಗುತ್ತಾರೆ ಎಂದರೆ, ಇದು ಗೃಹ ಇಲಾಖೆಯ ವೈಫಲ್ಯವಾಗಿದೆ. ನಾವು ಇನ್ನೊಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಹೇಳಿದ್ದಾರೆ. ಎಂಇಎಸ್‌ನ ಪುಂಡರು ಇಂತಹ ಕೆಲಸವನ್ನು ಏನು ಮಾಡಿದ್ದಾರೆ, ಅದನ್ನು ಸಮರ್ಥನೆ ಮಾಡಿದ್ದಾರೆ. ಒಬ್ಬ ರಾಜ್ಯದ ಮುಖ್ಯಮಂತ್ರಿಗಳಾಗಿ ಇಂತಹ ಸಮರ್ಥನೆಯನ್ನು ಮಾಡುವುದು ಎಷ್ಟರಮಟ್ಟಿಗೆ ಸರಿ ಎಂದು ಅವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹಾಗಾಗಿ ನಮ್ಮ ಕನ್ನಡಿಗರು ಬಹಳ ಹೃದಯ ವೈಶಾಲ್ಯತೆಯನ್ನು ಹೊಂದಿರುವಂತಹವರು. ನಮ್ಮ ಕನ್ನಡಿಗರು ಬೇರೆ ಬೇರೆ ರಾಜ್ಯಕ್ಕೆ ಹೋಗಿ ವಾಸ ಮಾಡುತ್ತಿದ್ದಾರೆ. ಕನ್ನಡಿಗರು ಕೇರಳ, ಮಹಾರಾಷ್ಟ್ರ, ತಮಿಳುನಾಡು,

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗೋವಾ ಮತ್ತು ಎಲ್ಲಾ ಕಡೆಯಲ್ಲಿಯೂ ವಾಸ ಮಾಡುತ್ತಿದ್ದಾರೆ. ಅವರು ಆ ಮಣ್ಣಿನ ಅನ್ನವನ್ನು ತಿನ್ನುತ್ತಿದ್ದಾರೆ. ಆ ಮಣ್ಣಿಗೆ ಅನುಗುಣವಾಗಿ ನಾವು ನಡೆದುಕೊಳ್ಳಬೇಕೆಂದು ಮತ್ತು ಇವತ್ತು ಅಲ್ಲಿನ ಭಾಷೆ, ನಾಡು-ನುಡಿ ಸಂಸ್ಕೃತಿಗೆ ಅನುಗುಣವಾಗಿ ಕನ್ನಡಿಗರು ಬದುಕುತ್ತಿದ್ದಾರೆ. ಆದರೆ, ಕರ್ನಾಟಕಕ್ಕೆ ಬೇರೆ ಬೇರೆ ರಾಜ್ಯದವರು ಸಹ ಬಂದಿದ್ದಾರೆ. ಎಲ್ಲರೂ ಸಹ ಕನ್ನಡವನ್ನು ಮೊದಲ ಭಾಷೆಯಾಗಿ ಮಾತನಾಡಬೇಕೆಂದು ಹೇಳುತ್ತೇವೆ. ಆದರೆ, ದುರ್ದೈವ ಏನೆಂದರೆ, ಯಾರು ಬೇರೆ ಬೇರೆ ರಾಜ್ಯದ ಜನ ಇಲ್ಲಿಗೆ ಬಂದಿದ್ದಾರೆ, ಅವರು ನಾವು ಕರ್ನಾಟಕ ರಾಜ್ಯದ ಅನ್ನವನ್ನು ತಿನ್ನುತ್ತಿದ್ದೇವೆ. ಈ ಮಣ್ಣಿಗೆ ಅನುಗುಣವಾಗಿ ನಡೆದುಕೊಳ್ಳಬೇಕೆನ್ನುವ ಬಗ್ಗೆ ಅವರು ಯೋಚನೆ ಮಾಡುವುದಿಲ್ಲ. ಅಲ್ಪಸ್ವಲ್ಪ ಜನ ಇರಬಹುದು. ಆದರೆ, ಯಾರಿಗೂ ಸಹ ಕನ್ನಡದ ಬಗ್ಗೆ, ಕನ್ನಡ ಮಣ್ಣಿನ ಬಗ್ಗೆ ಸಾಕಷ್ಟು ಜನರಿಗೆ ಗೌರವ ಇಲ್ಲ. ಹಾಗಾಗಿ, ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಪ್ರತಿ ಬಾರಿ ಇಂತಹ ಕೃತ್ಯಗಳನ್ನು ಯಾರು ಮಾಡುತ್ತಾರೆ, ಇದಕ್ಕೆ ಈಗಾಗಲೇ ಕಾನೂನು ಇದೆ. ಐಪಿಸಿ ಸೆಕ್ಷನ್‌ಗಳು ಇವೆ. ಪ್ರತಿಮೆಗಳನ್ನು ಧ್ವಂಸ ಮಾಡುವುದಿರಬಹುದು, ಇನ್ನೊಬ್ಬರ ಮುಖಕ್ಕೆ ಮಸಿ ಬಳಿಯುವಂತಹದ್ದು ಇರಬಹುದು, ಕೇಂದ್ರ ಸರ್ಕಾರ ಎಲ್ಲೋ ಒಂದು ಕಡೆ ನಮ್ಮ ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ಕಪ್ಪು ಚುಕ್ಕೆಯನ್ನಿಡುವಂತಹ ಕೆಲಸವನ್ನು ಮಾಡುತ್ತಿದೆ. ಏಕೆಂದರೆ, ಅವರು ಎಲ್ಲೋ ಒಂದು ಕಡೆ ಹಿಂದಿ ಹೇರುವಂತಹ ಒಂದು ಅಜೆಂಡಾವನ್ನು ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಪ್ರತಿ ಬಾರಿಯೂ ಸಹ ಹಿಂದಿ ಭಾಷೆಗೆ ಬಹಳ ಮೊದಲ ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಆದರೆ, ಆ ರೀತಿ ಆಗಬಾರದು. ಹಿಂದಿ ಮತ್ತು ಇನ್ನು ಯಾವ್ಯಾವ ಭಾಷೆಗಳಿವೆಯೋ ಅದೆಕ್ಕೆಲ್ಲಾ ನಾವು ಗೌರವ ಕೊಡುತ್ತೇವೆ. ಆದರೆ, ಕನ್ನಡಿಗರ ಮೇಲೆ ದೌರ್ಜನ್ಯ ಮಾಡಿ ಹಿಂದಿ ಹೇರುವಂತಹ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬಾರದು. ಹಾಗಾಗಿ, ಮಾನ್ಯ ಗೃಹ ಸಚಿವರು ಸದನದಲ್ಲಿಯೇ ಕುಳಿತಿದ್ದಾರೆ. ಯಾರು ಇಂತಹ ದುಷ್ಕೃತ್ಯದಲ್ಲಿ ಮೊದಲನೇ ಬಾರಿ ಭಾಗಿಯಾಗುತ್ತಾರೆ, ಎರಡನೇ ಬಾರಿ ಭಾಗಿಯಾಗುತ್ತಾರೆ, ಪ್ರತಿ ಬಾರಿ ಇದೇ ಕೆಲಸವನ್ನು ಮಾಡಿಕೊಂಡು ಬಂದವರಿಗೆ ಗೂಂಡಾ ಕಾಯ್ದೆಯನ್ನು ಹಾಕಿ, ಒಳಗಡೆ ಇಡುವಂತಹ ಕೆಲಸವನ್ನು ಮಾಡಬೇಕೆಂದು ಹೇಳಿ, ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಮತ್ತೊಮ್ಮೆ ಧನ್ಯವಾದಗಳನ್ನು ತಿಳಿಸುತ್ತಾ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ನಾಡಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ನೆನಪನ್ನು ಉಳಿಸಿಕೊಳ್ಳುವುದಕ್ಕೆ ನಾವು ಇಂತಹ ಪ್ರತಿಮೆಗಳ ನಿರ್ಮಾಣ ಹಾಗೂ ಹಲವಾರು ವಿಚಾರಗಳಲ್ಲಿ ಪ್ರತಿಭೆಗಳು ಯಾರಿರುತ್ತಾರೋ, ಅವರನ್ನು ನೆನಪಿಸಿಕೊಳ್ಳುವುದಕ್ಕೋಸ್ಕರ ಪ್ರತಿಮೆಗಳನ್ನು ಮಾಡಬೇಕು. ಆದರೆ, ಇಲ್ಲಿ ಇಂತಹ ಪ್ರತಿಮೆಗಳನ್ನು ಧ್ವಂಸಗೊಳಿಸುವಂತಹ ಕೆಲಸ ನಡೆಯುತ್ತಿದೆ. ನಾವು ಮಕ್ಕಳಿಗೆ ಏನು ಇತಿಹಾಸವನ್ನು ಹೇಳಿಕೊಡಬೇಕಾಗಿತ್ತೋ, ಈ ಪ್ರತಿಮೆ ನೋಡುವುದರಿಂದ ಸಂಗೊಳ್ಳಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಯಣ್ಣನವರು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದರು. ಚೆನ್ನಮ್ಮನ ನಾಡಿನಲ್ಲಿ ಅಂತಹ ಮಹಾಪುರುಷ ಇದ್ದ ಎನ್ನುವುದನ್ನು ನೋಡಿ ಮಕ್ಕಳು ಕಲಿಯಬೇಕು. ಇದು ಮುಂದಿನ ಇತಿಹಾಸದಲ್ಲಿ ಉಳಿಯಬೇಕೆನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಮಾಡಿದ್ದೇವೆ. ಆದರೆ, ಇಲ್ಲಿ ಏನು ನಡೆಯುತ್ತಿದೆ? ಸಂಗೊಳ್ಳಿ ರಾಯಣ್ಣ ಹುಟ್ಟಿದಂತಹ ನಾಡಿನಲ್ಲಿ ಅವರ ಪ್ರತಿಮೆಯನ್ನು ಧ್ವಂಸಗೊಳಿಸುತ್ತಾರೆ. ಆ ಪ್ರತಿಮೆಯನ್ನು ಧ್ವಂಸಗೊಳಿಸುವುದಷ್ಟೇ ಅಲ್ಲ, ಪೊಲೀಸರ ವಾಹನಗಳ ಮೇಲೆ ಕಲ್ಲು ಒಡೆಯುತ್ತಾರೆ. ಸರ್ಕಾರಿ ವಾಹನಗಳ ಮೇಲೆ ಕಲ್ಲು ಒಡೆಯುತ್ತಾರೆ. ಅದು ಯಾವಾಗ ಎಂದರೆ, ಅಧಿವೇಶನ ನಡೆಯುವಾಗ ಇದನ್ನು ಮಾಡುತ್ತಾರೆ.

(ಮುಂದು)

(1178) ಎಸ್‌ಪಿಆರ್/ಬಿಎನ್‌ಎಸ್ 5:00 20/12/2021 (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಬಿ.ತಿಮ್ಮಾಪೂರ(ಮುಂದು):-**

ಈ ದುಷ್ಕೃತ್ಯದ ಹಿನ್ನೆಲೆ ಏನು; ಈ ಕುಕೃತ್ಯವನ್ನು ಮಾಡುತ್ತಿರುವವರು ಯಾರು; ಇದಕ್ಕೆ ಕಾರಣಗಳೇನು ಎನ್ನುವುದರ ಬಗ್ಗೆ ಘಟನೆ ನಡೆದ ಮೂರು ದಿನಗಳ ನಂತರವೂ ಸಹ ಸರ್ಕಾರವು ಜನತೆಗೆ ಇನ್ನೂ ತಿಳಿಸಿರುವುದಿಲ್ಲ. ಇಲ್ಲಿ ಏನಾಗಿದೆ; ಕೃತ್ಯವೆಸಗಿದ ಪುಂಡರ ಹಿಂದೆ ಏನಿದೇ; ಇಂತಹ ಕುತಂತ್ರಗಳನ್ನು ಮಾಡಲು ಯಾವುದಾದರೂ ರಾಜಕೀಯ ಪಕ್ಷವಿದೆಯೇ ಅಥವಾ ಈ ದುಷ್ಕೃತ್ಯದ ಹಿಂದೆ ಯಾರಿದ್ದಾರೆ ಎನ್ನುವ ಮಾಹಿತಿಯನ್ನು ಸರ್ಕಾರವು ನೀಡಿಲ್ಲ. ಆದರೆ ಇಂತಹವರನ್ನು ದಸ್ತಗಿರಿ ಮಾಡಿರುವುದಾಗಿ ಮಾತ್ರವೇ ತಿಳಿಸಿದ್ದಾರೆ. ನಮ್ಮ ರಾಜ್ಯ ಧ್ವಜಕ್ಕೆ ಬೆಂಕಿ ಹಚ್ಚಿ ಸುಡುವ ಹಾಗೂ ಇದನ್ನು ಅವಮಾನಿಸುವ ಕೆಲಸಗಳನ್ನು ಮಾಡಿದ್ದಾರೆ. ಇಂತಹ ಸ್ವಾಭಿಮಾನವನ್ನು ರಾಜ್ಯದಾದ್ಯಂತ ಜನರು ಹಚ್ಚಿಕೊಂಡಿದ್ದಾರೆ. ಇಡೀ ರಾಜ್ಯದಲ್ಲಿ ಕಿಡಿ ಹಚ್ಚುವ ಕೆಲಸ ಇದಾಗಿದೆ. ಕೇವಲ ನಮ್ಮ ರಾಜ್ಯದಲ್ಲಿಯೇ ಮಾತ್ರವಲ್ಲದೆ ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿಯೂ ಸಹ ಕನ್ನಡಿಗರು ಅತಂತ್ರ ಸ್ಥಿತಿಯಲ್ಲಿದ್ದಾರೆ; ಏಕೆಂದರೆ ಅಲ್ಲಿಯೂ ಸಹ ಗಲಾಟೆಗಳಾಗಿವೆ. ನಮ್ಮ ರಾಜ್ಯ ಸರ್ಕಾರವು ನೆರೆಯ ಮಹಾರಾಷ್ಟ್ರ ಅಥವಾ ಕೇಂದ್ರ ಸರ್ಕಾರದೊಂದಿಗೆ ಈ ಕೃತ್ಯದ ಸಂಬಂಧ ಮಾತನಾಡಿದೆಯೇ? ಇಂತಹ ಪುಂಡರು ಈ ಕೆಲಸವನ್ನು ಮಾಡಿದ್ದಾರೆ; ಇದು ಸರಿಯಾದುದಲ್ಲ ಎಂಬುದರ ಬಗ್ಗೆ ತಿಳಿಸುವ ಕೆಲಸಗಳನ್ನು ನಮ್ಮ ಸರ್ಕಾರವು ಮಾಡಿದೆಯೇ ಎಂದು ನಾನು ಕೇಳಲಿಚ್ಛಿಸುತ್ತೇನೆ. ಸರ್ಕಾರವು ಈ ರೀತಿಯ ನಿರ್ಲಕ್ಷ್ಯ ಧೋರಣೆಯನ್ನು ತೋರುತ್ತಿರುವುದು ನಮ್ಮ ಇಡಿಯ ನಮ್ಮ ನೆಲ, ಜಲ, ಭಾಷೆಗಳ ಬಗ್ಗೆ ನಮ್ಮ ಆತಂಕವುಂಟಾಗುತ್ತಿದೆ. ಸರ್ಕಾರವು ನಮ್ಮಗಳ ರಕ್ಷಣೆ ಮಾಡುತ್ತಿದೆ ಎನ್ನುವ ಭರವಸೆಯು ನಮಗೆ ಬೇಕಲ್ಲವೇ? ಈ ರೀತಿಯ ಭರವಸೆಯನ್ನು ನೀಡುವುದಕ್ಕೆ ಸರ್ಕಾರಕ್ಕೆ ಏನಾಗಿದೆ? ಇಷ್ಟು ನಿರ್ಲಕ್ಷ್ಯತನವನ್ನು ಸರ್ಕಾರವು ಏಕೆ ತೋರುತ್ತಿದೆ ಎಂದು ನಾನು ಈ ಸಂದರ್ಭದಲ್ಲಿ ಕೇಳಲಿಚ್ಛಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿನ ಮರಾಠಿಗರಿಗೆ ತೊಂದರೆಯಾಗುತ್ತಿದೆ; ಅವರ ರಕ್ಷಣೆಗೆ ಬರಬೇಕೆಂದು ಮಹಾರಾಷ್ಟ್ರ ಸರ್ಕಾರದವರು ಕೇಂದ್ರ ಸರ್ಕಾರದೊಂದಿಗೆ ಮಾತನಾಡುತ್ತಾರೆ. ಆದರೆ, ನಮ್ಮ ರಾಜ್ಯ ಸರ್ಕಾರ ಈ ರೀತಿಯಾಗಿ ಕೇಂದ್ರದೊಂದಿಗೆ ಮಾತನಾಡಿದೆಯೇ? ಈ ಘಟನೆಯ ಬಗ್ಗೆ ಏನಾದರೂ ತಿಳಿಸಲಾಗಿದೆಯೇ? ಎರಡು ರಾಜ್ಯಗಳ ನಡುವೆ ಗದ್ದಲ-ಗಲಾಟೆಗಳು, ಬೆಂಕಿ ಹಚ್ಚುವ, ಸರ್ಕಾರಿ ವಾಹನಗಳ ಮೇಲೆ ಕಲ್ಲು ತೂರಾಟ ಇತ್ಯಾದಿ ದುಷ್ಕೃತ್ಯಗಳು ನಡೆದಾಗ ಇವುಗಳನ್ನು ಬಗೆಹರಿಸಲು ಯಾರು ಬರಬೇಕು? ಕೇಂದ್ರ ಸರ್ಕಾರವು ಇದರ ಬಗ್ಗೆ ಬಾಯ್ದೆರೆದು ಮಾತನಾಡಿದೆಯೇ ಎಂದು ನಾನು ಕೇಳಲಿಚ್ಛಿಸುತ್ತೇನೆ. ಕನ್ನಡಿಗ ಅಥವಾ ಮರಾಠಿಗರ ಮೇಲೆ ಗಲಾಟೆಗಳಾಗಬಾರದು; ಈ ವಿಚಾರದ ಬಗ್ಗೆ ಕರ್ನಾಟಕ ಸರ್ಕಾರವು ನನಗೆ ತಿಳಿಸಿದೆ; ಇದನ್ನು ನಾವು ಗಮನಿಸುತ್ತೇವೆ ಎನ್ನುವ ಮಾತುಗಳನ್ನು ಕೇಂದ್ರ ಸರ್ಕಾರವು ಏನಾದರೂ ಹೇಳಿದೆಯೇ?

ಪ್ರತಿಮೆಗಳ ರಕ್ಷಣೆಯ ಹೊಣೆ ಯಾರದ್ದು ಎಂದು ನಾನು ಈ ಸಂದರ್ಭದಲ್ಲಿ ಕೇಳಲಿಚ್ಛಿಸುತ್ತೇನೆ. ಪ್ರತಿಮೆಗಳ ರಕ್ಷಣೆಯನ್ನು ಪ್ರಾಧಿಕಾರ, ಪೊಲೀಸ್ ಠಾಣೆ ಅಥವಾ ನಗರ ಸಭೆ ಯಾರು ವಹಿಸಿದ್ದಾರೆ. ಈ ಘಟನೆಗಳು ಎಲ್ಲಿ ನಡೆದವು? ಹೀಗೆ ಇಂತಹ ದುಷ್ಕೃತ್ಯಗಳು ನಡೆದಾಗ ಮಾತ್ರವೇ ಇದರ ಬಗ್ಗೆ ನಾವುಗಳೆಲ್ಲರೂ ಚರ್ಚಿಸುತ್ತಿದ್ದೇವೆ. ಈ ಹಿಂದೆಯೂ ಸಹ ಡಾ|| ಅಂಬೇಡ್ಕರ್ ಮತ್ತು ಸಂಗೊಳ್ಳಿ ರಾಯಣ್ಣ ಇತ್ಯಾದಿ ಹಲವಾರು ಮಹಾ ಪುರುಷರ ಪ್ರತಿಮೆಗಳ ಮೇಲೆ ಈ ರೀತಿಯ ದುಷ್ಕೃತ್ಯಗಳು ನಡೆದಿವೆ ಹಾಗೂ ನಡೆಯುತ್ತಿವೆ. ಅಧಿವೇಶನದ ಸಂದರ್ಭದಲ್ಲಿ ಮಾತ್ರವೇ ನಾವು ಇದರ ಬಗ್ಗೆ ಮಾತನಾಡುತ್ತೇವೆ. ಆದರೆ ಇಂತಹ ಘಟನೆಗಳಿಗೆ ಮುಂದೇನು ಎನ್ನುವ ಪ್ರಶ್ನೆಯು ನಮ್ಮ ಮುಂದಿಲ್ಲ. ಈ ಹಿಂದೆಯೂ ಈ ರೀತಿಯ ದುಷ್ಕೃತ್ಯಗಳು ನಡೆದಿದ್ದವು ಎನ್ನುವುದರ ಬಗ್ಗೆ ಮಾತ್ರವೇ ನಾವು ಮಾತನಾಡುತ್ತೇವೆ ಹೊರತು ನಂತರದಲ್ಲಿನ ಪರಿಸ್ಥಿತಿಯು ಯಥಾಸ್ಥಿತಿಯಲ್ಲಿರುತ್ತದೆ. ಇಂತಹ ಘಟನೆಗಳು ರಾಜ್ಯಗಳಲ್ಲಿ ಮಾತ್ರವಲ್ಲದೇ ರಾಷ್ಟ್ರಗಳಲ್ಲಿಯೂ ಸಹ ಬೆಂಕಿಯನ್ನು ಹಚ್ಚುವುದಕ್ಕೆ, ಎಷ್ಟೋ ಜನರ ಸಾವು-ನೋವುಗಳಿಗೆ ಕಾರಣಗಳಾಗಿವೆ. ಹೀಗಾಗಿ ಇಂತಹ ಘಟನೆಗಳಿಗೆ ಪರಿಹಾರ ನೀಡುವ ಕ್ರಮಗಳನ್ನು ಸರ್ಕಾರವು ಕೈಗೆತ್ತಿಕೊಳ್ಳುವಂತಾಗಬೇಕು.

ಶ್ರೀ ಮರಿತಿಬ್ಬೇಗೌಡರವರು ಮಾತನಾಡುವ ಸಂದರ್ಭದಲ್ಲಿ ಈ ರೀತಿಯ ಪ್ರತಿಮೆಗಳು ಎಲ್ಲಿವೆ; ಅವುಗಳೆಲ್ಲವನ್ನೂ ಒಂದೇ ಕಡೆಗೆ ಇಡಬೇಕು ಎಂಬುದರ ಬಗ್ಗೆ ಪ್ರಸ್ತಾಪಿಸಿದರು. ಈ ರೀತಿಯ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳದಿದ್ದರೆ, ಯಾವುದೋ ವ್ಯಕ್ತಿ ಅಥವಾ ರಾಜಕೀಯ ಹಿತಾಸಕ್ತಿಯ ಹಿನ್ನೆಲೆಗಳಿಂದಾಗಿ ಇಂತಹ ಘಟನೆಗಳು ಮರುಕಳಿಸುತ್ತವೆ. ಪ್ರತಿಮೆಗಳ ಬಗ್ಗೆ ಕೇಂದ್ರ ಸರ್ಕಾರವು ಕಾನೂನು ಮಾಡಿದ್ದು, ಸಂವಿಧಾನದಲ್ಲಿ ಇದಕ್ಕೆ ಅವಕಾಶಗಳಿವೆ. ಆದರೂ ಸಹ ಇಂತಹ ದುಷ್ಕೃತ್ಯಗಳು ನಡೆಯುತ್ತಿವೆ. ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರನ್ನೇ ಕೊಂದು ವಿಜೃಂಭಿಸುವ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಷ್ಟೋ ಜನರಿದ್ದಾರೆ. ಅವರನ್ನು ಕೊಂದವನು ಮಹಾಪುರುಷನಾಗಿದ್ದು, ಅವನ ಪ್ರತಿಮೆಯನ್ನು ಮಾಡಿ, ದೇವಸ್ಥಾನವನ್ನು ಕಟ್ಟಿಸಬೇಕೆಂಬ ಮನೋಭಾವನೆಯುಳ್ಳವರು ಈ ದೇಶದಲ್ಲಿಎಷ್ಟೋ ಜನರಿದ್ದಾರೆ. ಇದು ಎಂತಹ ವಿಚಿತ್ರವಲ್ಲವೇ? ಈ ದೇಶದಲ್ಲಿ ನಾವುಗಳು ಒಂದು ಕಡೆಯಲ್ಲಿ ದೇಶದ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವವನ್ನು ನೀಡುತ್ತಿದ್ದೇವೆ ; ಅವರುಗಳು ನಡೆದ ದಾರಿಯ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಆದರೆ ಮತ್ತೊಂದು ಕಡೆಯಲ್ಲಿ ಮಹಾತ್ಮಾ ಗಾಂಧೀಯವರನ್ನು ಕೊಂದವನು ಮಹಾಪುರುಷ ಎಂಬುದಾಗಿ ಬಿಂಬಿಸಲಾಗುತ್ತಿದೆ. ಇಂತಹ ಮನೋಭಾವನೆಯುಳ್ಳ ಜನರೂ ಸಹ ನಮ್ಮ ದೇಶದಲ್ಲಿದ್ದಾರೆ. ಇಂತಹವರನ್ನು ನಾವು ದೇಶದ್ರೋಹಿಗಳೆಂದು ಕರೆಯಬೇಕೇ? ಪ್ರತಿಮೆಗಳನ್ನು ಯಾರೇ ಧ್ವಂಸಗೊಳಿಸಲಿ, ಅವರುಗಳು ರಾಷ್ಟ್ರದ್ರೋಹಿಗಳಾಗಿದ್ದಾರೆ; ಅವರುಗಳಿಗೆ ಗಲ್ಲುಶಿಕ್ಷೆಯಾಗಬೇಕು. ಇಲ್ಲವೆಂದಾದರೆ, ಅಂತಹ ವಿಗ್ರಹಗಳನ್ನು ಎಲ್ಲಿಯಾದರೂ ಒಂದು ಕಡೆ ಸುರಕ್ಷಿತವಾಗಿಡಬೇಕು. ಇಂತಹ ದುಷ್ಕೃತ್ಯಗಳಿಂದ ದೇಶದಲ್ಲಿನ ಅಮಾಯಕರ ಪ್ರಾಣ ಮತ್ತು ವಾಹನಗಳ ಹಾನಿಯಾಗುತ್ತದೆ. ಇಂತಹ ದುಷ್ಕೃತ್ಯಗಳು ಎಷ್ಟೋ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಹೀಗಾಗಿ ಇದಕ್ಕೆ ಇತಿಶ್ರೀಯನ್ನು ಹಾಡುವ ಕೆಲಸಗಳಾಗಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಪ್ರಶ್ನಿತ ಘಟನೆಯಲ್ಲಿ ಪ್ರತಿಮೆಗಳನ್ನು ಏಕೆ ಧ್ವಂಸಗೊಳಿಸಿದರು; ಇದು ಯಾವ ಪ್ರಾಧಿಕಾರ, ಪೊಲೀಸ್ ಠಾಣೆ ಅಥವಾ ಇನ್ಯಾರ ಅಡಿಯಲ್ಲಿ ಈ ಪ್ರತಿಮೆ ಇತ್ತು? ಇದರ ಹೊಣೆಯನ್ನು ಯಾರು ಹೊರುತ್ತಾರೆ? ಪೊಲೀಸ್ ವಾಹನಗಳಿಗೆ ಕಿಡಿಗೇಡಿಗಳು ಯಾವ ಕಾರಣಕ್ಕಾಗಿ ಬೆಂಕಿಯನ್ನು ಹಚ್ಚಿದರು; ಅದರ ಹಿಂದಿನ ಉದ್ದೇಶವೇನು? ಪ್ರತಿಮೆಗಳನ್ನು ಧ್ವಂಸಗೊಳಿಸಿರುವ ಕೃತ್ಯವು ಒಂದೆ ಕಡೆಯಾದರೆ, ಮತ್ತೊಂದೆಡೆ ಪೊಲೀಸ್ ಮತ್ತು ಸರ್ಕಾರಿ ವಾಹನಗಳ ಮೇಲೆ ಕಲ್ಲು ತೂರಾಟ ಮಾಡಿದರು. ಈ ದುಷ್ಕೃತ್ಯದ ಹಿಂದೆ ಯಾರಿದ್ದಾರೆ ಎನ್ನುವ ಮಾಹಿತಿಯನ್ನು ಸರ್ಕಾರವು ಕೂಡಲೇ ನಮ್ಮೆಲ್ಲರಿಗೆ ತಿಳಿಸಬೇಕೆಂದು ಹೇಳುತ್ತೇನೆ. ಪ್ರತಿಮೆಗಳ ಧ್ವಂಸದ ವಿಚಾರದಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟಗಳಲ್ಲಿ ಕ್ರಮ ಕೈಗೊಳ್ಳುವ ಕ್ರಮಗಳಾಗಬೇಕು. ಈ ವಿಚಾರದಲ್ಲಿ ಎಲ್ಲಾ ಪಕ್ಷದವರೊಂದಿಗೆ ಚರ್ಚಿಸಿ; ಇತಿಶ್ರೀಯನ್ನು ಹಾಡುವ ಕೆಲಸಗಳಾಗಬೇಕೆಂದು ವಿನಂತಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ|| ತಳವಾರ್ ಸಾಬಣ್ಣ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಬೆಳಗಾವಿ ನಗರದಲ್ಲಿ ಸುಮಾರು 25 ವರ್ಷಗಳಿಂದ ನೆಲೆಸಿದ್ದೇನೆ. ಹೀಗಾಗಿ ಇಲ್ಲಿನ ಕೆಲವು ವಾಸ್ತವ ವಿಷಯಗಳ ಮೇಲೆ ಬೆಳಕನ್ನು ಚೆಲ್ಲಲು ನಾನಿಚ್ಛಿಸುತ್ತೇನೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ಬಹಳ ಸಾಮರಸ್ಯದಿಂದ ಇದ್ದ ಒಂದು ಕಾಲವು ಈ ಹಿಂದೆ ಇತ್ತು. ಈ ಬಗ್ಗೆ ಒಂದು ಹೇಳಿಕೆಯನ್ನೂ ಸಹ ಅಂದಿನ ಜನರು ನೀಡಿದ್ದರು. ಶ್ರೀಮತಿ ಗಂಗೂಬಾಯಿ ಹಾನಗಲ್, ಪಂಡಿತ್ ಭೀಮಸೇನ ಜೋಶಿ ಮತ್ತು ರಾಜಗುರುರವರುಗಳು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮೂಲತಃ ಕರ್ನಾಟಕ ರಾಜ್ಯದವರಾಗಿದ್ದರೂ ಸಹ ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿಯೇ ಪ್ರಸಿದ್ಧಿಯನ್ನು ಪಡೆದ ಮಹಾನ್ ವ್ಯಕ್ತಿಗಳಾಗಿದ್ದಾರೆ. 'ಕರ್ನಾಟದಲ್ಲಿ ಹಾಡುವ ಬಾಯಿಗಳಿದ್ದಾವೆ ; ಮಹಾರಾಷ್ಟ್ರದಲ್ಲಿ ಕೇಳುವ ಕಿವಿಗಳಿದ್ದಾವೆ' ಎನ್ನುವ ಮಾತು ಈ ಹಿಂದೆ ಪ್ರಚಲಿತವಾಗಿತ್ತು. ಆದರೆ ದುರದೃಷ್ಟವಶಾತ್ ಇವತ್ತಿನ ದಿವಸ ಈ ಮಾತು ತಿರುವು ಮುರುವು ಆಗಿದೆ. ಇದಕ್ಕೆ ಕಾರಣವೇನೆಂದರೆ, ಮಹಾರಾಷ್ಟ್ರದಿಂದ ನಮ್ಮ ರಾಜ್ಯಕ್ಕೆ ಬರುವ ಮರಾಠಿ ಬೆಂಬಲಿಗರು ಎಂದು ಹೇಳಲ್ಪಡುವ ವ್ಯಕ್ತಿಗಳು ನಮ್ಮ ಬೆಳಗಾವಿ ನಗರದಲ್ಲಿರುವ ಮರಾಠಿಗರಿಗೆ ಪ್ರಚೋದಿಸುತ್ತಾರೆ. ಆದರೆ, ನೆರೆಯ ಮಹಾರಾಷ್ಟ್ರದಿಂದ ಬರುವ ಎಂ.ಇ.ಎಸ್. ಅಥವಾ ಇನ್ನಿತರೆ ನಾಯಕರು ಆಗಿರಬಹುದು; ಇಂತಹವರುಗಳು ನಮ್ಮ ರಾಜ್ಯ ಅಥವಾ ಬೆಳಗಾವಿ ನಗರಕ್ಕೆ ಪ್ರವೇಶಿಸುವಾಗ, ಇವರುಗಳನ್ನು ಯಾರೂ ಸಹ ತಡೆಯುವುದಿಲ್ಲ. ಅವರುಗಳು ಇಲ್ಲಿಗೆ ಬಂದು ಸಾವಿರಾರು, ಲಕ್ಷಾಂತರ ಜನರನ್ನು ಸೇರಿಸಿ, ಘೋಷಣೆಗಳನ್ನು ಕೂಗಿ, ಮರಾಠಿಗರ ಪರವಾಗಿ ಮಾತನಾಡುತ್ತಾರೆ, ಇಲ್ಲಿನ ಮರಾಠಿಗರ ಬಗ್ಗೆ ಮಾತನಾಡುತ್ತಾರೆ ಮತ್ತು ಕನ್ನಡಿಗರ ವಿರುದ್ಧವಾಗಿ ಜನರನ್ನು ಎತ್ತಿ ಕಟ್ಟುತ್ತಾರೆ. ಇಂತಹ ವ್ಯಕ್ತಿಗಳು ತಮ್ಮ ರಾಜ್ಯಕ್ಕೆ ಹಿಂದಿರುಗಿದ ಕೆಲವೇ ದಿವಸಗಳಲ್ಲಿ ಇಲ್ಲಿ ಗಲಾಟೆಗಳು ಪ್ರಾರಂಭವಾಗುತ್ತವೆ. ಅಂದರೆ ಇಂತಹ ವ್ಯಕ್ತಿಗಳು ನಮ್ಮ ರಾಜ್ಯಕ್ಕೆ ಬರುವುದನ್ನು ಯಾರೂ ಸಹ ತಡೆಯುವುದಿಲ್ಲ. ಈ ಅಂಶದ ಬಗ್ಗೆ ಸರ್ಕಾರವು ಬಹಳ ಗಂಭೀರವಾಗಿ ಯೋಚಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿ ಮೊದಲಿನಿಂದಲೂ ಇಂದಿನವರೆಗೆ ಕನ್ನಡಿಗರಿದ್ದಾರೆ. ಮಹಾರಾಷ್ಟ್ರ ರಾಜ್ಯದ ಮೀರಜ್, ಜತ್ತ್, ಕೊಲ್ಹಾಪುರ್, ಸೊಲ್ಹಾಪುರ್, ಮುಂಬೈ ಮತ್ತು ಪೂನಾಗಳಂತಹ ಪ್ರದೇಶಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕನ್ನಡಿಗರಿದ್ದಾರೆ. ಅವರುಗಳು ತಮ್ಮ ಜೀವನೋಪಾಯಕ್ಕಾಗಿ ಅಲ್ಲಿ ಸಣ್ಣ-ಸಣ್ಣ ಉದ್ದಿಮೆ, ವ್ಯಾಪಾರ ಅಥವಾ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಇವತ್ತಿನ ದಿವಸ ಅಂತಹ ಕನ್ನಡಿಗರ ಮೇಲೆ ಅಲ್ಲಿನ ಮಹಾರಾಷ್ಟ್ರದ ಜನರು ಅಂದರೆ ಮರಾಠಿಗರು ಹಲ್ಲೆ ಮಾಡಿ, ಅವರ ಆಸ್ತಿ-ಪಾಸ್ತಿಗಳನ್ನು ಧ್ವಂಸಗೊಳಿಸುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ರಾಜ್ಯ ಸರ್ಕಾರದ ಯಾವುದೇ ಒಂದು ಹೇಳಿಕೆ ಅಥವಾ ಬೆಂಬಲ ವ್ಯಕ್ತಪಡಿಸಿರುವುದಿಲ್ಲ.

ಇತ್ತೀಚೆಗೆ ಕೇವಲ ಮೂರ್ನಾಲ್ಕು ದಿನಗಳ ಹಿಂದೆ ಆದ ಸಣ್ಣ ಘಟನೆಗೆ ಮಹಾರಾಷ್ಟ್ರ ರಾಜ್ಯದಿಂದ ಅಲ್ಲಿನ ನಾಯಕರು ಇಲ್ಲಿಗೆ ಬರುತ್ತಿದ್ದರು. ನಮ್ಮ ರಾಜ್ಯದ ನಿಪ್ಪಾಣಿ ಗಡಿಯಲ್ಲಿ ಅವರುಗಳನ್ನು ತಡೆಯಲಾಯಿತು. ಇಂತಹ ಘಟನೆಗಳಾದಾಗ ಅಲ್ಲಿನ ಜನರು ಇಲ್ಲಿಗೆ ಧಾವಿಸಿ ಬರುತ್ತಾರೆ. ಆದರೆ, ಅದೇ ರೀತಿಯಾಗಿ ಇಲ್ಲಿನ ಜನರು ಅಲ್ಲಿಗೆ ಧಾವಿಸಿ ಹೋಗುವುದಿಲ್ಲ. ಈ ಅಂಶದ ಬಗ್ಗೆಯೂ ಸಹ ನಾವುಗಳು ಬಹಳ ಗಂಭೀರವಾಗಿ ಯೋಚಿಸಬೇಕಾಗುತ್ತದೆ ಎಂದು ನಾವು ಇಲ್ಲಿ ಹೇಳಬಹುದು. ಏಕೆಂದರೆ, ಬೆಳಗಾವಿ ನಗರ ಹಾಗೂ ಇದರ ಸುತ್ತಮುತ್ತ ಹಲವಾರು ಶಿಕ್ಷಣ

---

ಸಂಸ್ಥೆಗಳಿದ್ದು; ಅವುಗಳು ಕರ್ನಾಟಕ ಸರ್ಕಾರದಿಂದ ಅನುದಾನ ಪಡೆಯುತ್ತಿವೆ. ಆದರೆ ಅಂತಹ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಮುಖಂಡರುಗಳು ಕನ್ನಡ ವಿರೋಧಿಗಳಾಗಿದ್ದಾರೆ. ಇದನ್ನು ನಾನು ಬಹಳ ಸ್ಪಷ್ಟವಾಗಿ ಉಲ್ಲೇಖಿಸಬಯಸುತ್ತೇನೆ. ಇಂತಹವರನ್ನು ನಾನು ಹಲವಾರು ಸಂದರ್ಭದಲ್ಲಿ ಬೆಳಗಾವಿ ನಗರದಲ್ಲಿಯೇ ನೋಡಿದ್ದೇನೆ; ಇವರುಗಳನ್ನು ಈ ರೀತಿಯ ಪ್ರಚೋದಿಸುವುದನ್ನೂ ಸಹ ನಾನು ನೋಡಿದ್ದೇನೆ. ನಾನು ಹಲವಾರು ಕಾಲೇಜುಗಳಿಗೆ ಭೇಟಿ ನೀಡಿದಾಗ, ನಾನು ಕನ್ನಡದಲ್ಲಿ ಮಾತನಾಡಿದರೆ, ಅವರುಗಳು ನನಗೆ ಮರಾಠಿಯಲ್ಲಿ ಉತ್ತರಿಸುತ್ತಾರೆ. ಇಂತಹ ಪರಿಸ್ಥಿತಿಯು ನಮ್ಮ ರಾಜ್ಯದಲ್ಲಿದೆ. ಪ್ರಸ್ತುತ ಸಚಿವರಾದ ಶ್ರೀ ಉಮೇಶ್ ವಿ.ಕತ್ತಿರವರು ಸದನದಲ್ಲಿ ಉಪಸ್ಥಿತರಿದ್ದಾರೆ. ಇವರಿಗೆ ಈ ಸಂಗತಿಗಳ ಬಗ್ಗೆ ಚೆನ್ನಾಗಿ ತಿಳಿದಿದೆ. ನಮ್ಮ ರಾಜ್ಯದಲ್ಲಿರುವ ಎಲ್ಲಾ ಸವಲತ್ತುಗಳನ್ನು ಅವರುಗಳು ಪಡೆಯುತ್ತಾರೆ; ಮುಂದುವರೆದು, ಇಲ್ಲಿನ ಕಾರ್ಯ ಯೋಜನೆಗಳ ಪ್ರಯೋಜನಗಳನ್ನೂ ಸಹ ಅವರುಗಳು ಪಡೆದುಕೊಳ್ಳುತ್ತಾರೆ. ಆದರೆ, ಅವರುಗಳು ಕನ್ನಡ ಭಾಷೆಯಲ್ಲಿ ಮಾತನಾಡುವುದೇ ಇಲ್ಲ. ಇದು ಬೆಳಗಾವಿ ನಗರ ಮತ್ತು ಇಲ್ಲಿನ ತಾಲ್ಲೂಕುಗಳಾದ ಖಾನಾಪುರ, ಅಥಣಿ ಅಥವಾ ಚಿಕ್ಕೋಡಿ ಗಡಿಭಾಗ ಅಥವಾ ಕಾಗವಾಡ ಗಡಿಭಾಗವಾಗಿರಬಹುದು; ಅಲ್ಲಿನ ಪ್ರದೇಶಗಳವರು ತಮಗೆ ಕನ್ನಡ ಭಾಷೆ ತಿಳಿದಿದ್ದರೂ ಸಹ ಯಾರೂ ಕನ್ನಡ ಭಾಷೆಯಲ್ಲಿ ಮಾತನಾಡುವುದಿಲ್ಲ. ಆದರೆ ಮಹಾರಾಷ್ಟ್ರದಲ್ಲಿರುವ ಹಲವಾರು ಕನ್ನಡಿಗರು ಮರಾಠಿ ಭಾಷೆಯಲ್ಲಿ ಮಾತನಾಡುತ್ತಾರೆ.

(ಮುಂದು)

(1179) 5.10 20-12-2021 CS/GR (ಉಪಸಭಾಪತಿಯವರ ಉಪಸ್ಥಿತಿ)

**ಡಾ||ತಳವಾರ್ ಸಾಬಣ್ಣ(ಮುಂದು):-**

ಅಂದರೆ ಯಾವಾಗಲೂ ಕನ್ನಡ ವಿರೋಧಿ ಹಾಗೂ ಕರ್ನಾಟಕದ ವಿರೋಧಿ ಇರತಕ್ಕ ಒಂದು ವಾತಾವರಣ ಸೃಷ್ಟಿಯಾಗಿರುವುದನ್ನು ನಾವಿಲ್ಲಿ ಕಾಣುತ್ತಿದ್ದೇವೆ. ಇದನ್ನು ನಾವು ಹೋಗಲಾಡಿಸಬೇಕು.

ಕೊನೆಯದಾಗಿ, ಬೆಳಗಾವಿ ನಗರದಲ್ಲಿ ಅಥವಾ ಸುತ್ತಮುತ್ತಲ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಯಾವಾಗ ಚುನಾವಣೆಗಳು ಬರುತ್ತವೆ, ಅದು ಸ್ಥಳೀಯ ಚುನಾವಣೆ ಆಗಿರಬಹುದು, ವಿಶೇಷವಾಗಿ ಬೆಳಗಾವಿ ಮಹಾನಗರ ಪಾಲಿಕೆಯ ಚುನಾವಣೆ ಆಗಿರಬಹುದು, ವಿಧಾನಸಭಾ ಚುನಾವಣೆ ಆಗಿರಬಹುದು, ಅಥವಾ ಅಧಿವೇಶನ ನಡೆಯುವಂತಹ ಸಂದರ್ಭಗಳಲ್ಲಿ ಕನ್ನಡ ಮತ್ತು ಮರಾಠಿಗರ ಜಗಳ ಇನ್ನು ಒಂದೆರಡು ದಿವಸಗಳಲ್ಲಿ ಪ್ರಾರಂಭ ಆಗಬಹುದು ಎನ್ನುವ ಅಭಿಪ್ರಾಯ ಹಾಗೂ ಭವಿಷ್ಯವನ್ನು ಇಲ್ಲಿನ ಜನರೇ ಹೇಳುತ್ತಾರೆ. ಅಂತಹ ಸರ್ವೇ ಸಾಮಾನ್ಯವಾದ ಕೆಟ್ಟ ವಾತಾವರಣ ಇಲ್ಲಿದೆ. ಇದನ್ನೆಲ್ಲ ಹೋಗಲಾಡಿಸಬೇಕಾಗಿದೆ. ಇದನ್ನೆಲ್ಲ ಸರ್ಕಾರ ತಡೆಯಬೇಕು. ಇಲ್ಲಿರತಕ್ಕ ಪುಡಿಕಾಸಿನ ಪುಂಡರು, ಮತ್ತು ಅವರಿಗೆ ಬೆಂಬಲ ನೀಡುವವರು, ರಾಜಕೀಯ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾಯಕರಾಗಿರಬಹುದು, ಅಥವಾ ಸ್ವಾರ್ಥ ಕೆಲವು ಮರಾಠ ಮುಖಂಡರು ಸಹ ಇರಬಹುದು ಅವರನ್ನು ನಾವು ಸಂಪೂರ್ಣವಾಗಿ ಸದೆ ಬಡಿಯಬೇಕು. ಇಲ್ಲಿ ಬೆಳಗಾವಿಯಲ್ಲಿ ಜನರು ಕನ್ನಡಿಗರು ಮರಾಠಿಗರು ಸುಮಾರು ವರ್ಷಗಳಿಂದ ಸೌಹಾರ್ದದಿಂದ ಬದುಕುತ್ತಿದ್ದಾರೆ. ನಾವು ಎಲ್ಲಾ ಕಡೆಗಳಿಗೂ ಹೋದಾಗ ಎಲ್ಲರೂ ಸಹ ಚೆನ್ನಾಗಿ ಇರುವುದನ್ನು ನೋಡುತ್ತೇವೆ. ಸಾಕಷ್ಟು ಮರಾಠಿಗರ ಅಂಗಡಿಗಳು ಬೆಳಗಾವಿ ನಗರದಲ್ಲಿವೆ. ಅವರೆಲ್ಲರೂ ಸಹ ಕನ್ನಡವನ್ನು ಮಾತನಾಡುತ್ತಾರೆ. ಅಂಗಡಿಯ ಮಾಲೀಕರು ಅವರಾದರೆ ಗಿರಾಕಿಗಳು ನಾವಿದ್ದೇವೆ. ಅಲ್ಲದೆ ಹಲವಾರು Extensions ಗಳಲ್ಲಿ ಕನ್ನಡಿಗರು ಇದ್ದಾರೆ. ಅವರು ಯಾರಿಗೂ ಈ ರೀತಿಯ ಅಭಿಪ್ರಾಯ ಇಲ್ಲವೇ ಇಲ್ಲ. ಕೆಲವೇ ಕೆಲವು ಪುಡಿಕಾಸಿನ ಜನರಿಂದ ಇಂತಹ ಸಮಸ್ಯೆಗಳು ಉದ್ಭವವಾಗುತ್ತಿದೆ. ಅವರನ್ನು ಸಂಪೂರ್ಣವಾಗಿ ಸದೆ ಬಡಿಯಬೇಕು. ಹಾಗೂ ಇಂತಹ ಘಟನೆಗಳನ್ನು ನಾನು ಖಂಡಿಸುತ್ತೇನೆ ಎನ್ನುವ ಮಾತನ್ನು ಹೇಳುತ್ತಾ, ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ನಸೀರ್ ಅಹಮದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೇ, ಈ ವಿಚಾರದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ. ಆ ಭಾಗದ ಮತ್ತು ಈ ಭಾಗದ ಅನೇಕ ಗೌರವಾನ್ವಿತ ಸದಸ್ಯರುಗಳು ಈ ವಿಚಾರದ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಹಾಗಾಗಿ ನಾನು ಇದರ ಬಗ್ಗೆ ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನನಗೆ ತಿಳಿದ ಹಾಗೆ ಬೆಂಗಳೂರಿನ ಸದಾಶಿವನಗರ, ಬೆಳಗಾವಿಯ ಸಂಗೊಳ್ಳಿ ರಾಯಣ್ಣ ಪ್ರತಿಮೆ ಇರುವಂತಹ ಸ್ಥಳ ಇವೆಲ್ಲ ಮುಖ್ಯ ಸ್ಥಾನಿಯಲ್ಲಿರುವಂತಹವು. ಇದು ಯಾವುದೋ ಒಂದು ಹಳ್ಳಿಯಲ್ಲಿ ನಡೆದಿರತಕ್ಕ ಘಟನೆಯಲ್ಲ. ನಾವು ಯೋಚನೆ ಮಾಡಬೇಕಾಗಿರುವುದು ಏನೆಂದರೆ ನಮ್ಮ ಗೃಹ ಇಲಾಖೆ ಯಾವ ರೀತಿ ಕೆಲಸ ನಿರ್ವಹಿಸುತ್ತಿದೆ ಎಂದರೆ ಬೆಂಗಳೂರಿನಲ್ಲಿ ಒಂದು ಘಟನೆ ನಡೆಯಿತು. ಕೇವಲ 2 ಗಂಟೆಯಲ್ಲಿ ಒಂದು ಘಟನೆ ನಡೆಯಿತು. ಈ 2 ಗಂಟೆಗಳ ಘಟನೆಗೆ 476 ಜನರನ್ನು ಅರೆಸ್ಟ್ ಮಾಡುತ್ತಾರೆ. ಸುಮಾರು 146 ಜನರ ಮೇಲೆ U.A.P.A., (Unlawful Activities (Prevention) Act) ಕೇಸ್ ಹಾಕುತ್ತಾರೆ. ಇದೆಲ್ಲ ಇಲಾಖೆಯ ದಾಖಲೆಯಲ್ಲಿದೆ. ನಮ್ಮ ಗೃಹ ಸಚಿವರು ಕೂಡ ಈಗ ಸದನದಲ್ಲಿದ್ದಾರೆ. ನನಗೆ ಈ ವಿಚಾರದಲ್ಲಿ ಒಂದು ರೀತಿಯ ಅನುಮಾನ ಬರುತ್ತಿದೆ. ಇಲ್ಲಿ ಮಸಿ ಬಳಿದಿದ್ದು ಯಾವಾಗ, ಕೊಲ್ಲಾಪುರದಲ್ಲಿ ಕನ್ನಡ ಬಾವುಟವನ್ನು ಸುಟ್ಟಿದ್ದು ಯಾವಾಗ? ಶಿವಾಜಿ ಪ್ರತಿಮೆಗೆ ಸದಾಶಿವನಗರದಲ್ಲಿ ಮಸಿ ಬಳಿದಿದ್ದು ಯಾವಾಗ; ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಅವಮಾನ ಮಾಡಿದ್ದು ಯಾವಾಗ, ಎಷ್ಟು ದಿವಸಗಳಲ್ಲಿ ಏನಾಯಿತು, 4-5 ದಿವಸಗಳಿಂದ ಈ ರೀತಿಯ ಘಟನೆಗಳು ನಡೆಯುತ್ತಿದ್ದರೆ ಪೊಲೀಸ್ ಇಲಾಖೆ ಏನನ್ನು ಮಾಡುತ್ತಿತ್ತು? Intelligence ಏನಾಯಿತು; ಇವತ್ತಿನ ದಿವಸ ನಾವು ಮಾತನಾಡುತ್ತಿರುವುದು ಒಂದು ಸಣ್ಣ ವಿಚಾರವಲ್ಲ. ಇದರಿಂದ 2 ರಾಜ್ಯಗಳಿಗೆ ತೊಂದರೆ ಆಗುತ್ತದೆ. ಇವತ್ತು ಮಹಾಜನ್ ವರದಿ ಹಾಗೂ ಸುಪ್ರಿಂ ಕೋರ್ಟ್‌ನಲ್ಲಿ ಕೇಸು

---

ಇರುವುದರಿಂದ ನಾನು ರಾಜ್ಯಗಳ ಗಡಿ ವಿಚಾರದ ಬಗ್ಗೆ ಮಾತನಾಡುವುದಿಲ್ಲ. ಆದರೆ ಈ ಘಟನೆಗಳು ರಾಜ್ಯದ ಜನರಿಗೆ ಪ್ರಚೋದನೆ ಮಾಡಿದಂತಾಗಲಿಲ್ಲವೇ? ಯಾರೋ ಪುಂಡರು, ಕಿಡಿಗೇಡಿ, ಪುಡಿಕಾಸಿನವರು ಮಾಡಿರತಕ್ಕ ಕೃತ್ಯ ದಿಂದ 2 ರಾಜ್ಯಗಳಲ್ಲಿ ಇಂತಹ ಒಂದು ಸನ್ನಿವೇಶ ಉದ್ಭವವಾಗಿದೆ. ಇದನ್ನೆಲ್ಲ ಗೃಹ ಇಲಾಖೆ ನೋಡಿಕೊಂಡು ಸುಮ್ಮನೆ ಇದೆಯೇ? ಇಲ್ಲಿ ಅಧಿವೇಶನ ನಡೆಯುತ್ತಿರುವುದರಿಂದ 4000 ಜನ ಪೊಲೀಸರನ್ನು ಕರ್ತವ್ಯಕ್ಕೆ ನಿಯೋಜನೆ ಮಾಡಲಾಗಿದೆ ಎನ್ನುವುದನ್ನು ನಾನು ಪತ್ರಿಕೆಗಳಲ್ಲಿ ಓದಿದೆನು. ಇಷ್ಟೊಂದು police force ಇಟ್ಟುಕೊಂಡು ಇಂತಹ ಒಂದು ಘಟನೆ ನಡೆಯುವುದಕ್ಕೆ ಹೇಗೆ ಅವಕಾಶ ನೀಡಲಾಯಿತು? ಇದರ ಬಗ್ಗೆ ನನಗಿನ್ನೂ ಸಮಾಧಾನ ಆಗಿಲ್ಲ, ಅನುಮಾನ ಕಾಡುತ್ತಿದೆ. ಯಾರು ಈ ಕೃತ್ಯಗಳ ಹಿಂದೆ ಇದ್ದಾರೆ? ಬೆಳಗಾವಿ ನಗರದವರಾದ ಶ್ರೀ ಉಮೇಶ್ ಕತ್ತಿಯವರು ಇಲ್ಲೇ ಸದನದಲ್ಲಿದ್ದಾರೆ. ನಮ್ಮ ಶ್ರೀ ಲಕ್ಷ್ಮಣ ಸವದಿಯವರಿದ್ದಾರೆ, ಇಂತಹ ಘಟನೆಗಳು ನಡೆಯಬಹುದು, ಇದರ ಬಗ್ಗೆ ನಿಮಗೇನಾದರೂ ಮಾಹಿತಿ ಇದೆಯಾ ಎಂದು ಬೆಳಗಾವಿಯಲ್ಲಿರುವ ನಾಯಕರ ಜೊತೆಯಲ್ಲಿ ಇಂತಹ ಘಟನೆಗಳ ಬಗ್ಗೆ ಸರ್ಕಾರ ಚರ್ಚೆಯನ್ನು ಮಾಡಿದೆಯೇ? ಅದನ್ನು ಸಹ ಮಾಡಿರುವುದಿಲ್ಲ. ಹಾಗಾಗಿ ಇದನ್ನೆಲ್ಲ ನೋಡಿದಾಗ ನನಗೆ ಸಮಾಧಾನ ಬರುತ್ತಿಲ್ಲ, ಯಾವುದೋ ಒಂದು ಶಕ್ತಿ ಈ ಘಟನೆಗಳ ಹಿಂದೆ ಇದೆ. ಆ ಶಕ್ತಿ ಇದನ್ನೆಲ್ಲ ಬೇಕಾಗಿಯೇ ಮಾಡಿದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಹಾಗಾಗಿ ನಾನು ಇದರ ಬಗ್ಗೆ ಹೆಚ್ಚು ಟೀಕೆಯನ್ನು ಸಹ ಮಾಡುವುದಿಲ್ಲ. ಇಲ್ಲಿ ಗಂಭೀರವಾದಂತಹ ಒಂದು ಸನ್ನಿವೇಶ ನಿರ್ಮಾಣ ಆಗಿದೆ. ಅದರ ಮೇಲೆ ಎಷ್ಟು ಜನರ ಮೇಲೆ ಕೇಸನ್ನು ದಾಖಲು ಮಾಡಲಾಗಿದೆ, ಯಾವ ಸೆಕ್ಷನ್ ಅಡಿಯಲ್ಲಿ ಕೇಸ್ ಹಾಕಲಾಗಿದೆ; ಬೆಂಗಳೂರಿನಲ್ಲಿ ಯಾವ ಸೆಕ್ಷನ್ ಅಡಿಯಲ್ಲಿ ಕೇಸ್ ಹಾಕಲಾಗಿದೆ; ಬೆಳಗಾವಿಯಲ್ಲಿ ಯಾವ ಸೆಕ್ಷನ್ ಅಡಿಯಲ್ಲಿ ಕೇಸ್ ಹಾಕಲಾಗಿದೆ? ಇದರ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ನೀಡಬೇಕು. ಬೆಳಗಾವಿಯಲ್ಲಿ ಅರೆಸ್ಟ್ ಆಗಿರುವವರ ಮೇಲೆ bailable sections ಅಡಿಯಲ್ಲಿ ಕೇಸ್ ಹಾಕಲಾಗಿದೆ ಎಂದು ಹೇಳಲಾಗುತ್ತಿದೆ, ಬೆಂಗಳೂರಿನಲ್ಲಿ bailable sections ಗಳಾದ attempt to murder ಮುಂತಾದ ಕೇಸ್‌ಗಳನ್ನು ಹಾಕಲಾಗಿದೆ ಎಂದು ಹೇಳಲಾಗುತ್ತಿದೆ. Sedition case ಹಾಕಿದ್ದೀರಾ? U.A.P.A., case ಹಾಕಿದ್ದೀರಾ? U.A.P.A., case ಇದಕ್ಕೆ ಏಕೆ ಬರುವುದಿಲ್ಲ? ಅಲ್ಲಿಯೂ ಸಹ 146 ಪೊಲೀಸ್ ವಾಹನ, ಹಾಗೂ ಸರ್ಕಾರಿ ವಾಹನಗಳನ್ನು ಒಡೆದು ಹಾಕಲಾಗಿದೆ. ಇಲ್ಲಿ ಏಕೆ U.A.P.A., case ಅನ್ವಯವಾಗುವುದಿಲ್ಲ. ಇದಕ್ಕೆ ಉತ್ತರ ಕೊಡಿ. ಇದರ ಬಗ್ಗೆ ದಯಮಾಡಿ ಗೃಹ ಸಚಿವರು ಒಂದು ಹೇಳಿಕೆಯನ್ನು ನೀಡಬೇಕೆಂದು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪ್ರತಾಪ ಸಿಂಹ ನಾಯಕ್.ಕೆ(ವಿಧಾನಸಭೆಯಿಂದ ಚುನಾಯಿತರಾದವರು)**:- ಮಾನ್ಯ ಸಭಾಪತಿಗಳೇ, ಅವಕಾಶಕ್ಕಾಗಿ ವಂದನೆಗಳು. ಇಂದು ಬಹಳ ಗಂಭೀರವಾಗಿ ಮತ್ತು ಇಡೀ ಸದನ ಒಂದಾಗಿ ಪಕ್ಷ ಬೇಧ ಮರೆತು ಎಲ್ಲಾ ರೀತಿಯ ಯೋಚನೆಗಳಿಂದ ಮೇಲೆ ನಿಂತು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದಂತಹ ಎಲ್ಲಾ ಹಿರಿಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಈ

---

ಒಂದು ಮಾತನ್ನು ಹೇಳುವುದಕೋಸ್ಕರ ನಾನು ಈ ಸಂದರ್ಭದಲ್ಲಿ ಎದ್ದು ನಿಂತಿದ್ದೇನೆ. ಮಾನ್ಯ ರಾಷ್ಟ್ರ ಕವಿ ಕುವೆಂಪುರವರ " ಜಯ ಭಾರತ ಜನನೀಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ, " ಹಾಡನ್ನು ನಾವೆಲ್ಲರೂ ಹಾಡುತ್ತೇವೆ. ಬಹುಶಃ ಇವತ್ತು ಆಗಿರುವಂತಹ ಬೆಳವಣಿಗೆಯ ದೃಷ್ಟಿಯಿಂದ ನೋಡಿದಾಗ ಬಹಳ ಸೂಕ್ಷ್ಮವಾದ ಮತ್ತು ಬಹಳ ಪ್ರಚೋದನೆ ಕೊಡುವಂತಹ, ಮತ್ತು ಈ ಕಿಡಿಗೇಡಿ ಕೃತ್ಯವನ್ನು ಮಾಡಿದಂತಹವರ ಉದ್ದೇಶವೂ ಅದೇ ಇರುವಾಗ, ಅದರ ಬಗ್ಗೆ ಈ ಸಂದರ್ಭದಲ್ಲಿ ನಾವು ಮಾತನಾಡುವಾಗಲೂ ಕೂಡ ಬಹಳ ಜಾಗರೂಕತೆಯನ್ನು ವಹಿಸಬೇಕಾದ ಸ್ಥಿತಿಯಲ್ಲಿ ನಾವಿದ್ದೇವೆ. ಏನಾದರೂ ನಾವು ಕೂಡ ಈ ಭಾವನೆಯ ವೇಗಕ್ಕೆ ಒಳಗಾಗಿ ನಾವು ಸಹ ಪ್ರಚೋದನೆಗೆ ಒಳಗಾದರೆ, ಬಹುಶಃ ಯಾವ ಉದ್ದೇಶದಿಂದ ಈ ಕಿಡಿಗೇಡಿಗಳು ಈ ಕೆಲಸವನ್ನು ಮಾಡಿದ್ದಾರೆ, ಅವರ ಕೃತ್ಯಕ್ಕೆ ನಾವು ಬಲವನ್ನು ಕೊಟ್ಟ ಹಾಗೆ ಆಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಕನ್ನಡ ಭಾಷೆ, ಕನ್ನಡ ನೆಲ, ಕನ್ನಡ ಜಲದ ಪ್ರಶ್ನೆ ಬಂದಾಗ ಇಡೀ ಆರೂವರೆ ಕೋಟಿ ಕನ್ನಡಿಗರು ಕೂಡ ಒಂದಾಗಿ ನಿಂತು, ಅದರ ಹಿತರಕ್ಷಣೆಯ ದೃಷ್ಟಿಯಿಂದ ನಮ್ಮ ನಮ್ಮ ಕರ್ತವ್ಯಗಳನ್ನು ನಮ್ಮ ನಮ್ಮ ಸೇವೆಗಳನ್ನು ಮಾಡಬೇಕಾಗುವುದು ಎಷ್ಟು ಪ್ರಮುಖವೋ, ಯಾವ ಕಿಡಿಗೇಡಿಗಳು ಇಂತಹ ಕೃತ್ಯಗಳನ್ನು ಮಾಡಿದ್ದಾರೆ ಅವರ ಮೇಲೆ ಎಲ್ಲಾ ರೀತಿಯ ಕಾನೂನು ಕ್ರಮಗಳನ್ನು ಕೈಗೊಳ್ಳುವುದು ಅಷ್ಟೆ ಮುಖ್ಯ. ಇನ್ನು ಮುಂದೆ ಇಂತಹ ಘಟನೆಗಳು ಪುನಾರವರ್ತನೆ ಆಗದಂತೆ ಏನೆಲ್ಲಾ ಎಚ್ಚರಿಕೆಗಳನ್ನು ವಹಿಸಬೇಕು, ಯಾವ ರೀತಿಯಲ್ಲಿ ಸಂದೇಶಗಳನ್ನು ನೀಡಬೇಕು, ಆ ದೃಷ್ಟಿಯಲ್ಲಿ ಎಲ್ಲಾ ಹಿರಿಯ ಸದಸ್ಯರುಗಳು ಅವರವರ ಅಭಿಪ್ರಾಯಗಳನ್ನು ಬಲವಾಗಿ ಮಂಡಿಸಿದ್ದಾರೆ. ಬಹುಶಃ ಒಂದು ಭಾವನೆಯನ್ನು ಈ ಸಂದರ್ಭದಲ್ಲಿ ಈ ಸದನದ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಮುಂದು)

(1180)/5-20/20-12-2021/ಎಸ್‌ಎಂ/ಜಿಆರ್ (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರತಾಪಸಿಂಹ ನಾಯಕ್ ಕೆ.**(ಮುಂದು):-

ಯಾರೆಲ್ಲ ರಾಷ್ಟ್ರಪುರುಷರುಗಳು ಇದ್ದಾರೆ, ಅವರು ಈ ದೇಶದ ಸಂಸ್ಕೃತಿಯನ್ನು, ನೆಲ-ಜಲವನ್ನು ಉಳಿಸಲು ತಮ್ಮ ಸರ್ವಸಮರ್ಪಣೆ ಮಾಡಿದ್ದಾರೆ. ಅವರೆಲ್ಲರೂ ನಮಗೆ ಆದರ್ಶರು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನಿಂದ ಹಿಡಿದು ಛತ್ರಪತಿ ಶಿವಾಜಿ ಮಹಾರಾಜರು ಯಾವುದೇ ಒಂದು ಪ್ರದೇಶಕ್ಕೆ, ಭಾಷೆಗೆ ಸೀಮಿತವಾದವರಲ್ಲ. ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಇರುವ ಎಲ್ಲ ಹೋರಾಟಗಾರರು ನಮಗೆ ಸ್ಫೂರ್ತಿದಾಯಕರು. ಕಿಡಿಗೇಡಿಗಳ ಸಣ್ಣ ಕೃತ್ಯದಿಂದ ದೊಡ್ಡವರ ಮಹನತ್ತೆ ಸಣ್ಣದಾಗುವುದಿಲ್ಲ. ಕಿಡಿಗೇಡಿಗಳ ಕೃತ್ಯವೇ ಸಣ್ಣದಾಗುತ್ತದೆ ಅಷ್ಟೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅದನ್ನು ಬಿಟ್ಟು ನಾವು ಭಾವನೆಯ ಒಗಕ್ಕೆ ಬಲಿಬೀಳಬಾರದು. ನಾನು ಕೆಲವು ಸೂಕ್ಷ್ಮಗಳನ್ನು ಹತ್ತಿರದಿಂದ ನೋಡಿದ್ದೇನೆ. ಅದರ ಅನುಭವದಿಂದ ಹೇಳುತ್ತಿದ್ದೇನೆ. ಇದು ದೊಡ್ಡ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜ್ವಾಲೆಯಂತೆ ಬೆಳೆಯುತ್ತಾ ಹೋಗುತ್ತದೆ. ಇದಕ್ಕೆ ಬಲಿಬೀಳುವವರು ಅಮಾಯಕರು. ಯಾರೋ ಏನೋ ಮಾಡಿ ಹೋಗುತ್ತಾರೆ. ಅದರ ಪ್ರಚೋದನೆಗೆ ನಾವು ಒಳಗಾಗಿ ಅದಕ್ಕೆ ದೊಡ್ಡ ಭಾವನೆಯ ರೂಪವನ್ನು ಕೊಟ್ಟರೆ ಕಾನೂನಿನ ಅಥವಾ ಬೇರೆ ತೊಂದರೆಗಳಿಗೆ ಬಲಿಯಾಗುವವರು ಅಮಾಯಕರು. ಈ ಹಿನ್ನೆಲೆಯಲ್ಲಿ ಕರ್ನಾಟಕದ ಹಿರಿಮೆಯ ಬಗ್ಗೆ, ತಾಳ್ಮೆಯ ಬಗ್ಗೆ. ಸಾಂಸ್ಕೃತಿಕ ಹಿನ್ನಲೆ ಬಗ್ಗೆ, ಮನಸ್ಸಿನ ಬಗ್ಗೆ ನಮಗೆ ಅಭಿಮಾನವಿದೆ. ಈ ಹಿನ್ನೆಲೆಯಲ್ಲಿ ಏನೇನು ಕ್ಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯ ಅದನ್ನು ತೆಗೆದುಕೊಳ್ಳಬೇಕು. ಸಂವಿಧಾನ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಸ್ವಾತಂತ್ರ್ಯವನ್ನು ಸ್ವೇಚ್ಛೆಯಂತೆ ದುರುಪಯೋಗ ಯಾರು ಮಾಡಿಕೊಳ್ಳುತ್ತಾರೆ ಅಂತಹವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಯಾವ-ಯಾವ ಸೆಕ್ಷನ್‌ಗಳು, ಕಾನೂನುಗಳು ಬೇಕು ಎನ್ನುವುದಾದರೆ, ಇಂತಹ ಪರಿಸ್ಥಿತಿಗಳು ಮುಂದೆ ಬರದ ಹಾಗೆ ಕಾನೂನಿನಲ್ಲಿ ಸಂಶೋಧನೆ ಮಾಡಿ ಹೊಸ ಕಾನೂನನ್ನು ತರುವಂತಹ ಶಕ್ತಿ ನಮಗೆ ಇದೆ. ಇನ್ನು ಮುಂದೆ ಈ ರೀತಿ ಕೆಲಸ ಮಾಡುವವರು ಭಯಪಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಈ ವಿಷಯದ ಬಗ್ಗೆ ಎಲ್ಲರೂ ಒಂದಾಗಿ ಚರ್ಚೆ ಮಾಡಲಾಗಿದೆ. ಅದು ಪ್ರತಿಪಕ್ಷ ಇರಬಹುದು, ಆಡಳಿತ ಪಕ್ಷದ ಸದಸ್ಯರು ಇರಬಹುದು. ಎಲ್ಲರೂ ರಾಜಕೀಯ ಲೆಕ್ಕಾಚಾರದಿಂದ ಮೇಲೆ ಎದ್ದು ಕರ್ನಾಟಕದ ಹಿತದೃಷ್ಟಿಯಿಂದ ತಮ್ಮ-ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಎಲ್ಲರ ಭಾವನೆಗಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಧನ್ಯವಾದಗಳು.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಗಳೆ, ಕ್ರಾಂತಿವೀರ ಸಂಗೋಳಿ ರಾಯಣ್ಣನ ಮತ್ತು ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಗಳನ್ನು ಧ್ವಂಸ ಮಾಡುವಂತಹ ಕೆಲಸ ನಮ್ಮ ರಾಜ್ಯದಲ್ಲಿ ನಡೆದಿರುವುದನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಹಲವಾರು ಮಹನೀಯರ ಪ್ರತಿಮೆಗಳನ್ನು ಸ್ಥಾಪನೆ ಮಾಡಲಾಗಿದೆ. ಆ ಮೂರ್ತಿಗಳ ಮೇಲೆ ಹಂತ-ಹಂತವಾಗಿ ದಾಳಿಯಾಗುತ್ತಿರುವುದನ್ನು ನಾವು ಕಂಡಿದ್ದೇವೆ. ಅದು ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಮೂರ್ತಿಯಾಗಿರಬಹುದು, ಮಹಾತ್ಮ ಗಾಂಧೀಜಿಯವರ ಮೂರ್ತಿಯಾಗಿರಬಹುದು. ಈಗ ಈ ಸದನದಲ್ಲಿ ನಾವು ಈ ವಿಚಾರವನ್ನು ಮಾತನಾಡುವಂತಹ ಸಮಯದಲ್ಲಿಯೇ ಖಾನಾಪೂರ ತಾಲ್ಲೂಕಿನ ಹಲಸಿ ಎನ್ನುವ ಗ್ರಾಮದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಮಸಿ ಬಳಿದಿದ್ದಾರೆ. ಹೋದವಾರ ಇಲ್ಲಿ ಸಂಗೋಳಿ ರಾಯಣ್ಣನ ಪ್ರತಿಮೆಯನ್ನು ಧ್ವಂಸಗೊಳಿಸಿದ್ದಾರೆ, ಬೆಂಗಳೂರಿನಲ್ಲಿ ಛತ್ರಪತಿ ಶಿವಾಜಿಮಹಾರಾಜರ ಪ್ರತಿಮೆಯನ್ನು ಧ್ವಂಸಗೊಳಿಸಿದ್ದಾರೆ. ಇವತ್ತು ಹಲಸಿ ಎನ್ನುವ ಗ್ರಾಮದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಮಸಿ ಬಳಿದಿದ್ದಾರೆ. ಮತ್ತು ಅಲ್ಲಿ ಕನ್ನಡ ಬಾವುಟವನ್ನು ಸುಟ್ಟು ಪ್ರತಿಭಟನೆ ಮಾಡಿದ್ದಾರೆ. ಈಗಿನವರೆಗೂ ಇಂತಹ ಕೃತ್ಯಗಳು ನಡೆಯುತ್ತಿರುವುದರಿಂದ ಸರ್ಕಾರ ಇದನ್ನು ತಡೆಗಟ್ಟುವಲ್ಲಿ ವಿಫಲವಾಗಿದೆ ಎಂದು ನಾನು ಭಾವಿಸುತ್ತೇನೆ. ಇವತ್ತು ಇಲ್ಲಿ ಅಧಿವೇಶನ ನಡೆದಿದೆ ಇಂತಹ ಸಮಯದಲ್ಲಿ ಕಿಡಗೇಡಿಗಳು ಒಂದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಕ್ರಿಶ್ಚಿಯನ್ ಚರ್ಚ್‌ನಲ್ಲಿ ಪಾದ್ರಿಯವರು ಪ್ರಾರ್ಥನೆ ಸಲ್ಲಿಸದಂತೆ ಮಚ್ಚು ಹಿಡಿದುಕೊಂಡು ಓಡಾಡಿಸಿದಂತಹ ಘಟನೆ ನಡೆದಿದೆ. ಅಂದರೆ ನಮ್ಮ ರಾಜ್ಯದಲ್ಲಿ ಕೆಲವು ದೇಶದ್ರೋಹಿಗಳು ಅಶಾಂತಿಯನ್ನು ಉಂಟು ಮಾಡಬೇಕು, ಕೋಮುಗಲಭೆ ಸೃಷ್ಟಿ ಮಾಡಬೇಕು ಮತ್ತು ನಮ್ಮ ನಮ್ಮಲಿಯೇ ಜಗಳವಾಡಿಸಬೇಕು ಎಂದು ಈ ರೀತಿ ಮಾಡುತ್ತಿದ್ದಾರೆ. ಇತ್ತೀಚೆಗೆ ಪರಿಶಿಷ್ಟ ಜಾತಿಯವರ ಮೇಲೆ ಸಾಕಷ್ಟು ದೌರ್ಜನ್ಯಗಳು ಆಗುತ್ತಿರುವುದನ್ನು ನಾವು ನೋಡಿದ್ದೇವೆ. ಈಗಾಗಲೇ ಮಾನ್ಯ ನಜೀರ್ ಅಹ್ಮದ್ ಸಾಹೇಬರು ಪುಲಕೇಶಿ ನಗರದಲ್ಲಿ ನಡೆದಿರುವ ಘಟನೆ ಬಗ್ಗೆ ಹೇಳಿದ್ದಾರೆ. ಕ್ರಿಶ್ಚಿಯನ್ನರ ಮೇಲೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಮೇಲೆ ಸಾಕಷ್ಟು ದೌರ್ಜನ್ಯಗಳು ನಡೆಯುತ್ತಿರುವುದನ್ನು ನಾವು ನೋಡಿದ್ದೇವೆ. ಬಡಜನರ, ಹಿಂದುಳಿದವರ ನಾಯಕರ ಪ್ರತಿಮೆಗಳ ಮೇಲೆ ಈ ರೀತಿಯ ದೌರ್ಜನ್ಯಗಳು ನಡೆಯುತ್ತಿವೆ. ಈ ಘಟನೆಯ ಹಿಂದೆ ಕೇವಲ ಎಂ.ಇ.ಎಸ್., ನವರು ಇದ್ದಾರೆ ಎಂದು ನಾನು ಭಾವಿಸುವುದಿಲ್ಲ. ಇದರ ಹಿಂದೆ ಇನ್ನೊಂದು ದೊಡ್ಡ ಶಕ್ತಿ ಇದೆ ಎಂದು ನಾನು ಭಾವಿಸುತ್ತೇನೆ. ಎಂ.ಇ.ಎಸ್., ಗಿಂತ ದೊಡ್ಡದಾದ ದೇಶದ್ರೋಹಿಗಳು ನಮ್ಮ ದೇಶದಲ್ಲಿ ಮತ್ತು ರಾಜ್ಯದಲ್ಲಿ ಅಶಾಂತಿಯನ್ನು ಉಂಟು ಮಾಡಬೇಕೆಂದು ಈ ರೀತಿ ಮಾಡುತ್ತಿದ್ದಾರೆ. ಅಮೃತಸರ್‌ದ ಗುರುನಾನಕ ಗೋಲ್ಡನ್ ಟೆಂಪಲ್ ಗರ್ಭ ಗುಡಿಯ ಒಳಗೆ ವಿನಾಕಾರಣ ಒಬ್ಬ ಹಾರಿ ಹೋಗಿ ಅಲ್ಲಿ ಅಶಾಂತಿಯನ್ನು ಉಂಟು ಮಾಡಿ, ಅಲ್ಲಿಯ ಜನರ ಭಾವನೆಗಳಿಗೆ ಧಕ್ಕೆಯಾಗುವಂತೆ ಮಾಡಿದ್ದಾನೆ. ಬಹುಷ: ಪಂಜಾಬ್‌ನಲ್ಲಿ ಚುನಾವಣೆಗಳು ಹತ್ತಿರ ಬಂದಿರುವುದರಿಂದ ಹೀಗೆ ಮಾಡಿರಬಹುದು. ಇಲ್ಲಿಯೂ ಸಹ ಚುನಾವಣೆಯು ಬರುತ್ತಿದೆ. ಮಹಾರಾಷ್ಟ್ರದಲ್ಲಿ ನಮ್ಮ ರಾಜ್ಯದ ಧ್ವಜವನ್ನು ಸುಟ್ಟು, ನಮ್ಮ ಹೋರಾಟಗಾರರ ಪ್ರತಿಮೆಗಳನ್ನು ಧ್ವಂಸಗೊಳಿಸಿದ್ದಾರೆ. ಇದರ ಹಿಂದೆ ಯಾರು ಇದ್ದಾರೆ? ಈ ವಿಚಾರದಲ್ಲಿ ಗೃಹ ಇಲಾಖೆಯ intelligence failure ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ನಾನು ಭಾವಿಸುತ್ತೇನೆ. ಅಥವಾ ಈ ರೀತಿ ಮಾಡಲು ಸರ್ಕಾರ ಕುಮ್ಮಕ್ಕು ಕೊಡುತ್ತಿದೇಯೆ? ಸರ್ಕಾರ ಕೆಲವು ಕಡೆ non bailable cases ಹಾಕುತ್ತಾರೆ, ಕೆಲವು ಕಡೆ ಕೇಸ್‌ಗಳನ್ನು ಹಾಕುವುದಿಲ್ಲ. ಇವತ್ತು ಸಾವಿರಾರು ಕನ್ನಡಿಗರನ್ನು ಬಂದನಗೊಳಿಸಿದ್ದಾರೆ. ಏಕೆ ಕನ್ನಡಿಗರು ಪ್ರತಿಭಟನೆ ಮಾಡಬಾರದೆ? ನಮ್ಮ ಧ್ವಜಕ್ಕೆ ಬೆಂಕಿ ಹಚ್ಚಿದ್ದಾರೆ, ಕೋಮುಗಲಭೆ ಸೃಷ್ಟಿಯಾಗಿದೆ. ಕನ್ನಡಿಗರ ಭಾವನೆಗಳನ್ನು ಕೆರಳಿಸುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕನ್ನಡ ಸಂಘಗಳು ಶಾಂತಿಯುತ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ, ಅವರನ್ನು ಏಕೆ ಬಂಧಿಸಬೇಕು? ಪ್ರತಿಭಟನೆ ಮಾಡಲು ಅವರಿಗೆ ಸ್ಥಳವನ್ನು ಕೊಡಬೇಕೋ ಬೇಡವೊ? ಸರ್ಕಾರಕ್ಕೆ ಇಷ್ಟಾದರೂ ಜ್ಞಾನವಿರಬೇಕೊ ಇಲ್ಲವೊ? ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಇಂದು ಸದನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು ಎಂದು ನಾವು ಕುತೂಹಲದಿಂದ ಕಾಯುತ್ತಿದ್ದರೆ, ಇವರು ಈ ರೀತಿ ಕೋಮುಗಲಭೆಗಳನ್ನು ಸೃಷ್ಟಿ ಮಾಡಿ ನಾವು ಚರ್ಚೆ ಮಾಡಬಾರದು, ಈ ಗಲಭೆಗಳ ಬಗ್ಗೆಯೇ ಮಾತನಾಡಬೇಕು ಎಂದು ರೂಪಿಸಿರುವ ಇದೊಂದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸಂಚು ಎಂದು ನಾನು ಭಾವಿಸುತ್ತೇನೆ. ಇದು ಉತ್ತರ ಕರ್ನಾಟಕಕ್ಕೆ ಮಾಡುತ್ತಿರುವಂತಹ ಅನ್ಯಾಯವಾಗಿದೆ. ಚರ್ಚೆ ಮಾಡಲು ಸರ್ಕಾರ ನಮಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕಾಗುತ್ತದೆ. ನಮ್ಮನ್ನು ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ಕೋಮು ಗಲಭೆಯಾಗಬಾರದು, ಎಲ್ಲರೂ ಶಾಂತಿಯಿಂದ ಇರಬೇಕು. ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನರು ಎಲ್ಲರೂ ನಾವು ಸಾವಿರಾರು ವರ್ಷಗಳಿಂದ ಸಹಬಾಳ್ವೆಯಿಂದ ಬಾಳುತ್ತಿದ್ದೇವೆ.

(ಮುಂದು)

(1181)20-12-2021(05-30)bsd-md (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು)**

ಯಾವಾಗ ಯಾವಾಗ ಬಿಜೆಪಿ ಸರ್ಕಾರ ಬಂದಿದೆ ಎಂದು ನಾನು ಹೇಳಬಾರದು, ಆಗ ಕೋಮು ಗಲಭೆ ಜಾಸ್ತಿಯಾಗುತ್ತದೆ.

**ಶ್ರೀಮತಿ ಭಾರತಿಶೆಟ್ಟಿ:-** ಕಾಂಗ್ರೆಸ್ ಸರ್ಕಾರ ಇದ್ದಾಗ ಕೋಮು ಗಲಭೆ ಆಗಿಲ್ಲವೇ?

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಆಗಿದೆ.

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮತ್ತೆ ಬಿಜೆಪಿ ಸರ್ಕಾರ ಇದ್ದಾಗ ಕೋಮು ಗಲಭೆ ಆಗುತ್ತದೆ ಎಂದು ಎಲ್ಲಿಂದ ಎಲ್ಲಿಗೆ ತಿರುಗಿಸುತ್ತಾರೆ, ನೇರವಾಗಿ ಬರಬೇಕು. ಯಾರು ಬಂದರು, ಯಾರು ಸದನ ನಡೆಯುವುದಕ್ಕೆ ಬಿಡುವುದಿಲ್ಲ, ಹಾಗಾದರೆ ನಾವು ವೈಯಕ್ತಿಕ ವಿಷಯ ಇಟ್ಟುಕೊಂಡು ಎತ್ತಿನ ಗಾಡಿಯಲ್ಲಿ ಬಂದು ಎರಡು-ಮೂರು ದಿನ ಸದನದ ಸಮಯವನ್ನು ಹಾಳು ಮಾಡಿ, ಜನರ ಸಮಸ್ಯೆಯನ್ನು ಬಗೆಹರಿಯಲು ಬಿಡುವುದಿಲ್ಲ ಎಂದು ನಾವು ಹೇಳುವುದಕ್ಕೆ ಆಗುತ್ತದೆಯೇ? ಏಕೆ ಆ ರೀತಿ ತಪ್ಪು ಹೇಳಿಕೆ ಕೊಡುತ್ತಾರೆ? ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ. ನಾವೆಲ್ಲರು ಕನ್ನಡ ಮಣ್ಣಿನಲ್ಲಿ ಹುಟ್ಟಿ ಕನ್ನಡಕ್ಕಾಗಿ ಹೋರಾಟ ಮಾಡಿದವರು, ಯಾರೋ ಕಿಡಿಗೇಡಿಗಳು ಮಾಡಿದ್ದಕ್ಕೆ ಬಿಜೆಪಿ ಸರ್ಕಾರ ಇದ್ದಾಗ ಕೋಮು ಗಲಭೆ ಎಂದರೆ ಅದರ ಅರ್ಥ ಏನು? ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಕೋಮು ಗಲಭೆ ಆಗಿಲ್ಲವೇ? ನಾನೇ ಉದಾಹರಣೆಯಾಗಿ ಇದ್ದೇನೆ. ನಾವು ಅನುಭವಿಸಿ ಸತ್ತಿದ್ದೇವೆ. ಕೋಮು ಗಲಭೆಯಲ್ಲಿ ನಾವು ಏಟು ತಿಂದಿದ್ದೇವೆ. ಜೈಲಿಗೆ ಹೋಗಿದ್ದೇವೆ. ಆ ರೀತಿ ಹೇಳಬೇಕಾಗಿಲ್ಲ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ನಂತರ ಅವರು ಹೇಳಲಿ.

**ಶ್ರೀಮತಿ ಭಾರತಿಶೆಟ್ಟಿ:-** ಅನೇಕ ಮಾನ್ಯ ಸದಸ್ಯರು ಮಾತನಾಡಿದರು. ಕೆಲವರು ಎಷ್ಟು ಚೆನ್ನಾಗಿ ಮಾತನಾಡಿದರು, ಅವರು ಏನೂ ಹೇಳಲಿಲ್ಲ. ಬಿಜೆಪಿ ಸರ್ಕಾರ ಇದ್ದಾಗ ಕೋಮು ಗಲಭೆ ಅಲ್ಲ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಒಳ್ಳೆಯ ಚರ್ಚೆ ನಡೆಯುತ್ತಿದ್ದು, ಸದನದ ಎಲ್ಲರೂ ಒಂದೇ ಧ್ವನಿಯಲ್ಲಿ ಒಂದು message ಕಳುಹಿಸಬೇಕು. ಹಾಗಾಗಿ ವಿಷಯಾಂತರ ಮಾಡಬಾರದು. ಎಲ್ಲರೂ ಬಹಳ ಚೆನ್ನಾಗಿ ಮಾತನಾಡಿದರು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಕೇವಲ ಬಿಜೆಪಿ ಸರ್ಕಾರ ಇದ್ದಾಗ ಜಾಸ್ತಿ ಕೋಮು ಗಲಭೆ ಆಗುತ್ತದೆ ಎಂದು ಹೇಳುತ್ತಾ ನನ್ನ ಮಾತನ್ನೇ ಮುಗಿಸಿರಲಿಲ್ಲ. ಅಷ್ಟರಲ್ಲಿ ಮಾನ್ಯ ಭಾರತಿ ಶೆಟ್ಟಿರವರು ....

**(ಗೊಂದಲ)**

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ,

**ಶ್ರೀ ಪ್ರಕಾಶ್ ಕೆ. ರಾಥೋಡ್:-** ನಾನು ಹೇಳುವುದನ್ನು ಅವರು ಕೇಳಬೇಕು, ಅವರು ಹೇಳಿದ್ದನ್ನು ನಾನು ಶಾಂತಿಯಿಂದ ಕೇಳಲಿಲ್ಲವೇ?

**ಶ್ರೀಮತಿ ಭಾರತಿಶೆಟ್ಟಿ:-** ನಾವು ಲಾಠಿ ಏಟನ್ನು ತಿಂದಿದ್ದೇವೆ.

**ಸಭಾಪತಿಯವರು:-** ನೀವು ನನ್ನ ಕಡೆ ನೋಡಿ ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರು ನನಗೆ ಮಾತನಾಡಲು ಬಿಡುತ್ತಿಲ್ಲ. ಬಿಜೆಪಿ ಸರ್ಕಾರ ಇದ್ದಾಗ ಕೋಮು ಗಲಭೆ ಆದರೆ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಕೋಮು ಗಲಭೆ ಆಗಿರುವುದು ತಪ್ಪು. ಆದರೆ ನಾನು ಹೇಳುತ್ತಿರುವ ನಿದರ್ಶನಗಳು ಇತ್ತೀಚಿನ ದಿನಗಳಲ್ಲಿ ಬಿಜೆಪಿ ಸರ್ಕಾರ ಬಂದಮೇಲೆ ಆಗುತ್ತಿರುವ ಘಟನೆಗಳಾಗಿವೆ. ನಾನು ಬಿಜೆಪಿ ಸರ್ಕಾರವೇ ಕೋಮು ಗಲಭೆ ಮಾಡುತ್ತಿದೆ ಎಂದು ಹೇಳುತ್ತಿಲ್ಲ. ಕಾಂಗ್ರೆಸ್ ಸರ್ಕಾರ ಇದ್ದಾಗ ಆಗಿದ್ದರೂ ತಪ್ಪು. ಸಾವಿರಾರು ವರ್ಷಗಳಿಂದ ನಾವು ಶಾಂತಿಯಿಂದ ಬಾಳಿದ್ದು, ಹಿಂದೂ-ಮುಸಲ್ಮಾನರು, ಕ್ರೈಸ್ತರು, ಇಸಾಯಿ ಎಲ್ಲರೂ ಸೇರಿ ಕೋಮು ಸೌಹಾರ್ದತೆಯಿಂದ ಬಾಳಿದ್ದೇವೆ. ಇವತ್ತು ಕೋಮು ಗಲಭೆಯ ವಿಷ ಬೀಜವನ್ನು ನಮ್ಮ ದೇಶದಲ್ಲಿ ಬಿತ್ತುತ್ತಿದ್ದಾರೆ. ಇದನ್ನು ತಡೆಯಿಡಿಯಬೇಕೆಂದು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಇತ್ತೀಚಿನ ದಿನಗಳಲ್ಲಿ ಮೂರ್ತಿಗಳನ್ನು ವಿರೂಪಗೊಳಿಸುವ ಪ್ರವೃತ್ತಿ ಪ್ರಾರಂಭವಾಗಿದ್ದು, ಇದನ್ನು ತಡೆಹಿಡಿಯಲು ಸರ್ಕಾರ ಏನು ಮಾಡಬೇಕು? ನನ್ನ ಪ್ರಕಾರ ಸರ್ಕಾರ ಮಾತ್ರ ಯಾವುದೇ ಪ್ರತಿಮೆಗಳನ್ನು ಸ್ಥಾಪಿಸಲು ಅವಕಾಶ ಇರಬೇಕು. ಪ್ರತಿಯೊಂದು ಹಳ್ಳಿ ಮತ್ತು ಗಲ್ಲಿಗಳಲ್ಲಿ ಪ್ರತಿಮೆ ಮಾಡಲು ಬಿಟ್ಟಾಗ ರಕ್ಷಣೆ ಕೊಡಲು ಆಗುವುದಿಲ್ಲ. ಇದೇರೀತಿ ಕಿಡಿಗೇಡಿಗಳು ಕೋಮು ಗಲಭೆ ಮಾಡಿ ಅಶಾಂತಿ ಮಾಡುತ್ತಾರೆ. ಸರ್ಕಾರ ಇವತ್ತು ನಿರ್ದಿಷ್ಟವಾಗಿ ನಿರ್ಣಯ ತೆಗೆದುಕೊಳ್ಳಬೇಕು. ಪ್ರತಿಮೆಗಳನ್ನು ಸ್ಥಾಪಿಸುವ ಬಗ್ಗೆ ಒಂದು ಕಾಯ್ದೆಯನ್ನು ತಂದು, ಆದರಡಿ ಸರ್ಕಾರ ಮಾತ್ರ ಪ್ರತಿಮೆ ಸ್ಥಾಪಿಸಬೇಕು. ಪ್ರತಿಯೊಂದು ಹಳ್ಳಿ ಮತ್ತು ಗಲ್ಲಿಗಳಲ್ಲಿ ಪ್ರತಿಮೆ ಸ್ಥಾಪಿಸಿದಾಗ ಬಹಳ ದೊಡ್ಡ ಅನಾಹುತ ಮುಂದಿನ ದಿನಗಳಲ್ಲಿ ಆಗುತ್ತದೆ ಎಂದು ನಾನು ಭಾವಿಸಿದ್ದೇನೆ. ಸರ್ಕಾರ ಇದರ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಕಳೆದ ಮೂರ್ನಾಲ್ಕು ದಿನಗಳಿಂದ ಇರುವ ಆತಂಕದ ಪರಿಸ್ಥಿತಿ ಬಗ್ಗೆ ವಿಶೇಷ ಚರ್ಚೆಗೆ ತಾವು ಅವಕಾಶ ಕೊಟ್ಟಿದ್ದು, ಸದನದಲ್ಲಿ ಬಹಳಷ್ಟು ಹಿರಿಯ ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿ, ವಿಷಯದ ಮೇಲೆ ವಿಶೇಷ ಬೆಳಕನ್ನು ಚೆಲ್ಲಿರುತ್ತಾರೆ.

**ಸಭಾಪತಿಯವರುಃ-** ಒಟ್ಟು ೧೬ ಜನ ಮಾತನಾಡಿದ್ದಾರೆ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರಿಂದ ಪ್ರಾರಂಭವಾಗಿ ಶ್ರೀ ಯು.ಬಿ. ವೆಂಕಟೇಶ್‌ರವರು, ಶ್ರೀ ಪುಟ್ಟಣ್ಣ ರವರು, ಶ್ರೀ ನಾರಾಯಣಸ್ವಾಮಿ ರವರು, ಶ್ರೀ ತಿಪ್ಪೇಸ್ವಾಮಿ ರವರು, ಶ್ರೀ ಹರಿಪ್ರಸಾದ್ ರವರು, ಡಾ: ತೇಜಸ್ವಿನಿರವರು ಮತ್ತು ಶ್ರೀ ಮರಿತಿಬ್ಬೇಗೌಡರು, ಶ್ರೀ ಶಿವಣ್ಣನವರು, ಶ್ರೀ ರವಿಕುಮಾರ್ ರವರು, ಶ್ರೀ ಆರ್.ವಿ. ತಿಮ್ಮಾಪುರ್ ರವರು, ಶ್ರೀ ತಳವಾರ್ ಸಾಬಣ್ಣನವರು, ಶ್ರೀ ನಸೀರ್ ಅಹಮದ್ ರವರು, ಶ್ರೀ ನರಸಿಂಹ ನಾಯಕ್ ಮತ್ತು ಶ್ರೀ ಪ್ರಕಾಶ್ ರಾಥೋಡ್‌ರವರೆಲ್ಲರೂ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಎರಡೂ ಭಾಗದ ಸದಸ್ಯರು ಯಾವ message ಅನ್ನು ತಲುಪಿಸಬೇಕೋ, ಅದರ ಬಗ್ಗೆ ಬಹಳ ವಿವರವಾಗಿ ಹೇಳಿ ಅದನ್ನು ಕೊಡುವ ಪ್ರಯತ್ನವನ್ನು ಮಾಡಿದ್ದಾರೆ.

ನೆಲ, ಜಲ ಮತ್ತು ಭಾಷೆ ಪ್ರಶ್ನೆ ಬಂದಾಗ ಬಿಜೆಪಿ, ದಳ ಕಾಂಗ್ರೆಸ್ ಅನ್ನುವ ವಿಚಾರ ಬರದೇ ನಾವೆಲ್ಲರೂ ಕರ್ನಾಟಕ ಪ್ರಜೆಗಳಾಗಿ ಒಟ್ಟಾಗಿ ಒಗ್ಗಟ್ಟಾಗಿ ನಿಂತು ಸವಾಲನ್ನು ಸ್ವೀಕಾರ ಮಾಡಿ ಅದಕ್ಕೆ ತಕ್ಕ ಉತ್ತರವನ್ನು ಕೊಡುತ್ತೇವೆ ಎಂದು ಹೇಳುವ message ಅನ್ನು ಕೊಟ್ಟಿದ್ದೇನೆ. ಬೆಳಗಾವಿ ನಗರದಲ್ಲಿ ಚಳಿಗಾಲದ ಅಧಿವೇಶನ ಪ್ರಾರಂಭವಾದಾಗಲೆಲ್ಲವೂ MES (Maharashtra Ekikaran Samithi) ನ ಕೆಲವರು ಅವರ ಬೇಳೆ ಬೇಯಿಸಿಕೊಳ್ಳಲು ನೋಡುತ್ತಿರುತ್ತಾರೆ. ಅದು ಕಾಂಗ್ರೆಸ್ ಅಥವಾ ಬಿಜೆಪಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಯಾವುದೇ ಸರ್ಕಾರ ಅಧಿಕಾರದಲ್ಲಿ ಇದ್ದರೂ ಅವರು ಮಾಡುವ ಕೃತ್ಯವನ್ನು ಮಾಡುತ್ತಿರುತ್ತಾರೆ. ಮೊನ್ನೆಯ ದಿವಸ ಬೆಳಗಾವಿ ನಗರದ ತಿಲಕವಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ Vaccine Depot ರಸ್ತೆ ಮೇಲೆ ಮಹಾನಗರ ಪಾಲಿಕೆಯಿಂದ ಯಾವುದೇ permission ತೆಗೆದುಕೊಳ್ಳದೇ ಮಹಾಮೇಳವನ್ನು ಸಂಘಟಿಸಿದ್ದರು. ಆಗ ಇಲ್ಲಿಯ ನಗರಪಾಲಿಕೆ ಅಧಿಕಾರಿಗಳಿಂದ complaint ಪಡೆದು ಅವರ ವಿರುದ್ಧ case register ಆಗಿದೆ. ಅಷ್ಟರಲ್ಲಿ ಆ gate ಹತ್ತಿರ ಹೋಗಿ, ೪ ಜನರು Vaccine Depot ಹತ್ತಿರ ಬಂದು ಶ್ರೀ ದೀಪಕ್ ದಳವಿ ಎನ್ನುವವರ ಮುಖದ ಮೇಲೆ ಮಸಿ ಎಸೆಯುತ್ತಾರೆ. ಅವರು ಆ ೪ ಜನರ ವಿರುದ್ಧ complaint ಕೊಟ್ಟಿದ್ದು, ಇದನ್ನು suo moto ಪೊಲೀಸರು ತೆಗೆದುಕೊಂಡಿಲ್ಲ. ಆ section ಬಗ್ಗೆ ಬಹಳ ಜನರು ಜಿಜ್ಞಾಸೆ ವ್ಯಕ್ತ ಮಾಡಿದ್ದಾರೆ. ಪಿರ್ಯಾದೆಯನ್ನು ಆ ರೀತಿ ಕೊಟ್ಟಿದ್ದು, ಈಗ ಎಲ್ಲರೂ Lawyer ಅನ್ನು ಇಟ್ಟುಕೊಂಡು ಬಂದು complaint ಕೊಡುವ ವ್ಯವಸ್ಥೆ ಆಗಿದೆ. ವಿಚಾರಣೆ ನಡೆಸಿ, charge sheet ಸಲ್ಲಿಸುವಾಗ ಯಾವ section ಗಳನ್ನು ಬದಲಾಯಿಸಬೇಕು ಮತ್ತು ಇಡಬೇಕು ಹಾಗೂ ಕೃತ್ಯ ಯಾವರೀತಿಯದ್ದು ಎಂದು ಪೊಲೀಸರು ವಿಚಾರ ಮಾಡುತ್ತಾರೆ. ಹಾಗಾಗಿ section ಗಳ ಬಗ್ಗೆ ತೀರಾ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ನಾನು ಈ ಸಂದರ್ಭದಲ್ಲಿ ಹೆಸರು ಮತ್ತು section ಗಳನ್ನು ಹೇಳುವುದು ಒಳ್ಳೆಯದಲ್ಲ ಎಂದು ನನಗೆ ಅನಿಸುತ್ತದೆ. ಹಾಗಾಗಿ FIR ರುವ section ಗಳು ಹಾಗೂ ಅದರ ಬಗ್ಗೆ ಬಹಳ ವಿವರಗಳನ್ನು ಹೇಳುವುದು ಒಳ್ಳೆಯದಲ್ಲ. ಇದಕ್ಕೆ ಸಂಬಂಧಪಟ್ಟಂತೆ Supreme Court ನ ಕೆಲವು ತೀರ್ಪುಗಳಿವೆ.

**ಶ್ರೀ ನಸೀರ್ ಅಹಮದ್:-** ಮಾನ್ಯ ಸಭಾಪತಿಯವರೇ, ಒಂದು ಸಾರಿ FIR ಆದ ಮೇಲೆ that becomes a public document.

**ಶ್ರೀ ಅರಗ ಜ್ಞಾನೇಂದ್ರ:-** ಆದರೂ ಅದು ಮುಗಿಯುವರೆಗೂ ವ್ಯಕ್ತಿಗಳ ಹೆಸರನ್ನು ಪ್ರಕಟ ಮಾಡಬಾರದೆಂದು ಇದೆ.

**Sri S.Ravi:-** Sections ಅದು ಇದು ಬೇಡ, ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಬೇಕು. ಅದನ್ನೆಲ್ಲಾ ಹೇಳುತ್ತಾ ಕುಳಿತುಕೊಂಡರೆ..... ಯಾರು ತೀಟೆ ಮಾಡುತ್ತಾರೋ, ಅವರ ಎದೆಯಲ್ಲಿ ನಡುಕ ಉಂಟು ಮಾಡುವಂತೆ ಮಾನ್ಯ ಮಂತ್ರಿಗಳಿಂದ statement ಬರಬೇಕು. Charge Sheet ಎಲ್ಲಾ ಹೇಳುತ್ತೇನೆ ಎಂದರೆ......

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ನಮ್ಮ ಧ್ವಜವನ್ನು ಸುಡುತ್ತಾರೆ. ಬೆಂಗಳೂರಿನಲ್ಲಿ ಶಿವಾಜಿ ಪ್ರತಿಮೆಗೆ ರಾತ್ರಿ ಸಮಯದಲ್ಲಿ ಬಣ್ಣ ಹಾಕುತ್ತಾರೆ. ೭ ಜನರ ಮೇಲೆ FIR ದಾಖಲಾಗಿದ್ದು, ಅವರ ವಿರುದ್ಧವೂ ಕೆಲವು section ಗಳನ್ನು ಹಾಕಲಾಗಿದೆ. ಮೊನ್ನೆ ದಿನ ರಾತ್ರಿ ಶಿವಾಜಿ ಪ್ರತಿಮೆ ಮೇಲೆ ಬಣ್ಣ ಹಾಕಿದ್ದರ ವಿರುದ್ಧ ಪ್ರತಿಭಟನೆ ಮಾಡಲು ಕೆಲವರು ತೊಡಗಿದರು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(1182)/20.12.2021/5.40/ಹೆಚ್‌ವಿ:ಎಂಡಿ

**ಶ್ರೀ ಆರಗ ಜ್ಞಾನೇಂದ್ರ(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಈ ಪ್ರಕರಣ ನಡೆದಂತಹ ಸಂದರ್ಭದಲ್ಲಿ ಬಹಳಷ್ಟು ಜನರು ಇದಕ್ಕೆ ಪೊಲೀಸ್‌ನವರ ವೈಫಲ್ಯ ಮತ್ತು ಇಂಟಲಿಜೆನ್ಸ್‌ರವರ ವೈಫಲ್ಯವೇ ಕಾರಣವೆಂದು ಹೇಳಿದ್ದರು. ಒಂದು ಪೂರ್ವ ತಯಾರಿಯನ್ನು ಮಾಡಿಕೊಂಡು ಈ ದಿನ ವಿದ್ಯಾರ್ಥಿಗಳು, ರೈತರು ಮತ್ತು ಕಾರ್ಮಿಕರು ಎಲ್ಲರೂ ಬಂದಿದ್ದಾರೆ. ಪ್ರಜಾತಂತ್ರದಲ್ಲಿ ಪ್ರತಿಭಟನೆ ಮಾಡುವಂತಹ ಮತ್ತು ಬಂದು ಅಹವಾಲು ತಲುಪಿಸುವಂತಹ ಎಲ್ಲ ಅವಕಾಶಗಳು ಇವೆ. ಸುವರ್ಣ ವಿಧಾನಸೌಧದ ಸುತ್ತ ಇರುವಂತಹ ಜಾಗದಲ್ಲಿ ಬೇಕಾದಷ್ಟು ಜನರು ಪ್ರತಿಭಟನೆಗಳನ್ನು ಮಾಡುತ್ತಿದ್ದಾರೆ. ಇದು ಪೊಲೀಸಿನವರಿಗೆ ಗೊತ್ತಾಗುತ್ತದೆ. ಮೊನ್ನೆ ದಿನ ಸಂಜೆ ಇದ್ದಕ್ಕಿದಂತೆ ಸ್ವಲ್ಪ ಜನರು ಗುಂಪುಗೂಡುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಪ್ರತಿಭಟನೆ ಮಾಡುವವರೇ ಬೇರೆ, ಗಲಾಟೆ ಮಾಡುವವರೇ ಬೇರೆ.

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ಇವರುಗಳು ಗುಂಪು ಸೇರಿದಾಗ, ಪೊಲೀಸಿನವರು ಹೋಗಿ ಅವರನ್ನು ಸುತ್ತುವರಿಯುತ್ತಾರೆ. 'ನಿಮ್ಮನ್ನು ಮುಂದಕ್ಕೆ ಬಿಡುವುದಿಲ್ಲ, ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ವಾಪಸ್ಸು ಹೋಗಿ' ಎಂದು ಪೊಲೀಸಿನವರು ಹೇಳಿದಾಗ, ಘೋಷಣೆಗಳನ್ನು ಕೂಗುತ್ತಾ ಅವರೆಲ್ಲರೂ ಚದುರಿದರು. ಅವರುಗಳು ಹೋಗಿದ್ದಾರೆಂದು ತಿಳಿದುಕೊಂಡರೆ, ಕೆಲವು ಗಲ್ಲಿಗಳಲ್ಲಿ ಕಲ್ಲು ಎಸೆದು ಈ ಅವಸ್ಥೆ ಮಾಡಿ ಹೋಗಿದ್ದಾರೆ. ತಕ್ಷಣವೇ ಪೊಲೀಸಿನವರು ಘಟನಾ ಸ್ಥಳಕ್ಕೆ ಧಾವಿಸಿ, ಸುಮಾರು 38 ಜನರನ್ನು ಅರೆಸ್ಟ್ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಕ್ಯಾಂಪ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಧರ್ಮವೀರ ಸಂಬಾಜಿ ವೃತ್ತದಲ್ಲಿ, ಮಾರ್ಕೆಟ್ ಠಾಣಾ ವ್ಯಾಪ್ತಿಯ ಕಲ್ಮಠ ರೋಡ್ ಯಾತ್ರಿ ನಿವಾಸ್ ಹತ್ತಿರ ಈ ಕೃತ್ಯ ನಡೆದಿದೆ. ಇದೇ ರೀತಿಯಲ್ಲಿ ತಿಲಕವಾಡಿ ಪೊಲೀಸ್ ಠಾಣಾ ವ್ಯಾಪ್ತಿಯ ಅಂಬೇಡ್ಕರ್ ನಗರದಲ್ಲಿ ನಡೆದಿದೆ. ಖಡೇಬಜಾರ್ ಪೊಲೀಸ್ ಠಾಣಾ ವ್ಯಾಪ್ತಿಗೆ ಬರುವ ಹೋಟೆಲ್ ಅನುಪಮದಲ್ಲಿ, ಧರ್ಮವೀರ ಸಂಬಾಜೀ ವೃತ್ತದಲ್ಲಿ ಮತ್ತು ಬಾಪಟ್ ಗಲ್ಲಿಯಲ್ಲಿ ಇರುವ ಶಾಂತಿ ಗ್ರ್ಯಾಂಡ್ ಹೋಟೆಲ್‌ನ ಹತ್ತಿರ ಗಲಾಟೆಗಳು ನಡೆದಿವೆ. ನಾಮಫಲಕ ಕೀಳುವುದು, ಕಲ್ಲು ಹೊಡೆಯುವುದು ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಕಲ್ಲು ಹೊಡೆದು ವಿರೂಪಗೊಳಿಸುವಂತಹ ಕೃತ್ಯಗಳು ನಡೆದಿವೆ. ಈ ಕೃತ್ಯದಲ್ಲಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಭಾಗಿಯಾಗಿರುವವರ ಮೇಲೆ ಯಾವ ಕಲಂ ಅಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡಬೇಕು ಆ ಕಲಂಗಳ ಅಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಸುಮಾರು 38 ಜನರನ್ನು ಅರೆಸ್ಟ್ ಮಾಡಲಾಗಿದೆ. ಇನ್ನೂ ಬಹಳ ಜನರನ್ನು ಬಂಧಿಸಬೇಕಾಗಿದೆ. ಕೆಲವರು ತಲೆ ಮರಿಸಿಕೊಂಡಿದ್ದಾರೆ. ಅವರನ್ನು ಸಹ ಬಂಧಿಸುತ್ತೇವೆ. ಯಾರನ್ನೂ ಬಿಡುವಂತಹ ಪ್ರಶ್ನೆಯೇ ಇಲ್ಲ. ಇದು ಮರಾಠರ ಮತ್ತು ಕನ್ನಡಿಗರ ನಡುವೆ ನಡೆಯುವಂತಹ ಸಂಘರ್ಷವಲ್ಲ, ಕರ್ನಾಟಕ ಮತ್ತು ಮಹಾರಾಷ್ಟ್ರಗಳ ನಡುವೆ ನಡೆಯುವಂತಹ ಸಂಘರ್ಷವಲ್ಲ. ಕೆಲವು ಪುಂಡರು, ಕೆಲವು ದುಷ್ಟ ಶಕ್ತಿಗಳು ಚೇಷ್ಟೆಗೋಸ್ಕರ ಈ ಕೆಲಸವನ್ನು ಮಾಡಿದ್ದಾರೆ. ಈಗ ಎಂ.ಇ.ಎಸ್. ಎಲ್ಲಿ ಅಸ್ತಿತ್ವದಲ್ಲಿದೆ? ಮಹಾನಗರಪಾಲಿಕೆಯ ಚುನಾವಣೆಯಲ್ಲಿ ಜನರು ಅವರನ್ನು ಎಲ್ಲಿಟ್ಟಿದ್ದಾರೆ? ಅವರ ಈ ದುಷ್ಟತನವನ್ನು ಕಂಡು ಸ್ವತಃ ಮರಾಠರೇ ಇವರನ್ನು ದೂರ ಇಟ್ಟಿದ್ದಾರೆ. ಜನರು ಇವರಿಂದ ರೋಸಿ ಹೋಗಿದ್ದಾರೆ. ನಾವೆಲ್ಲರೂ ಸೈದ್ಧಾಂತಿಕ ಹೋರಾಟ, ಸಂಘಟನೆ, ಪ್ರತಿಭಟನೆ ಇವೆಲ್ಲವುಗಳನ್ನು ಮಾಡಿಕೊಂಡು ಪಕ್ಷವನ್ನು ಕಟ್ಟಿದ್ದೇವೆ. ಒಂದು ಬಾರಿ ಬಂದು ಜನರನ್ನು ಭಾವನಾತ್ಮಕವಾಗಿ ಕೆರಳಿಸುವುದು ದುಷ್ಕರ್ಮಿಗಳಿಗೆ ಆಹಾರವಾಗಿದೆ. ಇದನ್ನೇ ಆಧಾರವಾಗಿಟ್ಟುಕೊಂಡು ಬೆಳೆಯುವಂತಹ ಪಕ್ಷಗಳು ಬಹಳ ದಿನ ಉಳಿಯುವುದಿಲ್ಲ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಇದೊಂದು ವ್ಯವಸ್ಥಿತ ಮತ್ತು ಸಂಘಟಿತ ಅಪರಾಧವಾಗಿದೆ. ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆ (ಕೋಕಾ) ಅಡಿಯಲ್ಲಿ ಅವರುಗಳ ಮೇಲೆ ಕೇಸ್ ರಿಜಿಸ್ಟರ್ ಮಾಡಿ ಜೈಲಿಗೆ ಕಳುಹಿಸಿದರೆ ಎಲ್ಲವೂ ತನ್ನಷ್ಟಕ್ಕೆ ತಾನೇ ಸರಿ ಹೋಗುತ್ತದೆ.

**ಶ್ರೀ ಆರಗ ಜ್ಞಾನೇಂದ್ರ:_** ಸನ್ಮಾನ್ಯ ಸಭಾಪತಿಯವರೇ, ಸಂಗೂಳ್ಳಿ ರಾಯಣ್ಣ ಮತ್ತು ಛತ್ರಪತಿ ಶಿವಾಜಿ ಅವರಂತಹ ಮಹನೀಯರನ್ನು ಒಂದು ಜಾತಿ ಅಥವಾ ಪ್ರಾಂತ್ಯದ ಚೌಕಟ್ಟಿನಲ್ಲಿ ಕಟ್ಟಿ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಇವರುಗಳು ಇಡೀ ದೇಶಕ್ಕೋಸ್ಕರವೇ ಪ್ರಾಣಾರ್ಪಣೆ ಮಾಡಿರುವಂತಹ ಮಹಾನ್ ವ್ಯಕ್ತಿಗಳಾಗಿದ್ದಾರೆ. ನಮ್ಮ ತಲತಲಾಂತರದವರೆಗೆ, ನಮ್ಮ ದೇಶದ ಅಸ್ತಿತ್ವ ಇರುವವರೆಗೆ ಇವರುಗಳು ಪ್ರಾತಃಸ್ಮರಣೀಯರಾಗಿದ್ದಾರೆ. ಅವರ ಪ್ರತಿಮೆಗಳನ್ನು ವಿರೂಪಗೊಳಿಸುವ ಕೃತ್ಯದ ಮೂಲಕ ಜನರನ್ನು ಭಾವನಾತ್ಮಕವಾಗಿ ಕೆರಳಿಸುವಂತಹ ಕೆಲಸಕ್ಕೆ ಇಳಿದಿದ್ದಾರೆ. ಇದು ಬಹಳ ಹೀನ ಕಾರ್ಯವಾಗಿದೆ. ಇದನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಅವರುಗಳು ಅಲ್ಲಿ ಗುಂಪುಗೂಡಿದಾಗ ಪೊಲೀಸರು ಆ ಸ್ಥಳದಲ್ಲಿಯೇ ಇದ್ದರು, ಆಗಲೇ ಅವರಿಗೆ ನಾಲ್ಕು ಬಾರಿಸಬೇಕಾಗಿತ್ತು.

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ನಾವು ಬೆಳಗಾವಿಯಲ್ಲಿ ಇಷ್ಟೊಂದು ದೊಡ್ಡ ಭವನವನ್ನು ಕಟ್ಟಿ, ಬಹಳ ದೊಡ್ಡ ಮೊತ್ತದ ಹಣವನ್ನು ವೆಚ್ಚ ಮಾಡಿ ಇಲ್ಲಿ ಅಧಿವೇಶನವನ್ನು ನಡೆಸುತ್ತಿದ್ದೇವೆ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಇದು ಗಡಿಭಾಗವಾಗಿದೆ, ಈ ಭಾಗ ನಿರ್ಲಕ್ಷ್ಯಕ್ಕೆ ಒಳಗಾಗಬಾರದು. ಜನರಲ್ಲಿ ಅಸಹಾಯಕಸ್ಥಿತಿ ಕಾಡಬಾರದು. ಕರ್ನಾಟಕ ಸರ್ಕಾರ ನಮ್ಮನ್ನು ಮರೆತಿದೆ ಎನ್ನುವ ಭಾವನೆ ಉಂಟಾಗಬಾರದು. ರಾಜ್ಯದ ರಾಜಧಾನಿ ಬಹಳ ದೂರವಿದೆ. ಬೆಂಗಳೂರಿನವರಿಗೆ ನಮ್ಮ ಕಷ್ಟವನ್ನು ಆಲಿಸುವುದಕ್ಕೆ ಕಿವಿ ಇಲ್ಲವೆಂದು ಇಲ್ಲಿನ ಜನರು ಭಾವಿಸಬಾರದೆಂದು ಇಷ್ಟು ದೊಡ್ಡ ಸೌಧವನ್ನು ಇಲ್ಲಿ ಕಟ್ಟಿ, ವರ್ಷದಲ್ಲಿ ಸ್ವಲ್ಪ ದಿನವಾದರೂ ಇಲ್ಲಿ ವಿಧಾನಮಂಡಲದ ಅಧಿವೇಶನವನ್ನು ನಡೆಸುತ್ತಿದ್ದೇವೆ. ಅಧಿವೇಶನ ನಡೆಸುವಂತಹ ಸಂದರ್ಭದಲ್ಲಿ ಅನೇಕರು ಬಂದು ಇಲ್ಲಿ ಪ್ರತಿಭಟನೆಗಳನ್ನು ಮಾಡುತ್ತಿರುತ್ತಾರೆ. ಬೆಳಗಾವಿಯಲ್ಲಿ ಅಧಿವೇಶನ ನಡೆಯುವಾಗಲೆಲ್ಲ ಆ ಅಧಿವೇಶನ "ಸ್ಟ್ರೈಕ್ ಅಧಿವೇಶನ" ವಾಗುತ್ತಿದೆ. ಇಲ್ಲಿನ ಜನರು ಬೆಂಗಳೂರಿಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಏನೇನೋ ಕಷ್ಟ ಕಾರ್ಪಣ್ಯಗಳಿವೆ, ಅಹವಾಲುಗಳಿವೆ. ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಇಡೀ ಸರ್ಕಾರವೇ ಇಲ್ಲಿಗೆ ಬರುವುದರಿಂದ ಸರ್ಕಾರದ ಜೊತೆಗೆ ಸಂವಾದ ನಡೆಸುವುದಕ್ಕೆ ಅವರಿಗೊಂದು ಅವಕಾಶವಾಗಿದೆ. ಯಾವ ಸಚಿವರ ಖಾತೆಗೆ ಸಂಬಂಧಪಟ್ಟ ವಿಚಾರದ ಬಗ್ಗೆ ಪ್ರತಿಭಟನೆ ನಡೆಯುತ್ತದೆ ಆ ಸಚಿವರು ಅಲ್ಲಿಗೆ ಹೋಗಿ ಅವರನ್ನು ಮಾತನಾಡಿಸಿ ಅವರಿಗೆ ಸಮಾಧಾನ ಹೇಳಿ ಬರುತ್ತೇವೆ. ಸರ್ಕಾರ ಯಾವತ್ತಿಗೂ ಈ ಭಾಗವನ್ನು ನಿರ್ಲಕ್ಷಿಸಿಲ್ಲ. ಈ ಭಾಗದಲ್ಲಿ ಆಗಿರುವ ರಸ್ತೆಗಳನ್ನು ನೋಡಿದರೆ, ಹಿಂದೆ ಯಾವ ರೀತಿ ಇತ್ತು ಈಗ ಹೇಗಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಬಹಳ ದೊಡ್ಡ ಬದಲಾವಣೆಯಾಗಿದೆ. ಇಲ್ಲಿನ ಅಭಿವೃದ್ಧಿಗಾಗಿ ಸಾವಿರಾರು ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದೇವೆ. ಜನರು ದುಡಿದು ತೆರಿಗೆಯನ್ನು ಪಾವತಿ ಮಾಡುತ್ತಿದ್ದಾರೆ. ಇಡೀ ಬೆಳಗಾವಿ ನಗರದಲ್ಲಿ ಸುತ್ತಾಡಿ ನೋಡಿದರೆ, ಇಲ್ಲಿ ಕನ್ನಡಿಗರು ಮತ್ತು ಮರಾಠರು ಎನ್ನುವ ಬೇಧಭಾವವೇ ಇಲ್ಲ. ಅವರುಗಳು ಒಟ್ಟಾಗಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಅವರುಗಳನ್ನು ಒಡೆದು, ಭಾವನಾತ್ಮಕವಾಗಿ ಕೆರಳಿಸಿ ಅವರುಗಳ ನಡುವೆ ಇರುವಂತಹ ಸಂಬಂಧವನ್ನು ಹಾಳು ಮಾಡಿ ಅವರುಗಳ ಬದುಕಿನಲ್ಲಿ ಅಡ್ಡ ಗೋಡೆಯನ್ನು ನಿರ್ಮಾಣ ಮಾಡುವಂತಹ ಕೆಲಸ ಬಹಳ ವರ್ಷಗಳಿಂದ ನಡೆಯುತ್ತಿದೆ. ಇಷ್ಟು ವರ್ಷಗಳ ಕಾಲ ಮಹಾಮೇಳಕ್ಕೆ ಮಹಾರಾಷ್ಟ್ರ ರಾಜ್ಯದ ಮಂತ್ರಿಗಳು ಬರುತ್ತಿದ್ದರು. ಈ ಬಾರಿ ಅವರನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಗಡಿಯಲ್ಲಿಯೇ ತಡೆದು ಬೆಳಗಾವಿಯೊಳಗೆ ಕಾಲಿಡುವುದಕ್ಕೆ ನಿಮ್ಮನ್ನು ಬಿಡುವುದಿಲ್ಲವೆಂದು ನಮ್ಮ ಪೊಲೀಸಿನವರು ವಾಪಸ್ಸು ಕಳುಹಿಸಿಕೊಟ್ಟಿದ್ದಾರೆ. ಆ ಮಹಾಮೇಳಕ್ಕೆ ಯಾರೋ ಬಂದು ಅಲ್ಲಿ ಭಾಷಣ ಮಾಡಿ ಹೋಗಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನೆಲ, ಜಲ ಮತ್ತು ಬಾಷೆಯ ಬಗ್ಗೆ ಈ ಸರ್ಕಾರ ಒಟ್ಟಾಗಿ ನಿಲ್ಲುತ್ತದೆ. ಯಾರು ಈ ಕೃತ್ಯವನ್ನು ಎಸಗಿದ್ದಾರೆ ಅವರ ಮೇಲೆ ಯಾವುದೇ ಮುಲಾಜು ಇಲ್ಲದೆ ಕ್ರಮವನ್ನು ತೆಗೆದುಕೊಂಡಿದ್ದೇವೆ ಅದೇ ರೀತಿಯಲ್ಲಿ ಮಹಾರಾಷ್ಟ್ರ ಸರ್ಕಾರದ ಜೊತೆಗೂ ನಮ್ಮ ಗೃಹ ಇಲಾಖೆಯ ಅಧಿಕಾರಿಗಳು ಈ ಘಟನೆಯ ಬಗ್ಗೆ ಮಾತುಕತೆ ನಡೆಸಿದ್ದಾರೆ. ಕೇಂದ್ರ ಸರ್ಕಾರದ ಜೊತೆಗೂ ಮಾತನಾಡಿದ್ದೇವೆ. ಈಗ ಯಾವುದೇ ಆತಂಕದ ಪರಿಸ್ಥಿತಿ ಇಲ್ಲ. ನಿನ್ನೆ ಈ ಘಟನೆ ನಡೆದಂತಹ ಸಂರ್ಭದಲ್ಲಿ ನಾನು ಸದಾ ನಮ್ಮ ಹಿರಿಯ ಪೊಲೀಸ್ ಅಧಿಕಾರಿಗಳ ಸಂಪರ್ಕದಲ್ಲಿದ್ದೆ. ಅವರು ಘಟನೆಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ನೀಡುತ್ತಲೇ ಇದ್ದರು. 'ಅಮಾಯಕರನ್ನು ಹಿಡಿದು ಹಿಂಸೆ ಕೊಡಬೇಡಿ, ಯಾರು ಈ ಕೃತ್ಯದಲ್ಲಿ ಭಾಗಿಗಳಾಗಿದ್ದಾರೆ ಅವರನ್ನು ಬಿಡಬೇಡಿ' ಎಂದು ನಾನು ಹೇಳಿದ್ದೆ. ಅವರಿಗೆ ಜೀವನದಲ್ಲಿ ಇದೊಂದು ದೊಡ್ಡ ಪಾಠವಾಗಿ ಪರಿಗಣಿಸಬೇಕು. ಅವರುಗಳಿಗೆ ಪಾಠ ಕಲಿಸುವಂತಹ ಕೆಲಸವನ್ನು ನಮ್ಮ ಪೊಲೀಸರು ಮಾಡಿದ್ದಾರೆ, ಇನ್ನೂ ಕಾರ್ಯಾಚರಣೆ ಮುಂದುವರಿದಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಭಾರತ ದೇಶ ವಿವಿಧತೆಯಲ್ಲಿ ಏಕತೆಯನ್ನು ಕಾಣುವಂತಹ ದೇಶವಾಗಿದೆ. ವಿಭಿನ್ನ ವೇಷ, ಭಾಷೆ ಮತ್ತು ಧರ್ಮಗಳನ್ನು ಅನುಸರಿಸುತ್ತಿದ್ದರೂ ಸಹ ಒಂದು ರಾಷ್ಟ್ರವಾಗಿ, ಒಂದು ವ್ಯಕ್ತಿಯ ರೀತಿಯಲ್ಲಿ ಎದ್ದು ನಿಂತಿದ್ದೇವೆ. ಇದಕ್ಕೆ ಹುಳಿ ಹಿಂಡುವ ಕೆಲಸಗಳನ್ನು ಮಾಡುತ್ತಿರುವ ದುಷ್ಟಶಕ್ತಿಗಳನ್ನು ಯಾರೂ ಸಹಿಸಿಕೊಳ್ಳಬಾರದು. ಇದರಲ್ಲಿ ಯಾವುದೇ ರೀತಿಯ ರಾಜಕಾರಣವಿಲ್ಲ. ರಾಜಕೀಯವನ್ನು ಮೀರಿ ನಾವು ಆಲೋಚನೆ ಮಾಡಬೇಕಾಗುತ್ತದೆ. ಈ ಪ್ರಕರಣದ ಬಗ್ಗೆ ಮಾತನಾಡಿದಂತಹ ಎಲ್ಲ ಮಾನ್ಯ ಸದಸ್ಯರುಗಳು ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ಈ ದುಷ್ಕೃತ್ಯವನ್ನು ಎಸಗಿದಂತಹವರನ್ನು ಕಾಪಾಡುವ ಅಥವಾ ತಪ್ಪಿಸಿಕೊಳ್ಳುವುದಕ್ಕೆ ಬಿಡುವಂತಹ ಕೆಲಸವನ್ನು ಮಾಡುವುದಿಲ್ಲ. ರಾಷ್ಟ್ರದ ಮಹನೀಯರ ಪ್ರತಿಮೆಯನ್ನು ವಿರೂಪಗೊಳಿಸಿರುವುದರ ಬಗ್ಗೆ ಜನರು ಕೆರಳುವಂತಹ ಅವಶ್ಯಕತೆ ಇಲ್ಲ. ನಾಳೆ ಏನಾಗುತ್ತದೆಯೋ ಎನ್ನುವಂತಹ ಭಯ ಬೇಡ. ನಾವೆಲ್ಲರೂ ನಿಮ್ಮ ಜೊತೆಗೆ ಇದ್ದೇವೆ. ಇಂತಹ ದುಷ್ಟಶಕ್ತಿಗಳು ತಲೆ ಎತ್ತದಂತೆ ಮಾಡುತ್ತೇವೆ. ಆಕಸ್ಮಿಕವಾಗಿ ಈ ಪ್ರಕರಣ ನಡೆದಿದೆ. ಕರ್ನಾಟಕ ರಾಜ್ಯದ ಪೊಲೀಸ್ ವ್ಯವಸ್ಥೆ ಇಡೀ ದೇಶದಲ್ಲಿಯೇ ಅತ್ಯುತ್ತಮವಾಗಿರುವ ಪೊಲೀಸ್ ವ್ಯವಸ್ಥೆಯಾಗಿದೆ. ಉತ್ತಮ ಅಧಿಕಾರಿಗಳಿದ್ದಾರೆ. ಯಾರು ಏನೇ ಕೃತ್ಯ ಎಸಗಿ ಹೋದರೂ ಸಹ ಅವರು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ತಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಹಾರಾಷ್ಟ್ರದಲ್ಲಿ ಕನ್ನಡಿಗರಿದ್ದಾರೆ. ಕರ್ನಾಟಕದಲ್ಲಿ ಮರಾಠಿಗರು ಇದ್ದಾರೆ. ನಾವೆಲ್ಲರೂ ಒಂದೇ ಕುಟುಂಬದ ರೀತಿಯಲ್ಲಿ ಇದ್ದೇವೆ.

(ಮುಂದುವರಿದಿದೆ)

(1183) 5.50 20.12.2021 ಪಿಕೆ:ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅರಗ ಜ್ಞಾನೇಂದ್ರ** (ಮುಂದು)

ಒಂದೇ ಪ್ರದೇಶದಲ್ಲಿ ಎಲ್ಲರೂ ಬದುಕನ್ನು ಕಟ್ಟಿಕೊಂಡಿದ್ದಾರೆ. ಹಾಗಾಗಿ ಈ ರೀತಿಯ ಕೃತ್ಯದಿಂದಾಗಿ ಮನಸಿಗೆ ಘಾಸಿ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಈಗ ಪರಿಸ್ಥಿತಿ ತಿಳಿಯಾಗಿದೆ. ಇನ್ನು ಕೇರಳುವ ಪ್ರಶ್ನೆಯೇ ಇಲ್ಲ. ಆತಂತಕದ ಪರಿಸ್ಥಿತಿ ಬೇಡ. ನಮ್ಮ ಪೊಲೀಸ್ ಇಲಾಖೆ ಸರ್ವ ಸನ್ನದ್ಧವಾಗಿದೆ. 24 X 7 ಅವರ ಕೆಲಸವನ್ನು ಮಾಡುತ್ತಿದ್ದಾರೆ. ನಾನು ಮೊನ್ನೆ ದಿನ ಮಿಡೀಯಾದಲ್ಲಿ ಹೇಳಿದೆ. ಸುಮಾರು 7-8 ಸಾವಿರ ಪೊಲೀಸರನ್ನು ಇಲ್ಲಿ ನಿಯುಕ್ತಿ ಮಾಡಿದ್ದೇವೆ. ಯಾರೇ ಸ್ಟ್ರೈಕ್ ಮಾಡಲಿ, ಅದನ್ನು ತಡೆಯವುದೇ ಅಲ್ಲ; ಅದರಲ್ಲಿ ಭಾಗವಹಿಸುವವರ ರಕ್ಷಣೆ ಕೂಡ ಮಾಡಬೇಕಾಗಿದೆ. ಅವರಿಗೆ ಒಳ್ಳೆಯದನ್ನು ಮಾಡಬೇಕಾಗಿದೆ. ಹಾಗೆಯೇ, ನಗರದ ಬಳಗಡೆ ಇಂತಹ ಪ್ರಚೋದನೆಗಳು ಬಹಳ ವರ್ಷಗಳಿಂದ ಆಗುತ್ತಿದೆ. ಬಿಜೆಪಿ ಸರ್ಕಾರ ಬಂದಮೇಲೆ ಎಂದಲ್ಲ, ಕಾಂಗ್ರೆಸ್ ಸರ್ಕಾರ ಇರುವಾಗಲ್ಲ, ಸಮ್ಮಿಶ್ರ ಸರ್ಕಾರ ಇದ್ದಾಗ ಅಲ್ಲ ಅಥವಾ ದಳದ ಸರ್ಕಾರ ಇದ್ದಾಗ ಆಗಿದೆ ಎಂದು ಹೇಳುವಂಥದ್ದಲ್ಲ. ಅವರು ತಮ್ಮ ಅಸ್ತಿತ್ವವನ್ನು ತೋರಿಸಿಕೊಳ್ಳುವುದಕ್ಕೆ ಅವಕಾಶ ಅಷ್ಟೇ. ಹಾಗೆ ಮಾಡದೇ ಇದ್ದರೆ ಆ ಸಂಘಟನೆ ಸತ್ತು ಹೋಗುತ್ತದೆ. ಹಾಗಾಗಿ, ಆ ಸಂಘಟನೆ ಬದುಕಿದೆ ಎಂದು ತಿಳಿಸಲು ವರ್ಷಕ್ಕೊಂದು ಸಲ ತೋರಿಸಿಕೊಳ್ಳಬೇಕೆಂದು ಈ ರೀತಿ ಮಾಡುತ್ತಾರೆ. ಧ್ವಜ ಸುಡುವಂಥದ್ದು ಇದೊಂದು ಅನಾಗರಿಕ ಕೃತ್ಯವಾಗಿದೆ. ಮಾನಸಿಕ ವಿಕೃತರು ಮಾಡುವಂತಹ ಕೆಲಸ ಇದಾಗಿದೆ. ಇದನ್ನು ಯಾರೂ ಕೂಡ ಸಹಿಸುವುದಿಲ್ಲ. ಮಹಾರಾಷ್ಟ್ರ ಸರ್ಕಾರವು ಸಹಿಸುವುದಿಲ್ಲ, ನಮ್ಮ ಸರ್ಕಾರವೂ ಸಹಿಸುವುದಿಲ್ಲ ಮತ್ತು ಕೇಂದ್ರ ಸರ್ಕಾರ ಕೂಡ ಸಹಿಸುವುದಿಲ್ಲ. ಯಾರೋ ಯಾರದ್ದೋ ಪ್ರಚೋದನೆಗೆ, ಯಾರನ್ನೋ ಕಳುಹಿಸಿದ್ದಾರೆಂದು ನಾನು ಭಾವಿಸುವುದಿಲ್ಲ. ಯಾರೋ ಕೆಲವು ವಿಕೃತ ಮನೋಭಾವದ ಪುಂಡರು ಈ ರೀತಿ ಮಾಡಿದ್ದಾರೆ. ಬೆಂಗಳೂರಿನಲ್ಲಿ ಶಿವಾಜಿಯ ಪ್ರತಿಮೆಗೆ ಬಣ್ಣ ಹಚ್ಚಿದ್ದಾರೆ. ಇಂಥದನ್ನು ನಾವು ಹೇಳಿಕೊಡುವುದಿಲ್ಲ; ನೀವೂ ಹೇಳಿಕೊಡುವುದಿಲ್ಲ. ಇಂಥದ್ದನ್ನು ಯಾರು ಹೇಳಿ ಕೊಡುತ್ತಾರೇ? ಇಂಥದ್ದನ್ನು ಏಕೆ ಮಾಡಬೇಕು? ನಮ್ಮವರಿಗೆ ನಾವು ಬುದ್ಧಿ ಹೇಳಬೇಕೇ? ಹೀಗೆ ಮಾಡಿದ ಕೂಡಲೇ ಏನು ಸಂಪಾದನೆ ಆಗುತ್ತದೆ? ಸರ್ಕಾರಿ ವಾಹನಗಳಿಗೆ ಬೆಂಕಿ ಹಚ್ಚುವ ಪ್ರಯತ್ನ, ಕಲ್ಲು ಹೊಡೆಯುವಂತಹ ಪ್ರಯತ್ನ ಮಾಡಿದವರು ತಕ್ಕ ಶಿಕ್ಷೆಯನ್ನು ಅನುಭವಿಸುತ್ತಾರೆ. ಪೊಲೀಸರ ವಾಹನಗಳಿಗೂ ಕಲ್ಲು ಎಸೆದಿದ್ದಾರೆ. ಅದರ ನಷ್ಟವನ್ನು ಯಾರು ಭರಿಸಿ ಕೊಡಬೇಕು? ಈ ರಾಜ್ಯದಲ್ಲಿ

ಈ ಅಥವಾ ರಾಷ್ಟ್ರದಲ್ಲಿ ಇದೇರೀತಿ ಮನಸೋ ಇಚ್ಛೆ ಬದುಕಬಹುದು ಎಂದು ಏನು ತಿಳಿದುಕೊಂಡಿದ್ದಾರೋ ಅದಕ್ಕೆ ಅವಕಾಶ ಕೊಡುವುದಿಲ್ಲ. ಎಲ್ಲದಕ್ಕೂ ಕೂಡ ಸರ್ಕಾರ ಸನ್ನದ್ಧವಾಗಿದೆ. ಇಂಥವರು ಮತ್ತೆ ತಲೆ ಎತ್ತುವುದಕ್ಕೆ ಬಿಡುವುದಿಲ್ಲ. ಯಾರಿಗೂ ಆತಂಕದ ಪಡುವ ಅವಶ್ಯಕತೆ ಇಲ್ಲ. ಮಾನ್ಯ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಇದನ್ನು ತಡೆದು ನಿಲ್ಲಿಸುತ್ತದೆ ಎಂದು ಜನರಿಗೆ ಆಶ್ವಾಸನೆಯನ್ನು ಕೊಡುತ್ತಿದ್ದೇವೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕು ಮತ್ತು ತಾವು ಮಾತನಾಡಿದ ರೀತಿಯಿಂದ ನಮ್ಮ ಹೃದಯ ತುಂಬಿ ಬಂತು. ಇವತ್ತು ಇಲ್ಲಿ ಮಾತನಾಡಿದ ಯಾರಲ್ಲೂ ಯಾವುದೇ ರೀತಿಯ ರಾಜಕೀಯ ಕಲ್ಮಶ ಇರಲಿಲ್ಲ. ನಮ್ಮ ರಾಜ್ಯ ಏನು ಸಂದೇಶ ಕಳುಹಿಸಬೇಕೋ ಆ ಸಂದೇಶವನ್ನು ಕಳುಹಿಸಿದ್ದೇವೆ. ಈ ಕುರಿತು ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಈ ಸಂದರ್ಭದಲ್ಲ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಅ.ದೇವೇಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಹಿರಿಯ ಸದಸ್ಯರು ಒಬ್ಬರು ಮಾತನಾಡಿದ್ದು ನೋಡಿ ಒಂದು ರೀತಿ ಬೇಜಾರಾಗಿದೆ. ಅಸಹಾಯಕತೆಯಿಂದ ಮಾತನಾಡುತ್ತಿದ್ದಾರೆ. ಮಹಾರಾಷ್ಟ್ರ ಎಂದರೆ, ಪಾಕಿಸ್ತಾನ ಅಥವಾ ಚೈನಾ ಎಂದು ಕೊಂಡಿದ್ದಾರೋ ಗೊತ್ತಿಲ್ಲ.

**ಸಭಾಪತಿಯವರು:-** ಮಾನ್ಯ ದೇವೇಗೌಡರೇ, ಮಾನ್ಯ ಸಚಿವರು ಕೊಟ್ಟ ಉತ್ತರದ ಮೇಲೆ ಕ್ಲ್ಯಾರಿಫಿಕೇಷನ್ ಕೇಳಿ. ನನ್ನ ಕಡೆ ಮುಖ ಮಾಡಿ ಮಾತನಾಡಿ.

**ಶ್ರೀ ಅ.ದೇವೇಗೌಡ**:- ಮಾನ್ಯ ಸಭಾಪತಿಗಳೆ, ಪ್ರತಿಮೆಗಳನ್ನು ಸೌಧದ ಒಳಗೆ ಇಟ್ಟುಕೊಳ್ಳಿ, ಮ್ಯೂಸಿಯಂನಲ್ಲಿ ಇಟ್ಟುಕೊಳ್ಳಿ ಎಂದು ಹೇಳುವುದು ನಾಚಿಕೆಯ ವಿಚಾರವಾಗಿದೆ. ಸ್ವತಂತ್ರ ಸಂಗ್ರಾಮದಲ್ಲಿ ಹೋರಾಟ ನಡೆಸಿದ ಸಂಗೊಳ್ಳಿ ರಾಯಣ್ಣ ಇರಬಹುದು ಅಥವಾ ಛತ್ರಪತಿ ಶಿವಾಜಿ ಮಹಾರಾಜ್ ಇರಬಹುದು; ಅವರೆಲ್ಲಾ ನಮ್ಮವರು. ಅವರನ್ನು ಸುವರ್ಣದಲ್ಲಿ ಇಟ್ಟುಕೊಳ್ಳಿ, ಮ್ಯೂಸಿಯಂನಲ್ಲಿ ಇಟ್ಟುಕೊಳ್ಳಿ ಎಂದು ಹೇಳುವುದು ದುಃಖಕರವಾದ ವಿಷಯವಾಗಿದೆ. ಇವರು, ನಾವೆಲ್ಲಿದ್ದೇವೆ ಎಂದು ತಿಳಿದುಕೊಂಡಿದ್ದಾರೆ? ಬೆಳಗಾವಿಗೆ ಬಂದಾಗಿನಿಂದ ನೋಡುತ್ತಿದ್ದೇನೆ ನನಗೆ ಬಹಳ ಬೇಜಾರಾಗುತ್ತಿದೆ. ರೂ. 400 ಕೋಟಿ ಖರ್ಚು ಮಾಡಿ ಸುವರ್ಣ ಸೌಧವನ್ನು ಕಟ್ಟಿದ್ದೇವೆ. ಬೆಳಗಾವಿಯಲ್ಲಿ ಅನೇಕ ದೊಡ್ಡ ನಾಯಕರಿದ್ದಾರೆ; ಅವರ ಜೊತೆ ಚರ್ಚೆ ಮಾಡಿ, ಮುಂದೆ ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದು ಹಿರಿಯ ಸದಸ್ಯರೊಬ್ಬರು ಹೇಳಿದರು. ನಾನು ಇಳಿದುಕೊಂಡಿರುವ ಹೊಟೇಲ್‌ನಲ್ಲಿ ಯಾರೂ ಕನ್ನಡವನ್ನೇ ಮಾತನಾಡುವುದಿಲ್ಲ. ನಾವು ಎಲ್ಲಿದ್ದೇವೆ? ನಾವು ಕರ್ನಾಟಕದಲ್ಲಿದ್ದೇವೆಯೋ ಅಥವಾ ಮಹಾರಾಷ್ಟ್ರ ರಾಜ್ಯದಲ್ಲಿದ್ದೇವೆಯೋ? ಮಹಾರಾಷ್ಟ್ರದವರು ಚೈನಾದವರಲ್ಲಅಥವಾ ಪಾಕಿಸ್ಥಾನದವರಲ್ಲ. ಅವರೆಲ್ಲಾ ನಮ್ಮವರೇ ಆಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಕ್ಲ್ಯಾರಿಫಿಕೇಷನ್ ಕೇಳಿ.

**ಶ್ರೀ ಅ.ದೇವೇಗೌಡ**:- ಇನ್ನು ಮುಂದೆ ಅಂತಹ ಹೊಟೇಲ್‌ಗಳನ್ನು ಬುಕ್ ಮಾಡಬಾರದು. ಕನ್ನಡ ಮಾತನಾಡುವ ಹೊಟೇಲ್‌ಗಳನ್ನು ಮಾತ್ರ ಬುಕ್ ಮಾಡಬೇಕು.

**ಸಭಾಪತಿಯವರು**:- ಮಂತ್ರಿಗಳು ಹೇಳಿರುವ ಉತ್ತರದ ಮೇಲೆ ನೀವು ಕ್ಲ್ಯಾರಿಫಿಕೇಷನ್ ಕೇಳಿ. ಭಾಷಣ ಮಾಡಬೇಡಿ.

**ಶ್ರೀ ಅ.ದೇವೇಗೌಡ**:- ಮಾನ್ಯ ಸಭಾಪತಿಗಳೆ, ಪುಂಡಾಟಿಕೆ ಮಾಡಿದವರಿಗೆ ಕಠಿಣ ಶಿಕ್ಷೆಗೆ ಒಳಪಡಿಸಬೇಕು, ಗಡಿ ಪಾರು ಮಾಡಬೇಕೆಂದು ನನ್ನ ವಿನಂತಿ. ಕರ್ನಾಟಕದಲ್ಲಿ ಈ ರೀತಿ ನಡೆಯುತ್ತಿರುವುದು ದುಃಖದ ಪರಿಸ್ಥಿತಿ ಆಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ನಿಮಗೇ ಆದರೂ ಅನುಮಾನ ಇದ್ದರೆ ಕೇಳಿ.

**ಶ್ರೀ ಅ.ದೇವೇಗೌಡ:-** ಮಾನ್ಯ ಸಭಾಪತಿಗಳೆ, ಇನ್ನು ಮುಂದಿನ ದಿನಗಳಲ್ಲಿ ಇಂತಹ ಘಟನೆ ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕನ್ನಡಿಗರಿಗೆ ಮೊದಲನೇ ಆದ್ಯತೆ ಕೊಡಬೇಕು. ಕನ್ನಡವನ್ನು ಬಹಳ ಉದಾಸಿನ ಮಾಡಿದ್ದಾರೆ ಎನ್ನುವುದು ನನ್ನ ಅನಿಸಿಕೆ. ಮುಂದಿನ ದಿನಗಳಲ್ಲಿ ಅಂತಹ ಹೊಟೇಲ್‌ಗಳನ್ನು ಬುಕ್ ಮಾಡಬಾರದು ಎಂದು ಹೇಳಬಯಸುತ್ತೇನೆ.

**ಶ್ರೀ ಎಸ್.ರುದ್ರೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಗೃಹ ಮಂತ್ರಿಗಳು ಎಲ್ಲಾ ವಿಷಯಗಳನ್ನು ಸವಿಸ್ತಾರವಾಗಿ ಸದನದಲ್ಲಿ ತಿಳಿಸಿದ್ದಾರೆ. ಈಗಾಗಲೇ ಸುಮಾರು 17 ಜನ ಗೌರವಾನ್ವಿತ ಸದಸ್ಯರು ಪಕ್ಷಾತೀತವಾಗಿ ಭಾಷೆ ಮತ್ತು ರಾಜ್ಯದ ಗಡಿ ಭಾಗದ ಮೇಲಿರುವ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಗೃಹ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ನಮ್ಮಗಳಿಗೆ ಅರ್ಥ ಆಗುವಂತಹ ವಿಷಯ ಇದೆ; ಅದನ್ನು ನಾನು ಒಪ್ಪುತ್ತೇನೆ. ಆದರೆ, ಇವತ್ತು ರಾಜ್ಯಾದ್ಯಂತ ಕಂಡು ಬರುತ್ತಿರುವ ಸಮಸ್ಯೆಯ ವಿರುದ್ಧ ಸಾಮಾನ್ಯ ವ್ಯಕ್ತಿ ಎದ್ದು ನಿಂತಿದ್ದಾನೆ. ವಿಶೇಷವಾಗಿ ಇಡೀ ಸರ್ಕಾರವೇ ಬೆಳಗಾವಿಯಲ್ಲಿರುವ ಸಂದರ್ಭದಲ್ಲಿ, ಈ ಭಾಗದಲ್ಲೇ ಈ ರೀತಿ ವಿಕೃತ ಘಟನೆಗಳು ನಡೆಯುತ್ತಿವೆ ಎನ್ನುವುದರ ಬಗ್ಗೆ ಟಿವಿ ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಬಹುಶಃ ಬಹಳಷ್ಟು ಜನ ಹಿರಿಯ ಸದಸ್ಯರು ಅವರ ಮಾತುಗಳಲ್ಲಿ ಹೇಳಿದ ಹಾಗೆ, ಅಧಿವೇಶನ ನಡೆಸುವುದಕ್ಕೆ ಮುಂಚೆ ಒಂದಿಷ್ಟು ಮುಂಜಾಗರೂಕತೆ ಕ್ರಮ ಕೈಗೊಳ್ಳುವ ಅವಶ್ಯಕತೆ ಇತ್ತೇನೋ ಎಂದು ನಾನು ಹೇಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಇಷ್ಟಪಡುತ್ತೇನೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮತ್ತು ಛತ್ರಪತಿ ಶಿವಾಜಿ ಅಂಥವರು ರಾಷ್ಟ್ರದ ಪರವಾಗಿ ಹೋರಾಟ ಮಾಡಿದವರಾಗಿದ್ದು, ಇಂತಹ ಅಗ್ರಪಂಕ್ತಿಯಲ್ಲಿರುವವರನ್ನು ನಮ್ಮ ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ಆಗಬೇಕು. ವಿಗ್ರಹಗಳನ್ನು ಭಗ್ನಗೊಳಿಸಿ, ಇಡೀ ರಾಜ್ಯದಲ್ಲಿ ಒಂದು ರೀತಿಯ ಗಲಾಟೆ-ಗದ್ದಲಗಳನ್ನು ಮಾಡುವುದಕ್ಕೆ ಪ್ರಚೋದನೆ ನೀಡುವಂಥದ್ದು ಖಂಡನೀಯ. ನಮ್ಮ ರಾಜ್ಯದ ಗಡಿಗಳಲ್ಲೂ ಕೂಡ, ಅಂದರೆ ಕೇರಳ ರಾಜ್ಯ ಗಡಿಗಳಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುವಂತಹ ಪ್ರಯತ್ನ ನಡೆಯಿತು. ಸರ್ಕಾರ ಈ ಸಂದರ್ಭದಲ್ಲಿ, ಗಡಿಯ ರಕ್ಷಣೆ ಮತ್ತು ಭಾಷೆಯ ರಕ್ಷಣೆಗೆ ಹೆಚ್ಚಿನ ರಕ್ಷಣೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಗಲಾಟೆಯಂತರ ಘಟನೆಗಳು ಸರಣೀಕೃತವಾಗಿ ನಡೆಯುತ್ತಿದೆ. ಕನ್ನಡ ಧ್ವಜಕ್ಕೆ ಬೆಂಕಿ ಇಡುವುದರ ಮೂಲಕ ಪ್ರಾರಂಭವಾಗಿ ಛತ್ರಪತಿ ಶಿವಾಜಿ ಮಹಾರಾಜಯ ಪ್ರತಿಮೆಗೆ ಮಸಿ ಬಳಿಯುವುದು, ಸಂಗೊಳ್ಳಿ ರಾಯಣ್ಣನ ಪ್ರತಿಮೆ ವಿರೂಪಗೊಳಿಸುವುದು, ಬಸ್ಸಿಗೆ ಕಲ್ಲು ಹೊಡೆಯುವುದು ನಡೆಯುತ್ತಿದೆ. ಈಗ ಹೊಸದಾಗಿ ಬಂದಿರುವ ವಿಷಯ ಎಂದರೆ, ಖಾನಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಸವಣ್ಣನವರ ಪ್ರತಿಮೆಗೆ ಅವಮಾನ ಮಾಡಲಾಗಿದೆ. ಮಾನ್ಯ ಮಂತ್ರಿಗಳು ಮಾತನಾಡುತ್ತಾ, ನನಗೆ ಮಿನಿಟ್ ಟು ಮಿನಿಟ್ ಮೆಸೇಜ್ ಕಳುಹಿಸುತ್ತಿದ್ದಾರೆ ಎಂದು ಹೇಳಿದರು. ಈಗ ಆಗಿರುವ ಘಟನೆ ಬಗ್ಗೆ ತಮ್ಮ ಹೇಳಿಕೆಯಲ್ಲಿ ಪ್ರಸ್ತಾಪ ಮಾಡುತ್ತಾರೆ ಎಂದು ಭಾವಿಸಿದ್ದೆ. ಏಕೆಂದರೆ ಅವರೇ, ಮಿನಿಟ್ ಟು ಮಿನಿಟ್ ಮೆಸೇಜ್ ಬರುತ್ತಿದೆ ಎಂದು ಹೇಳಿದರು. ಅಂದರೆ ಅವರಿಗೆ ಆ ರೀತಿ ಮೆಸೇಜ್ ಬರುತ್ತಿಲ್ಲ ಎಂದು ಗೊತ್ತಾಗುತ್ತಿದೆ. ಛತ್ರಪತಿ ಶಿವಾಜಿ ಇರಬಹುದು, ಸಂಗೊಳ್ಳಿ ರಾಯಣ್ಣ ಇರಬಹುದು ಅಥವಾ ಬಸವಣ್ಣನವರಿರಬಹುದು, ಇವರಿಗೆ ಗಡಿಗಳ ಮೀತಿಯಿಲ್ಲ. ಇಡೀ ರಾಷ್ಟ್ರವೇ ಗೌರವಿಸುತ್ತದೆ. ಇಂತಹ ವ್ಯಕ್ತಿಗಳಿಗೆ ಅವಮಾನ ಮಾಡಿರುವಂಥದ್ದು ರಾಷ್ಟ್ರದ್ರೋಹದ ಕೆಲಸವಾಗಿದೆ. ಈ ಮಹಾನುಭಾವರ ಬಗ್ಗೆ ಮತ್ತು ಕನ್ನಡ ಧ್ವಜದ ಬಗ್ಗೆ ಅಗೌರವ ತೋರಿಸಿರುವಂಥದ್ದು ರಾಷ್ಟ್ರದ್ರೋಹಿಗಳ ಕೆಲಸವಾಗಿದೆ. ಇಂತಹ ಕೃತ್ಯಗಳನ್ನು ಸರಣಿಯಲ್ಲಿ ಮಾಡುತ್ತಿದ್ದಾರೆಂದರೆ ಅವರಿಗೆ ಸರ್ಕಾರದ ಭಯ ಇಲ್ಲ. "**ಯಥಾ ರಾಜ ತಥಾ ಪ್ರಜಾ**". ಯಾರು ಆಡಳಿತ ಮಾಡುತ್ತಿದ್ದಾರೋ ಅವರು ಬಿಗಿಯಾಗಿದ್ದಿದ್ದರೆ, ಸಂದೇಶವನ್ನು ಸ್ಪಷ್ಟವಾಗಿ ಕೊಟ್ಟಿದ್ದರೆ, ಮೊದಲನೆ ಘಟನೆ ಆದಾಗಲೇ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರೆ ಮುಂದಿನ ಘಟನೆಗಳು ನಡೆಯುತ್ತಿರಲಿಲ್ಲ. ಬಸವಣ್ಣನವರ ಪ್ರತಿಮೆಗೆ ಅವಮಾನ ಮಾಡುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ.

(ಮುಂದು)

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(1184) 20-12-2021 6.00 DS-AK

**ಶ್ರೀ ಎಸ್.ರವಿ(ಮುಂದು):-**

ಗೃಹ ಮಂತ್ರಿಗಳ ಒಳ್ಳೆತನ, ಡಿಜಿಪಿ ಯವರ ಒಳ್ಳೆತನ ಇಟ್ಟುಕೊಂಡು ಉಪ್ಪು ಖಾರ ಹಾಕಿಕೊಂಡು ನೆಕ್ಕಿಕೊಳ್ಳೋಣವೇ? ಈಗ ರಾಜ್ಯಕ್ಕೆ ಬೆಂಕಿ ಬೀಳುತ್ತಿದೆ. ಇವರಿಂದ ಸ್ಪಷ್ಟವಾದ ಸಂದೇಶ ಹೋಗಬೇಕಾಗಿತ್ತು. K.C.O.C.A (Karnataka Control of Organized Crime Act) ಕಾನೂನು ಇರುವುದು ಏಕೆ? ಇವರು ಸೆಕ್ಷನ್ ಹೇಳುವುದಕ್ಕೆ ಹೆದರುತ್ತಾರೆ. ಸುಪ್ರೀಂ ಕೋರ್ಟ್‌ನ ಆದೇಶ ಇದೆ, ಈಗ ನಾನು ಅದನ್ನು ಹೇಳುವುದಕ್ಕೆ ಬರುವುದಿಲ್ಲ. ಈಗ ಎಫ್.ಐ.ಆರ್. ಹಾಕಿದ್ದೇವೆ. ಸೆಕ್ಷನ್ ಅನ್ನು ಆಮೇಲೆ ಹೇಳುತ್ತೇವೆ ಎಂದು ಹೇಳುತ್ತಿದ್ದಾರೆ. Instant ಆಗಿ, ಈ ಗಂಟೆಯಲ್ಲಿ, ಈ ಘಳಿಗೆಯಲ್ಲಿ ನಾನೇನು ಕ್ರಮ ತೆಗೆದುಕೊಳ್ಳುತ್ತಿದ್ದೇನೆ, ಎಷ್ಟು ಜನರನ್ನು ಒದ್ದು ಒಳಗಡೆ ಹಾಕುತ್ತಿದ್ದೇನೆ, ತಲೆ ಬೋಳಿಸಿ ಮೆರವಣಿಗೆ ಮಾಡುತ್ತಿದ್ದೇನೆ ಎಂದು ಸಂದೇಶ ಕೊಡುವುದಕ್ಕಾಗುತ್ತಿಲ್ಲ. ಇವರು ದುರ್ಬಲರು, ದುರ್ಬಲರು ಆಡಳಿತ ಮಾಡುತ್ತಿರುವಂತಹ ಸಂದರ್ಭದಲ್ಲಿ ಇಂತಹದ್ದು ಸರಣಿಯಾಗಿ ನಡೆಯುತ್ತದೆ. ರಾಜ್ಯದಲ್ಲಿ ಅಶಾಂತಿ ಉಂಟಾಗಿದೆ. ಕಾನೂನು ಕೇಳಿಕೊಂಡು, ಇವರ ತತ್ವ ಸಿದ್ಧಾಂತವನ್ನು ಕೇಳಿಕೊಂಡು ಕುಳಿತರೆ ಆಗುವುದಿಲ್ಲ. ಕಿಡಿಗೇಡಿಗಳ ಮನಸ್ಸು, ಹೃದಯದಲ್ಲಿ ನಡುಕ ಉಂಟು ಮಾಡಬೇಕು. ಅವರು ಬಾವುಟದಿಂದ ಬಸವಣ್ಣನವರೆಗೂ ಕೃತ್ಯ ಮಾಡುವುದಕ್ಕೆ ಬಂದುಬಿಟ್ಟಿದ್ದಾರಲ್ಲಾ? ಇವರು ಏನು ಸಂದೇಶ ಕೊಡುತ್ತಾರೆ? ಇವರು ಹೇಗೆ ಆಡಳಿತ ನಡೆಸುತ್ತಾರೆ? ಈ ರಾಜ್ಯ ದುರ್ಬಲ ಗೃಹ ಮಂತ್ರಿಗಳಳನ್ನು ಹೊಂದಿದೆ ಎಂದು ನಾನು ನೇರವಾಗಿ ಹೇಳುತ್ತಿದ್ದೇನೆ. ಇವರ ಕೈಯಲ್ಲಿ ಸ್ಪಷ್ಟವಾದ ಸಂದೇಶ ಕೊಡುವುದಕ್ಕೆ ಸಾಧ್ಯವಾಗಿಲ್ಲವೆಂದರೆ ರಾಜೀನಾಮೆ ಕೊಟ್ಟು ಬೇರೆಯವರಿಗೆ ಅವಕಾಶ ಕೊಡಲಿ. ಯಾರಾದರೂ ಬಿಗಿಯಾದವರು ಆಡಳಿತ ಮಾಡಲಿ. ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಯವರೇ, ಈ ರೀತಿ ಆರೋಪ ಮಾಡತಕ್ಕಂಥದ್ದು ಸರಿಯಲ್ಲ.

(ಗೊಂದಲ)

**ಸಭಾಪತಿಯವರು:-** ಎಲ್ಲರೂ ಹೀಗೆ ಎದ್ದು ನಿಂತು ಮಾತನಾಡಿದರೆ ಹೇಗೆ, ಕುಳಿತುಕೊಳ್ಳಿ.

(ಗೊಂದಲ)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಆರ್ಭಟ ಮಾಡುವುದರಿಂದ ಶಾಂತಿ, ಸೌಹಾರ್ದತೆಯನ್ನು ಕಾಪಾಡುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ಅರಗ ಜ್ಞಾನೇಂದ್ರ:-** ಬೀದಿಯಲ್ಲಿ ಕುಸ್ತಿ ಮಾಡುವುದಕ್ಕಾಗುತ್ತದೆಯೇ? ನಿಮಗಿಂತ ಹೆಚ್ಚಾಗಿ ನನಗೂ ಏರು ಧ್ವನಿ ಇದೆ.

**ಶ್ರೀ ಎಸ್.ರವಿ:-** ನನ್ನ ಹತ್ತಿರ ಮಾತನಾಡುವ ರೋಷ ಕಿಡಿಗೇಡಿಗಳ ಹತ್ತಿರ ಮಾತನಾಡಿ. ಈ ರೋಷ ಅಲ್ಲಿ ಬರಲಿ.

**ಶ್ರೀ ಅರಗ ಜ್ಞಾನೇಂದ್ರ:-** ನೀವು ರಾಜಕಾರಣ ಮಾಡುವುದಕ್ಕೆ ಹೋಗಬೇಡಿ. ಬೀದಿಯಲ್ಲಿ ಕುಸ್ತಿ ಮಾಡುವುದಕ್ಕಾಗುತ್ತದೆಯೇ?

**ಶ್ರೀ ಎಸ್.ರವಿ:-** ಇದು ದುರ್ಬಲ ಸರ್ಕಾರ, ನೀವು ದುರ್ಬಲ ಗೃಹ ಮಂತ್ರಿಗಳು ಎಂದು ನೇರವಾಗಿ ಆರೋಪ ಮಾಡುತ್ತಿದ್ದೇನೆ.

**ಡಾ||ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಗೃಹ ಸಚಿವರು ಶಿಕ್ಷೆ ಕೊಡುವುದಕ್ಕಾಗುತ್ತದೆಯೇ, ಕಾನೂನು ಕೈಗೆತ್ತಿಕೊಳ್ಳುವುದಕ್ಕಾಗುತ್ತದೆಯೇ? ಗೃಹ ಸಚಿವರು ಶಿಕ್ಷೆ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ಹೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಎರಡು ಗಂಟೆಗಳ ಕಾಲಾವಕಾಶ ನೀಡಲಾಗಿದೆ, ಇನ್ನು ಎಷ್ಟು ಸಮಯ ಕೊಡಬೇಕು? ಎಲ್ಲರೂ ಏನೇನೋ ಮಾತನಾಡುತ್ತೀರಲ್ಲಾ?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಎರಡು ನಿಮಿಷ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಕ್ಲಾರಿಫಿಕೇಶನ್ ಕೇಳುವುದು ಬಿಟ್ಟು ಬೇರೆ ಏನೇನೋ ಮಾತನಾಡಿದರೆ ಹೇಗೆ? ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ ಅವಕಾಶ ಕೊಡುತ್ತೇನೆ.

(ಗೊಂದಲ)

**ಸಭಾಪತಿಯವರು:-** ರವಿಕುಮಾರ್, ಕುಳಿತುಕೊಳ್ಳಿ. ಮಾನ್ಯ ಸಚಿವರೇ, ತಾವು ಈಗ ಉತ್ತರ ಹೇಳಿ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ರಾಥೋಡ್‌ರವರು ಬಸವಣ್ಣ ಪ್ರತಿಮೆ ಬಗ್ಗೆ ಪ್ರಸ್ತಾಪ ಮಾಡಿದ್ದರು. ಖಾನಾಪುರದ ಹಲಸಿ ಗ್ರಾಮದಲ್ಲಿ ನಡೆದಿರುವ ಘಟನೆ ಬಗ್ಗೆ ನಾನು ಹೇಳುವುದನ್ನು ಮರೆತೆ.

**ಶ್ರೀ ಎಸ್.ರವಿ:-** ಈಗಾಗಲೇ ಈ ವಿಚಾರವಾಗಿ ಪತ್ರಿಕೆಗಳಲ್ಲಿ ಬಂದಿದೆ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಸದನ ನಡೆಯುತ್ತಿರುವುದೇ ಈಗ, ನಾನು ಯಾವಾಗ ಹೇಳಲಿ?

**ಶ್ರೀ ಎಸ್.ನಾಗರಾಜ(ಸಂದೇಶ್ ನಾಗರಾಜ್):-** ಪತ್ರಿಕೆಗಳಲ್ಲಿ ಬಂದಿರುವ ವಿಚಾರದ ಬಗ್ಗೆ ಮಾನ್ಯ ಗೃಹ ಸಚಿವರಿಗೆ ಗೊತ್ತಿಲ್ಲವೆಂದರೆ ಏನರ್ಥ? ಅವರು ಪ್ರತಿಯೊಂದು ಗಂಟೆಗೂ ನಾನು ಮೆಸೇಜ್ ತೆಗೆದುಕೊಂಡಿದ್ದೇನೆ ಎನ್ನುತ್ತಾರೆ.

**ಶ್ರೀ ಅರಗ ಜ್ಞಾನೇಂದ್ರ:-** ಅದಕ್ಕೊಂದು ಸಮಯ ಬೇಡವೇ. ಅದಕ್ಕೆ ನೀವೆಲ್ಲಾ ಹೀಗೆ ಮಾತನಾಡುವುದೇ?

**ಸಭಾಪತಿಯವರು:-** ನೀವುಗಳು ಕುಳಿತುಕೊಳ್ಳಿ. ಮಾನ್ಯ ಸಚಿವರೆ ನೀವು ಉತ್ತರವನ್ನು ಹೇಳಿ. ನೀವು ನನ್ನ ಕಡೆ ನೋಡಿ ಮಾತನಾಡಿ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ನಂದಗಡ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ೨೦ನೇ ಡಿಸೆಂಬರ್ ೨೦೨೧ರ ಬೆಳಿಗ್ಗೆ ಬಸವಣ್ಣನವರ ಪ್ರತಿಮೆಯನ್ನು ವಿರೂಪಗೊಳಿಸುವಂಥ ಕೆಲಸ ನಡೆದಿದೆ. ರಾಮಪ್ಪ ಜಯಪ್ಪ ವಡ್ಡರ್ ಎನ್ನುವಂಥವರು ದೂರನ್ನು ನೀಡಿದ್ದಾರೆ. ಇದನ್ನು ಮಹಜರ್ ಮಾಡಿ ಒಂದು ಕೇಸ್‌ನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಸಾರ್ವಜನಿಕ ಆಸ್ತಿಯನ್ನು ಧ್ವಂಸಗೊಳಿಸಿದ್ದಕ್ಕಾಗಿ ಅವರ ಮೇಲೆ ಕೇಸ್ ರಿಜಿಸ್ಟರ್ ಆಗಿದೆ. ತನಿಖಾಧಿಕಾರಿಗಳನ್ನು ನೇಮಕ ಮಾಡಿದ್ದು ಅವರು ತನಿಖೆಯನ್ನು ನಡೆಸುತ್ತಿದ್ದಾರೆ. ಯಾರು ಈ ಕೃತ್ಯವನ್ನು ಎಸಗಿದ್ದಾರೆ ಅವರನ್ನು ಹಿಡಿಯುವಂಥ ಪ್ರಯತ್ನ ಖಂಡಿತವಾಗಿ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರು ಕೇವಲ ಬಸವೇಶ್ವರರ ಪ್ರತಿಮೆಗೆ ಮಸಿ ಬಳಿದಿಲ್ಲ, ಕರ್ನಾಟಕ ಧ್ವಜಕ್ಕೆ ಬೆಂಕಿ ಹಚ್ಚಿದ್ದಾರೆ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ನೀವು ನನ್ನ ಅನುಮತಿಯನ್ನು ತೆಗೆದುಕೊಂಡು ಮಾತನಾಡಿ. ನೀವೇ ಮಾತನಾಡಿದರೆ ಹೇಗೆ?

**ಡಾ|| ತೇಜಸ್ವಿನಿಗೌಡ:-** ಮಹಾರಾಷ್ಟ್ರ ಸರ್ಕಾರಕ್ಕೆ ಕೊಟ್ಟ ಬೆಂಬಲವನ್ನು ಹಿಂಪಡೆಯಿರಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಖಾನಾಪುರದಲ್ಲಿ ಕರ್ನಾಟಕ ಧ್ವಜಕ್ಕೆ ಬೆಂಕಿ ಹಚ್ಚಿದ್ದಾರೆ, ಬಸವೇಶ್ವರರ ಪ್ರತಿಮೆಗೆ ಮಸಿ ಬಳಿದಿದ್ದಾರೆ.

(ಗೊಂದಲ)

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, 'ಯಥಾ ರಾಜಾ ತಥಾ ಪ್ರಜಾ'. ರಾಜ ದುರ್ಬಲನಾದಾಗ ಈ ರೀತಿಯ ಪರಿಸ್ಥಿತಿ ಬರುತ್ತದೆ. ಇವರ ದುರ್ಬಲತೆ ಬಸವಣ್ಣನವರಿಗೂ ಕೈ ಹಾಕುವ ಹಾಗಾಯಿತು. ಅವರಿಗೂ ಧೈರ್ಯ ಬಂತು. ಇವರು ಅಸಹಾಯಕ ಗೃಹ ಮಂತ್ರಿಗಳು.

**ಶ್ರೀ ಅರಗ ಜ್ಞಾನೇಂದ್ರ:-** ಏಕೆ ಈ ಮಾತನ್ನು ಹೇಳುತ್ತಿದ್ದೀರಿ?

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಬಸವಣ್ಣನವರ ಪ್ರತಿಮೆ ಅವಮಾನವಾಗಿರುವುದು ಪತ್ರಿಕೆಯಲ್ಲಿ ಬಂದಿದೆ. ಗೃಹ ಮಂತ್ರಿಗಳಿಂದ ಸದನಕ್ಕೆ ಸಂದೇಶವಿಲ್ಲ. ಇದನ್ನು ನಾವು ಕೇಳಿಕೊಂಡು ಕುಳಿತುಕೊಳ್ಳಬೇಕೇ?

(ಗೊಂದಲ)

**ಡಾ|| ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ವಿಷಯಾಂತರವಾಗುತ್ತಿದೆ, ಮಾನ್ಯ ಗೃಹ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:-** ಒಂದು ನಿಮಿಷ ಎಲ್ಲರೂ ನನ್ನ ಮಾತನ್ನು ಕೇಳಿ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿ:-** ಗೃಹ ಮಂತ್ರಿಗಳು ಸಂಚು ಮಾಡುವುದು ರೂಢಿ. ನನಗೆ ಸಂಚು ಮಾಡಿ ರೂಢಿ ಇಲ್ಲ. ನೇರವಾಗಿ ಹೇಳಿ ರೂಢಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರದ ಪರವಾಗಿ ಮಾನ್ಯ ಗೃಹಮಂತ್ರಿಗಳು ಕೊಟ್ಟಂತಹ ಉತ್ತರಕ್ಕೆ ಮಾನ್ಯ ರವಿಯವರು ಹಲವಾರು ಟೀಕೆಗಳನ್ನು ಮಾಡುತ್ತಿದ್ದಾರೆ. ಚರ್ಚೆ ಇರುವುದು ಇಷ್ಟೇ. ಈ ರೀತಿ ಪುಂಡಾಟಿಕೆ ಮಾಡುವವರನ್ನು ನಿಯಂತ್ರಣ ಮಾಡಬೇಕೆನ್ನುವುದು ಸರ್ಕಾರಕ್ಕೆ ವಿರೋಧ ಪಕ್ಷದವರ ಒತ್ತಾಯವಾಗಿದೆ. ಸರ್ಕಾರದ ಪರವಾಗಿ ನಿರ್ದಾಕ್ಷಿಣ್ಯವಾಗಿ ಹೇಳುತ್ತಿದ್ದೇವೆ. ಇನ್ನು ಯಾವ ಪುಂಡರನ್ನು ಕ್ಷಮಿಸುವಂಥ ಪ್ರಶ್ನೆಯೇ ಇಲ್ಲ. ಬಸವಣ್ಣನವರ ಪ್ರತಿಮೆಯನ್ನು ವಿರೂಪ ಮಾಡಿದವರನ್ನು ಸೇರಿದಂತೆ ಎಲ್ಲರನ್ನು ಕೂಡ ಕಠಿಣವಾದಂಥ ಕಾನೂನಿನ ಚೌಕಟ್ಟಿನೊಳಗೆ ಬಂಧಿಸುತ್ತೇವೆ, ಅವರಿಗೆ ಶಿಕ್ಷೆ ವಿಧಿಸುವಂಥ ಕೆಲಸವನ್ನು ಮಾಡುತ್ತೇವೆ. ಅದಕ್ಕೆ ಸರ್ಕಾರ ಸಿದ್ಧವಿದೆ. ಮಾನ್ಯ ರವಿಯವರೆ, ನಿಮಗೆ ಗೊತ್ತಿರಲಿ. ಎಂತಹ ಪುಂಡರು ಇದ್ದರೂ ಸಹ, ಅದು ಎಂತಹ ಪುಂಡಾಟಿಕೆ ಇದ್ದರೂ ಕನ್ನಡ ಧ್ವಜಕ್ಕೆ ಅವಮಾನ ಮಾಡಿದ್ದು ಸೇರಿದಂತೆ ಯಾರ್ಯಾರು ರಾಷ್ಟ್ರ ನಾಯಕರಿಗೆ ಅನ್ಯಾಯ ಮಾಡಿದ್ದಾರೆ ಅವರೆಲ್ಲರನ್ನು ಬಂಧನ ಮಾಡುತ್ತೇವೆ, ಒದ್ದು ಒಳಗಡೆ ಹಾಕುತ್ತೇವೆ. ಈ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ. ನಾನು ತಮ್ಮ ಮೂಲಕ ವಿರೋಧ ಪಕ್ಷದವರಿಗೆ ಸರ್ಕಾರದ ಪರವಾಗಿ ಆಶ್ವಾಸನೆಯನ್ನು ಕೊಡುತ್ತೇನೆ. ಯಾವ ಕಾರಣಕ್ಕೂ ಸಹ ಆತಂಕ ಬೇಡ. ಅವರು ಸಹಕಾರ ಕೊಡಲಿ, ಸರ್ಕಾರ ನಿರ್ದಾಕ್ಷಿಣ್ಯವಾದಂತ ಕ್ರಮವನ್ನು ಕೈಗೊಳ್ಳುತ್ತದೆ.

(ಗೊಂದಲ)

**ಸಭಾಪತಿಯವರು:-** ನನ್ನ ಅನುಮತಿ ಇಲ್ಲದೇ ಯಾರು ಯಾರು ಎದ್ದು ನಿಂತು ಮಾತನಾಡಿದ್ದಾರೆಯೋ ಅದು ಯಾವುದು_ಸಹ ಕಡತಕ್ಕೆ ಹೋಗಬಾರದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಗೃಹ ಸಚಿವರನ್ನು ಕುರಿತು ಮಾತನಾಡುತ್ತಿದ್ದೇವೆಯೇ ಹೊರತು ಅರಗ ಜ್ಞಾನೇಂದ್ರರವರನ್ನು ಕುರಿತು ಅಲ್ಲ. ವೈಯಕ್ತಿಕವಾಗಿ ನಾವೇನೂ ಟೀಕೆ ಮಾಡುತ್ತಿಲ್ಲ. He is the Home Minister. ಈ ದೇಶದ ನೆಲ-ಜಲ, ಅರಣ್ಯ ಸಂಪತ್ತನ್ನು ಕಾಪಾಡತಕ್ಕಂಥ ಜವಾಬ್ದಾರಿ ಅವರ ಮೇಲಿದೆ. ಅದರಲ್ಲಿ ತಪ್ಪಾದರೆ ನಾವು ಅವರನ್ನು ಪ್ರಶ್ನೆ ಮಾಡುತ್ತೇವೆ. ಅದನ್ನು ನೀವು ವೈಯಕ್ತಿಕವಾಗಿ ತೆಗೆದುಕೊಳ್ಳುವುದಲ್ಲ. ಅವರು ಗೃಹ ಸಚಿವರಲ್ಲದಿದ್ದರೆ ಅವರನ್ನು ಯಾರೂ ಕೇಳುತ್ತಿರಲಿಲ್ಲ. ಈ ವಿಚಾರವಾಗಿ ನಾವು ಮಾನ್ಯ ಈಶ್ವರಪ್ಪನವರನ್ನು ಕೇಳುವುದಕ್ಕಾಗುತ್ತದೆಯೇ? ನೀವು ಗೃಹ ಸಚಿವರಾಗಿರುವುದರಿಂದ ನಿಮ್ಮನ್ನು ಕೇಳುತ್ತೇವೆ. ಅವರು ಕೋಪ-ತಾಪ ತಾಳದೆ ಆರಾಮವಾಗಿ ಕೇಳಲಿ.

**ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೆ, ನೀವು ಮಲಗಿಕೊಂಡವರನ್ನು ಏಕೆ ಎಬ್ಬಿಸುತ್ತೀರಿ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಪೊಲೀಸ್ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡಿದೆ ಎಂದು ಹೇಳಿದರು. 'ಹೆತ್ತವರಿಗೆ ಹೆಗ್ಗಣ ಮುದ್ದು'. ಪೊಲೀಸರು ಚೆನ್ನಾಗಿ ಕೆಲಸ ಮಾಡುತ್ತಾರೆ. ಅವರು ಪೊಲೀಸರ morale ಎಷ್ಟು high ಇಟ್ಟಿದ್ದಾರೆಂಬುದನ್ನು ನಾವು ನೋಡಬೇಕಾಗಿದೆ. ಮುಖ್ಯಮಂತ್ರಿಗಳು, ಮಂತ್ರಿಗಳು ಅಥವಾ ಯಾವುದೇ ಜವಾಬ್ದಾರಿ ಸ್ಥಾನದಲ್ಲಿರುವವರು force ಗಳ morale ಅನ್ನು ಬಹಳ high ಆಗಿ ಇಟ್ಟಿರುತ್ತಾರೆ. ಯಾವ height ನಲ್ಲಿಟ್ಟಿದ್ದಾರೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ರೀತಿಯ ಘಟನೆಗಳು ನಡೆಯಬೇಕಾದರೆ, ನಿಮ್ಮ intelligence failure ಆಗಿದೆ ಎಂದು ನಾನು ಸಂಪೂರ್ಣವಾಗಿ ಹೇಳಿದೆ. ಅದನ್ನು ಅವರೇ ಒಪ್ಪಿಕೊಂಡಿದ್ದಾರೆ, ಅವರು ಅದನ್ನು ಹೇಳುತ್ತಿಲ್ಲ. ಅವರು ನಾಲ್ಕು ಜನರು ಮಹಾಮೇಳ ಆಗುವಾಗ ಹೋಗಿ ಮಸಿ ಬಳಿಯುತ್ತಾರೆಂದು ಹೇಳಿದರು. ಇದು ನಿರಂತರವಾಗಿ ನಡೆಯುತ್ತಿದೆ ಎಂಬುದು ಎಲ್ಲರಿಗೂ ಸಹ ಗೊತ್ತು. ಇವರ intelligence ಗೆ ಇಲ್ಲಿಯವರೆಗೂ ಮಾಹಿತಿ ಇಲ್ಲ.

(ಮುಂದು)

1185/20-12-2021/6-10/bkp-rn (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):-**

ಮತ್ತೆ ಬಸವಣ್ಣನವರ ವಿಚಾರವಾಗಿ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ.ರಾಥೋಡ್ ರವರು ಹೇಳಿದಾಗ, ಅಲ್ಲಿಯವರೆಗೆ ಗೃಹ ಸಚಿವರಿಗೆ ಮಾಹಿತಿ ಇರಲಿಲ್ಲ.

**ಶ್ರೀ ಆರಗ ಜ್ಞಾನೇಂದ್ರ:-** ಅದರ ಬಗ್ಗೆ ಮಾಹಿತಿ ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:** ಇಲ್ಲ, ನಾನು ತಮ್ಮನ್ನು ನೋಡುತ್ತಲೇ ಇದ್ದೆ. ನಂತರ ತಾವು ಈ ಬಗ್ಗೆ ಮಾಹಿತಿಯನ್ನು ತರಿಸಿಕೊಂಡಿದ್ದೀರಿ.

**(ಗೊಂದಲ)**

ಮತ್ತೆ, ನಾವು ಯಾವ ಯಾವ ಸೆಕ್ಷನ್‌ನಲ್ಲಿ ಕೇಸ್ ಹಾಕಿದ್ದೇವೆಂದು ನಾವು ಹೇಳುವುದಕ್ಕಾಗುವುದಿಲ್ಲವೆಂದು ಈಗ ಗೃಹ ಸಚಿವರು ಹೇಳಿದರು. ಮಾನ್ಯ ಸಭಾಪತಿಯವರೆ, ತಮಗೆ ಚೆನ್ನಾಗಿ ಗೊತ್ತಿದೆ. Rule is a rule even to a fool. ಇವರು ಮಾಡುತ್ತಿರುವುದನ್ನು ನೋಡಿದರೆ, rule

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

is only for fools ಎಂದು ಆಗಿದೆ. ಬೆಂಗಳೂರಿನಲ್ಲಿ ಒಂದು ಕಡೆ ಗಲಭೆ ಆದಾಗ 240 ಜನರ ಮೇಲೆ UAPA (Unlawful Activities Prevention Act) case ಹಾಕುತ್ತಾರೆ. ಇದು ದೇಶದ್ರೋಹದ ಕೆಲಸ ಆಗಿದೆ ಎಂದು ಈಗ ನಮ್ಮ ರವಿ ಅವರು ಹೇಳಿದ ಮೇಲೆ ಇವರ ಮೇಲೂ ಸಹ sedition case ಹಾಕಿ Unlawful Activities Prevention Act case ಹಾಕಬೇಕಾಗಿತ್ತು. ಹೀಗಾಗಿ, ಇದರ ಬಗೆ ಸೆಕ್ಷನ್ ಹೇಳಲಿಕ್ಕೆ ಇವರಿಗೇನು ತಾಪತ್ರಯ ಆಗಿದೆ? ಹೀಗಾಗಿ, ರಕ್ಷಣೆ ಕೊಡುವುದರಲ್ಲಿ ಗೃಹ ಸಚಿವಾಲ್ಲಯ ಸಂಪೂರ್ಣವಾಗಿ ವಿಫಲವಾಗಿದೆ. ಈ ವಿಚಾರವಾಗಿ ಹೇಳಿದಾಗ ಅವರು ಸಿಟ್ಟು ಮಾಡಿಕೊಂಡರು. ಅದು ವೈಯಕ್ತಿಕವಾದ ವಿಚಾರ ಅಲ್ಲ. ಒಂದು ದುರ್ಬಲವಾದ ಸರ್ಕಾರ ಇರುವುದರಿಂದ ಈ ಕೆಲಸಗಳೆಲ್ಲಾ ನಡೆಯುತ್ತಿದೆ. ಆದ್ದರಿಂದ, ಈ ವಿಚಾರವಾಗಿ ಸ್ಪಷ್ಟವಾಗಿ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ,

**(ಗೊಂದಲ)**

**ಸಭಾಪತಿಯವರು:-** ಸಭಾನಾಯಕರೆ, ಕುಳಿತುಕೊಳ್ಳಿ. ತಾವು ಸಭಾನಾಯಕರಿದ್ದೀರಿ. ಈ ರೀತಿಯಲ್ಲಿ ನೀವು ಎದ್ದು ಎದ್ದು ನಿಂತು ಮಾತನಾಡಿದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಅನಿವಾರ್ಯವಾಗಿ ಮಾತನಾಡಬೇಕಾಗುತ್ತದೆ.

**(ಗೊಂದಲ)**

**ಸಭಾಪತಿಯವರು:-** ನೀವೇ ಈ ರೀತಿ ಮಾಡಿದರೆ ಹೇಗೆ? ನಂತರ ಹೇಳಿ ತಮಗೆ ಅವಕಾಶವನ್ನು ಕೊಡುತ್ತೇನೆ. ನೀವೇ ಈ ರೀತಿ ಮಾಡಿದರೆ ಬೇಲಿಯೇ ಎದ್ದು ಹೊಲ ಮೇಯ್ದಂಗೆ ಆಗುತ್ತದೆ.

**(ಗೊಂದಲ)**

ಪೂಜಾರಿಯವರೆ, ನಾನು ನಿಮಗೆ ಹೇಳುತ್ತೇನೆ. ನನಗೆ ಕೇಳದೆ ಮಾತನಾಡಲಿಕ್ಕೆ ಹೋಗಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ನಾನು ಮಾತನಾಡಿದ ಮೇಲೆ ಅವರು ಮಾತನಾಡಲಿ. ಆದ್ದರಿಂದ, ಪೂರ್ಣ ಘಟನೆಯನ್ನು ನೋಡಿದಾಗ ಗೃಹ ಮಂತ್ರಿಗಳು ಈ ದೇಶದ ಮತ್ತು ಈ ಕನ್ನಡಿಗರಿಗೆ ಏನಾದರೂ ಆಶ್ವಾಸನೆಯನ್ನು ಕೊಡುತ್ತಾರೆ ಎಂದಾಗ ಇವರಿಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಕೊಡಲಿಕ್ಕೆ ಆಗಿರುವುದಿಲ್ಲ. ಮತ್ತೆ ಮಹಾರಾಷ್ಟ್ರದ ಮಾಜಿ ಗೃಹ ಸಚಿವರು ಇಲ್ಲಿ ಇದ್ದರೋ ಇಲ್ಲವೋ ಎನ್ನುವುದನ್ನು ಇವರ ಕೈಯಲ್ಲಿ ಹೇಳಲಿಕ್ಕೆ ಆಗಲಿಲ್ಲ. ಈ ಮಾಹಿತಿ ನನ್ನಲ್ಲಿ ಇದೆ. ನಾನು ಸುಮಾರು 1979ನೇ ಇಸವಿಯಿಂದ ಪ್ರತಿವರ್ಷ ನಾನು ಇಲ್ಲಿಗೆ ಬರುತ್ತಿದ್ದೇನೆ. ನಾನು ಬೆಂಗಳೂರಿನವನಾದರೂ ಸಹ ಬೆಳಗಾವಿಗೆ ನಾನು ನನ್ನ ಎಂ.ಪಿ. ಗ್ರ್ಯಾಂಟ್ ನಿಂದ 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ನನಗೆ ಇಲ್ಲಿಂದ ಮಾಹಿತಿ ಬರುತ್ತದೆ. ಆ ಗೃಹ ಸಚಿವರು ಇಲ್ಲಿಗೆ ಏತಕ್ಕೆ ಬಂದಿದ್ದರು ಎಂದು ತಮಗೆ ಹೇಳಲಿಕ್ಕೆ ಆಗಲಿಲ್ಲ. ಆದ್ದರಿಂದ, ಬಹಳ ಮುಖ್ಯವಾಗಿ ರಾಜ್ಯದ ಕನ್ನಡಿಗರ ಹಿತರಕ್ಷಣೆ ಮಾಡುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇನ್ನು ಮುಂದಿನ ವಿಷಯವನ್ನು ನಮ್ಮ ನಾಯಕರು ಹೇಳುತ್ತಾರೆ.

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ,

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ. ವಿರೋಧ ಪಕ್ಷದ ನಾಯಕರು ಕೊನೆಯಲ್ಲಿ ಮಾತನಾಡಲಿ. ನಾವು ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:-** ಆಯಿತು, ವಿರೋಧ ಪಕ್ಷದ ನಾಯಕರು ನಂತರ ಮಾತನಾಡಲಿ. ಆಯಿತು, ತಾವು ಭಾಷಣ ಮಾಡಬೇಡಿ. ಜವಾಬ್ದಾರಿ ಸ್ಥಾನದಲ್ಲಿದ್ದವರು ಸಹಿಸಿಕೊಳ್ಳಬೇಕು.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ನಾಡಿನ ಪೊಲೀಸರು, ಮತ್ತು ಪೊಲೀಸ್ ಅಧಿಕಾರಿಗಳು ಬಹಳ ದಕ್ಷರು ಇರುತ್ತಾರೆ. ಕೆಲವರಂತೂ ಬಹಳ ಪ್ರಾಮಾಣಿಕರಿದ್ದಾರೆ. ಆದರೆ ಇಂತಹ ಸಂದರ್ಭದಲ್ಲಿ ಸರ್ಕಾರದ ನಿರ್ದೇಶನವನ್ನು ಅವರಿಗೆ ಸೂಕ್ತವಾಗಿ ಕೊಟ್ಟರೆ ಈ ಕಿಡಿಗೇಡಿಗಳಿಗೆ ಸರಿಯಾದ ಪಾಠವನ್ನು ಕಲಿಸುತ್ತಾರೆ. ನೋಡಿ, ಗೃಹ ಸಚಿವರು ಯಾವ ಯಾವ ಕಲಂನಲ್ಲಿ ಮೊಕದ್ದಮೆಯನ್ನು ಅವರ ಮೇಲೆ ಮಾಡಿದ್ದೇವೆ ಎನ್ನುವುದನ್ನು ಈ ಸದನಕ್ಕೆ ಹೇಳುವುದಿಲ್ಲ ಎನ್ನುವುದಾದರೆ ಸರ್ಕಾರ ಯಾವ ರೀತಿಯಲ್ಲಿ ಇದರ ಬಗ್ಗೆ ನಿರ್ದೇಶನವನ್ನು ಪೊಲೀಸ್ ಅಧಿಕಾರಿಗಳಿಗೆ ಕೊಡುತ್ತದೆ ಎನ್ನುವುದನ್ನು ನಾವು ಭಾವಿಸಿಕೊಳ್ಳಬೇಕು. ಇದರಲ್ಲಿ ಮುಚ್ಚುಮರೆ ಏನಿದೆ? ರಾಷ್ಟ್ರದ್ರೋಹಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕೆಂದಾಗ ಸರ್ಕಾರದ ನಿಲುವು ಪೊಲೀಸ್ ಅಧಿಕಾರಿಗಳಿಗೆ ನಾವು ಇಂತಹ ನಿರ್ದೇಶನವನ್ನು ಕೊಟ್ಟಿದ್ದೇವೆ, ಇಂತಹ ಕಾಯಿದೆಯಲ್ಲಿ ಅವರ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಿದ್ದೇವೆಂದು ಈ ಸದನದಲ್ಲಿ ಹೇಳಲಿಕ್ಕೆ ಆಗುವುದಿಲ್ಲ ಎನ್ನುವುದಾದರೆ ಇದು ಸರ್ಕಾರದ ಹೇಡಿತನ ಅಲ್ಲವೇ? ಇಂತಹ ಸಂದರ್ಭದಲ್ಲಿಯೂ ಕೂಡ ಮುಕ್ತವಾಗಿ ಹೇಳಲಿಲ್ಲವೆಂದರೆ ಈ ನಾಡಿನ ಜನರಿಗೆ ರಕ್ಷಣೆ ಕೊಡಲಿಕ್ಕೆ ಆಗುತ್ತದೆಯೇ? ಅದನ್ನು

---

ದಯಮಾಡಿ ಹೇಳಬೇಕು. ಮತ್ತೆ ನಾನು ಮಾತನಾಡುವಾಗ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಇಂತಹ ಪ್ರತಿಮೆಗಳನ್ನು ಸ್ಥಾಪನೆ ಮಾಡುವಾಗ ಮತ್ತು ಇಂತಹ ಪ್ರತಿಮೆಗಳ ರಕ್ಷಣೆ ಬಗ್ಗೆ ಇನ್ನು ಮುಂದಾದರೂ ಸಹ ಒಂದು ವಿಶೇಷ ಕಾಯಿದೆಯನ್ನು ತೆಗೆದುಕೊಂಡು ಬಂದು ಯಾರೇ ಎಲ್ಲೇ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕಾದರೆ ಸರ್ಕಾರದ ಅನುಮತಿಯನ್ನು ಪಡೆದುಕೊಳ್ಳಬೇಕು. ಮತ್ತೆ, ಅದಕ್ಕೆ ಯಾವ ರೀತಿಯಲ್ಲಿ ಭದ್ರತೆ ಒದಗಿಸಬೇಕು ಮತ್ತು ಎಲ್ಲಿ ಸ್ಥಾಪನೆ ಮಾಡಬೇಕೆನ್ನುವುದರ ಬಗ್ಗೆ ಏನಾದರೂ ಇದರ ಬಗ್ಗೆ ಕಾಯಿದೆ ಇದ್ದರೆ ಆ ಕಾಯಿದೆಗೆ ಒಂದು ತಿದ್ದುಪಡಿಯನ್ನು ತಂದು ಇಂತಹ ಪ್ರತಿಮೆಗಳ ಸ್ಥಾಪನೆ ಬಗ್ಗೆ ಸುರಕ್ಷತೆ ಬಗ್ಗೆ ಏನಾದರೂ ಒಂದು ಭದ್ರತೆಯನ್ನು ಒದಗಿಸುವುದಕ್ಕೆ ಸರ್ಕಾರ ಚಿಂತನೆಯನ್ನು ಮಾಡುತ್ತದೆಯೇ? ದಯವಿಟ್ಟು ಇದರ ಬಗ್ಗೆ ತಿಳಿಸಬೇಕು.

ಮೂರನೆಯದಾಗಿ, ದಯಮಾಡಿ ನಮ್ಮ ಹಿರಿಯ ಸಚಿವರು ಹಿರಿಯ ಮುತ್ಸದ್ದಿಗಳು, ಜನರ ಬಗ್ಗೆ ಬಹಳ ಕಾಳಜಿಯುಳ್ಳವರು ಆದ ಶ್ರೀಮಾನ್ ಕೆ.ಎಸ್. ಈಶ್ವರಪ್ಪನವರು ರಾಯಣ್ಣ ಬ್ರಿಗೇಡ್ ಎಂದು ಕಟ್ಟಿ ಇಡೀ ರಾಷ್ಟ್ರಕ್ಕೆ ಅವರು ಒಂದು ದೊಡ್ಡ ಹೋರಾಟಗಾರರಾಗಿದ್ದರು. ಇವತ್ತು ಅವರೇ ಸಚಿವರಾಗಿದ್ದುಕೊಂಡು ಇಂತಹ ಒಂದು ರಾಯಣ್ಣ ಪ್ರತಿಮೆ ಬಗ್ಗೆ ಬಸವಣ್ಣನವರ ಪ್ರತಿಮೆ ಬಗ್ಗೆ ಶಿವಾಜಿ ಪ್ರತಿಮೆ ಬಗ್ಗೆ ಕನ್ನಡಕ್ಕೆ ಇಷ್ಟೊಂದು ಅಪಮಾನ ಆಗಿರುವಂತಹ ಏಕ ಕಾಲದಲ್ಲಿ 4 ಪ್ರಕರಣಗಳು ಇರುವಾಗ ಮತ್ತು ತಾವು ಸರ್ಕಾರದ ಭಾಗವಾಗಿರುವಾಗ ದಯಮಾಡಿ ಅಂತಹ ರಾಷ್ಟ್ರದ್ರೋಹಿಗಳಿಗೆ ಕಠಿಣ ಶಿಕ್ಷೆ ಕೊಡುವುದಕ್ಕೆ ದಯಮಾಡಿ ತಮ್ಮ ಗೃಹ ಸಚಿವರಿಂದ ಒಂದು ಹೇಳಿಕೆಯನ್ನು ಮಾಡಿಸಿ, ಈ ನಾಡಿನ ಜನರ ರಕ್ಷಣೆಗೆ ಈ ಸರ್ಕಾರ ಇದೆ, ಇಂತಹ ಕಿಡಿಗೇಡಿಗಳಿಗೆ ದೇಶದ್ರೋಹಿಗಳಿಗೆ ನೂರಾರು ವರ್ಷಗಳ ಕಾಲ ಜೈಲಿನಲ್ಲಿ ಹಾಕಿಸುತ್ತೇನೆಂದು ಒಂದು ಹೇಳಿಕೆಯನ್ನು ಮಾಡಿಸಿ ತಾವು ಬ್ರಿಗೇಡ್ ರಾಯಣ್ಣ ಪ್ರತಿಮೆಯನ್ನು ಪ್ರತಿಷ್ಟಾಪನೆಯನ್ನು ಮಾಡಿದ್ದೀರಿ.

**ಶ್ರೀ ಕೆ.ಎಸ್. ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೆ, 100 ವರ್ಷಗಳ ಕಾಲ ರಾಷ್ಟ್ರದ್ರೋಹಿಗಳು ಬದುಕುವುದೇ ಇಲ್ಲ. ಇದು ಒಂದನೇ ವಿಚಾರ. ಎರಡನೆಯ ವಿಷಯ ನೀವು ಗೃಹ ಸಚಿವರಿಂದ ಏನೇನು ಅಪೇಕ್ಷೆ ಪಟ್ಟಿದ್ದೀರಿ, ಪಕ್ಕದಲ್ಲೇ ಕುಳಿತುಕೊಂಡು ಅವರಿಗೆ ಹೇಳಿ ಎಂದು ತಾವು ಹೇಳಿದ್ದೀರಲ್ಲಾ, ನನ್ನ ಸಲಹೆಗಳನ್ನು ಸಹ ಸಾಕಷ್ಟು ಕೊಟ್ಟಿದ್ದೇನೆ.

**ಶ್ರೀ. ಎಸ್.ರವಿ:-** ಅವರಿಗೆ ಧೈರ್ಯ ಇಲ್ಲ. ನೀವು ಚಾರ್ಜ್ ಮಾಡಿದರೆ, ಅವರು ಚಾರ್ಜ್ ಆಗುತ್ತಾರೆ. ಇದು ನಮ್ಮ ರಾಜ್ಯದ ದೌರ್ಭಾಗ್ಯ. ಎಂತಹ ಗೃಹ ಮಂತ್ರಿ ಇವರು?

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಸಭಾಪತಿಯವರು:-** ಶ್ರೀಯುತ ರವಿ ಅವರೆ, ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯಸಭಾಪತಿಯವರೆ, ಈ ರೀತಿಯಲ್ಲಿ ಅವರು ಮನಸ್ಸಿಗೆ ಬಂದ ರೀತಿಯಲ್ಲಿ ಮಾತನಾಡಿದರೆ ಹೇಗೆ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯಸಭಾಪತಿಯವರೆ, ಈಗ ಅವರು ಏನೇ ಹೇಳಿದರೂ ಸಹ ಸ್ನೇಹದಲ್ಲಿ ಅವರಿಗೆ ಹೇಳುತ್ತಿದ್ದೇನೆ. ನನ್ನ ಹೆಸರನ್ನು ಬೆಳಗ್ಗೆ ತೆಗೆದುಕೊಂಡರು ಎನ್ನುವ ಕಾರಣಕ್ಕೆ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಹೌದು, ಹೌದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ಮಾಡಿದವರು ಬಾಯಿ ಬಿಟ್ಟಿಲ್ಲವೆಂದು ಹೇಳಿದರಂತೆ ಎಂದು ನಾನು ಕೇಳಿದೆ. ನನಗೆ ಈ ಸುದ್ದಿ ಬರುತ್ತಿದ್ದದಂತೆಯೇ ಅಂದು ರಾತ್ರಿ ನಾನು ಶಿವಮೊಗ್ಗದಲ್ಲಿದ್ದೆ. ರಾತ್ರಿ ಟ್ರೈನ್‌ನಲ್ಲಿ ಅಲ್ಲಿಗೆ ಹೋಗಿ ಅಂದು ಅಲ್ಲಿ ಇದ್ದು, ಬೆಳಗ್ಗೆ ಪ್ರೆಸ್‌ಮೀಟ್ ಕರೆದು ದೇಶದ್ರೋಹಿಗಳು ಮಾಡಿರುವಂತಹ ಕೆಲಸ ಇದಾಗಿದೆ, ಅವರು ಇವರಲ್ಲ, ಇವರು ದೇಶದ್ರೋಹಿಗಳು ಅಷ್ಟೇ ಅಲ್ಲದೆ, ನಾನು ಒಂದು ವಿಚಾರವನ್ನು ಹೇಳಿದ್ದೇನೆ. ಮಹಾರಾಷ್ಟ್ರ ಏಕೀಕರಣ ಸಮಿತಿ ಎಂದು ಅದಕ್ಕೆ ಹೆಸರಿಟ್ಟುಕೊಳ್ಳಬಾರದು ಮಹಾರಾಷ್ಟ್ರ ಹೇಡಿಗಳ ಸಮಿತಿ ಎಂದು ಹೆಸರನ್ನಿಟ್ಟುಕೊಳ್ಳಬೇಕೆಂದು ಹೇಳಿದ್ದೇನೆ. ಏಕೆಂದರೆ, ರಾತ್ರಿ ಹೊತ್ತು ಹೋಗಿ ಕದ್ದು ಪ್ರತಿಮೆಯನ್ನು ತುಂಡು ಮಾಡಿದ್ದಾರೆ. ಗಂಡುಸತನ ಇದ್ದರೆ ಎದುರಿಗೆ ಬಂದು ಮಾಡಲಿ ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಇನ್ನು ಏನೇನು ಹೇಳಿಕೆಯನ್ನು ಕೊಟ್ಟಿದ್ದೇನೆಂದು ಇಲ್ಲಿ ಹೇಳಲಾ, ಸಾಕಾ...

**ಸಭಾಪತಿಯವರು:-** ಬೇಡ ಕುಳಿತುಕೊಳ್ಳಿ. ಶ್ರೀಕಂಠೇಗೌಡರೆ, ತಾವು ಮುಂದುವರಿಸಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನಾನು ನಿಲುವಳಿ ಸೂಚನೆಯನ್ನು ಕೊಟ್ಟು ಮಾತನಾಡಿದಾಗ ಮೂರು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇನೆ. 1. ನಮ್ಮ ಸಂಪತ್ ಕುಮಾರ್ ದೇಸಾಯಿ ರವರು ಏನಿದ್ದಾರೆ, ಆ ಕಪ್ಪು ಮಸಿ, ಅಥವಾ ಆ ಇಂಕ್ ಅನ್ನು ಚೆಲ್ಲಿದಂತಹ ಸಂದರ್ಭದಲ್ಲಿ ನೀವು ಹೂಡಿರುವಂತಹ ಆ ಕೊಲೆಗಡುಕ ಮೊಕದ್ದಮೆಯನ್ನು ವಾಪಸ್ಸು ಪಡೆಯಬೇಕೆಂದು ಹೇಳಿದಾಗ ತಾವು ಏನು ಹೇಳಿದ್ದೀರಿ. ಅಂದರೆ, ದೂರು ಕೊಟ್ಟ ಎಲ್ಲಾ ಸಮಯದಲ್ಲಿ ಅದನ್ನು ನೋಂದಣಿ ಮಾಡುವುದಿಲ್ಲ. ಅದರ ಅನುಭವ ನನಗೆ ಇದೆ, ಎಲ್ಲರಿಗೂ ಅನುಭವ ಇದೆ. ಅದಕ್ಕೆ ಐಪಿಸಿ ಸೆಕ್ಷನ್.307, 308 309 ಅಡಿಯಲ್ಲಿ ಕೇಸ್ ಹಾಕಿ ಎಂಧು ಹೇಳಿದೆಯೇ? ಬೇರೆಯವರ ಮೇಲೆಯೂ ಹಾಕಿದೆಯೇ ಅದಕ್ಕೆ ತಾವು ಸ್ಪಷ್ಟವಾದ ಉತ್ತರವನ್ನು

ನೀಡಬೇಕು. ಸಂಪತ್ ಕುಮಾರ್ ದೇಸಾಯಿರವರ ಮೇಲಿನ ಆ ಕೊಲೆಗಡುಕ ಎಂದು ಹಾಕಿರುವಂತಹ ಮೊಕದ್ದಮೆಯನ್ನು ಹಿಂದೆ ಪಡೆಯಬೇಕು. ಇದಕ್ಕೆ ಸಾಮಾನ್ಯ ಕೇಸ್ ಹಾಕಲಿಕ್ಕೆ ನನ್ನ ಅಡ್ಡಿಯಿಲ್ಲ. ಕರ್ನಾಟಕದ ನೆಲದಲ್ಲಿರುವವರಿಗೆ ಕೊಲೆಗಡುಕ ಕೇಸ್ ಹಾಕುತ್ತೀರಿ. ಅದೇ ಎಂ.ಎ.ಎಸ್.ನವರಿಗೆ ಸಾಮಾನ್ಯವಾದ ಕೇಸ್ ಹಾಕುತ್ತೀರಿ. ಅದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನೀಡಿ.

ಎರಡನೆಯದಾಗಿ ನಾನು ಕೇಳಿದ್ದು ಏನೆಂದರೆ, ಈ ಕೊಲೆಗಡುಕರ ಎಂ.ಇ.ಎಸ್. ಏಕೀಕರಣ ಏನಿದೆ, ಶ್ರೀಮಾನ್ ಈಶ್ವರಪ್ಪನವರು ಹೇಳಿದಂತೆ ಏಡಿ ಎಕೀಕರಣದ ಸಮಿತಿಯನ್ನು ನಿಷೇದದ ವಿಚಾರವಾಗಿ ನಾನು ಕೇಳಿದೆ. ನಿಷೇಧ ಮಾಡುವುದರ ಬಗ್ಗೆ ನೀವು ಇದಕ್ಕೆ ಸ್ಪಷ್ಟತೆ ಕೊಡಲಿಲ್ಲ. ನಿಷೇಧ ಮಾಡುತ್ತೇವೆಂದು ಹೇಳಿ. ಮತೇನು ಮಾಡಬೇಕಾಗಿಲ್ಲ, ಅಷ್ಟೇ ಸಾಕು. ಅಲ್ಲಿಗೆ ನಮ್ಮ ಕೆಲಸ ಅಗುತ್ತದೆ. ಮೂರನೆಯದಾಗಿ, ಈ ಪುಂಡರ ಗಡಿಪಾರು ಬಗ್ಗೆ ಕೇಳಿದ್ದೇನೆ. ಪುಂಡರು ಇಂತಹ ಕೆಲಸಗಳನ್ನು ಮಾಡುತ್ತಿದ್ದಾರೆಂದು ನೀವು ಒಪ್ಪಿಕೊಳ್ಳುತ್ತಿದ್ದೀರಿ. ಎಲ್ಲರೂ ಒಪ್ಪಿಕೊಳ್ಳುತ್ತಿದ್ದಾರೆ. ಅವರಿಗೆ ಏನಾದರೊಂದು ಕಠಿಣ ಶಿಕ್ಷೆ ಆಗಬೇಕೆಂದರೆ, ಅವರನ್ನು ಗಡಿಪಾರು ಮಾಡಬೇಕು. ಇವತ್ತು ಖಾನಾಪುರದಲ್ಲಿ ಕೇವಲ ಬಸವೇಶ್ವರರಿಗೆ ಮಾತ್ರ ಅಪಮಾನ ಮಾಡಿರುವುದಿಲ್ಲ. ಕೊಲ್ಹಾಪುರದಲ್ಲಿ ಕನ್ನಡದ ಬಾವುಟ ಸುಟ್ಟು ಹಾಕಿದ್ದು, ಈಗ ಖಾನಾಪುರದಲ್ಲಿ ಸುಟ್ಟಿದ್ದಾರೆ. ಅವರ ಮೇಲೆ ಈಗ ನೀವು ಏನು ಮಾಡುತ್ತೀರಿ. ಕನ್ನಡ ನೆಲದಲ್ಲಿ ಕನ್ನಡ ಭಾವುಟ ಸುಟ್ಟಿದ್ದಾರೆ. ಅದು ವರದಿಯಾಗಿದೆ. ಪೂರ್ಣವಾದ ವರದಿಯನ್ನು ಅವರು ನಿಮಗೆ ಹೇಳಲಿಲ್ಲ. ಕನ್ನಡ ನೆಲದಲ್ಲಿ ಕನ್ನಡ ಬಾವುಟ ಸುಟ್ಟಿದ್ದಕ್ಕೆ ನಿಮ್ಮ ಕ್ರಮ ಏನು? ಈ ನಾಲ್ಕು ವಿಷಯಗಳ ಬಗ್ಗೆ ನೀವು ಸ್ಪಷ್ಟವಾಗಿ ಕ್ರಮ ಕೈಗೊಳ್ಳಲೇ ಬೇಕು, ಸ್ಪಷ್ಟವಾದ ಉತ್ತರವನ್ನು ನಮಗೆ ಹೇಳಲೇ ಬೇಕು.

**ಶ್ರೀ ಯು.ಬಿ. ವೆಂಕಟೇಶ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಹೆಚ್ಚಿನ ವಿಷಯವಿಲ್ಲ, ಕೇವಲ ಕ್ಲಾರಿಫಿಕೇಷನ್ ಕೇಳುತ್ತೇನೆ.

**ಸಭಾಪತಿಯವರು:-** ಅಷ್ಟೇ ಮಾಡಿ ಭಾಷಣ ಮಾಡಲಿಕ್ಕೆ ಹೋಗಬೇಡಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಇಲ್ಲ, ಈಗಾಗಲೇ ಮಾನ್ಯ ಸದಸ್ಯರುಗಳೆಲ್ಲರೂ ಸಾಕಷ್ಟು ಹೇಳಿದ್ದಾರೆ. ಈಗ ಬೆಂಗಳೂರಿನಲ್ಲಿ ಹಾಕಿರುವಂತಹ ಸೆಕ್ಷನ್ಸ್ ಅಂದರೆ ಆ ಮರ್ಡರ್ ಸೆಕ್ಷನ್ಸ್ ತೆಗೆಯಬೇಕೆಂದು ನನ್ನ ವಿನಂತಿ ಇತ್ತು. ತಾವು ಅದರ ಬಗ್ಗೆ ಹೇಳಬೇಕು. ಇವರಿಗೆ ಕಠಿಣ ಶಿಕ್ಷೆ ಆಗಬೇಕು. ಮತ್ತೆ ನೀವು ಮತ್ತು ಮುಖ್ಯಮಂತ್ರಿಗಳು ಸೇರಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಒಂದು ಪ್ರೆಸ್‌ಮೀಟ್ ಮಾಡಿ ಈ ರಾಜ್ಯದ ಜನತೆಗೆ ಒಂದು ಕರೆ ಕೊಡಿ, " ಇದು ಆಗಬಾರದಾಗಿತ್ತು, ಇದು ಆಗಿದೆ, ಇದನ್ನು ನಾವು ಸರಿ ಮಾಡುತ್ತೇವೆ. ಯಾರು ಭಯಬೀಳಬೇಡಿ ಎಂದು ಹೇಳಿ. ಏಕೆಂದರೆ, ನಾನು ಬೆಳಗ್ಗೆ 6-00 ಗಂಟೆಗೆ flight ಇದ್ದು ನಾನು 3-00 ಗಂಟೆಗೆ ಎದ್ದು ಪೂಜೆ ಮಾಡಿ 4-00 ಗಂಟೆಗೆ ಮನೆಯನ್ನು ಬಿಟ್ಟೆ, ಆಗ ನನ್ನ ಹೆಂಡತಿ ಹೋಗಲೇ ಬೇಕಾ ಎಂದು ಕೇಳಿದಳು. ಏತಕ್ಕೆ ಎಂದಾಗ ಬೆಳಗಾವಿಯಲ್ಲಿ ಗಲಾಟೆ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆಂದು ಹೇಳಿದಳು. ಆಗ ನಾನು ನಮಗೆ ಏನು ಆಗುವುದಿಲ್ಲವೆಂದು ಹೇಳಿದೆ. ಆದ್ದರಿಂದ, ರಾಜ್ಯದಲ್ಲಿ ಒಂದು ರೀತಿಯಲ್ಲಿ ಭಯಬೀತರಾಗಿದ್ದಾರೆ. ದಯವಿಟ್ಟು ನೀವು ಮತ್ತು ಮುಖ್ಯಮಂತ್ರಿಗಳು ಸೇರಿ ಒಂದು ಪ್ರೆಸ್‌ಮೀಟ್ ಮಾಡಿ. ರಾಜ್ಯದ ಜನತೆಗೆ ಒಂದು ಸಂದೇಶ ಕೊಡಿ. ಈ ರೀತಿ ಮಾಡುವುದರ ಮೂಲಕ ಈ ರೀತಿಯ ಕಳ್ಳರಿಗೆ ಮತ್ತು ಪುಂಡರಿಗೆ ನಾವು ನಿಮ್ಮನ್ನು ಮಟ್ಟ ಹಾಕುತ್ತೇವೆಂದು ಎಚ್ಚರಿಕೆ ಕೊಡಿ.

**ಸಭಾಪತಿಯವರು:-** ಶ್ರೀಯುತ ವೆಂಕಟೇಶ್ ರವರೆ, ಈಗ ನೀವು ಮನೆಗೆ ಫೋನ್ ಮಾಡಿ ಹೇಳಿ.

(ಮುಂದು)

**(1186) 20.12.2021 06.20 ಎಸ್‌ವಿ-ಆರ್‌ಎನ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ನೀಡಿರುವ ಉತ್ತರ ಹೇಗಿತ್ತೆಂದರೆ ನಾವು 18 ಜನ ಸದಸ್ಯರು ಮಾತನಾಡಿದ್ದು, ಅವರು 19ನೆಯವರಾಗಿ ಮಾತನಾಡಿದಂತಿತ್ತು. ಏಕೆಂದರೆ ನಾವೆಲ್ಲರೂ ಈ ವಿಷಯದಲ್ಲಿ ಸರ್ಕಾರ ಏನು ಮಾಡಬೇಕೆಂದು ಮಾತನಾಡಿದೆವು. ಅವರು ಒಬ್ಬ ಗೃಹ ಸಚಿವರಾಗಿ ನಾವು ಮಾತನಾಡಿದ್ದಕ್ಕೆ ಉತ್ತರವನ್ನು ನೀಡಬೇಕಾಗಿತ್ತು. ಒಂದು ಖಡಕ್ ಸಂದೇಶವನ್ನು ನೀಡಬೇಕಾಗಿತ್ತು. ಆದರೆ ಗೃಹ ಸಚಿವರು ಆರೋಪಿಗಳನ್ನು ಬಂಧಿಸಿದ್ದೇವೆ, ಜೈಲಲ್ಲಿ ಹಾಕಿದ್ದೇವೆ, ಎಫ್‌ಐಆರ್ ಹಾಕಿದ್ದೇವೆ. ಆದರೆ ಸೆಕ್ಷನ್‌ಗಳನ್ನು ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದರು. ನಮ್ಮ ಪೊಲೀಸ್ ಇಲಾಖೆ ಶಕ್ತಿಯುತವಾಗಿದೆ. ಇನ್ನು ಮುಂದೆ ಈ ರೀತಿಯ ಘಟನೆಗಳು ಸಂಭವಿಸುವುದಿಲ್ಲ. ಯಾವುದೇ ರೀತಿಯ ಆತಂಕ ಪಡುವ ಅಗತ್ಯವಿಲ್ಲ ಎನ್ನುವ ಮಾತನ್ನು ಗೃಹ ಸಚಿವರು ಹೇಳಿದರು. ಈ ಘಟನೆಗಳೆಲ್ಲವೂ ಕೂಡ ಅಧಿವೇಶನ ಪ್ರಾರಂಭವಾದ ಮೇಲೆ ಆಗಿರುವುದು. ಸಂಗೊಳ್ಳಿ ರಾಯಣ್ಣನ ಪ್ರತಿಮೆ ಧ್ವಂಸ ಮಾಡಿದ್ದಿರಬಹುದು, ಮಸಿ ಬಳಿದಿದ್ದಿರಬಹುದು, ಶಿವಾಜಿ ಪ್ರತಿಮೆಗೆ ಅಪಮಾನ ಮಾಡಿದ್ದಿರಬಹುದು ಇವೆಲ್ಲವೂ ಬೆಳಗಾವಿಯಲ್ಲಿ ಅಧಿವೇಶನ ಪ್ರಾರಂಭವಾದ ನಂತರ ನಡೆದ ಘಟನೆಗಳಾಗಿವೆ. ಬಸವಣ್ಣನವರ ಪ್ರತಿಮೆ ಎಂದು ಮಾನ್ಯ ರವಿಯವರು ಹೇಳಿದರು. ಬಸವಣ್ಣನವರ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಭಾವಚಿತ್ರಕ್ಕೆ ಮಸಿ ಬಳಿದು ಕನ್ನಡ ಬಾವುಟವನ್ನು ಸುಡಲಾಗಿದೆ. ಮುಂದಿನ ದಿನಗಳಲ್ಲಿ ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಒಡೆಯಲಿಕ್ಕೆ ಬರುತ್ತಾರೆ. ನಾಲ್ಕು ದಿನಗಳಿಂದ ಈ ರೀತಿಯ ಘಟನೆಗಳು ನಿರಂತರವಾಗಿ ನಡೆಯುತ್ತಿವೆ. ಗೃಹ ಸಚಿವರು ಆತಂಕ ಪಡಬೇಡಿ, ಧೈರ್ಯವಾಗಿರಿ ಎಂದು ಹೇಳುತ್ತಾರೆ. ಖಡಕ್ ಆಗಿ ಈ ಸಂದೇಶವನ್ನು ನಾಡಿನ ಜನತೆಗೆ ಗೃಹ ಸಚಿವರು ಕೊಡಬೇಕು. ಯಾರು ಗಲಾಟೆ ಮಾಡುತ್ತಿದ್ದಾರೆಯೋ ಅವರಿಗೆ ಒಂದು ಎಚ್ಚರಿಕೆಯನ್ನು ಕೊಡಬೇಕು. ಅವರೇನಾದ್ರೂ ಮಾಡಲು ಬಂದಲ್ಲಿ shoot at the sight ಮಾಡಲಾಗುವುದು ಎನ್ನುವ ಖಡಕ್ ಸಂದೇಶವನ್ನು ಕೊಡಬೇಕು. ಇದನ್ನು ಬಿಟ್ಟು ಗೃಹ ಸಚಿವರು ನಮಗೆ ಸಮಾಧಾನ ಮಾಡಲು ನೋಡುತ್ತಿದ್ದಾರೆ. ದಯಮಾಡಿ ಮಾನ್ಯ ಸಚಿವರು ಇನ್ನು ಮುಂದೆ ಯಾರೂ ಇಂತಹ ಕೃತ್ಯವನ್ನು ಮಾಡಲು ಮುಂದಾಗದಂತೆ ಎಚ್ಚರಿಕೆಯಿಂದ ಇರಬೇಕು ಎನ್ನುವ ಒಂದು ಸಂದೇಶವನ್ನು ಈ ಸದನದಿಂದ ಕೊಡಲೇಬೇಕು ಎಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆಡಳಿತ ಹಾಗೂ ವಿರೋಧ ಪಕ್ಷಗಳ 18 ಜನ ಮಾನ್ಯ ಸದಸ್ಯರು ನೆಲ-ಜಲ, ಭಾಷೆ, ಗಡಿ ಬಗ್ಗೆ ಬಹಳಷ್ಟು ಕಳಕಳಿಯಿಂದ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಗೃಹ ಮಂತ್ರಿಗಳು ಈಗ 10 ನಿಮಿಷಗಳ ಮುನ್ನ ಉತ್ತರ ಕೊಡುವಾಗ ಪರಿಸ್ಥಿತಿ ತಿಳಿಯಾಗಿದೆ ಎನ್ನುವ ಮಾತನ್ನು ಹೇಳಿದರು. ಇಂದು ನಸುಕಿನ ವೇಳೆಯಲ್ಲಿ ಖಾನಾಪುರ ತಾಲ್ಲೂಕಿನ ಹಲಸಿ ಗ್ರಾಮದಲ್ಲಿ ಬಸವೇಶ್ವರ ಭಾವಚಿತ್ರಕ್ಕೆ ಮಸಿ, ಕನ್ನಡ ಬಾವುಟ ದಹನ ಎಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇಲ್ಲಿ ಸ್ಪಷ್ಟವಾಗಿದೆ. ಇದನ್ನು ಗೃಹ ಸಚಿವರು ತಮ್ಮ ಉತ್ತರದಲ್ಲಿ ಹೇಳಬೇಕಲ್ಲವೆ?

12ನೆಯ ಶತಮಾನದಲ್ಲಿ ವರ್ಗರಹಿತ, ಜಾತಿ ರಹಿತ ಬಹುದೊಡ್ಡ ಕ್ರಾಂತಿ ಮಾಡಿದಂತಹ, ಸಮಾನತೆಯ ಸಮಾಜ ಸ್ಥಾಪಿಸಲು ಬಹುದೊಡ್ಡ ಸಾಮಾಜಿಕ ಕೆಲಸ ಮಾಡಿದಂತಹ ವಿಶ್ವಗುರು ಅಣ್ಣ ಬಸವಣ್ಣನ ಭಾವಚಿತ್ರಕ್ಕೆ ಮಸಿ ಬಳಿಯುವಂತಹ ಕೆಲಸ ವಿಶೇಷವಾಗಿ ಬಸವಣ್ಣನ ನಾಡಿನಲ್ಲಿ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಆಗಿದೆ. ನಾನು ಬೆಳಿಗ್ಗೆ ಮಾತನಾಡುವಾಗ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹಮಂತ್ರಿಗಳು ಇಂದು ಬೆಳಗಾವಿಯಲ್ಲಿದ್ದಾರೆ. ಅಧಿವೇಶನ ನಡೆಯುವ ವೇಳೆಯಲ್ಲಿ ಇಡೀ ಕರ್ನಾಟಕ ಸರ್ಕಾರ ಇಲ್ಲಿಯೇ ಇರುವಾಗ ಭಾವಚಿತ್ರಕ್ಕೆ ಮಸಿ ಬಳಿಯುವುದರ ಜೊತೆಗೆ ಸಂಗೊಳ್ಳಿ ರಾಯಣ್ಣನ ಮೂರ್ತಿಯನ್ನು ಭಗ್ನಗೊಳಿಸುವುದು, ಕನ್ನಡ ಬಾವುಟವನ್ನು ದಹನ ಮಾಡುವುದು ಇಂತಹ ಕೆಲಸಗಳು ನಡೆಯುತ್ತಿದೆ ಎಂದರೆ ಕರ್ನಾಟಕ ಸರ್ಕಾರದ ಬಗ್ಗೆ ಎಳ್ಳಷ್ಟೂ ಅವರಿಗೆ ಅಂಜಿಕೆ ಇಲ್ಲ. ಗೃಹ ಸಚಿವರ ಉತ್ತರ ನಮಗೆ ಎಳ್ಳಷ್ಟೂ ತೃಪ್ತಿ ತಂದಿಲ್ಲ. ಮಾನ್ಯ ಗೃಹ ಸಚಿವರು ಯಾರ ಮೇಲೆ ಯಾವ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂಬುದನ್ನು ಹೇಳುವುದಕ್ಕೆ ಬರುವುದಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯದ

ಉಲ್ಲೇಖವಿದೆ ಎಂದು ಹೇಳಿದರು. Basically, I am an Advocate. ನ್ಯಾಯಾಲಯಕ್ಕೆ ಹೋಗಿ ಒಂದು certified copy ಕೊಡಿ ಎಂದರೆ ಕೊಡುತ್ತಾರೆ. Is it a secret document? Indian Penal Code ಮುಂತಾದ existing law ಅಡಿಯಲ್ಲಿ ಯಾವ ಸೆಕ್ಷನ್‌ಗಳಲ್ಲಿ ಪ್ರಕರಣಗಳನ್ನು ದಾಖಲಿಸಿದ್ದಾರೆ, ಯಾರು ಆರೋಪಿಗಳಿದ್ದಾರೆ, ಪ್ರಥಮ ವರ್ತಮಾನ ವರದಿ ಇವು ಎಲ್ಲಾ public document. ಮಾನ್ಯ ಗೃಹ ಸಚಿವರು charge sheet ಹಾಕುವುದಕ್ಕೂ ಮುನ್ನ ಸರಿ ಮಾಡುವುದಾಗಿ ಹೇಳಿದರು. Charge sheet ಹಾಕಲು 90 ದಿನಗಳ ಸಮಯವನ್ನು ತೆಗೆದುಕೊಳ್ಳಬಹುದು. ಅಲ್ಲಿಯವರೆವಿಗೆ ಮಾನ್ಯ ಶ್ರೀಕಂಠೇಗೌಡರು ಹೇಳಿದ ಕೊಲೆಗಡುಕ ಪ್ರಕರಣ ಹಾಗೆಯೇ ಉಳಿಯುತ್ತದೆ. ಚಾರ್ಜ್‌ಶೀಟ್ ಹಾಕುವ ಮೊದಲು ಅದನ್ನು ಬದಲಾವಣೆ ಮಾಡುವುದು. ದೂರು ನೀಡಿದ ನಂತರ ಅದನ್ನು ಪರಾಮರ್ಶಿಸಿ ನೋಡಿ ನಂತರ ಎಫ್.ಐ.ಆರ್. ದಾಖಲಿಸಬೇಕು. ಯಾರು ಕನ್ನಡ ನೆಲ-ಜಲ, ಭಾಷೆ, ಗಡಿಯ ಬಗ್ಗೆ ಹೋರಾಟ ಮಾಡುತ್ತಾರೆಯೋ ಅವರ ಮೇಲೆ ಕೊಲೆಗಡುಕ ಪ್ರಕರಣವನ್ನು ಹಾಕಲಾಗುತ್ತದೆ. ಮಾನ್ಯ ಈಶ್ವರಪ್ಪನವರು ಹೇಳಿದಂತೆ ಮಹಾರಾಷ್ಟ್ರ ಹೇಡಿಗಳ ಸಮಿತಿಯವರ ಮೇಲೆ ಸುಮ್ಮನೆ ಸಾದಾ ಕೇಸ್ ಅನ್ನು ದಾಖಲಿಸಲಾಗುತ್ತದೆ. Police Act ನ ಕೆಳಗೆ ಸಣ್ಣ ಪುಟ್ಟ petty offence ಹಾಕಲಾಗುತ್ತದೆ. ನಾವು ಈಗ ಯಾವ ರಾಜ್ಯದಲ್ಲಿದ್ದೇವೆ ಎನ್ನುವುದರ ಬಗ್ಗೆ ಇವರಿಗೆ ಎಳ್ಳಷ್ಟು ವಿಚಾರವಿಲ್ಲವೇ? ಚಾರ್ಜ್ ಶೀಟ್ ಹಾಕುವ ತನಕ ನಾವು ತಡೆಯಬೇಕೇ? ಆ ಕಲಂ ಯಾವುದು, ಆರೋಪಿಗಳು ಯಾರು ಎಂಬುದನ್ನು ಹೇಳಲು ತಯಾರಿಲ್ಲ. Is it a secret? Supreme Court ruling ಇದೆ ಎಂದು ಗೃಹ ಸಚಿವರಿಗೆ ಯಾರು ಹೇಳಿದರು?

ಮಾನ್ಯ ಗೃಹ ಸಚಿವರೇ, ನಿಮ್ಮ ಅಧಿಕಾರಿಗಳನ್ನು ಸರಿಯಾಗಿ ಕೇಳಿ. ಇಂತಹ ಆರೋಪಿಗಳ ವಿರುದ್ಧ ಇಂತಹ ಕಲಂಗಳಡಿಯಲ್ಲಿ ಎಫ್.ಐ.ಆರ್. ಹಾಕಲಾಗಿದೆ ಎಂದು ಹೇಳಲು ನಿಮ್ಮ ಗಂಟೇನು ಹೋಗುತ್ತದೆ. ಈಗಾಗಲೇ ಕೇಸ್ ಅನ್ನು ರಿಜಿಸ್ಟರ್ ಮಾಡಲಾಗಿದೆ. ಅದು prosecution case. It can be withdrawn by the Cabinet. ಇಂದಿನ ಸಚಿವ ಸಂಪುಟದಲ್ಲಿಯೇ ನೀವು ಅದನ್ನು withdraw ಮಾಡಬಹುದಾಗಿತ್ತು. ಅಂತಹ ಕೇಸ್ ಹಾಕುತ್ತಾರೆಯೇ? ಅದನ್ನು ಮಾರ್ಪಾಡು ಮಾಡಬೇಕಾಗಿತ್ತು. ಈ ನಾಡಿನ ಒಳಿತಿಗಾಗಿ, ಉನ್ನತಿಗಾಗಿ, ಶ್ರೇಯೋಭಿವೃದ್ಧಿಗಾಗಿ, ಕನ್ನಡ ನಾಡಿನ ಗೌರವ ಹೆಚ್ಚಿಸುವ ಸಲುವಾಗಿ ಯಾರು ಹೋರಾಟ ಮಾಡುತ್ತಾರೆಯೋ ಅಂತಹವರ ವಿರುದ್ಧ serious offence case ಹಾಕುತ್ತಾರೆ. Offence involves in moral turpitude. ಅಂತಹ heinous offence ಅವರ ಮೇಲೆ. ಯಾರು ಈ ನಾಡಿನ ಭಾಷೆಗೆ, ಗಡಿಗೆ, ನಾಡಿಗೆ ದ್ರೋಹ ಬಗೆಯುತ್ತಾರೆಯೋ ಅಂತಹವರ ಮೇಲೆ ಸಾದಾ bailable and compoundable case ಹಾಕುತ್ತಾರೆ. ಈಗ ದೇಸಾಯಿಯವರು ಜೈಲಿನಲ್ಲಿಯೇ ಇರಬೇಕು. ಜೈಲಿನಿಂದ ಬಿಡುಗಡೆಯಾಗೇ ಇಲ್ಲ. ಅವರು ತಿಂಗಳಾನುಗಟ್ಟಲೆ ಜೈಲಿನಲ್ಲಿಯೇ ಇರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾನ್ಯ ಗೃಹಮಂತ್ರಿಗಳೇ, ನೀವು ಸ್ವಲ್ಪ Indian Penal Code, Criminal Procedure Code, Police Act and Police Manual ಇವುಗಳನ್ನು ಅಧ್ಯಯನ ಮಾಡಬೇಕು. ನೀವು ಗೃಹಮಂತ್ರಿಗಳಾಗಿ ಈ ನಮೂನೆಯ ಉತ್ತರ ಹೇಳಿದರೆ ಆಗುವುದಿಲ್ಲ. ನಾನು ನಿಮ್ಮಿಂದ ಬಹಳಷ್ಟು ನಿರೀಕ್ಷೆಯನ್ನು ಮಾಡಿದ್ದೆನು. ಈ ದುಷ್ಕೃತ್ಯದಲ್ಲಿ ಯಾರು ಯಾರು involve ಆಗಿದ್ದಾರೆಯೋ ಅವರ ಹೆಡೆಮುರಿ ಕಟ್ಟಿ ತಂದು ಒದ್ದು ಒಳಗೆ ಹಾಕುತ್ತೇವೆಂದು ಹೇಳಿದ್ದರೆ, ಶಹಭಾಷ್! ಗೃಹಮಂತ್ರಿಗಳೇ ಎಂದು ಹೇಳುತ್ತಿದ್ದೆವು. ಆದರೆ ನೀವು ನೋಡಿಕೊಳ್ಳುತ್ತೇವೆ, ಪರಿಸ್ಥಿತಿ ತಿಳಿಯಾಗಿದೆ, ಸೆಕ್ಷನ್ ಹೇಳಲು ಬರುವುದಿಲ್ಲ, ಆರೋಪಿಯ ಹೆಸರು ಹೇಳಲು ಬರುವುದಿಲ್ಲ, ನೋಡುತ್ತೇನೆ ಮಾಡುತ್ತೇನೆ ಎಂದರೆ is it an answer? ಈ ಅಧಿವೇಶನದಲ್ಲಿ 18 ಜನ ಸದಸ್ಯರು ತಮ್ಮ ಕಳಕಳಿಯನ್ನು ನಾಡು ನುಡಿಯ ಬಗ್ಗೆ ವ್ಯಕ್ತ ಪಡಿಸಿದ್ದಾರೆ. ಈ ಕಡೆಯವರಷ್ಟೇ ಅಲ್ಲ ಆ ಕಡೆಯವರು ವ್ಯಕ್ತ ಪಡಿಸಿದ್ದಾರೆ. ಇಂತಹ ಒಂದು ಗಂಭೀರವಾದ ಘಟನೆಯಾದ ಸಂದರ್ಭದಲ್ಲಿ, ಅಧಿವೇಶನ ನಡೆಯುತ್ತಿದ್ದು, ನೀವೇ ಸ್ವತಃ ಬೆಳಗಾವಿಯಲ್ಲಿದ್ದ ಸಂದರ್ಭದಲ್ಲಿ ನೀವು ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಎಂದರೆ ನಿಜವಾಗಿಯೂ I am very unhappy. ನಿಮ್ಮ ಉತ್ತರ ನಮಗೆ ಯಾವುದೇ ತೃಪ್ತಿಯನ್ನು ತಂದಿಲ್ಲ. ಈ ವೈಫಲ್ಯವನ್ನು ಸರಿಮಾಡುವುದು ನಿಮ್ಮಿಂದ ಆಗುವುದಿಲ್ಲ. ನಿಮ್ಮಿಂದ ಮುಂದಿನ ದಿನಮಾನದಲ್ಲಿ ಇಂತಹ ಘಟನೆಗಳು ಮರುಕಳಿಸುತ್ತವೆ. ಯಾರಿಗೂ ವಿಶ್ವಾಸ ಉಳಿದಿಲ್ಲ. ಇಂದು ನಾಡಿನ 6.5 ಕೋಟಿ ಜನ ಒಂದು ನಿರ್ಣಯಕ್ಕೆ ಬಂದಿದ್ದಾರೆ. ಈ ಗೃಹಮಂತ್ರಿಗಳು ಮತ್ತು ಈ ಸರ್ಕಾರ ಇಂತಹ ಘಟನೆಗಳನ್ನು ಮೆಟ್ಟಿನಿಂತು ನಾಡಿನ ಗೌರವವನ್ನು ಉಳಿಸುತ್ತಾರೆ ಎನ್ನುವ ವಿಶ್ವಾಸವನ್ನು ನಾಡಿನ ಜನ ಕಳೆದು ಕೊಂಡಿದ್ದಾರೆ. ನಾವು ಕೂಡಾ ವಿಶ್ವಾಸ ಕಳೆದುಕೊಂಡಿದ್ದೇವೆ. ನಿಮ್ಮ ಉತ್ತರ ತೃಪ್ತಿದಾಯಕವಾಗಿಲ್ಲ. This is disheartening and disappointing. ನೀವು ಅಸಹಾಯಕತೆಯನ್ನು ವ್ಯಕ್ತ ಮಾಡಿರುವುದಕ್ಕೆ ನಾವು ಸದನದಿಂದ ಹೊರ ನಡೆಯುತ್ತೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)**

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಇಷ್ಟೊಂದು ಕಳಕಳಿ ನಮ್ಮ ಕನ್ನಡ ಧ್ವಜದ ಬಗ್ಗೆ ಅವರಿಗೆ ಇದ್ದರೆ, ಶಿವಸೇನೆಯ ಜೊತೆಗೆ ಕಾಂಗ್ರೆಸ್ ಸೇರಿ ಮಹಾರಾಷ್ಟ್ರದಲ್ಲಿ ಸರ್ಕಾರ ಮಾಡುತ್ತಿದೆ. ಸರ್ಕಾರವನ್ನು withdraw ಮಾಡಲಿ. ಕೇವಲ ರಾಜಕಾರಣ ಮಾಡಕ್ಕೆ ಇದ್ದಾರೆಯೇ? ಇವರಿಗೆ ಅಧಿಕಾರವೂ ಬೇಕು. ರಾಜಕಾರಣನೂ ಮಾಡಬೇಕು. ಕಾಂಗ್ರೆಸ್‌ನವರೇ ಇದರಲ್ಲಿ ಪಾತ್ರದಾರರು. ಕನ್ನಡ ಧ್ವಜವನ್ನು ಇವರದ್ದೇ ಸರ್ಕಾರ ಇರುವಾಗ ಸುಡುತ್ತಿರುವುದು. ಇವರಿಗೆ ಮಾನ ಮರ್ಯಾದೆ ಏನೂ ಇಲ್ಲ. ಹೀಗಿರಬೇಕಾದರೆ ಮರ್ಯಾದೆ ಇಲ್ಲದೆ ಸಭಾತ್ಯಾಗ ಮಾಡುವವರಿಗೆ ಏನೂ ಗೌರವವಿರುವುದಿಲ್ಲ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**(1187) 20-12-2021 (6.30) ಕೆಜಿ – ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಕನ್ನಡ ಪರ ಹೋರಾಟಗಾರರ ಮೇಲಿನ ಕೊಲೆಗಡುಕ ಕೇಸ್‌ಗಳನ್ನು ಹಿಂಪಡೆದುಕೊಳ್ಳದ್ದರಿಂದ, ಪುಂಡರ ವಿರುದ್ಧ ಸಾಮಾನ್ಯ ಕೇಸ್ ಹಾಕಿರುವುದರಿಂದ, ಉತ್ತರವನ್ನು ಸ್ಪಷ್ಟವಾಗಿ ಕೊಡುತ್ತಿಲ್ಲ. ಎಂ.ಇ.ಎಸ್. ಅನ್ನು ನಿಷೇಧ ಮಾಡುತ್ತಿಲ್ಲ. ಹಾಗಾಗಿ, ನಾವು ಸಹ ಸದನದಿಂದ ಹೊರಗಡೆ ಹೋಗುತ್ತಿದ್ದೇವೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂತಹ 4 ಮಂದಿ ರಾಷ್ಟ್ರದ್ರೋಹಿಗಳನ್ನು encounter ಮಾಡಿದ್ದರೆ, ನಾನು ಇವರನ್ನು ಹೆಗಲ ಮೇಲೆ ಹೊತ್ತುಕೊಂಡು ಮೆರವಣಿಗೆ ಮಾಡುತ್ತಿದ್ದೆ. ಇದು ಹೇಡಿ ಸರ್ಕಾರ.

**(ಈ ಹಂತದಲ್ಲಿ ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿ ಸದನದಿಂದ ಹೊರನಡೆದರು)**

**ಸಭಾಪತಿಯವರು:-** ಗೃಹ ಸಚಿವರೇ, ಉತ್ತರ ಹೇಳಿ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಅನೇಕ ಮಿತ್ರರು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ನನ್ನನ್ನು ಒಬ್ಬ ಅಸಮರ್ಥ ಗೃಹ ಸಚಿವ ಎಂದು ಹೇಳಿದ್ದಾರೆ. ಈಗಾಗಲೇ ಈ ಎಲ್ಲಾ ಸಂಗತಿಗಳನ್ನು ಹೇಳಿದ್ದಾರೆ. ನಾನು ಅವುಗಳನ್ನು ಕೇಳಿದ್ದೇನೆ. ನಾನು ವಿಧಾನ ಸಭೆಗೆ 4 ಬಾರಿ ಆಯ್ಕೆಯಾಗಿ ಬಂದಿದ್ದೇನೆ. ಯಾರ ಯಾರ ಕಾಲದಲ್ಲಿ ಏನೇನು ಆಗಿತ್ತು, ಇದೇ ಬೆಳಗಾವಿಯಲ್ಲಿ ಎಷ್ಟು ದೊಡ್ಡ ಕ್ಷೋಭೆ ನಿರ್ಮಾಣವಾಗಿತ್ತು, ಆ ಸಂದರ್ಭದಲ್ಲಿಂತಹ ಗೃಹಸಚಿವರುಗಳು ಏನು ಮಾಡುತ್ತಿದ್ದರು, ಅವರಿಗೆ ಎಷ್ಟು ಸಾಮರ್ಥ್ಯ ಇತ್ತು ಎನ್ನುವುದು ನನಗೆ ಗೊತ್ತಿದೆ.

**ಸಭಾಪತಿಯವರು:-** ಸಚಿವರೇ, ಸರಿ. ಉತ್ತರ ಹೇಳಿ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಅದನ್ನು ನೋಡುತ್ತಿದ್ದೇನೆ. ಅನಾವಶ್ಯಕವಾಗಿ ರಾಜಕೀಯ ಲಾಭವನ್ನು ಪಡೆಯುವುದಕ್ಕಾಗಿ ಈ ರೀತಿಯ ನಾಟಕೀಯವಾದಂತಹ ಮಾತುಗಳನ್ನು ಹೇಳಬಾರದು. ನಾನು ಅನಾವಶ್ಯಕವಾಗಿ ಮಹಾರಾಷ್ಟ್ರ ಸರ್ಕಾರವನ್ನು ಮತ್ತು ರಾಜಕಾರಣವನ್ನು ಬೇರೆಸದೆಯೇ ಮಾತನಾಡಿದ್ದೇನೆ.

**ಸಭಾಪತಿಯವರು:-** ಸಚಿವರೇ, ಹೌದು ಸರಿ. ಹೇಳಿ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರಾದ ಈಶ್ವರಪ್ಪನವರು ಹೇಳಿದರು. ಕನ್ನಡ ಧ್ವಜವನ್ನು ಸುಡುವಾಗ ಇದೇ ಸರ್ಕಾರ ಇದೇ ಕಾಂಗ್ರೆಸ್‌ನವರು ಸರ್ಕಾರಕ್ಕೆ support ಮಾಡಿಕೊಂಡು ಕುಳಿತುಕೊಂಡಿದ್ದರು. ಆ ಸುಡುವ ಒಂದು ಭಾಗವಾಗಿ ಇವರು ಮಹಾರಾಷ್ಟ್ರದಲ್ಲಿದ್ದಾರೆ. ಇವರಿಗೆ ಯಾವ ನೈತಿಕ ಹಕ್ಕು ಇದೆ, ಈ ರೀತಿ ಮಾತನಾಡುವುದಕ್ಕೆ? ಇವರಿಗೆ ನಾಚಿಗೆಯಾಗಬೇಕು.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು shame shame ಎಂದು ಮೇಜು ತಟ್ಟುವ ಮೂಲಕ ಸಂತಸ ವ್ಯಕ್ತಪಡಿಸಿದರು)**

ಇವರಿಗೆ ಮಹಾರಾಷ್ಟ್ರದಲ್ಲಿ ಅಧಿಕಾರ ಬೇಕು. ಇಲ್ಲಿ ಕನ್ನಡ ಧ್ವಜದ ಬಗ್ಗೆ ಬಾರಿ ಕಾಳಜಿ ಬೇಕು. ಇದು Double standard. ಇವತ್ತು ವಿಶೇಷವಾಗಿ ಪ್ರತಿಮೆ ಸ್ಥಾಪನೆ ಮತ್ತು ಅದರ ರಕ್ಷಣೆಯ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾವು ಚಿಂತನೆ ಮಾಡುತ್ತೇವೆ. ಏಕೆಂದರೆ, ಎಲ್ಲೆಂದರಲ್ಲಿ ಪ್ರತಿಮೆಗಳನ್ನು ಸ್ಥಾಪನೆ ಆಗುತ್ತವೆ. ಒಳ್ಳೆಯ ಉದ್ದೇಶದಿಂದ ಸ್ಥಾಪನೆ ಮಾಡುತ್ತಾರೆ. ಆದರೆ, ಇಂತಹ ಸಂದರ್ಭದಲ್ಲಿ ಬಹಳ ಕ್ಷೋಭೆ ನಿರ್ಮಾಣವಾಗುವುದಕ್ಕೂ ಸಹ ಅದೇ ಕಾರಣವಾಗುತ್ತದೆ. ಇದರಿಂದ ಅಂತಹ ಮಹಾತ್ಮರಿಗೂ ಅವಮಾನವಾಗುತ್ತದೆ. ನಮ್ಮ ಯಾರದ್ದೋ ರಾಜಕೀಯ ಬೆಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಇದೊಂದು ದುಷ್ಕೃತ್ಯ ಮಾಡುವವರಿಗೆ ಅದೊಂದು ಆಯುಧವಾಗುತ್ತದೆ. ಹಾಗೆಯೇ, ಮಸಿ ಹಾಕಿದವರ ವಿರುದ್ಧ ಹಾಕಿರುವಂತಹ ಕೊಲೆಯ ಕೇಸ್‌ನ್ನು ವಾಪಸ್ ಪಡೆಯಬೇಕೆಂದು ಹೇಳಿದ್ದಾರೆ. ಇವತ್ತಿನ ಕ್ಯಾಬಿನೇಟ್‌ನಲ್ಲಿಯೇ ವಾಪಸ್ ಪಡೆಯಬಹುದಾಗಿತ್ತು ಎಂದು ಹೇಳಿದ್ದಾರೆ. ಆದರೆ. ಅವರ ದೂರಿನ ಮೇಲೆ ಕೇಸ್‌ನ್ನು register ಮಾಡಿದ್ದಾರೆ. ನನಗೆ ಕಾಯಿದೆ ಬಗ್ಗೆ ಏನು ಹೇಳಬೇಕೆಂದು ಗೊತ್ತಿಲ್ಲ. ನಾನು ಪರಿಶೀಲನೆ ಮಾಡುತ್ತೇನೆ. ಅದನ್ನು ಖಂಡಿತವಾಗಿಯೂ ತಕ್ಷಣ ವಾಪಸ್ಸು ಪಡೆಯುವಂಥದ್ದು, ಆದರೆ ಸ್ವಲ್ಪ ಕಷ್ಟವಾಗುತ್ತದೆ. ಅವರು ಕೊಟ್ಟಂತಹ ದೂರಿನ ಮೇಲೆ ಆ ರೀತಿ sections ಗಳು ಬರುತ್ತಿದ್ದವು. ಅದಕ್ಕೆ ಹಾಕಿದ್ದಾರೆ. ಪೊಲೀಸರು ಯಾವ ರೀತಿ case register ಮಾಡುತ್ತಾರೆಂದು ತಮಗೂ ಗೊತ್ತಿದೆ. ವಿಚಾರಣೆಯಾದ ಮೇಲೂ ಅದನ್ನು ಬದಲಾವಣೆ ಮಾಡುವುದಕ್ಕೂ ಅವಕಾಶಗಳು ಇವೆ. ಹಾಗೆಯೇ, ನನ್ನ ವಿನಂತಿ ಇದೆ. ನಾವು ಇದನ್ನು ಖಂಡಿತವಾಗಿ ಬಿಡುವುದಿಲ್ಲ. ಈ ದುಷ್ಕೃತ್ಯವನ್ನು ಯಾರು ಯಾರು ಮಾಡಿದ್ದಾರೆ, ರಾಷ್ಟ್ರ ವಿರೋಧಿ ಕೃತ್ಯಗಳೆಂದು ಪರಿಗಣಿಸುತ್ತೇವೆ ಮತ್ತು ಅವರ ವಿರುದ್ಧ ಗೂಂಡಾ ಆಕ್ಟ್ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುತ್ತೇವೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಸಂತಸ ವ್ಯಕ್ತಪಡಿಸಿದರು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲದೇ, ಈ ಕೃತ್ಯಗಳಲ್ಲಿ ಭಾಗಿಯಾಗಿ ಅವಮಾನ ಮಾಡಿರುವಂತಹ ಜನರನ್ನು ಬಿಡುವುದಿಲ್ಲ. ಗೂಂಡಾ ಆಕ್ಟ್‌ನ್ನು ಹಾಕುತ್ತಿದ್ದೇವೆ. ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಗಳನ್ನು ಈ ಸೌಧದ ಹೊರಾಂಡದಲ್ಲಿ ಸ್ಥಾಪನೆ ಮಾಡುವುದಾಗಿ ಕೆಳಮನೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು announce ಮಾಡಿದ್ದಾರೆ. ನಾನು ಸಹ ಅದನ್ನು ಈ ಮನೆಯಲ್ಲಿ announce ಮಾಡುತ್ತಿದ್ದೇನೆ. ಇದನ್ನು ನಾವು ಮಾಡುತ್ತೇವೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಸಂತಸ ವ್ಯಕ್ತಪಡಿಸಿದರು)**

ಮಾನ್ಯ ಸಭಾಪತಿಯವರೇ, ಹಾಗೆಯೇ, ದಯವಿಟ್ಟು ಈ ಸದನ ಒಂದು ನಿರ್ಣಯವನ್ನು ಸ್ವೀಕಾರ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ನಿರ್ಣಯವನ್ನು ಕೆಳಮನೆಯಲ್ಲಿಯೂ ಸಹ ಸ್ವೀಕಾರ ಮಾಡಿದ್ದಾರೆ. ಇದನ್ನು ಇಡೀ ಸಭೆ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅದನ್ನು ಓದಿ ಹೇಳುತ್ತೇನೆ. ಆ ನಿರ್ಣಯವನ್ನು ಮಂಡನೆ ಮಾಡುತ್ತಿದ್ದೇನೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

## 8. ಸರ್ಕಾರಿ ನಿರ್ಣಯ

**ವಿಷಯ:-"ಗಡಿವಿವಾದದಲ್ಲಿ ಮಹಾಜನ್ ಆಯೋಗದ ವರದಿ ಅಂತಿಮ ಎಂಬುದು ರಾಜ್ಯದ ಅಂದಿನಿಂದ ಇಲ್ಲಿಯವರೆಗೆ ಸ್ಪಷ್ಟ ನಿಲುವಾಗಿದೆ. ಆದಾಗ್ಯೂ ಕೆಲವು ವ್ಯಕ್ತಿಗಳು ಮತ್ತು ಸಂಘಟನೆಗಳು ಆಗಿಂದಾಗ್ಗೆ ಶಾಂತಿಭಂಗವನ್ನು ಉಂಟು ಮಾಡುತ್ತಿರುವುದು ವಿಷಾದನೀಯ. ಇತ್ತೀಚೆಗೆ ಶ್ರೀ ಸಂಗೊಳ್ಳಿರಾಯಣ್ಣನವರ ಪ್ರತಿಮೆಗೆ ಮಾಡಿರುವ ಅವಮಾನ ಕನ್ನಡ ಧ್ವಜ ಸುಟ್ಟಿರುವ ವಿವಾದ ಶ್ರೀ ಜಗಜ್ಯೋತಿ ಬಸವೇಶ್ವರರ ಪ್ರತಿಮೆಗೆ ಮಾಡಿರುವ ಅವಮಾನವನ್ನು ಹಾಗೂ ಅದೇರೀತಿ ಛತ್ರಪತಿ ಶಿವಾಜಿಯವರ ಪ್ರತಿಮೆಗೆ ಮಸಿ ಬಳಿದಿರುವ ಪ್ರಕರಣವನ್ನು ಈ ಸಭೆ ಖಡಾಖಂಡಿತವಾಗಿ ಖಂಡಿಸುತ್ತದೆ. ಅಲ್ಲದೇ, ಇಂತಹ ಕೃತ್ಯಗಳನ್ನು ಮಾಡುವ ದುಷ್ಕರ್ಮಿಗಳ ವಿರುದ್ಧ ದೇಶ ದ್ರೋಹದ ಪ್ರಕರಣವೆಂದು ನಿರ್ಣಯಿಸಿ ಕಾನೂನು ಅನ್ವಯ ಕಠಿಣ ಕ್ರಮ ಜರುಗಿಸಲಾಗುವುದು"**

\- - - - - -

**ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

**"ಗಡಿವಿವಾದದಲ್ಲಿ ಮಹಾಜನ್ ಆಯೋಗದ ವರದಿ ಅಂತಿಮ ಎಂಬುದು ರಾಜ್ಯದ ಅಂದಿನಿಂದ ಇಲ್ಲಿಯವರೆಗೆ ಸ್ಪಷ್ಟ ನಿಲುವಾಗಿದೆ. ಆದಾಗ್ಯೂ ಕೆಲವು ವ್ಯಕ್ತಿಗಳು ಮತ್ತು ಸಂಘಟನೆಗಳು ಆಗಿಂದಾಗ್ಗೆ ಶಾಂತಿಭಂಗವನ್ನು ಉಂಟು ಮಾಡುತ್ತಿರುವುದು ವಿಷಾದನೀಯ. ಇತ್ತೀಚೆಗೆ ಶ್ರೀ ಸಂಗೊಳ್ಳಿ ರಾಯಣ್ಣನವರ ಪ್ರತಿಮೆಗೆ ಮಾಡಿರುವ ಅವಮಾನ ಕನ್ನಡ ಧ್ವಜ ಸುಟ್ಟಿರುವ ವಿವಾದ ಶ್ರೀ ಜಗಜ್ಯೋತಿ ಬಸವೇಶ್ವರರ ಪ್ರತಿಮೆಗೆ ಮಾಡಿರುವ ಅವಮಾನವನ್ನು ಹಾಗೂ ಅದೇರೀತಿ ಛತ್ರಪತಿ ಶಿವಾಜಿಯವರ ಪ್ರತಿಮೆಗೆ ಮಸಿ ಬಳಿದಿರುವ ಪ್ರಕರಣವನ್ನು ಈ ಸಭೆ ಖಡಾಖಂಡಿತವಾಗಿ ಖಂಡಿಸುತ್ತದೆ. ಅಲ್ಲದೇ, ಇಂತಹ ಕೃತ್ಯಗಳನ್ನು ಮಾಡುವ ದುಷ್ಕರ್ಮಿಗಳ ವಿರುದ್ಧ ದೇಶ ದ್ರೋಹದ ಪ್ರಕರಣವೆಂದು ನಿರ್ಣಯಿಸಿ ಕಾನೂನು ಅನ್ವಯ ಕಠಿಣ ಕ್ರಮ ಜರುಗಿಸಲಾಗುವುದು"**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

**"ಗಡಿವಿವಾದದಲ್ಲಿ ಮಹಾಜನ್ ಆಯೋಗದ ವರದಿ ಅಂತಿಮ ಎಂಬುದು ರಾಜ್ಯದ ಅಂದಿನಿಂದ ಇಲ್ಲಿಯವರೆಗೆ ಸ್ಪಷ್ಟ ನಿಲುವಾಗಿದೆ. ಆದಾಗ್ಯೂ ಕೆಲವು ವ್ಯಕ್ತಿಗಳು ಮತ್ತು ಸಂಘಟನೆಗಳು ಆಗಿಂದಾಗ್ಗೆ ಶಾಂತಿಭಂಗವನ್ನು ಉಂಟು ಮಾಡುತ್ತಿರುವುದು ವಿಷಾದನೀಯ. ಇತ್ತೀಚೆಗೆ ಶ್ರೀ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಂಗೊಳ್ಳಿರಾಯಣ್ಣನವರ ಪ್ರತಿಮೆಗೆ ಮಾಡಿರುವ ಅವಮಾನ ಕನ್ನಡ ಧ್ವಜ ಸುಟ್ಟಿರುವ ವಿವಾದ ಶ್ರೀ ಜಗಜ್ಯೋತಿ ಬಸವೇಶ್ವರರ ಪ್ರತಿಮೆಗೆ ಮಾಡಿರುವ ಅವಮಾನವನ್ನು ಹಾಗೂ ಅದೇರೀತಿ ಛತ್ರಪತಿ ಶಿವಾಜಿಯವರ ಪ್ರತಿಮೆಗೆ ಮಸಿ ಬಳಿದಿರುವ ಪ್ರಕರಣವನ್ನು ಈ ಸಭೆ ಖಡಾಖಂಡಿತವಾಗಿ ಖಂಡಿಸುತ್ತದೆ. ಅಲ್ಲದೇ, ಇಂತಹ ಕೃತ್ಯಗಳನ್ನು ಮಾಡುವ ದುಷ್ಕರ್ಮಿಗಳ ವಿರುದ್ಧ ದೇಶ ದ್ರೋಹದ ಪ್ರಕರಣವೆಂದು ನಿರ್ಣಯಿಸಿ ಕಾನೂನು ಅನ್ವಯ ಕಠಿಣ ಕ್ರಮ ಜರುಗಿಸಲಾಗುವುದು**"

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ನಿರ್ಣಯವನ್ನು ಮಂಡನೆ ಮಾಡಿದ್ದೇನೆ. ಅದನ್ನು ಸ್ವೀಕಾರ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಸಚಿವರೇ, ತಾವು ನಿರ್ಣಯದ ಬಗ್ಗೆ ಮಾತ್ರ ಹೇಳಿ. ಅದನ್ನು ಯಾರಾದರೂ ಅನುಮೋದನೆ ಮಾಡಲಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಮಂಡಿಸಿರುವಂತಹ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಗೃಹ ಸಚಿವರು ಮಂಡಿಸಿರುವ ನಿರ್ಣಯಕ್ಕೆ ಸಭೆಯ ಒಮ್ಮತವಿದೆ ಎಂದು ಭಾವಿಸಲಾಗುವುದು. ಮಾನ್ಯ ಸಚಿವರು ಮಂಡಿಸಿದ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

**(ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು)**

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಕೇವಲ ಇದರ ಎದುರುಗಡೆ ವ್ಯಕ್ತಿಗಳಲ್ಲ, ಇದರ ಹಿಂದೆ ಕೆಲವು ಸಂಘ-ಸಂಸ್ಥೆಗಳು ಪ್ರಚೋದನೆ ಕೊಟ್ಟಿವೆ ಎನ್ನುವ ಸಂದೇಶ ಸಹ ಬರುತ್ತಿದೆ. ಅದನ್ನು ವಿಚಾರಣೆ ಮಾಡಿ ಆ ರೀತಿ ಇಂತಹ ದುಷ್ಕೃತ್ಯಕ್ಕೆ ಪ್ರಚೋದನೆ ನೀಡಿದಂತಹ ಸಂಘ-ಸಂಸ್ಥೆಗಳ ಮೇಲೆ ಸಹ ಪ್ರಕರಣವನ್ನು ಹಾಕುತ್ತೇವೆ.

ಮಾನ್ಯ ಸಭಾಪತಿಯವರೇ, ನನಗೆ ವೀರಾವೇಷದ ಮಾತುಗಳನ್ನು ಹೇಳುವುದಕ್ಕೆ ಬರುವುದಿಲ್ಲ ಅಥವಾ ಗೃಹ ಸಚಿವನಾಗಿ ಬೀದಿಯ ಮೇಲೆ ಹೋರಾಟಕ್ಕೆ ಇಳಿಯಲು ಬರುವುದಿಲ್ಲ. ನಾವು ಏನು ಮಾಡಬಹುದು, direction ಕೊಡಬಹುದು, ಯಾವ ರೀತಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು. ನಾನು ಒಬ್ಬ ಗೃಹ ಸಚಿವನಾಗಿ ಪ್ರಮಾಣಿಕವಾಗಿ ಸರ್ಕಾರದ ಪರವಾಗಿ ಮಾಡಿದ್ದೇನೆ. ನಮ್ಮ ನಾಡು, ನುಡಿ, ಜಲದ ಬಗ್ಗೆ ನನಗೆ ಆಸ್ತಕಿ ಇದೆ. ನಾನು ಪ್ರಮಾಣಿಕವಾಗಿ ಅದನ್ನು ಮಾಡಿದ್ದೇನೆ. ಇನ್ನೂ ಸಹ ಮಾಡುತ್ತೇನೆ. ಇದರಿಂದ ಯಾರಿಗೂ ಆತಂಕ ಬೇಡ. ಇವರು ಯಾರೋ ಕೆಲವರು ದುರ್ಬಲ, ಇನ್ನೊಂದು ಎಂದ ತಕ್ಷಣ ನಾನು ದುರ್ಬಲನಾಗುವುದಿಲ್ಲ.

**ಸಭಾಪತಿಯವರು:-** ಸಚಿವರೇ, ಅದು ಮಾಮುಲಿ. ಎಲ್ಲರೂ ಮಾತನಾಡುತ್ತಾರೆ. ಅದನ್ನು ಏಕೆ serious ಆಗಿ ತೆಗೆದುಕೊಳ್ಳುತ್ತೀರಿ?

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಭಯಪಡುವಂತಹ ಅಥವಾ ಆತಂಕ ಪಡುವಂತಹ ವ್ಯಕ್ತಿ ಅಲ್ಲ. ನಾನು ಖಂಡಿತವಾಗಿ ಪ್ರಮಾಣಿಕತೆಯಿಂದ ಕೆಲಸ ಮಾಡುತ್ತಿದ್ದೇನೆ. ನಮ್ಮ ಪೊಲೀಸರ ಸಾಮರ್ಥ್ಯ ನನಗೆ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಇವರು ಯಾರೋ ಕೆಲವರು ಬೇಕೆಂದು ಕದಡದಿದ್ದರೆ, ನಮ್ಮ ರಾಜ್ಯ ಶಾಂತವಾಗಿ ಇರುತ್ತದೆ. ಏನು ತೊಂದರೆಯಾಗುವುದಿಲ್ಲ. ಬಹುಶಃ ಬರುವಂತಹ ಚುನಾವಣೆಯ ದೃಷ್ಟಿಯಿಂದ ಈ ಕೆಲಸವನ್ನು ಮಾಡುವಂತಹ ಪ್ರಯತ್ನಗಳು ಆದವು. ಆದರೂ ಸಹ, ಅವುಗಳನ್ನು ಮೆಟ್ಟಿ ನಿಲ್ಲುತ್ತೇವೆ. ಈ ಸರ್ಕಾರಕ್ಕೆ ಬದ್ಧತೆ ಇದೆ ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನಗೆ ಒಂದು doubt ಇದೆ. ಏಕೆಂದರೆ, ಇದರ ಹಿಂದೆ ಬಹಳ ದುಷ್ಕೃತ್ಯಗಳು ನಡೆಯುತ್ತಿವೆ. ಇದರ ಹಿಂದೆ ಕಾಣದ ಕೈಗಳ ಕೈವಾಡ ಬಹಳಷ್ಟು ಇವೆ. ಏಕೆಂದರೆ, ಸರ್ಕಾರಕ್ಕೆ ಮಾಹಿತಿ ಬರುವುದಿಲ್ಲ. ಮಹಾರಾಷ್ಟ್ರದ ಗೃಹ ಸಚಿವರು ರಾತ್ರೋ ರಾತ್ರಿ ಬಂದು ಮಹಾಮನೆಯಲ್ಲಿ ಭಾಷಣ ಮಾಡುತ್ತಾರೆಂದು ಅವರಿಗೆ ಮಾಹಿತಿ ಬಂದರೆ, ನನಗೆ ಆಶ್ಚರ್ಯವಾಗುತ್ತದೆ. ಪೊಲೀಸ್ ಇಲಾಖೆಗೆ ಮಾಹಿತಿ ಬರುವುದಿಲ್ಲ. Intelligence ಗೆ ಮಾಹಿತಿ ಬರುವುದಿಲ್ಲ. ಗೃಹ ಸಚಿವರಿಗೆ ಮಾಹಿತಿ ಬರುವುದಿಲ್ಲ. ವಿರೋಧ ಪಕ್ಷದವರಿಗೆ ಮಾಹಿತಿ ಬರುತ್ತದೆ ಎಂದರೆ, ಏನು ಅರ್ಥ? ಇಂತಹ ಕೆಟ್ಟ ಒಂದು ವಾಸನೆ ಬಹಳ ಬರುತ್ತಿದೆ. ಇಲ್ಲವೆಂದರೆ, ಅವರು ಧೈರ್ಯವಾಗಿ ಎದ್ದು ನಿಂತುಕೊಂಡು ಮಾತನಾಡುತ್ತಿದ್ದರು. ಈ ರೀತಿ ಎದ್ದು ಓಡಿಹೋಗುತ್ತಿರಲಿಲ್ಲ. ಇದರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಹಾಗೂ ತನಿಖೆಯನ್ನು ಮಾಡಬೇಕೆಂದು ನಾನು ತಮ್ಮ ಮುಖಾಂತರ ಗೃಹ ಸಚಿವರಲ್ಲಿ ವಿನಂತಿಯನ್ನು ಮಾಡುತ್ತೇನೆ.

**ಸಭಾಪತಿಯವರು:-** ಸಚಿವರೇ, ತಾವು ಉತ್ತರ ಹೇಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, 'ಅಸಮರ್ಥರು' ಎನ್ನುವಂತಹ ಪದವನ್ನು ಬಳಸಿದ್ದಾರೆ. ಹಾಗಾಗಿ, ಅ ಪದವನ್ನು ಕಡತದಿಂದ ತೆಗೆಸಬೇಕು.

**ಸಭಾಪತಿಯವರು:-** ಸದಸ್ಯರೇ, ಆ ಪದ unparliamentary ಅಲ್ಲ ಬಿಡಿ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಏನೆಂದರೆ, ಇದೆಲ್ಲಾ ನಡೆದಾಗ ರಾಜಕಾರಣವು ಎಲ್ಲೋ ಒಂದು ಕಡೆ ನುಸುಳಿಬಿಡುತ್ತದೆ.

**ಸಭಾಪತಿಯವರು:-** ಸದಸ್ಯರೇ, ಅದನ್ನು ಎಲ್ಲರೂ ಮಾಡುತ್ತಾರೆ

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈಗ ಎಲ್ಲೆಲ್ಲಿ ಈ ರೀತಿ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ, ಅದನ್ನು ಇವರೇ ಮಾಡುತ್ತಿದ್ದಾರೆಂದು ಅಂದು ಕೊಳ್ಳಬೇಕಾಗಿಲ್ಲ. ಸರ್ಕಾರ ಗಮನ ಕೊಡಬೇಕು. ಅದನ್ನು ವಿಚಾರಣೆ ಮಾಡಬೇಕು ಯಾವ ಯಾವ ರಾಜಕೀಯ ಪಕ್ಷಗಳು ಇದರ ಬಗ್ಗೆ ಕೆಟ್ಟ ಹೆಸರು ತರಬೇಕೆಂದು ಈ ರೀತಿ ಮಾಡುತ್ತಿರಬಹುದು. ಅದಕ್ಕೂ ಅವಕಾಶಗಳು ಇವೆ. ಅದಕ್ಕೆ ದಯವಿಟ್ಟು ಯಾರು ಅದರ ಹಿಂದೆ ಇದ್ದಾರೆ ಅವರ ವಿರುದ್ಧ ನಿರ್ದ್ರಾಕ್ಷಿಣ್ಯವಾಗಿ ರಾಜಕೀಯ ಪಕ್ಷ ಇರಲಿ, organisations ಇರಲಿ ಅವರ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕಾಂಗ್ರೆಸ್ ಪಕ್ಷ ಇರಲಿ, ಜೆಡಿಎಸ್ ಪಕ್ಷ ಇರಲಿ ಮತ್ತೊಂದು ಇರಲಿ, ಯಾವುದೇ ಇರಲಿ ಅದರ ಬಗ್ಗೆ ಸೂಕ್ತ ಕ್ರಮಗಳನು ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಸಚಿವರೇ, ಉತ್ತರ ಹೇಳಿ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ, ಮಾನ್ಯ ಎಲ್ಲಾ ಸದಸ್ಯರ ಅನಿಸಿಕೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ. ಈ ರಾಜ್ಯದ ಶಾಂತಿ ಕಾಪಾಡುವ ದೃಷ್ಟಿಯಿಂದ ಏನು ಮಾಡಬಹುದು, ಅದನ್ನೆಲ್ಲಾ ಮಾಡುತ್ತೇವೆ.

**ಸಭಾಪತಿಯವರು:-** ಸಚಿವರೇ, ok. Very good. ಈಗ ಗಮನ ಸೆಳೆಯುವ ಸೂಚನೆ. ಮೊದಲನೆಯದಾಗಿ, ಶ್ರೀ ಕೆ.ಹರೀಶ್‌ಕುಮಾರ್, absent. ಶ್ರೀಮತಿ ವೀಣಾ ಅಚ್ಚಯ್ಯ absent, ಶ್ರೀ ಯು.ಬಿ.ವೆಂಕಟೇಶ್, absent.

(ಮುಂದು)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**(1188) 20-12-2021 (6.40) ಎಂವಿ-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**9. ಗಮನ ಸೆಳೆಯುವ ಸೂಚನೆಗಳು**

**ವಿಷಯ(ಅ)** ಆಹಾರ ಸುರಕ್ಷತೆ ಮತ್ತು ಮಾನದಂಡ ಕಾಯ್ದೆ 2006ನ್ನು ಜಾರಿಗೊಳಿಸಿ ರಾಜ್ಯದಲ್ಲಿ ನಡೆಯುವ ಆಹಾರ ಕಲಬೆರಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ವಿಫಲವಾಗಿರುವ ಕುರಿತು ಹಾಗೂ ರಾಜ್ಯದಲ್ಲಿ ತಯಾರಾಗುವ ಬೆಲ್ಲವು ರಾಸಾಯನಿಕ ವಸ್ತು ಮತ್ತು ಸಕ್ಕರೆ ಮಿಶ್ರಣದಿಂದ ಕೂಡಿರುವ ಕಾರಣದಿಂದ ಕಲಬೆರಕೆ ಬೆಲ್ಲವನ್ನು ಕೊಂಡುಕೊಳ್ಳಲು ಇತರ ರಾಜ್ಯಗಳು ತಿರಸ್ಕರಿಸುತ್ತಿರುವ ವಿಷಯದ ಕುರಿತು.

- - - - - -

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಆಹಾರ ಸುರಕ್ಷತೆ ಮತ್ತು ಮಾನದಂಡ ಕಾಯ್ದೆ 2006ನ್ನು ಜಾರಿಗೊಳಿಸಿ ರಾಜ್ಯದಲ್ಲಿ ನಡೆಯುವ ಆಹಾರ ಕಲಬೆರಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ವಿಫಲವಾಗಿರುವ ಹಾಗೂ ರಾಜ್ಯದಲ್ಲಿ ತಯಾರಾಗುವ ಬೆಲ್ಲವು ರಾಸಾಯನಿಕ ವಸ್ತು ಮತ್ತು ಸಕ್ಕರೆ ಮಿಶ್ರಣದಿಂದ ಕೂಡಿರುವ ಕಾರಣದಿಂದ ಕಲಬೆರಕೆ ಬೆಲ್ಲವನ್ನು ಕೊಂಡುಕೊಳ್ಳಲು ಇತರೆ ರಾಜ್ಯಗಳು ತಿರಸ್ಕರಿಸುತ್ತಿರುವ ವಿಷಯ ಕುರಿತು. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಸಭಾನಾಯಕರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಹೇಳಿಕೆಯನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಹುಶಃ ದೇಶದಲ್ಲೇ ಒಂದು ಏಕರೂಪ ಆಗಿರತಕ್ಕಂಥ ಒಂದು ಕಾಯ್ದೆ ತರಬೇಕೆನ್ನುವ ಉದ್ದೇಶದಿಂದ ಅಹಾರ ಸುರಕ್ಷತೆ ಮತ್ತು ಮಾನದಂಡ ಕಾಯ್ದೆ, 2006 ಅನ್ನು ಜಾರಿಗೆ ತಂದಿದ್ದಾರೆ. ಇದರ ಅಡಿಯಲ್ಲಿ 2011ರಲ್ಲಿ ಇದಕ್ಕೆ ನಿಯಮಗಳನ್ನು ಮಾಡಿದ್ದಾರೆ. ಈ ಹಿಂದೆ ಇದ್ದಂತಹ ಸುಮಾರು ಏಳು ಕಾಯ್ದೆಗಳು ಅಥವಾ orders ಏನು ಇತ್ತು. ಅವಗಳನ್ನೆಲ್ಲಾ ಒಗ್ಗೂಡಿಸಿ ತಂದಿದ್ದು. ಇದರ ಸಂಪೂರ್ಣ ನಿಯಂತ್ರಣ ಇರತಕ್ಕಂಥದ್ದು, ಭಾರ್ರತದ Food Safety and Standards Authority of India (FSSAI) ಅದಕ್ಕೆ ಸಂಬಂಧಪಟ್ಟಂತೆ ಇರುವುದಕ್ಕೆ ಒಳಪಡುತ್ತದೆ. ಅದೇ ರೀತಿ ರಾಜ್ಯದಲ್ಲೂ ಕೂಡ ಈ ಕಾಯ್ದೆ ಅನುಷ್ಠಾನ ಮತ್ತು ರಾಜ್ಯದಲ್ಲಿ ತಯಾರಾಗುವಂತಹ ಉತ್ಪನ್ನ, ಶೇಖರಣೆ, ವಿತರಣೆ ಮತ್ತು ಮಾರಾಟ ಏನಿದೆ ಅವುಗಳನ್ನೆಲ್ಲಾ ನೋಡಿಕೊಳ್ಳುವಂತಹ ಜವಾಬ್ದಾರಿಯನ್ನು Food Safety Commissioner ರವರಿಗೆ ಅಧಿಕಾರವನ್ನು ನೀಡಿದ್ದಾರೆ.

**ಸಭಾಪತಿಯವರು:-** ತಾವು ಇದರ ಬಗ್ಗೆ clarification ಕೇಳಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯಿತು ಅದರ ಬಗ್ಗೆಯೇ ಕೇಳುತ್ತೇನೆ. ಆದರೆ, ಅವರು ಇದರ ಬಗ್ಗೆ ಏನೂ ಕೂಡ ಹೇಳಿಲ್ಲ. ಈಗ ಇದರಲ್ಲಿ ಏನಾಗಿದೆ ಎಂದರೆ, ಹಿಂದಿನ ಕಾಯ್ದೆಗಳಲ್ಲಿ food adulteration ಆಗುತ್ತಿತ್ತು. ಅದೇ ರೀತಿ ವನಸ್ಪತಿ ಮತ್ತುಅನುತ್ಪನ್ನ ಆದೇಶಗಳು ಈ ರೀತಿ ಇದ್ದವು. ಈಗ ಸಂಬಂಧಪಟ್ಟಂತಹ Designated Officers ಇದ್ದರು, ಯಾರು Food Safety Officers ಮತ್ತು ಯಾರೂ Food Analysts ಇದ್ದಾರೆ. ಇವರನ್ನು ಯಾರು ಮಾಡಿದ್ದಾರೆಂದು ಹೇಳಿದರೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ಮಾಡಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿಗಳನ್ನು ಮಾಡಿದ್ದಾರೆ. ಈಗ ಯಾರು Health Inspector ಇದ್ದಾರೆ, ಅವರನ್ನು Designated Officer ಮತ್ತು Food Analyst ಆಗಿ ಮಾಡಿದ್ದಾರೆ. ಇವರುಗಳು ನೂರೆಂಟು ಕೆಲಸಗಳನ್ನು ಮಾಡುತ್ತಿದ್ದಾರೆ ಎಂಬುದು ತಮಗೆ ಗೊತ್ತಿದೆ. ಅಂದರೆ, ಈಗ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಸಾಕಷ್ಟು ಲಸಿಕೆ ಹಾಕುವುದು ಮತ್ತು ಸೋಂಕು ನಿಯಂತ್ರಣ ಇರಬಹುದು. ಅದರಲ್ಲಿ ರಾಷ್ಟ್ರೀಯ ಕಾರ್ಯಕ್ರಮಗಳಾಗಿರುವಂತಹ ಕ್ಷಯರೋಗ ನಿಯಂತ್ರಣ, ಮಲೇರಿಯಾ ಹರಡುವಿಕೆಯ ನಿಯಂತ್ರಣ ಮಾಡುವಂಥದ್ದು ಮತ್ತು ಪೋಷಣಾ ಅಭಿಯಾನ ಇರುವಂಥದ್ದು ಇರಬಹುದು. ಇವುಗಳನ್ನೆಲ್ಲಾ ಮಾಡುವಂತಹವರು ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿದೆಯೇ? ಇದನ್ನು ಇವರು ಮಾಡುವುದಕ್ಕೆ ಸಾಧ್ಯನಾ? ಎಂಬುದು ತಮಗೆ ಗೊತ್ತಿದೆ. ಈಗ ಸಾಕಷ್ಟು ರೀತಿಯ Food Parks ಬಂದಿವೆ. ಈಗ ಮೈಸೂರು ಜಿಲ್ಲೆಯಲ್ಲಿ Food Parks ಇದೆ. ಬೆಂಗಳೂರು ಜಿಲ್ಲೆಯಲ್ಲಿ Food Parks ಇದೆ, ತುಮಕೂರಿನ ವಸಂತನರಸಾಪುರದಲ್ಲಿ ಏಷ್ಯಾ ಖಂಡದಲ್ಲೇ ದೊಡ್ಡದಾದಂತಹ Food Parks ಇದೆ. ಅದೇ ರೀತಿ ಗುಲ್ಬರ್ಗ ಮತ್ತು ಬೆಳಗಾವಿಯಲ್ಲಿ Food Parks ಬರುತ್ತಿವೆ. ಅಲ್ಲಿ ಏನು ಆಹಾರ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ಪದಾರ್ಥಗಳ ಉತ್ಪನ್ನ ಮತ್ತು ದ್ರವ್ಯಗಳು ತಯಾರಾಗುತ್ತವೆ. ಅದನ್ನು ಯಾವ ರೀತಿಯಲ್ಲಿ ಮಾಡುತ್ತಾರೆ ಮತ್ತು ಅದಕ್ಕೆ ಏನು ಸಿಸ್ಟಮ್ ಇದೆ ಎನ್ನುವುದಕ್ಕೆ ಇದರಲ್ಲಿ ಯಾವುದೇ ಆದಂತಹ ಉತ್ತರವಿಲ್ಲ. ಕಲಬೆರಕೆಯ ಬಗ್ಗೆ ಹೇಳುವುದಾದರೆ, ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ತಮಗೂ ಕೂಡ ಇದರ ಬಗ್ಗೆ ಅರಿವು ಇರಬಹುದು. ರಾಜ್ಯದಲ್ಲಿ ಕೇವಲ ನಾಲ್ಕೇ ನಾಲ್ಕು ಪ್ರಯೋಗಾಲಯಗಳಿವೆ. ಅವುಗಳೆಂದರೆ, ಬೆಂಗಳೂರು ನಗರ ಜಿಲ್ಲೆಯಲ್ಲಿ ಎರಡು ಪ್ರಯೋಗಾಲಯಗಳಿವೆ. ಅದು ಯಾವುದೆಂದರೆ, Public Health Institute, Seshadri Road ಮತ್ತು ಯಲ್ಲಮ್ಮ ದಾಸಪ್ಪಆಸ್ಪತ್ರೆಯಲ್ಲಿ ಇದೆ. ಮೈಸೂರು ಜಿಲ್ಲೆಯಲ್ಲಿ NPC Hospital ನಲ್ಲಿ ಇದೆ. ಬೆಳಗಾವಿ ಜಿಲ್ಲೆಯಲ್ಲಿ Government Vaccine Institute, Tilakawadi ಯಲ್ಲಿ ಇದೆ. ಅದೇ ರೀತಿ ಕಲ್ಯಾಣ ಕರ್ನಾಟಕದಲ್ಲಿ Old Hospital ನಲ್ಲಿ ಇರತಕ್ಕಂಥದ್ದು. ಇನ್ನು NABL (National Accreditation Board for Testing and Calibration Laboratories) accredited ಆಗಿರುವಂಥದ್ದು ಇಡೀ ರಾಜ್ಯಕ್ಕೆ ಐದು ಪ್ರಯೋಗಾಲಯಗಳಿವೆ. ಇವುಗಳೆಲ್ಲವೂ ಕೂಡ ಏನು ಕಲಬೆರಕೆ ಪದಾರ್ಥ ಇದೆ ಅದಕ್ಕೆ ಏನು ದೂರುಗಳು ಬರುತ್ತವೆ. ಅದಕ್ಕೆ ಸಂಬಂಧಪಟ್ಟಂತೆ ಇಷ್ಟು ಸಾಕಾಗುತ್ತವೆಯೇ? ಈ ವ್ಯವಸ್ಥೆಗೋಸ್ಕರ ಏನು ಮಾಡಿದ್ದಾರೆ? ತಮಗೆ ಗೊತ್ತಿರುವಂತೆ ಮೊನ್ನೆಯ ದಿವಸ ಎರಡು-ಮೂರು ಕಡೆಗಳಲ್ಲಿ ವರದಿಯಾಯಿತು. “The bitter truth of Karnataka's Jaggery” ಎಂದು ಮಂಡ್ಯ ಜಿಲ್ಲೆಯಲ್ಲಿ ಬೆಲ್ಲವನ್ನು ತಯಾರು ಮಾಡಿ, ಗುಜರಾತ್ ಮತ್ತು ರಾಜಸ್ಥಾನ ಮತ್ತು ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸುತ್ತಿದ್ದರು. ಅಲ್ಲಿ ಏನಾಯಿತು ಎಂದರೆ, ಆ ಬೆಲ್ಲಗಳಲ್ಲಿ ರಾಸಾಯನಿಕ ವಸ್ತುಗಳು ಮಿಶ್ರಣವಾಗಿದೆ ಮತ್ತು unhygienic ಎಂದು ತಿರಸ್ಕಾರವಾಗಿದೆ. ಅದೇ ರೀತಿ ತಮಗೆ ಗೊತ್ತಿರುವಂತೆ, ತಮ್ಮ ಸ್ವಂತ ತಾಲ್ಲೂಕುಗಳಲ್ಲಿ ಅಂದರೆ, ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ಸಾವಯವ ಬೆಲ್ಲವನ್ನು ಪಡಿರೂಪದಲ್ಲಿ Jaggery Institute of Technology, Dharwad ಅವರ ಮಾರ್ಗದರ್ಶನದಲ್ಲಿ ಮಾಡಿದರು. ಇದು ದೇವರ ಪ್ರಸಾದಕ್ಕೆ ಕೊಡುವಂತಹ ಬೆಲ್ಲ. ನನಗೆ ತಿಳಿದಿರುವಂತೆ ಈ ಬೆಲ್ಲ ಮಾಸ್ಕೋದಲ್ಲಿರುವ ಇಸ್ಕಾನ್ ದೇವಸ್ಥಾನಕ್ಕೆ ರಫ್ತಾಗುತ್ತಿದೆ. ಅಲ್ಲಿನ ಇಸ್ಕಾನ್ ದೇವಸ್ಥಾನದಲ್ಲಿ ಜಾಸ್ತಿ ಭಕ್ತರು ಇದ್ದಾರೆ. ಅದೇ ರೀತಿಯಾಗಿ ವೈಯಕ್ತಿವಾಗಿ ಕೆಲವು traders ಗಳು MoU ಮಾಡಿಕೊಂಡು ಕೂಡ ಮಾಸ್ಕೋಗೆ ರಫ್ತು ಮಾಡುತ್ತಾರೆ.

**ಸಭಾಪತಿಯವರು:-** ಈಗ ಅದಕ್ಕೆ ಏನು ಮಾಡಬೇಕೆಂದು ತಿಳಿಸಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಆದರೆ, ಈಗ ಏನಾಗಿದೆ ಎಂದರೆ, ಬೆಲ್ಲದ ಗುಣಮಟ್ಟ ಸರಿಯಿಲ್ಲ ಹಾಗೂ ಅದಕ್ಕೆ ರಾಸಾಯನಿಕ ವಸ್ತುಗಳ ಮಿಶ್ರಣವಾಗುತ್ತಿದೆ ಎಂದು ಅವುಗಳನ್ನೆಲ್ಲಾ ಪೂರ್ತಿ ತಿರಸ್ಕಾರ ಮಾಡುತ್ತಿದ್ದಾರೆ. ಆದುದರಿಂದ ಈ ವ್ಯವಸ್ಥೆಯನ್ನು ಸರಿಪಡಿಸುವ ಸಲುವಾಗಿ ಸರ್ಕಾರ ಏನು ಮಾಡಿದೆ? ಏಕೆಂದರೆ, ಇದಕ್ಕೆ Health Commissioner ಅನ್ನು Food Safety

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

Officer ಎಂದು ಮಾಡಿದ್ದಾರೆ. ಆದರೆ, ಈ ಕೆಲಸ ಅವರ ಕೈಯಲ್ಲಿ ಆಗುವುದಿಲ್ಲ ಮತ್ತು Health Inspector ಕೈಯಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಅವರು ಬೇರೆ ವ್ಯವಸ್ಥೆ ಮಾಡಬೇಕು. ಅವರು ಏನು ಮಾಡುತ್ತಿದ್ದಾರೆ? ಏಕೆಂದರೆ, ಇದು ಅವರಿಗೆ ಅರಿವಾಗಬೇಕು.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ,....

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾಜಿ ಮೇಯರ್ ಆದಂತಹ ಶ್ರೀ ಪಿ.ಆರ್.ರಮೇಶ್‌ರವರಿಗೆ ಇದರ ಬಗ್ಗೆ ತುಂಬಾ ಅರಿವು ಇದೆ. ಹಾಗಾಗಿ, ಇದರ ಬಗ್ಗೆ ಮಾತನಾಡಲು ಅವರಿಗೆ ಒಂದು ಅವಕಾಶ ಮಾಡಿಕೊಡಿ. ಅವರು ಅದರ ಬಗ್ಗೆ ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಉಲ್ಲೇಖ ಮಾಡಿರುವಂತಹ ವಿಚಾರ ಅತ್ಯಂತ ಗಂಭೀರವಾದುದು. ಏಕೆಂದರೆ, ಅವರು ಕೇಳುವಾಗ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಮಂಡ್ಯ ಜಿಲ್ಲೆ, ಬಳ್ಳಾರಿ ಜಿಲ್ಲೆ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಬೆಲ್ಲ ತಯಾರಿಕೆಯ ಘಟಕಗಳಿಗೆ ಹೋಗಿ ನೀವು ಏನಾದರೂ ಪರಿಶೀಲನೆ ಮಾಡಿದ್ದೀರಾ ಎಂದು ಕೇಳಿದ್ದಾರೆ. ಅದರಲ್ಲಿ ಮಂಡ್ಯ ಜಿಲ್ಲೆಯಲ್ಲಿ ಸುಮಾರು 60ಕ್ಕೂ ಹೆಚ್ಚು ಬೆಲ್ಲ ತಯಾರಿಕೆ ಘಟಕಗಳಿಗೆ ಅನಿರೀಕ್ಷಿತ ಭೇಟಿ ನೀಡಿದಾಗ, ಸುಮಾರು 24 ಬೆಲ್ಲದ ಆಹಾರ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ಅದನ್ನು ಪರೀಕ್ಷೆಗೆ ಒಳಪಡಿಸಿ, ಅದಕ್ಕೆ ಸೆಕ್ಷನ್ 51ರ ಅಡಿಯಲ್ಲಿ ಅವರಿಗೆ ದಂಡ ಹಾಕುವಂತಹ ಕೆಲಸವನ್ನು ಮಾಡಿದ್ದೇವೆಂದು ಉತ್ತರವನ್ನು ನೀಡಿದ್ದೇವೆ. ಬಳ್ಳಾರಿ ಜಿಲ್ಲೆಯಲ್ಲಿ ಬೆಲ್ಲ ತಯಾರಿಕಾ ಘಟಕಗಳಿಗೆ ಅನೀರಿಕ್ಷಿತ ಭೇಟಿ ನೀಡಿದಾಗ, 15 ಬೆಲ್ಲದ ಆಹಾರ ಸಾಮಾಗ್ರಿಗಳನ್ನು ಪರಿಶೀಲನೆ ಮಾಡಿ, ಅದನ್ನು ಗುಣಮಟ್ಟದ ವಿಶ್ಲೇಷಣೆಗೆ ಒಳಪಡಿಸಿದಾಗ, ಅದರಲ್ಲಿರುವಂತಹ ತಪ್ಪುಗಳ ಆಧಾರದ ಮೇಲೆ ರೂ.18,000/- ದಂಡ ವಿಧಿಸಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ 44 ಬೆಲ್ಲ ತಯಾರಿಕಾ ಘಟಕಗಳಿಗೆ ಅನಿರೀಕ್ಷಿತ ಭೇಟಿ ನೀಡಲಾಗಿದೆ.

**ಸಭಾಪತಿಯವರು:-** ಅದು ಉತ್ತರದಲ್ಲಿ ಇದೆ. ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಏನೆಂದು ಹೇಳಿಬಿಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನಾನು ಕೇಳಿರುವುದನ್ನು ಅರ್ಥ ಮಾಡಿಕೊಂಡಿಲ್ಲ. ಅಲ್ಲಿನ ವ್ಯವಸ್ಥೆ ಸರಿಯಿಲ್ಲ. ಆ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಏನು ಮಾಡುತ್ತಾರೆಂದು ಹೇಳಲಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಅದರ ವ್ಯವಸ್ಥೆ ಸರಿಪಡಿಸುವುದಕ್ಕೆ ಏನು ಮಾಡುತ್ತೀರೆಂದು ಹೇಳಿಬಿಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗ regular ಕೆಲಸಕ್ಕೆ ಸರಿಯಾಗಿ, DHO (District Health Officer), THO (Taluk Health Officer) ಮತ್ತು Health Inspector ಗಳಾಗಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗ ನಾಲ್ಕು ವಿಭಾಗದಲ್ಲಿ ಆಹಾರ ಸುರಕ್ಷತಾ ಪರಿಶೀಲನಾ ಘಟಕಗಳಿವೆ. ಇದನ್ನು ಉತ್ತರದಲ್ಲಿ ತಿಳಿಸಲಾಗಿದೆ. ಅದನ್ನು ತಾವು ಕೂಡ ಗಮನಿಸಿದ್ದೀರಿ. ನಾವು ಇದನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿರುವ ವಿಚಾರವೆಂದರೆ, ಇದು ಕೇವಲ ಆಹಾರ ಕಲಬೆರಕೆಯಾಗಿ ಮಾತ್ರ ಉಳಿದಿಲ್ಲ. ಈಗ ತೆಂಗಿನ ಎಣ್ಣೆಗೆ ಕಲಬೆರಕ್ಕೆ ಮಾಡಿರುವಂಥದ್ದು ಮತ್ತು ಬೇರೆ ಬೇರೆ ಕಲಬೆರಕೆ ಪದಾರ್ಥದಲ್ಲಿ ಕ್ಯಾನ್ಸರ್ ಎಂಬ ಭೀಕರ ಕಾಯಿಲೆ ಬರುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದಂತಹ ಜವಾಬ್ದಾರಿ ನಮಗೆ ಇದೆ. ಆ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಈ ಹಿಂದೆ ವಿರೋಧ ಪಕ್ಷದಲ್ಲಿ ಇದ್ದಾಗ ಇದೇ ರೀತಿಯ ಪ್ರಶ್ನೆಗಳನ್ನು ಕೇಳಿದ್ದೆ. ಹಾಗಾಗಿ, ನಾನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಸಚಿವರ ಜೊತೆ ಮಾತನಾಡಿ, ಇದಕ್ಕೆ ಮತ್ತಷ್ಟು ಸಮರ್ಪಕವಾಗಿ ವಿವರವಾದ ಉತ್ತರವನ್ನು ನೀಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಅದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ತಿಳಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎ.ತಿಪ್ಪೇಸ್ವಾಮಿ ಮತ್ತು ಮಾನ್ಯ ಪಿ.ಆರ್.ರಮೇಶ್‌ರವರನ್ನು ಕರೆದು ಇದರ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಪಡೆದುಕೊಂಡು ಇದಕ್ಕೆ ಕ್ರಮವನ್ನು ಕೈಗೊಳ್ಳುತ್ತೇವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1189) 20.12.2021 06.50 LL-BNS **(ಸಭಾಪತಿಯವರ ಉಪಸ್ಥಿತಿ)**

**ಆ) ವಿಷಯ:- ಕಂದಾಯ ಇಲಾಖೆಯ ನ್ಯಾಯಾಲಯಗಳ ಡಿಕ್ರಿ ಆದೇಶದಂತೆ ಮ್ಯುಟೇಷನ್ ಮಾಡಿ ಪಹಣಿಯಲ್ಲಿ ಬದಲಾವಣೆ ಮಾಡಲು 11"ಇ" ನಕ್ಷೆ ಹಾಗೂ ಇತ್ಯಾದಿ ದಾಖಲೆಗಳ ಅವಶ್ಯಕತೆ ಇರುವುದಾಗಿ ತಿಳಿಸುತ್ತಿರುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತಿರುವ ಕಾರಣದಿಂದ ಮ್ಯುಟೇಷನ್ ಮಾಡಿ ಪಹಣಿಯಲ್ಲಿ ಸೂಕ್ತ ಬದಲಾವಣೆ ಮಾಡಲು ಸರಳೀಕೃತ ವ್ಯವಸ್ಥೆ ಜಾರಿಗೆ ತರುವ ಕುರಿತು.**

\- - - - - -

**ಶ್ರೀ ಕೆ.ಹರೀಶ್ ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ಹಿಂದೆ ಕಂದಾಯ ಇಲಾಖೆಯಲ್ಲಿ ನ್ಯಾಯಾಲಯಗಳ ಡಿಕ್ರಿ ಆದೇಶದಂತೆ ಮ್ಯುಟೇಷನ್ ಮಾಡಿ ಪಹಣಿಯಲ್ಲಿ ಬದಲಾವಣೆಯಾಗುತ್ತಿತ್ತು. ಆದರೆ, ಇತ್ತೀಚಿನ ತಂತ್ರಾಂಶದಲ್ಲಿ ಅದಕ್ಕೆ ಅವಕಾಶವಿಲ್ಲವೆಂದು ತಿಳಿಸಿ, ಅನಾವಶ್ಯಕವಾಗಿ 11"ಇ" ನಕ್ಷೆ ಹಾಗೂ ಇತ್ಯಾದಿ ದಾಖಲಾತಿಗಳನ್ನು ಬೇಕೆಂದು ಜನಸಾಮಾನ್ಯರನ್ನು ಅಲೆದಾಡಿಸಲಾಗುತ್ತಿದೆ. ಆದುದರಿಂದ, ನ್ಯಾಯಾಲಯದ ಆದೇಶದಂತೆ, ಮ್ಯುಟೇಷನ್ ಮಾಡಿ, ಪಹಣಿಯಲ್ಲಿ ಸೂಕ್ತವಾದ ಬದಲಾವಣೆ ಮಾಡಲು ಸರಳೀಕೃತ ವ್ಯವಸ್ಥೆ ಜಾರಿಗೆ ತರುವ ಮೂಲಕ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ನಿವಾರಿಸುವ ಬಗ್ಗೆ ಸ್ಪಷ್ಟ ಆದೇಶ ಹೊರಡಿಸುವಂತೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರು ಹೇಳಿರುವ ವಿಚಾರವೇನೆಂದರೆ, ನ್ಯಾಯಾಲಯದ ಆದೇಶವಾಗಿದೆ, ಡಿಕ್ರಿ ಆಗಿದೆ. ಆದರೆ, ಮ್ಯುಟೇಷನ್ ಮಾಡಿ ಪಹಣಿಯಲ್ಲಿ ಹೆಸರನ್ನು ಹಾಕುವುದಕ್ಕೆ 11”ಇ” ನಕ್ಷೆ ಬೇಕೆಂದು ಹೇಳುತ್ತಾರೆ. ಆದರೆ, ಆ 11”ಇ” ನಕ್ಷೆ ಮಾಡುವುದರಿಂದ ವಿಳಂಬವಾಗುತ್ತದೆ. ಆ ಕಾರಣದಿಂದ ಅದನ್ನು ಬದಲಾವಣೆ ಮಾಡಬೇಕೆಂಬುದು ಅವರ ಚರ್ಚೆ ಒಟ್ಟು ವಿಷಯ. ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ವಿಭಾಗಪತ್ರ ಮತ್ತು ಭಾಗಶಃ ವಿಭಾಗ ಪತ್ರ ಮತ್ತು ಪರಭಾರೆ ಮಾಡುವ ಪ್ರಕರಣಗಳಲ್ಲಿ 11”ಇ” ನಕ್ಷೆಯನ್ನು ಕಡ್ಡಾಯವಾಗಿ ಏತಕ್ಕಾಗಿ ಮಾಡಲಾಗಿದೆಯೆಂದರೆ, ಉದಾಹರಣೆಗೆ ಒಬ್ಬ ವ್ಯಕ್ತಿಗೆ 2 ಎಕರೆ ಜಮೀನು ಇದ್ದು, ಅದರಲ್ಲಿ 1 ಎಕರೆ ಜಮೀನನ್ನು ಮಾರಾಟ ಮಾಡುವಂತಹ ಪರಿಸ್ಥಿತಿ ಇದ್ದರೆ, ಆತನಿಗೆ ನೇರವಾಗಿ ಮ್ಯುಟೇಷನ್ ಮಾಡಿಬಿಟ್ಟರೆ ಅಥವಾ ಆರ್.ಟಿ.ಸಿ. ದಾಖಲು ಮಾಡಿದರೆ ಆತನಿಗೆ ತನ್ನ ಜಾಗದ ಗಡಿ ಗುರುತಿನ ಬಗ್ಗೆ ಸ್ಪಷ್ಟತೆ ಬೇಕೆಂಬ ಕಾರಣಕ್ಕಾಗಿ 11”ಇ” ನಕ್ಷೆಯನ್ನು ಕಡ್ಡಾಯ ಮಾಡಲಾಗಿದೆ.

ಕೆಲವೊಂದು ಪ್ರಕರಣಗಳಲ್ಲಿ ಇಡೀ ಜಾಗವನ್ನು ಸರ್ವೆ ಮಾಡಿದಾಗ, ಉದಾಹರಣೆಗೆ 10 ಎಕರೆ ಜಮೀನು ಇದ್ದರೆ, ಅಲ್ಲಿ 9 ½ ಎಕರೆ ಜಾಗ ಬಂದಿರುತ್ತದೆ. ಇಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟವರು ಮಾನ್ಯ ನ್ಯಾಯಾಲಯಗಳಲ್ಲಿ ದಾವೆ ಹೂಡಿದ್ದು, ಅದರ ಬಗ್ಗೆ ಮಾನ್ಯ ನ್ಯಾಯಾಲಯಗಳಿಂದ ಹಲವು ನಿರ್ದೇಶನಗಳಿರುತ್ತವೆ. ಅಷ್ಟಾಗಿಯೂ ಕೂಡ ಯಾವುದೇ ಖಾತೆದಾರನು ತಾನು ಪಡೆದುಕೊಂಡಂತಹ ಜಮೀನಿನ ಗಡಿ ಗುರುತಿನ ಹದ್ದುಬಸ್ತು ಸಮರ್ಪಕವಾಗಬೇಕಾದರೆ 11”ಇ” ನಕ್ಷೆ ಕಡ್ಡಾಯವಾಗಬೇಕೆನ್ನುವುದು ಈಗಿರುವಂತಹ ನಿಯಮವಾಗಿರುತ್ತದೆ. ಇದು ಹಿಂದಿನಿಂದಲೂ ಕೂಡ ಸರ್ಕಾರ ಕಾವೇರಿ ತಂತ್ರಾಂಶ ಸೇರಿದಂತೆ, ಬೇರೆ ಬೇರೆ ಯೋಜನೆಗಳನ್ನು ರೂಪಿಸಿ, ಇದನ್ನು ಕಡ್ಡಾಯ ಮಾಡಿರುತ್ತದೆ. ಆದರೆ, ಈ ವಿಚಾರದಲ್ಲಿ ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ, ಕೆಲವು ವೇಳೆ 11”ಇ” ನಕ್ಷೆ ತಯಾರು ಮಾಡುವುದಕ್ಕೆ ವಿಳಂಬವಾದರೆ, ಮ್ಯುಟೇಷನ್ ಮಾಡುವುದು ವಿಳಂಬವಾಗುತ್ತದೆ ಎನ್ನುವುದಾಗಿದೆ. ಅದಕ್ಕೋಸ್ಕರ ಯಾವುದಾದರೂ ಕಾರಣಕ್ಕೆ ಈಗಿರುವಂತಹ ಸರ್ವೆಯರ್ 11”ಇ” ನಕ್ಷೆ ತಯಾರು ಮಾಡುವುದಕ್ಕೆ ವಿಳಂಬ ಮಾಡಿದರೆ ನೊಂದಾಯಿತ ಸರ್ವೆಯರ್ ಮುಖಾಂತರವಾದರೂ ಮಾಡಿ, ಇದನ್ನು ಕಡ್ಡಾಯಗೊಳಿಸಬೇಕು ಎನ್ನುವುದು ಸರ್ಕಾರದ ನಿಲುವು. ಹಾಗಾಗಿ, ಇದರಲ್ಲಿರುವ ವಿಳಂಬವನ್ನು ತಪ್ಪಿಸುತ್ತೇವೆ. ಆದರೆ, 11”ಇ” ನಕ್ಷೆ ಮಾಡುವುದನ್ನು ತಪ್ಪಿಸಿದರೆ ಅವರಿಗೆ ತಮ್ಮ ಭೂಮಿ ಮೇಲಿರುವಂತಹ ಗಡಿ ಗುರುತಿನ ಸಮಸ್ಯೆಗಳು ಬರುತ್ತದೆ ಎಂಬ ಆತಂಕ ಸರ್ಕಾರಕ್ಕೆ ಇರುತ್ತದೆ. ಆ ಕಾರಣಕ್ಕಾಗಿ 11”ಇ” ನಕ್ಷೆ ಕಡ್ಡಾಯ ಮಾಡಲಾಗಿರುತ್ತದೆ.

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, 11”ಇ” ನಕ್ಷೆಯಿಂದ ವಿಳಂಬವಾಗುತ್ತದೆ ಎನ್ನುವುದು ಸಮಸ್ಯೆ ಅಲ್ಲ. ಬಹುಶಃ ಈ ಸಮಸ್ಯೆ ಹೆಚ್ಚಾಗಿ ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಯ ಸಮಸ್ಯೆಯಾಗಿರುತ್ತದೆ. ಈ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ಮಾನ್ಯ ಕಂದಾಯ ಸಚಿವರು ಈ ಸದನದಲ್ಲಿ ಹಾಜರಿದ್ದರೆ ಅನುಕೂಲವಾಗುತ್ತಿತ್ತು. ಮಾನ್ಯ ಸಭಾನಾಯಕರು ಸಹ ಉಡುಪಿ ಜಿಲ್ಲೆಯವರು ಆಗಿರುವುದರಿಂದ ಖಂಡಿತವಾಗಿಯೂ ಸಹ ಈ ಸಮಸ್ಯೆಯನ್ನು ಬಗೆಹರಿಸುತ್ತಾರೆಂಬ ಭರವಸೆ ಇರುತ್ತದೆ. ಇಲ್ಲಿ ಏನಾಗಿದೆಯೆಂದರೆ, ಪಹಣಿಯಲ್ಲಿ ದಾಖಲಾತಿ ಮಾಡಲು, ಈ ಹಿಂದೆ ರೈತರು ನ್ಯಾಯಾಲಕ್ಕೆ ಹೋಗಿ ಡಿಕ್ರಿ ಮಾಡಿಸಿಕೊಂಡಿರುತ್ತಿದ್ದರು. ಆ ಡಿಕ್ರಿ ಮಾಡಿಸಿಕೊಂಡ ನಂತರ 2019ರವರೆಗೆ ಇದ್ದಂತಹ ವ್ಯವಸ್ಥೆಯಲ್ಲಿ ಅದನ್ನು ತಹಶೀಲ್ದಾರ್‌ರವರು ಮ್ಯುಟೇಷನ್ ಮಾಡಿ, ಪಹಣಿಗಳಲ್ಲಿ ದಾಖಲಾತಿಯನ್ನು ಮಾಡುತ್ತಿದ್ದರು.

ಆದರೆ, ಈಗಿರುವಂತಹ ವ್ಯವಸ್ಥೆಯಲ್ಲಿ 11"ಇ" ನಕ್ಷೆ ಕೇಳುತ್ತಿರುವುದರಿಂದ ಏನಾಗಿದೆಯೆಂದರೆ, 11"ಇ" ನಕ್ಷೆ ಸಿಗಬೇಕಾದರೆ ಖಾತೆದಾರರು ಅರ್ಜಿ ಸಲ್ಲಿಸಬೇಕು. ಉದಾಹರಣೆಗೆ ಒಬ್ಬ ಯಜಮಾನ ತನ್ನ ಹೆಸರಿನಲ್ಲಿ ಇದ್ದಂತಹ ಆಸ್ತಿಯನ್ನು ಆತನ ಮಕ್ಕಳಿಗೆ ಪಹಣಿ ಮಾಡುವಾಗ ಆತನು ರಾಜೀ ಡಿಕ್ರಿ ಮಾಡಿಕೊಂಡು, ಅದನ್ನು ಪಹಣಿಯಲ್ಲಿ ದಾಖಲು ಮಾಡುವಂತಹ ವ್ಯವಸ್ಥೆ ಇತ್ತು. ಆದರೆ, ಇವೊತ್ತಿನ ದಿವಸ 11"ಇ" ನಕ್ಷೆ ಮಾಡಬೇಕಾದರೆ ಖಾತೆದಾರ/ಯಜಮಾನರು ಸತ್ತು ಹೋಗಿದ್ದು, 11"ಇ" ನಕ್ಷೆ ಮಾಡುವುದಕ್ಕಾಗಿ ಅರ್ಜಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದಾಗಿ, ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಏಕೆಂದರೆ, ಪಹಣಿಗಳು ಆಗದೇ ಇರುವುದರಿಂದ ಅವರಿಗೆ ಯಾವುದೇ ಸಾಲ-ಸೌಲಭ್ಯಗಳು ಸಿಗುವುದಿಲ್ಲ ಮತ್ತು ಸರ್ಕಾರದ ಸವಲತ್ತುಗಳು ಕೂಡ ಸಿಗುವುದಿಲ್ಲ ಹಾಗೂ ಆ ದಾಖಲಾತಿಗಳು ಇಲ್ಲದೇ ಇದ್ದರೆ ಅವರ ಹೆಸರಲ್ಲೆ ಏನು ಇದೆ ಅದರಿಂದಾಗಿ ಅವರಿಗೆ ಯಾವುದೇ ಪ್ರಯೋಜನ ಆಗುವುದಿಲ್ಲ.

ಈ ಹಿಂದೆ 2019ರವರೆಗೆ ಪಹಣಿ-ಮ್ಯುಟೇಷನ್ ದಾಖಲಾತಿಗಳನ್ನು ಕೊಡುತ್ತಿದ್ದರು. ಆದರೆ, ಇವೊತ್ತಿನ ದಿವಸ ನ್ಯಾಯಾಲಯದ ಆದೇಶ ಇದ್ದರು ಸಹ ಅದು ಏತಕ್ಕೆ ವಿಳಂಬವಾಗುತ್ತಿದೆಯೆಂದರೆ, ಕಂದಾಯ ಇಲಾಖೆಯ ಕಾರ್ಯದರ್ಶಿಯವರ ಒಂದು ಸುತ್ತೋಲೆಯಿಂದ ಅದು ವಿಳಂಬವಾಗುತ್ತಿರುತ್ತದೆ. ಮಾನ್ಯ ನ್ಯಾಯಾಲಯದ ಡಿಕ್ರಿ ಇದ್ದರೂ ಸಹ ಅದು ವಿಳಂಬವಾಗುತ್ತಿರುತ್ತದೆ. ಅಲ್ಲದೇ, ಸದರಿ ಡಿಕ್ರಿ ಆಗಬೇಕಾದರೆ, ಮಾನ್ಯ ನ್ಯಾಯಾಲಯಕ್ಕೆ ಒಂದು ಅಧಿಕೃತ ನಕ್ಷೆ ಕೊಡಲಾಗಿರುತ್ತದೆ. ಅದನ್ನು ಸಹ ಕಂದಾಯ ಇಲಾಖೆಯವರು ಮಾನ್ಯ ಮಾಡದೇ 11"ಇ" ನಕ್ಷೆ ನೀಡಬೇಕೆಂದು ಹೇಳುತ್ತಾರೆ. ಆದರೆ, ಮಾನ್ಯ ನ್ಯಾಯಾಲಯಕ್ಕೆ ಖಾತೆದಾರರು ಪಹಣಿ ಮಾಡಿಕೊಂಡು ಕೊಟ್ಟಂತಹ ನಕ್ಷೆ ಕೂಡ ಅಧಿಕೃತ ನಕ್ಷೆಯಾಗಿರುತ್ತದೆ. ಅದನ್ನು ಮಾನ್ಯ ಮಾಡದೇ ಪಹಣಿಗಳಲ್ಲಿ ಬದಲಾವಣೆ ಮಾಡದೇ ಇರುವುದರಿಂದ ಇವೊತ್ತಿನ ದಿನ ರೈತರಿಗೆ ಬಹಳಷ್ಟು ತೊಂದರೆಯಾಗಿರುತ್ತದೆ. ಆದುದರಿಂದ, 2019ರಲ್ಲಿ ಕಂದಾಯ ಇಲಾಖೆಯ ಕಾರ್ಯದರ್ಶಿಯವರು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೊರಡಿಸಿದಂತಹ ಸುತ್ತೋಲೆಯನ್ನು ಹಿಂಪಡೆದು ಸಾವಿರಾರು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಈಗಿರುವ ಮಾಹಿತಿಯನ್ನು ಕೊಡುತ್ತೇನೆ ಹಾಗೂ ಆ ಬಗ್ಗೆ ನಂತರ ವಿಸ್ತೃತವಾದ ಉತ್ತರವನ್ನು ಕೊಡುತ್ತೇನೆ. ಆದರೆ, ಒಂದು ಸಮಸ್ಯೆಯನ್ನು ಇತ್ಯರ್ಥಪಡಿಸುವಾಗ ಮತ್ತೊಂದು ಸಮಸ್ಯೆಯನ್ನು ಸೃಷ್ಟಿ ಮಾಡಬಾರದು ಎನ್ನುವುದು ಇದರಲ್ಲಿರತಕ್ಕಂತಹ ಸರ್ಕಾರದ ಇಂಗಿತವಾಗಿರುತ್ತದೆ. ಮಾನ್ಯ ಸದಸ್ಯರು ಹೇಳಿದಂತಹ ಯಾವುದಾದರೂ ಕಾರಣಕ್ಕೆ ಅಂದರೆ, ವಿಭಾಗ ಪತ್ರ ಮಾಡುವುದಕ್ಕೆ ಅಥವಾ ರಿಜಿಸ್ಟ್ರೇಷನ್ ಮಾಡುವುದಕ್ಕೆ ಅಥವಾ ಇರುವಂತಹ ಆಸ್ತಿಯನ್ನು ಪರಭಾರೆ ಮಾಡುವುದಕ್ಕೆ ಮಾತ್ರ 11"ಇ" ನಕ್ಷೆಯನ್ನು ಕಡ್ಡಾಯ ಮಾಡಲಾಗಿರುತ್ತದೆ. ಅಂದರೆ, ಯಾವುದಾದರೂ ಕಾರಣಕ್ಕೆ ವಿಭಾಗ ಪತ್ರ ಆಗುವಾಗ ಮತ್ತು ಮಾಲೀಕನ ಹಕ್ಕನ್ನು ಪರಭಾರೆ ಮಾಡುವಂತಹ ಸಂದರ್ಭದಲ್ಲಿ 11"ಇ" ನಕ್ಷೆ ಕಡ್ಡಾಯ ಮಾಡಲಾಗಿರುತ್ತದೆ. ಆದರೆ, ಏಕ ಮಾಲೀಕತ್ವ ಅಂದರೆ, ಒಂದು ಜಾಗವನ್ನು ನಾನು ಮತ್ತೊಬ್ಬರಿಗೆ ಕೊಡುವಂತಹ ಸಂದರ್ಭದಲ್ಲಿ 11"ಇ" ನಕ್ಷೆಯನ್ನು ಕಡ್ಡಾಯ ಮಾಡಿರುವುದಿಲ್ಲ. ಆತ ತೆಗೆದುಕೊಂಡ ಜಮೀನಿನ ಗಡಿ ರಕ್ಷಣೆ ಮಾಡುವ ಜವಾಬ್ದಾರಿ ಇರುವುದರಿಂದ 11"ಇ" ನಕ್ಷೆಯನ್ನು ಕಡ್ಡಾಯ ಮಾಡಲಾಗಿರುತ್ತದೆ. ಜೊತೆಗೆ, ಈ ಮಧ್ಯದಲ್ಲಿ ನ್ಯಾಯಾಲಯ ಆದೇಶ ಕೊಟ್ಟಿದ್ದರೂ ಸಹ, ಸರ್ಕಾರದ ಒಂದು ಸುತ್ತೋಲೆ ಅಡ್ಡ ಬಂದಿರುತ್ತದೆ. ಅದನ್ನು ಪರಿಶೀಲನೆ ಮಾಡಿ, ಅದನ್ನು ಸರಳೀಕರಣ ಮಾಡುವ ಕೆಲಸ ಮಾಡುತ್ತೇವೆ.

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, 11"ಇ" ನಕ್ಷೆ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ಮಾನ್ಯಗೊಂಡ ನಕ್ಷೆ ಈ ಎರಡೂ ನಕ್ಷೆಗಳಲ್ಲಿ ವ್ಯತ್ಯಾಸ ಇರುವುದಿಲ್ಲ. ಏಕೆಂದರೆ, ನ್ಯಾಯಾಲಯಕ್ಕೆ ಕೊಟ್ಟಿರುವಂತಹ ಅಧಿಕೃತ ನಕ್ಷೆಯ ಮುಖಾಂತರವೇ ಆ ರಾಜೀ ಡಿಕ್ರಿ ಆಗಿರುತ್ತದೆ. ಹಾಗಾಗಿ, ಸದ್ಯದ ಸುತ್ತೋಲೆಯಿಂದ ಬಹಳಷ್ಟು ತೊಂದರೆಯಾಗುತ್ತಿರುತ್ತದೆ. ದಯಮಾಡಿ ಆ ಸುತ್ತೋಲೆಯನ್ನು ಹಿಂಪಡೆಯಬೇಕು. ಇದರಲ್ಲಿ ಒಂದು ಸಮಸ್ಯೆಯಿಂದ ಮತ್ತೊಂದು ಸಮಸ್ಯೆ ಉದ್ಭವವಾಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಿವಿಲ್ ನ್ಯಾಯಾಲಯದಲ್ಲಿ ಮಾನ್ಯಗೊಂಡಂತಹ ನಕ್ಷೆಯನ್ನು ಊರ್ಜಿತಗೊಳಿಸಬೇಕು ಎಂದು ಹೇಳಿರುವುದನ್ನು ನಾವು ಪರಿಶೀಲನೆ ಮಾಡುತ್ತೇವೆ.

**ಇ) ವಿಷಯ:- ಪ್ರಾಕೃತಿಕ ವಿಕೋಪದಿಂದ ಕಾಫಿ ಬೆಳೆಗೆ ಆಗುತ್ತಿರುವ ನಷ್ಟಕ್ಕೆ ನ್ಯಾಯಸಮ್ಮತ ಪರಿಹಾರ ದೊರೆಯದೇ ಇರುವ ಕಾರಣ ಕಾಫಿ ಬೆಳೆಗಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ವಿಷಯದ ಬಗ್ಗೆ.**

- - - - -

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ವಂದಿಸುತ್ತಾ, ಪ್ರಾಕೃತಿಕ ವಿಕೋಪದಿಂದ ಕಾಫಿ ಬೆಳೆಗೆ ಆಗುತ್ತಿರುವ ನಷ್ಟಕ್ಕೆ ನ್ಯಾಯಸಮ್ಮತ ಪರಿಹಾರ ದೊರೆಯದೇ ಇರುವ ಕಾರಣ ಕಾಫಿ ಬೆಳೆಗಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ವಿಷಯದ ಬಗ್ಗೆ ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾನ್ಯ ಸಭಾಪತಿಯವರೇ, ಈ ವಿಷಯ ಕಂದಾಯ ಇಲಾಖೆಗೆ ವರ್ಗಾವಣೆಯಾಗಿರುತ್ತದೆ. ಈ ವಿಷಯ ಪರಿಹಾರಕ್ಕೆ ಸಂಬಂಧಪಟ್ಟಿರುವುದರಿಂದ ಕಂದಾಯ ಇಲಾಖೆಯವರು ಉತ್ತರ ಕೊಡಬೇಕು.

**ಸಭಾಪತಿಯವರು:-** ಹಾಗಾದರೆ, ಈಗ ಯಾರು ಉತ್ತರ ಕೊಡುತ್ತಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದರಿ ಉತ್ತರವನ್ನು ಕಂದಾಯ ಸಚಿವರ ಪರವಾಗಿ ನಾನೇ ಕೊಡುತ್ತೇನೆ. ಅದನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ನಾನು ಹೇಳಿದೆನು.

**ಸಭಾಪತಿಯವರು:-** ಆಯಿತು. ಹಾಗಾದರೆ, ತಾವು ಉತ್ತರ ನೀಡಿ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಮೊದಲು ನಾನು ಕೆಲವು ವಿಷಯವನ್ನು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ನಾನು ಸದನಕ್ಕೆ ಬಂದು ಸುಮಾರು 5 ½ ವರ್ಷ ಆಯಿತು. ಪ್ರತಿ ಸದನದಲ್ಲಿಯೂ ಸಹ ನಾನು ಕಾಫಿ ಬೆಳೆಗಾರರ ಬಗ್ಗೆ ಮತ್ತು ಕೊಡಗು ಜಿಲ್ಲೆಯ ಕಂದಾಯ ವಿಚಾರಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿರುತ್ತೇನೆ. ಆದರೆ, ಈ ವಿಚಾರಗಳಲ್ಲಿ ಏನು ಆಗದೇ ಇರುವಾಗ ಕೊನೆಯದಾಗಿ ತಮಗೂ ಸಹ ಒಂದು ಪತ್ರವನ್ನು ಕೊಟ್ಟಿರುತ್ತೇನೆ. ಅದೇನೆಂದರೆ, ಈ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳ ಸಭೆ ಕರೆಯಬೇಕು. ಆ ಸಭೆಯಲ್ಲಿ ಕಂದಾಯ ಇಲಾಖೆಯ ಉನ್ನತ ಅಧಿಕಾರಿಗಳು ಇರಬೇಕೆಂದು ಕೋರಿರುತ್ತೇನೆ. ಏಕೆಂದರೆ, ಕೊಡಗು ಜಿಲ್ಲೆಯಲ್ಲಿ ಸಮಸ್ಯೆಗಳು ಬೇಕಾದಷ್ಟು ಇರುತ್ತವೆ. ಇದುವರೆವಿಗೂ ಆ ಸಮಸ್ಯೆಗಳಲ್ಲಿ ಒಂದು ಸಮಸ್ಯೆಯನ್ನು ಸಹ ಪರಿಹರಿಸಿರುವುದಿಲ್ಲ. ತಮಗೆ ಗೊತ್ತಿರುವ ಹಾಗೆ, ನಮ್ಮಲ್ಲಿರುವ ಜಮ್ಮಾ ಸಮಸ್ಯೆಗಳು ಇರಬಹುದು, ಪಟ್ಟೇದಾರರ ಹೆಸರನ್ನು ತಮ್ಮ ಮಗನಿಗೆ ಮಾಡುವುದು ಇರಬಹುದು ಅಥವಾ ಯಾವುದೇ ಜಮೀನನ್ನು ತಮ್ಮ ಮಕ್ಕಳಿಗೆ ಮಾಡುವುದು ಇರಬಹುದು ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ವೇಳೆ ತಂದೆ ತೀರಿಕೊಂಡರೆ ಅವರ ಆಸ್ತಿಯನ್ನು ತಮ್ಮ ಮಕ್ಕಳಿಗೆ ಪರಭಾರೆ ಮಾಡಿಸಿಕೊಳ್ಳುವುದಕ್ಕೆ ಆಗದೇ ಈಗಲೂ ಸಹ ಬಹಳಷ್ಟು ಜನ ಒದ್ದಾಡುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬಹಳಷ್ಟು ಸಮಸ್ಯೆಗಳು ಇವೆ. ನಾನು ಸದನದಲ್ಲಿ ಇದುವರೆವಿಗೂ ಕೇಳಿದಂತಹ ಪ್ರಶ್ನೆಗಳಿಗೆ ಪರಿಹಾರ ನೀಡಿರುವುದಕ್ಕೆ ಆಗಿರುವುದಿಲ್ಲ. ಹಾಗಾಗಿ, ತಮ್ಮ ಮುಖಾಂತರ ಪುನಃ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಆದಷ್ಟು ಬೇಗ ಬೆಂಗಳೂರಿನಲ್ಲಿ ನಮ್ಮ ಜಿಲ್ಲೆಯ ಕಾಫಿ ಬೆಳೆಗಾರರು, ಜಮ್ಮಾದವರು ಮತ್ತು ಜಮ್ಮಾ ಮಲೆಯವರು ಇವರೆಲ್ಲರನ್ನೂ ಸೇರಿಸಿ ಒಂದು ಸಭೆಯನ್ನು ಕರೆದು ಕೊಡಗು ಜಿಲ್ಲೆಯಲ್ಲಿರುವ ಸಮಸ್ಯೆಗಳಿಗೆ ಪರಿಹಾರ ನೀಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

---

**ಸಭಾಪತಿಯವರು:-** ಮಾನ್ಯ ಸದಸ್ಯರಾದಂತಹ ಶ್ರೀಮತಿ ವೀಣಾ ಅಚ್ಚಯ್ಯನವರು ತಮ್ಮ ಜಿಲ್ಲೆಯ ಸಮಸ್ಯೆಗಳ ಬಗ್ಗೆ ಸದನದಲ್ಲಿ ಅನೇಕ ಬಾರಿ ಪ್ರಶ್ನೆ ಕೇಳಿರುವುದನ್ನು ನಾನು ಸಹ ಗಮನಿಸಿರುತ್ತೇನೆ. ಆ ಸಮಸ್ಯೆಗಳಿಗೆ ಇವೊತ್ತಿನವರೆಗೂ ಪರಿಹಾರ ದೊರಕಿರುವುದಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ, ಅಧಿವೇಶನ ಮುಕ್ತಾಯವಾದ ನಂತರ, ಒಂದು ದಿವಸ ಮಾನ್ಯ ಸದಸ್ಯರು ಸೇರಿದಂತೆ, ಕೊಡಗು ಜಿಲ್ಲೆಯ ವಿವಿಧ ಸಂಘ-ಸಂಸ್ಥೆಗಳ ಮುಖಂಡರನ್ನು ಕರೆದು, ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಕಂದಾಯ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಒಂದು ಸಭೆ ಕರೆದು ಮಾನ್ಯ ಸದಸ್ಯರ ಸಮಸ್ಯೆಗಳನ್ನು ಬಗೆಹರಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ಸಭೆಯನ್ನು ಬೆಂಗಳೂರಿನಲ್ಲಿಯೇ ಕರೆಯಬೇಕಾ ಅಥವಾ ಕೊಡಗು ಜಿಲ್ಲೆಯಲ್ಲಿ ಕರೆಯಬಹುದಾ?

**ಸಭಾಪತಿಯವರು:-** ಆ ಸಭೆಯನ್ನು ಕೊಡಗು ಜಿಲ್ಲೆ ಅಥವಾ ಬೆಂಗಳೂರಿನಲ್ಲಿ ಕರೆಯಿರಿ. ಒಟ್ಟಿನಲ್ಲಿ ಮಾನ್ಯ ಸದಸ್ಯರ ಸಮಸ್ಯೆಯನ್ನು ಬಗೆಹರಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ ಜವಾಬ್ದಾರಿ ನನಗೆ ಇರುವುದರಿಂದ, ಕೊಡಗು ಜಿಲ್ಲೆಯಲ್ಲಿ ಸಭೆ ಮಾಡುತ್ತೇನೆ.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಆ ಸಭೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಹಾಜರಾಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದರಿ ಸಭೆಯನ್ನು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಜೊತೆಯಲ್ಲಿ ಮಾನ್ಯ ಕಂದಾಯ ಮಂತ್ರಿಗಳನ್ನು ಕರೆದು ಸಭೆ ನಡೆಸುತ್ತೇವೆ. ಆ ಸಭೆಯನ್ನು ಈ ಅಧಿವೇಶನ ಮುಕ್ತಾಯವಾದ ನಂತರ ಒಂದು ವಾರದಲ್ಲಿಯೇ ಕೊಡಗು ಜಿಲ್ಲೆ ಅಥವಾ ಬೆಂಗಳೂರಿನಲ್ಲಿ ಸಭೆ ಕರೆಯುತ್ತೇನೆ.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಆ ಸಭೆಗೆ ಕೊಡಗು ಜಿಲ್ಲೆಯ ಕೆಲವು ಸಂಘ-ಸಂಸ್ಥೆಗಳು ಹಾಗೂ ಕಾಫಿ ಬೆಳೆಗಾರರನ್ನು ಕರೆಯಬೇಕು.

**ಸಭಾಪತಿಯವರು:-** ಮಾನ್ಯ ವೀಣಾ ಅಚ್ಚಯ್ಯನವರೇ, ಸದರಿ ಸಭೆಗೆ ಯಾರನ್ನು ಆಹ್ವಾನಿಸಬೇಕೆಂಬ ಬಗ್ಗೆ ಒಂದು ಪಟ್ಟಿಯನ್ನು ಮಾನ್ಯ ಸಭಾನಾಯಕರಿಗೆ ನೀಡಿ, ಅದರಂತೆ ಅವರು ಒಂದು ಸಭೆಯನ್ನು ಕರೆಯುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆ ಸಭೆಗೆ ಕನಿಷ್ಠ 25 ಜನರನ್ನು ಆಹ್ವಾನಿಸಲಿ. ಅದಕ್ಕಿಂತಲೂ ಜಾಸ್ತಿಯಾದರೆ ಸಭೆ ನಡೆಸಲು ಅನಾನುಕೂಲವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ವಿಷಯ:-(ಈ) ಬೆಂಗಳೂರು ನಗರದ ಚಾಲುಕ್ಯ ವೃತ್ತದಿಂದ ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಉದ್ದೇಶಿತ ಯೋಜನೆಯ ಕುರಿತು.**

- - - - - - -

**ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದ ಚಾಲುಕ್ಯ ವೃತ್ತದಿಂದ ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಉದ್ದೇಶಿತ ಯೋಜನೆಯ ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಬಹಳ ಸ್ಪಷ್ಟವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಿದ್ದಾರೆ ಅದೇನೆಂದರೆ, ಬೆಂಗಳೂರು ನಗರದ ಚಾಲುಕ್ಯ ವೃತ್ತದಿಂದ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಉದ್ದೇಶಿತ ಯೋಜನೆ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲವೆಂದು ಹೇಳಲಾಗಿದೆ. ಸದರಿ ಅರಮನೆ ರಸ್ತೆ ಜಂಕ್ಷನ್(ಬಿ.ಡಿ.ಎ. ಮೇಲ್ಸೇತುವೆ)ನಿಂದ ಮೇಕ್ರಿ ವೃತ್ತದವರೆಗಿನ ರಸ್ತೆ ಭಾಗವನ್ನು ಅಗಲೀಕರಣಗೊಳಿಸುವ ಯೋಜನೆ ಪ್ರಗತಿಯಲ್ಲಿದ್ದು, ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ. ಪ್ರಸ್ತುತ ಸದರಿ ಯೋಜನೆಗೆ ಅನುಷ್ಠಾನಕ್ಕೆ ಅರಮನೆ ಮೈದಾನದ 64,650 ಚ.ಮೀ. ಜಮೀನು ಅಗತ್ಯವಿದ್ದು, ಸದರಿ ಜಮೀನನ್ನು ಪಡೆದುಕೊಳ್ಳುವ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿದ್ದು, ಇತ್ಯರ್ಥಗೊಂಡ ನಂತರ ಸದರಿ ಯೋಜನೆಯನ್ನು ಅನುಷ್ಠಾನಕ್ಕೆ ಕ್ರಮ ವಹಿಸಲಾಗುವುದೆಂಬ ಉತ್ತರವನ್ನು ನೀಡಲಾಗಿದೆ. ಇದನ್ನು ಹೊರತುಪಡಿಸಿ ಮಾನ್ಯ ಸದಸ್ಯರು ಕೇಳಿದಂತಹ ಯಾವುದೇ ಪ್ರಶ್ನೆಗಳಿಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲವೆಂದು ಉತ್ತರ ನೀಡಲಾಗಿದೆ.

(ಮುಂದು)

(1190) 20.12.2021 7.00 YL-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇದೇ ಪ್ರಶ್ನೆಯನ್ನು 10ನೇ ಮಾರ್ಚ್ ರಂದು ಕೇಳಿದ್ದು, ಆ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ಉತ್ತರ ನೀಡಿದ್ದರು. ಆದರೆ, ಅವರ ಉತ್ತರವು ಸಮಾಧಾನವಾಗದ ಪ್ರಯುಕ್ತ ತಾವು ಲೋಕೋಪಯೋಗಿ ಸಚಿವರನ್ನು ಕರೆಯಿಸಿ ಉತ್ತರ ನೀಡುವಂತೆ ತಿಳಿಸಲಾಗಿತ್ತು. ಅದರಂತೆ 17ನೇ ಮಾರ್ಚ್ ಮಾಹೆಯಂದು ಲೋಕೋಪಯೋಗಿ ಸಚಿವರ ಪರಿಶೀಲನೆಗೆ ಬಂದಿದ್ದು, 'ಮಾನ್ಯ ಸಭಾಪತಿಯವರೇ, ಅಧಿವೇಶನ ಮುಗಿದ ತಕ್ಷಣವೇ ಸಭೆಯನ್ನು ಕರೆದು, ಆ ಸಭೆಗೆ ತಮ್ಮನ್ನು ಸಹ ಆಹ್ವಾನಿಸಲಾಗುವುದು' ಎಂದು 09 ತಿಂಗಳ ಹಿಂದೆಯೇ ತಿಳಿಸಿದ್ದರು. ಆದರೂ ಇವತ್ತಿನ ದಿವಸ ಮಾನ್ಯ ಸಭಾನಾಯಕರು ಈ ರೀತಿಯ ಉತ್ತರವನ್ನು ನೀಡಿದ್ದಾರೆ. ಈ ರೀತಿ ಆದರೆ ಹೇಗೆ? ಮಾನ್ಯ ಗೋವಿಂದ ಎಂ.ಕಾರಜೋಳರವರು ನಾನು ಈ ವಿಚಾರವನ್ನು ಪ್ರಸ್ತಾಪಿಸಿದಾಗ ಅವರು ಹೇಳಿಕೆ ನೀಡಿದ ಪ್ರತಿ ಸಹ ನನ್ನ ಹತ್ತಿರ ಇದೆ. ಅದೇನೆಂದರೆ, 'ಮಾನ್ಯ ಸದಸ್ಯರು ಕೇಳಿದ ವಿಷಯ ಸರಿ ಇದೆ, ಅದಕ್ಕೆ ಒಂದು ಕೊನೆ ಹಾಡಬೇಕು. ಇದರ ಬಗ್ಗೆ ಗಮನಹರಿಸುತ್ತೇನೆ. ಟೆಕ್ಸ್‌ಟೈಲ್ ಎಕ್ಸ್‌ಪರ್ಟ್ಸ್ ಮತ್ತು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

4 ಇಲಾಖೆಯ ಅಧಿಕಾರಿಗಳನ್ನು ಕರೆದು technical opinion ತೆಗೆದುಕೊಂಡು, ಖಂಡಿತವಾಗಿ ಸರ್ಕಾರ ಇದನ್ನು ಮಾಡಲು ಸಿದ್ಧವಾಗಿದೆ ಎಂದು ಹೇಳಬಯಸುತ್ತೇನೆ' ಎಂದು ತಿಳಿಸಲಾಗಿತ್ತು. ಈ ಮಾತನ್ನು ಮಾನ್ಯ ಸಚಿವರು 09 ತಿಂಗಳ ಹಿಂದೆಯೇ ಹೇಳಿದ್ದರು. ಅದರ ಪ್ರತಿ ಬೇಕಾದರೆ ನಾನು ಮಾನ್ಯ ಸಭಾನಾಯಕರಿಗೆ ನೀಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅದರ ಅವಶ್ಯಕತೆ ಇಲ್ಲ. ಮಾನ್ಯ ಸದಸ್ಯರು ಯಾವುದೇ ಆಧಾರ ಇಲ್ಲದೇ ಮಾತನಾಡುವುದಿಲ್ಲ ಎಂದು ನನಗೆ ಖಚಿತವಾಗಿದೆ. ಮಾನ್ಯ ಸದಸ್ಯರು ಈಗ ಏನು ಮಾಡಬೇಕೆಂಬ ಸಲಹೆ ನೀಡಲಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, 09 ತಿಂಗಳುಗಳ ಹಿಂದೆಯೇ ಈ ಪ್ರಶ್ನೆಯನ್ನು ಕೇಳಿದ್ದೇನೆ. ಅಂದಿನ ದಿವಸ ಮಾನ್ಯ ಸಭಾನಾಯಕರು ಉತ್ತರವನ್ನು ನೀಡುವ ಸಂದರ್ಭದಲ್ಲಿ ನಮಗೂ ಹಾಗೂ ಅವರ ಮಧ್ಯೆ ಗಲಾಟೆ ನಡೆಯಿತು. ಆ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರು ಸಹ 'ಬೇಡ ಮಾನ್ಯ ಸಚಿವರೇ ಬಂದು ಉತ್ತರ ಕೊಡಲಿ' ಎಂದು ತಿಳಿಸಿದ್ದರು. ಆಗ ಅಂದಿನ ಮಾನ್ಯ ಸಚಿವರು 'ಇದಕ್ಕೆ ಒಂದು expert committee ಇದೆ, ತಮ್ಮನ್ನು ಆ ಸಭೆಗೆ ಕರೆಯುತ್ತೇನೆ, ಸದನ ಮುಗಿದ ಬಳಿಕ ಒಂದು ವಾರದೊಳಗೆ ಸಭೆಗೆ ಕರೆಯುತ್ತೇನೆ' ಎಂದು ತಿಳಿಸಿದ್ದರು. ಇವತ್ತಿಗೆ 09 ತಿಂಗಳುಗಳು ಆಗಿದೆ. ಆದರೂ ಇವತ್ತು ಬೆಂಗಳೂರು ನಗರದ ಚಾಲುಕ್ಯ ವೃತ್ತದಿಂದ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಉದ್ದೇಶಿತ ಯೋಜನೆ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲವೆಂದು ಉತ್ತರ ನೀಡಿದ್ದಾರೆ. ಈ ರೀತಿಯಾದರೆ ಸರ್ಕಾರ ಹೇಗೆ? ಇದರ ಇತಿಹಾಸವನ್ನು ಹೇಳಲು ಬಯಸುತ್ತೇನೆ. ಅದೇನೆಂದರೆ, ಮೊದಲು ಒಂದು ಫ್ಲೈ ಓವರ್ ಮಾಡಬೇಕೆಂದು ನಮ್ಮ ಸರ್ಕಾರ ಇದ್ದಾಗ ತೀರ್ಮಾನವಾಗಿತ್ತು. ಕಾರಣಾಂತರದಿಂದ ಆ ಕೆಲಸ ಆಗಲಿಲ್ಲ. ಬೇರೆ ಏನಾದರೂ ಅದಕ್ಕೆ ಪರ್ಯಾಯ ಹುಡುಕಬೇಕೆಂದು ಮಾನ್ಯ ಗೋವಿಂದ ಕಾರಜೋಳರವರ ಹತ್ತಿರ ಮನವಿ ಮಾಡಿದ್ದೆ. ಅದಕ್ಕೆ ಮಾನ್ಯ ಸಚಿವರು ಮಾಡೋಣ ಎಂದು ಹೇಳಿದ್ದರು. ಹಾಗೆಯೇ ಪರ್ಯಾಯ ಏನು ಎಂದು ಕೇಳಿದರು. ಪರ್ಯಾಯವಿಲ್ಲ, ತೆಗೆದುಕೊಂಡಿರುವ ಕೆಲಸವನ್ನೇ ಅರ್ಧ ಮಾಡಿಬಿಟ್ಟಿದ್ದಾರೆ. ಹೆಬ್ಬಾಳದಲ್ಲಿರುವ ಫ್ಲೈ ಓವರ್ ಅನ್ನು National Green Tribunal ನ ಕಾರಣ ನೀಡಿ ಅರ್ಧ ಕೆಲಸ ಮಾಡಿ ನಿಲ್ಲಿಸಿಬಿಟ್ಟಿದ್ದಾರೆ. ಜೊತೆಗೆ ಮ್ಯಾಜಿಕ್ ಬಾಕ್ಸ್ ಎಂಬುದನ್ನು ಅಳವಡಿಸಲಾಗಿದೆ. ಅದೆಲ್ಲವನ್ನೂ ಕಿತ್ತುಬಿಸಾಕಿ ಇಲ್ಲಿಂದ ಅಲ್ಲಿಯವರೆಗೂ ಫ್ಲೈ ಓವರ್ ಮಾಡಿ ಎಂದು ಹೇಳಿದ್ದೆವು. ಆದರೆ, ಉತ್ತರದಲ್ಲಿ ಅರಮನೆ ಮೈದಾನದ ಜಮೀನು ನೀಡಿಲ್ಲವೆಂದು ತಿಳಿಸಿದ್ದಾರೆ. ಫ್ಲೈ ಓವರ್ ಮಾಡಲು ಅವರ ಜಮೀನು ಏತಕ್ಕೆ ಬೇಕು? ಯಾವ ಮರವನ್ನು ಹೊಡೆಯುವಷ್ಟಿಲ್ಲ, ಏನು ಮಾಡುವಷ್ಟಿಲ್ಲ. ಅದಕ್ಕಿಂತ latest technology ಏನಾದರೂ ಬೇಕೆಂದರೆ, ಇವತ್ತಿನ ದಿವಸ underground ನಲ್ಲಿ ಬೇಕಾದಷ್ಟು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬುಲೆಟ್ ಟ್ರೈನ್ ಬಿಡುತ್ತಾರೆ, ಹಾಗಾಗಿ ಒಳಗಿನಿಂದಲೇ ಅಲ್ಲಿಗೆ ಒಂದು ರಸ್ತೆ ಸಂಪರ್ಕವನ್ನು ಕಲ್ಪಿಸಿ. 90 ಲಕ್ಷದಷ್ಟು ವಾಹನ ಬೆಂಗಳೂರಿನಲ್ಲಿ ಸಂಚಾರ ಮಾಡುತ್ತವೆ. ಅದರಲ್ಲಿ ಪ್ರತಿದಿವಸ ಶೇ. 25 ರಿಂದ 30 ರಷ್ಟು ವಾಹನಗಳು ವಿಧಾನಸೌಧ ಅಥವಾ ಬೇರೆ-ಬೇರೆ ಕಛೇರಿಗಳಿಗೆ ಚಾಲುಕ್ಯ ವೃತ್ತದ ಮೂಲಕ ಬರುತ್ತವೆ. ಒಂದು ವಾರದಲ್ಲಿ ಸಭೆ ಕರೆಯುತ್ತೇವೆ ಎಂದು ಹೇಳಿ, 09 ತಿಂಗಳುಗಳ ಬಳಿಕ 'ನಮ್ಮ ಮುಂದೆ ಪ್ರಸ್ತಾವನೆಯೇ ಇಲ್ಲವೆಂದರೆ' ಇದೇನು ಸರ್ಕಾರವೇ ಏನು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಲೋಕೋಪಯೋಗಿ ಸಚಿವರು, ನಾನು ಹಾಗೂ ಮಾನ್ಯ ಸದಸ್ಯರನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡಿ, ಇದಕ್ಕೆ ವಿದಾಯ ಹೇಳುವಂಥ ಕೆಲಸ ಮಾಡುತ್ತೇನೆ.

**ಸಭಾಪತಿಯವರು:-** ಯಾವಾಗ ಸಭೆ ಮಾಡುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದನ ನಡೆಯುವಾಗಲೇ ಸಭೆ ನಡೆಸಿದರೆ, ಕೆಲಸದ ಒತ್ತಡ ಇರುತ್ತದೆ. ಹಾಗಾಗಿ ಸದನ ಮುಗಿದ ನಂತರ ಸಭೆ ನಡೆಸುತ್ತೇವೆ ಎಂದರೆ, ಮಾನ್ಯ ಸದಸ್ಯರಿಗೆ ಸಮಾಧಾನವಾಗುತ್ತದೆಯೋ, ಇಲ್ಲವೋ ಗೊತ್ತಿಲ್ಲ. ಏನು ಮಾಡಬೇಕೆಂದು ಮಾನ್ಯ ಸದಸ್ಯರೇ ಹೇಳಲಿ. ಹಾಗೆಯೇ ಮಾಡೋಣ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದೆ ಎಂದು ಮಾಡುವುದಲ್ಲ. ಜನರಿಗೆ ಅನುಕೂಲವಾಗುವ ರೀತಿ ಒಂದು ಪರ್ಯಾಯ ಮಾರ್ಗ ಮಾಡಿ ಎಂದು ಹೇಳುತ್ತಿದ್ದೇನೆ. 09 ತಿಂಗಳುಗಳ ಹಿಂದೆಯೇ ಸಭೆ ನಡೆಸುತ್ತೇವೆ ಎಂದು ಹೇಳಿ, ಈಗ ಯೋಜನೆಯ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ ಎಂದು ಉತ್ತರ ನೀಡಿದರೆ ಹೇಗೆ? ಅದಕ್ಕೂ ಇದಕ್ಕೂ ಏನಾದರೂ ತಾಳೆ ಇದೆಯೇ ಹೇಳಲಿ. ಅಂದಿನ ದಿವಸ ಸಹ ಅವರ ಸರ್ಕಾರವೇ ಉತ್ತರ ನೀಡಿದ್ದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಬೇರೆ ಒತ್ತಡದಿಂದಾಗಿ ಹಾಗೂ ಸಕಾಲದಲ್ಲಿ ಅಧಿಕಾರಿಗಳು ನೆನಪು ಮಾಡದ ಕಾರಣ ವಿಳಂಬವಾಗಿರಬಹುದು. ಹಾಗಾಗಿ ಸದನ ಮುಗಿದ ಒಂದು ವಾರದೊಳಗೆ ನಾನೇ ಜವಾಬ್ದಾರಿ ತೆಗೆದುಕೊಂಡು, ಮಾನ್ಯ ಸದಸ್ಯರನ್ನು ಕರೆದು ಸಭೆ ನಡೆಸುತ್ತೇವೆ.

**ಸಭಾಪತಿಯವರು:-** ಆಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 10. ನಿಯಮ 330ರ ಮೇರೆಗೆ ಚರ್ಚೆ

**ಅ) ವಿಷಯ:- ಲೋಕಸೇವಾ ಆಯೋಗವು ಸಲ್ಲಿಸಿದ್ದ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್‌ಗಳ ಆಯ್ಕೆ ಪಟ್ಟಿ/ಸಲಹೆಗೆ ಸಂಬಂಧಿಸಿದಂತೆ ದಿನಾಂಕ: 09.03.2018ರ ರಿಟ್ ಸಂಖ್ಯೆ: 13617-13627/2017 ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಪಾಲಿಸುವುದರ ಕುರಿತು.**

\- - - - - -

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ತಮಗೂ ಬಹಳ ಚೆನ್ನಾಗಿ ವಿಷಯ ಗೊತ್ತಿದೆ. ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ, ಈ ವಿಷಯದ ಬಗ್ಗೆ ಸರಿಯಾಗಿ ತಿಳಿದುಕೊಂಡಿರುವವರು ಅಥವಾ ತಿಳಿಸುವಂಥವರು ಈ ಸದನದಲ್ಲಿ ಒಬ್ಬರೂ ಇಲ್ಲ. ಏಕೆಂದರೆ, ಇದು ಮುಖ್ಯಮಂತ್ರಿಗೆ ನೇರವಾಗಿ ಬರುವಂಥದ್ದು. ಎರಡನೆಯದಾಗಿ, ಕಾನೂನು ಸಚಿವರಿಗೆ ಸಂಬಂಧಪಡುತ್ತದೆ. ಅವರಿಬ್ಬರೂ ಈ ಸದನದಲ್ಲಿ ಇಲ್ಲ.

**ಸಭಾಪತಿಯವರು:-** ಹಾಗಾದರೆ, ಒಂದು ನಿಮಿಷ. ಮಾನ್ಯ ಸಭಾನಾಯಕರೆ, ಮಾನ್ಯ ಸದಸ್ಯರ ವಿಷಯವು ಬಹಳ ಮುಖ್ಯವಾದುದಾಗಿದ್ದು, ಎಲ್ಲರಿಗೂ ಉತ್ತರ ಅವಶ್ಯಕವಾಗಿರುವಂಥದಾಗಿದೆ. ಹಾಗಾಗಿ ನಾಳೆ ಕಾನೂನು ಸಚಿವರನ್ನು ಬರಲು ಹೇಳಿ. ನಾಳೆಯೇ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಆಯಿತು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಆ) ವಿಷಯ:- 1995ರ ನಂತರ ಆರಂಭವಾದ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಕುರಿತು.**

\- - - - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವರು ಸದನದಲ್ಲಿ ಇಲ್ಲ.

**ಸಭಾಪತಿಯವರು:-** ನಾನು ಏನು ಮಾಡಲಿ?

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 25 ವರ್ಷಗಳ ಸಮಸ್ಯೆ ವಿಚಾರವಾಗಿದೆ. ಮಾನ್ಯ ಸಚಿವರು ಸದನದಲ್ಲಿ ಇದ್ದಾಗಲೇ ಚರ್ಚೆ ಆಗಬೇಕು.

**ಸಭಾಪತಿಯವರು:-** ಆಯಿತು. ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಇಂದಿನ ಕಲಾಪದಲ್ಲಿ ಎಲ್ಲಾ ವಿಷಯವನ್ನು ಮುಗಿಸಬೇಕೆಂದು ಮಾಡಲಾಗಿತ್ತು. ಆದರೆ, ಮಾನ್ಯ ಸಚಿವರುಗಳು ಇಲ್ಲ. ಪ್ರತಿ ದಿವಸ ಹೀಗೆ ಮುಂದೆ ಹೋದರೆ ಏನು ಮಾಡಬೇಕು?

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವರು ಮಾತನಾಡುತ್ತಲೇ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾಳೆಯೇ ಈ ವಿಷಯವನ್ನು ಕೈಗೆತ್ತಿಕೊಳ್ಳೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಿಯಮ 330 ರಲ್ಲಿರುವ 3 ಮತ್ತು 05 ಎರಡೂ ವಿಷಯಗಳನ್ನು ನಾಳೆಯೇ ಚರ್ಚೆಗೆ ತೆಗೆದುಕೊಳ್ಳಿ.

**ಸಭಾಪತಿಯವರು:-** ಆಗಬಹುದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಇ) ವಿಷಯ:- ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಬುಡಕಟ್ಟು ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಲ್ಲದಿರುವ ಬಗ್ಗೆ.**

\- - - - - -

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳು. ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಬುಡಕಟ್ಟು ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಲ್ಲದಿರುವ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಇಡೀ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಸಮುದಾಯದವರು ನೆಲೆಸಿದ್ದಾರೆ. ಹೆಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯತ್‌ಗೆ ನಾನು ಸಹ ಹೋಗುವಂಥ ಅವಕಾಶ ಸಿಕ್ಕಿತು. ಒಟ್ಟಾರೆಯಾಗಿ ಆ ಗ್ರಾಮ ಪಂಚಾಯತ್‌ನಲ್ಲಿ 12 ಹಾಡಿಗಳು, 620 ಬುಡಕಟ್ಟು ಕುಟುಂಬಗಳು ಇವೆ. ಸುಮಾರು 2500 ಮಂದಿ ಆ ಪಂಚಾಯತ್‌ನಲ್ಲಿ ನೆಲೆಸಿದ್ದಾರೆ. ಜೇನು ಕುರುಬ, ಹೆರವ, ಕಾಡುಕುರುಬ, ಪಣಿಯ, ವಾಲ್ಮೀಕಿ ನಾಯಕ ಹಾಗೂ ಬೆಟ್ಟ ಕುರುಬ ಇಂತಹ ಸಮುದಾಯಗಳು ಅಲ್ಲಿ ಜೀವನ ಸಾಗಿಸುತ್ತಿವೆ. ಆದರೆ, ಬಹಳ ಆಶ್ಚರ್ಯವೆಂದರೆ, ಆ ಪಂಚಾಯತ್‌ನಲ್ಲಿ ನಿಜವಾಗಿಯು, Provisions of the Panchayats (Extension to the Scheduled Areas) Act ಅನ್ನು ಲಾಘು ಮಾಡುವಂಥ ಪಂಚಾಯತ್ ಆಗಿದೆ. ಆ ಬುಡಕಟ್ಟು ಸಮುದಾಯಕ್ಕೆ ಮೂಲಭೂತ ಸೌಕರ್ಯಗಳಾದಂತಹ ಮನೆ, ವಿದ್ಯುತ್, ಕುಡಿಯುವ ನೀರು, ರಸ್ತೆ, ಇದ್ಯಾವುದರ ಸೌಕರ್ಯವನ್ನು ಒದಗಿಸಿಲ್ಲ. ಕಾರಣವೇನೆಂದರೆ, ಸುಮಾರು 5 ಎಕರೆಗಿಂತ ಜಾಸ್ತಿ ಜಾಗದಲ್ಲಿ ಹಕ್ಕುಪತ್ರವನ್ನು ನೀಡಬೇಕೆಂದು ಸುಮಾರು 2500 ಜನರು ಕೇಳಿಕೊಂಡಿದ್ದರು. ಆದರೆ, ಇವತ್ತಿಗೂ ಅವರಿಗೆ ಹಕ್ಕುಪತ್ರವನ್ನು ನೀಡಿಲ್ಲ. ಇದರಿಂದಾಗಿ ಅವರುಗಳು ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಜೊತೆಗೆ ಸಮುದಾಯ ಅರಣ್ಯ ಹಕ್ಕು ಕಾಯಿದೆಯಲ್ಲಿ ಸಹ ಸಮುದಾಯಿಕ ಹಕ್ಕು ನೀಡದೇ ಇರುವುದರಿಂದ ಆ ನಿಟ್ಟಿನಲ್ಲಿಯು ಅವರ ಸಮುದಾಯಿಕ ಹಕ್ಕನ್ನು ಬಳಸಿಕೊಳ್ಳಲು ತೊಂದರೆಯಾಗಿದೆ. ವಿಶೇಷವಾಗಿ ಕಿರು ಕಾಡು ಉತ್ಪನ್ನಗಳನ್ನು ಸಂಗ್ರಹ ಮಾಡಲು ಅವರಿಗೆ ಸಾಧ್ಯವಾಗುತ್ತಿಲ್ಲ. ಕಾಡಿನಲ್ಲಿ ಅವರಿಗೆ ಪ್ರವೇಶವನ್ನು ನೀಡುತ್ತಿಲ್ಲ. ಜೊತೆಗೆ ಸರಗೂರು ಪಂಚಾಯಿತಿಯಲ್ಲಿ ಸುಮಾರು 300 ಕ್ಕೂ ಹೆಚ್ಚು ಜನಸಂಖ್ಯೆ ಇರುವಂಥ ಊರಿನಲ್ಲಿ ವಿದ್ಯುತ್ ಸಂಪರ್ಕ ಇಲ್ಲ. ವಿದ್ಯುತ್ ಸಂಪರ್ಕವನ್ನು ಕೇಳಿದರೆ, ಸೋಲಾರ್ ವಿದ್ಯುತ್ತನ್ನು ಜೋಡಿಸಿಕೊಳ್ಳಬೇಕೆಂದು ಅರಣ್ಯ ಇಲಾಖೆಯವರು ಹೇಳುತ್ತಾರೆ. ಆದರೆ, ಸೋಲಾರ್ ವಿದ್ಯುತ್‌ನಿಂದ ಅವರಿಗೆ ಬೆಳಕು ಮಾತ್ರ ಪಡೆಯಲು ಸಾಧ್ಯ. ಉಳಿದಂತೆ ಯಾವುದೇ ರೀತಿಯ ಉಪಯೋಗವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಹಾಗೆಯೇ ಅವರ ಪೂಜಾ ಸ್ಥಾನಗಳು ಮತ್ತು ದೇವಸ್ಥಾನಗಳು

ಕಾಡಿನಿಂದ ಹೊರಗೆ ಇರುವುದರಿಂದ ಅವರು ಅಲ್ಲಿಗೆ ಹೋಗಬೇಕಾದರೆ, ಅನುಮತಿಯನ್ನು ಪಡೆದುಕೊಂಡು ಹೋಗಬೇಕು. ಒಂದು ವೇಳೆ ಅನುಮತಿ ಸಿಗಲಿಲ್ಲವೆಂದರೆ, ದೇವಸ್ಥಾನಕ್ಕೆ ಹೋಗಿ ಪೂಜೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಅಲ್ಲಿ ಸ್ಮಶಾನದ ವ್ಯವಸ್ಥೆಯನ್ನು ಮಾಡಿಲ್ಲ. ಚಿಕಿತ್ಸೆಯ ಸೌಕರ್ಯವಿಲ್ಲ. ಡಾ|| ಬಾಲಸುಬ್ರಹ್ಮಣ್ಯರವರು ಶಿಕ್ಷಣ ಕೇಂದ್ರ ಹಾಗೂ ಆಸ್ಪತ್ರೆಯನ್ನು ಅಲ್ಲಿ ನಡೆಸುತ್ತಿರುತ್ತಾರೆ. ಅದಕ್ಕಾಗಿ ಸರ್ಕಾರವು ಅನುದಾನ ನೀಡುತ್ತಿದ್ದ ಸಂದರ್ಭದಲ್ಲಿ ಎಲ್ಲಾ ಜನರಿಗೂ ಆರೋಗ್ಯದ ಸೌಲಭ್ಯ ಸಿಗುತ್ತಿತ್ತು. ಆದರೆ, ಈಗ ಅದನ್ನು ಸಹ ನಿಲ್ಲಿಸಲಾಗಿದೆ. ಇವೆಲ್ಲದರಿಂದ ಅಲ್ಲಿಯ ಜನರು ತುಂಬಾ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಹೀಗಾಗಿ ಬಹುಮುಖ್ಯವಾಗಿ ಹೆಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅತ್ಯಂತ ಅವಶ್ಯಕವಾಗಿರುವ ಯಾವುದೇ ಸೌಲಭ್ಯ ಇಲ್ಲದ ಪ್ರಯುಕ್ತ ಸರ್ಕಾರದ ಗಮನವನ್ನು ಸೆಳೆಯಬಯಸುತ್ತಾ, ನಿಯಮ 330 ರಡಿ ಮಾನ್ಯ ಸಚಿವರು ಉತ್ತರವನ್ನು ನೀಡಬೇಕೆಂದು ಹೇಳಲು ಇಚ್ಛಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಈಗಾಗಲೇ ನಮ್ಮ ಇಲಾಖೆಯಿಂದ ಏನೇನು ಕೆಲಸಗಳನ್ನು ಮಾಡಲಾಗಿದೆ ಎಂಬುದರ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಸಲ್ಲಿಸಲಾಗಿದೆ. ಈ ಹಾಡಿ ಪ್ರದೇಶಗಳು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರದೇಶವಾದ್ದರಿಂದ ಮನೆ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಎನ್.ಟಿ.ಸಿ.ಎ. ನವದೆಹಲಿ ರವರಿಂದ ಪೂರ್ವಾನುಮತಿ ಪಡೆಯಬೇಕಾಗಿದ್ದು, ಈಗಾಗಲೇ ಅನುಮತಿಗೆ ಪತ್ರ ಬರೆಯಲಾಗಿದೆ. ಅವರಿಂದ ಅನುಮತಿ ಬಂದ ನಂತರ ಉಳಿದಂತೆ ಎಲ್ಲಾ ಕೆಲಸಗಳನ್ನು ಮಾಡಲಾಗುವುದು. ಈಗಾಗಲೇ ಸಾಕಷ್ಟು ಕೆಲಸಗಳನ್ನು ಮಾಡಿಕೊಟ್ಟಿದ್ದೇವೆ.

(ಮುಂದು)

(1191) 20-12-2021 /7.10/SK-GR (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ನವದೆಹಲಿ, ಎನ್.ಟಿ.ಸಿ.ಎ., ಸಂಸ್ಥೆಯಿಂದ ನಮ್ಮ ಇಲಾಖಾ ವತಿಗೆ ಅನುಮತಿ ಸಿಗುವುದಕ್ಕೂ ಕೂಡ ಕೆಲವು ಸಮಸ್ಯೆಗಳಿವೆ. ಅದು ಇಲ್ಲ ಎಂದು ನಾನು ಹೇಳುವುದಿಲ್ಲ. ಅಲ್ಲಿ ಉಳಿದಿರುವಂತಹ ಕೆಲಸಗಳು ಏನೇನು ಆಗಬೇಕೆಂಬುದರ ಬಗ್ಗೆ ಮಾನ್ಯ ಶಾಂತರಾಮ್ ಬುಡ್ನ ಸಿದ್ದಿಯವರನ್ನು ಕರೆದು, ಚರ್ಚೆ ಮಾಡುತ್ತೇನೆ. ನಮ್ಮ ಇಲಾಖೆಯಿಂದ ಆಗುವುದಾದರೆ, ಖಂಡಿತವಾಗಿಯೂ ನಾನು ಮಾಡಿಕೊಡುತ್ತೇನೆಂಬ ಅಂಶವನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರ ಕೆಲವು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ. ಅಲ್ಲಿ ಆಸ್ಪತ್ರೆ ಸೌಕರ್ಯದ ಸಮಸ್ಯೆ ಬಹಳ ಇದೆ ಮತ್ತು ಸ್ಮಶಾನ ಇಲ್ಲ, ಅವರು ಕಾಡಿನಲ್ಲಿಯೇ ವಾಸ ಮಾಡುತ್ತಾರೆ. ಆದ್ದರಿಂದ ಅವರು ಕಾಡಿನಲ್ಲಿಯೇ ವಾಸ ಮಾಡುವುದಾದರೆ, ಕಾಡಿನಲ್ಲಿ ಎಲ್ಲಿ ಬೇಕಾದರೂ ಹೂಳಬಹುದು ಎಂಬಂತೆ ಆಗುವುದಿಲ್ಲ. ಅರಣ್ಯ ಇಲಾಖಾಧಿಕಾರಿಗಳು ಇದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಸ್ಮಶಾನ ಮತ್ತು permanent structure ಆಗದಿದ್ದರೂ ಕೂಡ temporary structure ಅನ್ನು ಕೂಡ ಅವರಿಗೆ ವಾಸ ಮಾಡುವುದಕ್ಕೆ ಸರ್ಕಾರದವರು ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕು. ಕೇಂದ್ರ ಸರ್ಕಾರದ ಅನುಮತಿ ಬೇಕೆಂದು ಈಗಾಗಲೇ ಮಾನ್ಯ ಸಚಿವರು ಹೇಳಿದರು. ಕೇಂದ್ರ ಸರ್ಕಾರದ ಅನುಮತಿ ತತ್‌ಕ್ಷಣಕ್ಕೆ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಿಗುವುದಿಲ್ಲ. ಅವರಿಗೆ ಆಸ್ಪತ್ರೆಯ ಸೌಕರ್ಯ, ಸ್ಮಶಾನದ ವ್ಯವಸ್ಥೆ ಮತ್ತು ವಾಸ ಮಾಡುವುದಕ್ಕೆ ತಾತ್ಕಾಲಿಕವಾದಂತಹ ಶೆಡ್‌ಗಳ ನಿರ್ಮಾಣ ಮಾಡಿಕೊಡುವುದಕ್ಕೆ ದಯವಿಟ್ಟು, ಸರ್ಕಾರ ಕ್ರಮ ಕೈಗೊಳ್ಳಬೇಕೆಂದು, ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನವನ್ನು ಹೊಂದಿವರು):-** ಮಾನ್ಯ ಸಭಾಪತಿಯವರೇ, ಪೂಜಾ ಸ್ಥಳಗಳಿಗೂ ಕೂಡ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಮಾನ್ಯ ಸದಸ್ಯರು ಹೇಳಿದಂತೆ, ಉಳಿದಂತಹ ಎಲ್ಲಾ ಅಂಶಗಳು ಅಂದರೆ, ಸ್ಮಶಾನ, ತಾತ್ಕಾಲಿಕವಾದಂತಹ ಮನೆಗಳನ್ನು ಕಟ್ಟಬೇಕೆಂದು ಹೇಳುತ್ತಿದ್ದೀರಿ. ಮಾನ್ಯ ಮರಿತಿಬ್ಬೇಗೌಡರು ಮತ್ತು ಮಾನ್ಯ ಶಾಂತರಾಮ್ ಬುಡ್ನ ಸಿದ್ದಿ ಮತ್ತು ನಮ್ಮ ಅಧಿಕಾರಿಗಳನ್ನು spot ಗೆ ಕರೆದುಕೊಂಡು ಹೋಗಿ, ಅಲ್ಲಿ ಉಳಿದಿರುವಂತಹ ಜಾಗ ಏನಿದೆ, ಅದನ್ನು ನೋಡಿಕೊಂಡು, ತಾತ್ಕಾಲಿಕವಾದಂತಹ ಶೆಡ್‌ಗಳು ಮತ್ತು ಸ್ಮಶಾನ ಮಾಡುವುದಕ್ಕೆ ಅವಕಾಶವಿದ್ದರೆ, ಅದೂ ಕೂಡ ವ್ಯವಸ್ಥೆಯನ್ನು ಮಾಡುತ್ತೇವೆ. ಅಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಕೂಡ ಇದೆ. ಇನ್ನೊಂದು ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತೇವೆ. ಅಲ್ಲಿ ವ್ಯವಸ್ಥೆಗಳು ಏನೇನು ಆಗಬೇಕೆಂಬುದರ ಬಗ್ಗೆ ಕೇಳಿ, ಖಂಡಿತವಾಗಿಯೂ ವ್ಯವಸ್ಥೆಯನ್ನು ಕಲ್ಪಿಸಿಕೊಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:-** ಆಯಿತು. ಮಾನ್ಯ ಶಶೀಲ್ ಜಿ. ನಮೋಶಿಯವರೇ ನಿಯಮ 330ರ ಅಡಿಯಲ್ಲಿರುವ ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿ.

**ಶ್ರೀ ಶಶೀಲ್ ಜಿ.** ನಮೋಶಿ **(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಸಮಯ ಕೂಡ ಆಗಿದೆ. ಇವತ್ತು ಮಾನ್ಯ ಸಚಿವರು ಕೂಡ ಈ ಸದನದಲ್ಲಿ ಇಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಮಾತನಾಡಿ. ಮಂತ್ರಿಗಳು ಇಲ್ಲವೆಂದರೆ, ಸರ್ಕಾರ ಇದೆ. ಅದಕ್ಕೆ ಅವರು ಉತ್ತರವನ್ನು ಹೇಳುತ್ತಾರೆ. ತಾವು ಮಾತನಾಡಿ.

**ಶ್ರೀ ಶಶೀಲ್ ಜಿ.** ನಮೋಶಿ:**-** ಮಾನ್ಯ ಸಭಾಪತಿಯವರೇ, ಇಂದಿನ ಅಜೆಂಡಾದಲ್ಲಿ ಪಟ್ಟಿ ಮಾಡಲಾಗಿರುವ ನಿಯಮ 330 ರ ಅಡಿಯಲ್ಲಿನ ಕ್ರಮ ಸಂಖ್ಯೆ 3 ಹಾಗೂ 6 ರ ವಿಷಯಗಳನ್ನು ನಾಳೆಗೆ ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಆಯಿತು. ಮಾನ್ಯ ಶಶೀಲ್ ಜಿ. ನಮೋಶಿಯವರೇ, ಕುಳಿತುಕೊಳ್ಳಿ.

ಮಾನ್ಯ ವಿರೋಧ ಪಕ್ಷದ ನಾಯಕರೇ, ಇಂದಿನ ಅಜೆಂಡಾದಲ್ಲಿ ಪಟ್ಟಿ ಮಾಡಲಾಗಿರುವ ನಿಯಮ 68ರ ಅಡಿಯಲ್ಲಿ 'ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಮತ್ತು ಅತಿವೃಷ್ಠಿಯಿಂದ ರೈತರ ಬೆಳೆಗಳು ನಾಶವಾಗಿ, ಜಾನುವಾರುಗಳು ಪ್ರಾಣ ಹಾನಿಯಾಗಿ ಸಾರ್ವಜನಿಕ ಆಸ್ತಿಗಳಿಗೆ ಧಕ್ಕೆ ಉಂಟಾಗಿರುವ ಸಮಸ್ಯೆಗಳ ಕುರಿತು' ತೆಗೆದುಕೊಳ್ಳಬೇಕಿರುವ ವಿಷಯವನ್ನು ನಾಳೆ ನಮ್ಮ ಸದನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆಯನ್ನು ಕೈಗೆತ್ತಿಕೊಂಡಾಗ ಈ ವಿಷಯವನ್ನೂ ಸಹ ಸೇರಿಸಿಕೊಳ್ಳೋಣ. ಸದರಿ ವಿಷಯದ ಮೇಲೆ ಈಗಲೇ ತಾವು ಮಾತನಾಡುತ್ತೀರೆಂದರೆ ನನ್ನದೇನೂ ಅಭ್ಯಂತರವಿಲ್ಲ. ತಾವು ಮಾತನಾಡುವುದಾದರೆ, ಮಾತನಾಡಿ. ನಾಳೆ ನಾವು ಕೈಗೊಳ್ಳಲಿರುವ ಚರ್ಚೆಯಲ್ಲಿ ಇವೆಲ್ಲವೂ ಸೇರಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾಳೆ ಪ್ರಶ್ನೋತ್ತರ ಅವಧಿ ಮುಗಿದ ಕೂಡಲೇ, ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವಾಗಿ ಆಡಳಿತ ಪಕ್ಷದವರು ಮತ್ತು ವಿರೋಧಪಕ್ಷದವರು ಮಾತನಾಡಲಿ. ಇನ್ನೂ ಸಮಯ ಉಳಿಯುವುದಾದದರೆ, ಪ್ರವಾಹದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಿ. ನಾನು ಮಾತನಾಡುವಾಗ, ತಾವು ಕುಳಿತುಕೊಂಡು ಗಂಟೆ ಬಾರಿಸಬೇಡಿ.

**ಸಭಾಪತಿಯವರು:-**ಮಾನ್ಯ ವಿರೋಧ ಪಕ್ಷದ ನಾಯಕರೇ, ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವಾಗಿ ನಡೆಯಲಿರುವ ಚರ್ಚೆಯಲ್ಲಿ ನಿಯಮ 68ರ ಅಡಿಯಲ್ಲಿರುವ ಈ ವಿಷಯವನ್ನೂ ಸೇರಿಸಿಕೊಳ್ಳೋಣ. ನಾನು ತಮಗೆ ಮಾತನಾಡುವುದಕ್ಕೆ ಸಮಯಾವಕಾಶವನ್ನು ಕೊಡುತ್ತೇನೆ. ಇದನ್ನು ಅದರ ಜೊತೆಯಲ್ಲಿ ಸೇರಿಸಿಕೊಳ್ಳೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊದಲು ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾದ ನಂತರ, ಆ ವಿಷಯವನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ನಾನು ಹೇಳುವುದೇನೆಂದರೆ, ಉತ್ತರ ಕರ್ನಾಟಕದ ಸಮಸ್ಯೆಗಳ ಜೊತೆಗೆ ಇದನ್ನು ತೆಗೆದುಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದರೆ ಇದರ ಜೊತೆಗೆ ಇದನ್ನು ತೆಗೆದುಕೊಳ್ಳಿ. First priority is for the discussion on the development of Northern Karnataka.

**ಸಭಾಪತಿಯವರು:-** ಆಯಿತು ಖಂಡಿತವಾಗಿ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 11. ಪ್ರಕಟಣೆ

**ಸಭಾಪತಿಯವರು:-** ದಿನಾಂಕ 22.12.2021ರ ಬುಧವಾರ ಮಧ್ಯಾಹ್ನ 3.00 ಗಂಟೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂಬಾಗಿಲಿನ ಮೆಟ್ಟಿಲುಗಳ ಮುಂದೆ ಎಲ್ಲಾ ಮಾನ್ಯ ಶಾಸಕರುಗಳ ಗ್ರೂಪ್ ಫೋಟೋ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ, ಸದರಿ ಕಾರ್ಯಕ್ರಮದಲ್ಲಿ ಎಲ್ಲಾ ಮಾನ್ಯ ಶಾಸಕರುಗಳು ಭಾಗವಹಿಸಬೇಕೆಂದು ಕೋರುತ್ತೇನೆ. ಎರಡು ವರ್ಷಕ್ಕೊಮ್ಮೆ ಮಾನ್ಯ ಸದಸ್ಯರುಗಳು ಅವಧಿ ಮುಗಿದು ಹೋಗುವಾಗ, ಫೋಟೋ ಕಾರ್ಯಕ್ರಮವನ್ನು ಮಾಡುತ್ತೇವೆ. ಆ ಫೋಟೋ ಕಾರ್ಯಕ್ರಮದಲ್ಲಿ ಮಾನ್ಯ ಸದಸ್ಯರೆಲ್ಲರೂ ಭಾಗವಹಿಸಬೇಕು. ಈಗ ಸದನವನ್ನು ನಾಳೆ ಬೆಳಗ್ಗೆ 10.30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 7 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 21ನೇ ಡಿಸೆಂಬರ್ ಮಾಹೆ 2021ರ ಮಂಗಳವಾರದಂದು ಬೆಳಗ್ಗೆ 10.30 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

<><><>

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”